ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಬುದ್ಧಿವಂತಿಕೆಗೆ-ದಡ್ಡತನಕ್ಕೆ ಕಾರಣ: ಕಬ್ಬಿಣ
ಹಿಂದಿರುಗಿ ನೋಡಿದಾಗ
ಡಾ.ನಾ.ಸೋಮೇಶ್ವರ
ಸಂ.ಪುಟ | 6

ನವೆಂಬರ್: ಇದು ಹಕ್ಕೊತ್ತಾಯದ ತಿಂಗಳು
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ದಾರಿದೀಪೋಕ್ತಿ

ನಾಲ್ಕೈದು ಜನ ಕಾಫಿ ಕುಡಿಯುತ್ತಾ ಬೇರೆಯವರ ಬಗ್ಗೆ ಮಾತಾಡುತ್ತಿದ್ದರೆ, ಆ ಗುಂಪಿಗೆ ಸೇರಿಕೊಳ್ಳಬಾರದು. ಕಾರಣ ನೀವು ಎದ್ದ ಹೋದ ಬಳಿಕ ಅವರು ನಿಮ್ಮ ಕುರಿತು ಮಾತಾಡುತ್ತಾರೆ. ನಕಾರಾತ್ಮಕ ವಿಚಾರಗಳನ್ನು ಬಿತ್ತುವವರಿಂದ ಆದಷ್ಟು ದೂರವಿರಬೇಕು.

ವಕ್ರತುಂಡೋಕ್ತಿ

ನೆಮ್ಮದಿ ದಾಂಪತ್ಯದ ಸಣ್ಣ ಕತೆ ಏನು? ಆತ ಹೆಂಡತಿ ಮಾತನ್ನು ಕೇಳಲಾರಂಭಿಸಿದ. ಜೀವನವಿಡೀ ನೆಮ್ಮದಿಯಿಂದ ಬದುಕಿದ.

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಸಿಎಂ ಸಿದ್ದರಾಮಯ್ಯ ಅವರು ಮಂಗಳವಾರ ಬಿಡುಗಡೆಗೊಳಿಸಿದರು. ಈ ವೇಳೆ ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಬೋವಿಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ವಿಶ್ವವಾಣಿ ಕಾರ್ಯನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ ಇದ್ದರು.

ವಿವರಪುಟ → 5

ಯಾವ ರೈತರನ್ನೂ ಒಕ್ಕಲೆಬ್ಬಿಸುವುದಿಲ್ಲ: ಸಿಎಂ ಸಿದ್ದರಾಮಯ್ಯ | ಬಿಜೆಪಿ ಅವಧಿಯಲ್ಲೇ ನೋಟಿಸ್: ಸಚಿವ ಎಂ.ಬಿ. ಪಾಟೀಲ್ | ಸಿಂದಗಿ ವಿರಕ್ತ ಮಠದ ಆಸ್ತಿಗೂ ವಕ್ಫ್ ಬೇಲಿ
ಚಿತ್ರದುರ್ಗದಲ್ಲೂ ಪಹಣಿ ಗೊಂದಲ | ಲ್ಯಾಂಡ್ ಜಿಹಾದ್ ಬಿಜೆಪಿ ನಾಯಕರ ಆಕ್ರೋಶ

ಕಾವೇರಿದ ವಕ್ಫ್ ಕಿಚ್ಚು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು / ವಿಜಯಪುರ/ ಹುಬ್ಬಳ್ಳಿ

ವಕ್ಫ್ ಆಸ್ತಿ ವಿವಾದ ಸಂಬಂಧ ರೈತರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಯ ನೀಡಿದ್ದರೂ, ವಿಜಯಪುರ ಜಿಲ್ಲಾಧಿಕಾರಿ ಸರಕಾರದ ಸೂಚನೆ ಮೇರೆಗೆ ನೋಟಿಸ್ ನೀಡಲಾಗಿದೆ ಎಂದಿದ್ದಾರೆ. ಇದು ಉರಿಯುತ್ತಿರುವ ಬೆಂಕಿಗೆ ಮತ್ತಷ್ಟು ತುಪ್ಪ ಹಾಕಿದಂತಾಗಿದೆ. ಇದೇ ವೇಳೆ ರೈತರು ಡಿಸಿ ಕಚೇರಿ ಮುಂದೆ ಪ್ರತಿಭಟನೆಗೆ ಇಳಿದಿದ್ದು ಚಿತ್ರದುರ್ಗದಲ್ಲೂ ಹೋರಾಟ ಆರಂಭವಾಗಿದೆ.

ವಕ್ಫ್ ನೀಡಿರುವ ನೋಟಿಸ್‌ಗಳನ್ನು ಹಿಂಪಡೆಯುವ ತೀರ್ಮಾನವನ್ನು ಸರಕಾರ ತಗೆದುಕೊಂಡಿದ್ದರಿಂದ ಒಂದು ಹಂತಕ್ಕೆ ತಿಳಿಯಾಗಿತ್ತು. ಆದರೆ ಇದರ ಬೆನ್ನಲ್ಲೇ, ಇದೀಗ ವಿಜಯಪುರದ ಸಿಂಧಗಿ ವಿರಕ್ತ ಮಠದ ಆಸ್ತಿಗೂ ವಕ್ಫ್ ಬೋರ್ಡ್ ನೋಟಿಸ್ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ. 13ನೇ ಶತಮಾನದಲ್ಲಿ ಸ್ಥಾಪನೆಯಾಗಿರುವ ಮಠವಾದರೂ, ಮುಸ್ಲಿಮರ ವಕ್ಫ್ ಆಸ್ತಿ ಆಗುತ್ತದೆ? ಎಂದು ಭಕ್ತರು ಪ್ರಶ್ನೆ ಮಾಡಿದ್ದಾರೆ.

→ 4

ವಕ್ಫ್ ಬೋರ್ಡ್‌ನಿಂದ ಲ್ಯಾಂಡ್ ಜಿಹಾದ್

ಹುಬ್ಬಳ್ಳಿ: ರಾಜ್ಯದಲ್ಲಿ ವಕ್ಫ್ ಬೋರ್ಡ್ ಲ್ಯಾಂಡ್ ಜಿಹಾದ್ ನಡೆಸುತ್ತಿದ್ದು, ಕಾಂಗ್ರೆಸ್ ಸರಕಾರದ ಕುಮ್ಮಕ್ಕಿದೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆಕ್ರೋಶ ವ್ಯಕ್ತಪಡಿಸಿದರು. ವಕ್ಫ್ ಬೋರ್ಡ್ ಲ್ಯಾಂಡ್ ಜಿಹಾದ್ ಕೈಗೊಳ್ಳುವ ಮೂಲಕ ರಾಜ್ಯದಲ್ಲಿ ರೈತರನ್ನು, ಮಠ ಮಾನ್ಯಗಳನ್ನು, ಬಡ ಜನಸಾಮಾನ್ಯರನ್ನು ಹಿಂಸಿಸುತ್ತಿದೆ. ಇದಕ್ಕೆಲ್ಲ ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣವೇ ಕಾರಣ. ಸಿದ್ದರಾಮಯ್ಯ ಸರಕಾರ ಇಸ್ಲಾಂ ಮೂಲಭೂತವಾದಿಗಳ ಬೆಂಬಲಕ್ಕೆ ನಿಂತಿದೆ. ಹೀಗಾಗಿಯೇ ವಕ್ಫ್ ಬೋರ್ಡ್ ಎಲ್ಲಿ ಬೇಕಲ್ಲಿ ರೈತರ ಜಮೀನು ಕಬಳಿಸುತ್ತಿದೆ. 40-50 ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನು ನಮಾಜ್ ಮಾಡುತ್ತಿದ್ದ ಸ್ಥಳವೆಂದು ವಶಕ್ಕೆ ತೆಗೆದುಕೊಳ್ಳಲು ಯತ್ನಿಸಿದೆ. ಇದಕ್ಕೆಲ್ಲ ಅಧಿಕಾರ ಕೊಟ್ಟವರೇ ಕಾಂಗ್ರೆಸ್ಸಿಗರು ಎಂದರು.

ಹಬ್ಬಕ್ಕೂ ಮುನ್ನವೇ ಪಟಾಕಿ ದುರಂತ

ಕಾಸರಗೋಡು ದೇಗುಲ ಉತ್ಸವ: 156 ಮಂದಿಗೆ ಗಾಯ, 10 ಜನರು ಗಂಭೀರ

ತಿರುವನಂತಪುರ: ಕೇರಳದ ಕಾಸರಗೋಡಿನ ಅಂಜುತಾಂಬೂಲಂ ವೀರೇರ್‌ಕಾವು ದೇವಸ್ಥಾನದಲ್ಲಿ ಸೋಮವಾರ ಮಧ್ಯರಾತ್ರಿ ಸಂಭವಿಸಿದ ಭೀಕರ ಪಟಾಕಿ ದುರಂತದಲ್ಲಿ 154 ಜನರು ಗಾಯಗೊಂಡಿದ್ದಾರೆ. ಈ ಪೈಕಿ 10 ಜನರ ಪರಿಸ್ಥಿತಿ ಗಂಭೀರವಾಗಿದೆ.

ಉತ್ಸವದಲ್ಲಿ ಸಂಗ್ರಹವಾಗಿದ್ದ ಪಟಾಕಿ ದಾಸ್ತಾನಿಗೆ ಬೆಂಕಿ, 10 ಮಂದಿ ಪರಿಸ್ಥಿತಿ ಗಂಭೀರ

18 ಗಾಯಾಳುಗಳು ಮಂಗಳೂರು ಆಸ್ಪತ್ರೆಗೆ ದಾಖಲು

ನೀಲೇಶ್ವರದ ದೇಗುಲದಲ್ಲಿ ತೆಯ್ಯಂ ಕಟ್ಟೆ ಉತ್ಸವದ ಅಂಗವಾಗಿ ಸಹಸ್ರಾರು ಜನರ ಸಮ್ಮುಖದಲ್ಲಿ ನಡೆದ ಸಿಡಿಮದ್ದು ಪ್ರದರ್ಶನದ ವೇಳೆ ಪಟಾಕಿ ದಾಸ್ತಾನಿಗೆ ಕಿಡಿ ತಗಲಿ ದಿಢೀರನೆ ಬೆಂಕಿ ವ್ಯಾಪಿಸಿ ನೂರಾರು ಜನರನ್ನು ಗಾಯಗೊಳಿಸಿದೆ. ಅಗ್ನಿಶಾಮಕ ಪಡೆ ಮತ್ತು ಪೊಲೀಸರು ಧಾವಿಸಿ ಬೆಂಕಿ ನಂದಿಸಲು ಹಲವು ಗಂಟೆಗಳ ಕಾಲ ಹೆಣಗಾಡಬೇಕಾಯಿತು.

ದುರಂತ ನಡೆದಿದ್ದು ಹೇಗೆ?

ದೇಗುಲದಲ್ಲಿ ಮೂವಲಂಕುಳಿ ಚಾಮುಂಡಿ ತೆಯ್ಯಂ ಉತ್ಸವದ ಸಿದ್ಧತೆಗಾಗಿ ನಡೆದ ಕುಳಿಚ್ಚು ತೊಟ್ಟಂ ಆಚರಣೆ ವೇಳೆ ಈ ದುರಂತ ನಡೆದಿದೆ. ಈ ಧಾರ್ಮಿಕ ಆಚರಣೆ ನಡೆದ ಸ್ಥಳಕ್ಕೆ 2-3 ಅಡಿ ದೂರದಲ್ಲಿ ನಿಯಮಾವಳಿ ಉಲ್ಲಂಘಿಸಿ 24 ಸಾವಿರ ರು. ಮೌಲ್ಯದ ಭಾರಿ ಪ್ರಮಾಣದ ಪಟಾಕಿಗಳನ್ನು ದಾಸ್ತಾನು ಮಾಡಲಾಗಿತ್ತು. ಸುರಕ್ಷತಾ ಕ್ರಮ ಅನುಸರಿಸದ ಹಿನ್ನೆಲೆಯಲ್ಲಿ ಅವಘಡಕ್ಕೆ ಕಾರಣವಾಗಿದೆ. ಕಿಡಿ ತಾಗದಂತೆ ಪಟಾಕಿಗಳನ್ನು ಕನಿಷ್ಠ ನೂರು ಅಡಿಗಳ ದೂರದಲ್ಲಿ ದಾಸ್ತಾನು ಮಾಡಬೇಕೆಂಬ ನಿಯಮವಿದೆ. ದುರಂತದಲ್ಲಿ ಗಂಭೀರವಾಗಿ ಗಾಯಗೊಂಡ ಮೂವರನ್ನು ಪರಿಯಾರಂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮಂಗಳೂರು ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ಉಳಿದ ಗಾಯಾಳುಗಳನ್ನು ದಾಖಲಿಸಲಾಗಿದೆ. ಈ ಪೈಕಿ 10 ಜನರಿಗೆ ಶೇ.80 ರಷ್ಟು ಸುಟ್ಟಗಾಯಗಳಾಗಿದ್ದು, ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾರೆ ಎಂದು ಕಾಸರಗೋಡು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ವಿಮಾನಗಳಿಗೆ ಹುಸಿಬಾಂಬ್ ಬೆದರಿಕೆ: ಲೇಖಕನಿಗೆ ಶೋಧ

ಮುಂಬೈ: ಪ್ರಯಾಣಿಕ ವಿಮಾನಗಳಿಗೆ ಇ-ಮೇಲ್ ಮೂಲಕ ಹುಸಿಬಾಂಬ್ ಬೆದರಿಕೆ ಸಂದೇಶ ರವಾನಿಸಿ ತೀವ್ರ ಆತಂಕ ಸೃಷ್ಟಿಸಿರುವ ವ್ಯಕ್ತಿಯ ಗುರುತು ಪೊಲೀಸರಿಗೆ ಪತ್ತೆಯಾಗಿದೆ. ನಾಗಪುರ ಜಗದೀಶ್ ಉಯ್ಕೆ ಎಂಬ 35 ವರ್ಷದ ವ್ಯಕ್ತಿ ಬೆದರಿಕೆ ಸಂದೇಶಗಳ ಮೂಲ ಎಂದು ಕಂಡುಹಿಡಿಯಲಾಗಿದೆ. ನಾಪತ್ತೆಯಾಗಿರುವ ಆರೋಪಿಗಾಗಿ ವಿಶೇಷ ಪೊಲೀಸ್ ತಂಡ ವ್ಯಾಪಕ ಶೋಧನೆ ಕೈಗೊಂಡಿದೆ. ವಿಶೇಷವೆಂದರೆ ಭಯೋತ್ಪಾದನೆ ಬಗ್ಗೆ 2021ರಲ್ಲಿ ಪುಸ್ತಕ ಬರೆದಿದ್ದ ಈ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದರು. ಉಯ್ಕೆ ಕೃತ್ಯದಿಂದಾಗಿ ಅನೇಕ ವಿಮಾನಗಳು ರದ್ದಾಗಿ, ವಿಳಂಬವಾಗಿ ಮತ್ತು ಮಾರ್ಗ ಬದಲಾವಣೆಯಾಗಿ ಪ್ರಯಾಣಿಕರನ್ನು ಸಂಕಷ್ಟಕ್ಕೆ ಗುರಿಮಾಡಿದೆ. ಈ ಮಧ್ಯೆ, ಏರ್ ಇಂಡಿಯಾದ 32 ವಿಮಾನಗಳಿಗೆ ಮತ್ತೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿವೆ.

ಮುಡಾ ಹಗರಣ: ಮಾಜಿ ಆಯುಕ್ತ ಇ.ಡಿ ವಶಕ್ಕೆ

ಬೆಂಗಳೂರು: ಮುಡಾ ಹಗರಣ ನಿವೇಶನ ಹಂಚಿಕೆ ಅಕ್ರಮ ಆರೋಪ ಪ್ರಕರಣಕ್ಕೆ ಸಂಬಂಧ ಮಾಜಿ ಆಯುಕ್ತ ನಟೇಶ್ ಅವರನ್ನು ಜಾರಿ ನಿರ್ದೇಶನಾಲಯ ವಶಕ್ಕೆ ಪಡೆದಿದೆ. ನಟೇಶ್ ಮನೆ ಮೇಲೆ ಸೋಮವಾರ ಇಡಿ ಅಧಿಕಾರಿಗಳು ದಾಳಿ ನಡೆಸಿ ವಿಚಾರಣೆಗೆ ಒಳಪಡಿಸಿದ್ದರು. ಪ್ರಸ್ತುತ ನಟೇಶ್‌ರನ್ನು ಅಧಿಕಾರಿಗಳು ಶಾಂತಿನಗರದ ಇಡಿ ಕಚೇರಿಗೆ ಕರೆದೊಯ್ದಿದ್ದಾರೆ. ವಿಚಾರಣೆಗೆ ಸಹಕರಿಸದ ಹಿನ್ನೆಲೆಯಲ್ಲಿ ನಟೇಶ್ ಅವರನ್ನು ಬಂಧಿಸುವ ಸಾಧ್ಯತೆಯಿದೆ. ನಟೇಶ್ ಮುಡಾ ಆಯುಕ್ತರಾಗಿದ್ದಾಗ ಸಿಎಂ ಪತ್ನಿಗೆ ಸೈಟ್ ಹಂಚಿಕೆಯಾಗಿತ್ತು. ನಟೇಶ್ ವಿರುದ್ಧ ಮುಡಾದಿಂದ 50:50 ಅನುಪಾತದಲ್ಲಿ 928 ನಿವೇಶನಗಳನ್ನು ಅಕ್ರಮ ಹಂಚಿಕೆ ಮಾಡಿದ ಆರೋಪವಿದೆ.

ವಿಚಾರಣೆ ವೇಳೆ ನಾನು ಯಾವುದೇ ತಪ್ಪು ಮಾಡಿಲ್ಲ. ಸರಕಾರದ ಆದೇಶ ಚಾಚೂತಪ್ಪದೇ ಪರಿಪಾಲಿಸಿದ್ದೇನೆ ಎಂದು ಹೇಳಿದ್ದರು.

ದರ್ಶನ್ ಜಾಮೀನು: ಇಂದು ತೀರ್ಪು

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಅವರ ಮಧ್ಯಂತರ ಜಾಮೀನು ಅರ್ಜಿಯ ಆದೇಶವನ್ನು ಹೈಕೋರ್ಟ್ ಬುಧವಾರ ಪ್ರಕಟಿಸಲಿದೆ. ಸೋಮವಾರ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾ. ವಿಶ್ವಜಿತ್ ಶೆಟ್ಟಿ ಅವರಿದ್ದ ನ್ಯಾಯಪೀಠ, ಸರಕಾರ ಮತ್ತು ಅರ್ಜಿದಾರರ ಪರ ವಕೀಲರ ವಾದ-ಪ್ರತಿವಾದ ಆಲಿಸಿ ಆದೇಶ ಕಾಯ್ದಿರಿಸಿತು.

ಮರಗಳಿಗೆ ಕೊಡಲಿ: ಟಾಕ್ಸಿಕ್‌ಗೆ ಸಂಕಷ್ಟ

ಬೆಂಗಳೂರು: ಯಶ್ ಅಭಿನಯದ ಟಾಕ್ಸಿಕ್ ಸಿನಿಮಾ ಸೆಟ್ ನಿರ್ಮಾಣಕ್ಕಾಗಿ ಸಾವಿರಾರು ಮರಗಳನ್ನು ನಾಶಮಾಡಿದ ಆರೋಪ ಕೇಳಿ ಬಂದ ಬೆನ್ನಲ್ಲೇ ಸ್ಥಳ ಪರಿಶೀಲಿಸಿದ ಅರಣ್ಯ ಸಚಿವರು, ಆರೋಪ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಟಾಕ್ಸಿಕ್ ಚಿತ್ರದ ಚಿತ್ರೀಕರಣ ಬೆಂಗಳೂರಿನ ಹೊರವಲಯದಲ್ಲಿ ನಡೆಯುತ್ತಿದ್ದು, ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗುತ್ತಿದೆ. ಈ ಸೆಟ್ ನಿರ್ಮಾಣಕ್ಕೆ ಚಿತ್ರತಂಡ ನೂರಾರು ಮರಗಳನ್ನು ಕಡಿದಿದೆ ಎಂಬ ಆರೋಪ ಕೇಳಿಬಂದಿದೆ.

ಕೈ ಗೊಂಬೆಯಾದ ಕೌನ್ಸಿಲರ್‌ಗಳು

ರಾಮನಗರ: ಚನ್ನಪಟ್ಟಣ ಉಪಚುನಾವಣೆ ಹಿನ್ನೆಲೆಯಲ್ಲಿ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್‌ಗೆ ವಲಸೆ ಹೋದ ಬೆನ್ನಲ್ಲೇ ಅವರ ಬೆಂಬಲಿಗರೂ ಬಿಜೆಪಿಗೆ ವಿದಾಯ ಹೇಳುತ್ತಿದ್ದಾರೆ. ರಾಮನಗರ ನಗರಸಭೆಯ ಆರು ಬಿಜೆಪಿ ಸದಸ್ಯರು ಹಾಗೂ ಪಕ್ಷದ ವಿವಿಧ ಪದಾಧಿಕಾರಿಗಳು ಮಾಜಿ ಸಂಸದ ಡಿ.ಕೆ.ಸುರೇಶ್ ಸಮ್ಮುಖದಲ್ಲಿ ಮಂಗಳವಾರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಚನ್ನಪಟ್ಟಣದಲ್ಲಿ ನಮಗೆ ಹುರುಪು ಬಂದಿದೆ, ಯೋಗೇಶ್ವರ್ ಕಾಂಗ್ರೆಸ್‌ಗೆ ಬಂದಿದ್ದು ಅನಿರೀಕ್ಷಿತ. ಅವರಿಗೆ ನಾವು ಸ್ವಾಗತ ಕೋರುತ್ತೇನೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ, ಚುನಾವಣೆಯಲ್ಲಿ ಯೋಗೇಶ್ವರ್ ಗೆಲುವಿಗೆ ಒಗ್ಗಟ್ಟಾಗಿ ದುಡಿಯುತ್ತೇವೆ ಎಂದರು.

ಹಿರಿಯರಿಗಿನ್ನು ಆಯುಷ್ಮಾನ್ ರಕ್ಷೆ

ದೆಹಲಿ: ದೇಶದ 70 ವರ್ಷ ಮೀರಿದ ಹಿರಿಯ ನಾಗರಿಕರಿಗೆ ಉಚಿತ ವೈದ್ಯಕೀಯ ಸೌಲಭ್ಯ ಒದಗಿಸುವ ಆಯುಷ್ಮಾನ್ ಭಾರತ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಚಾಲನೆ ನೀಡಿದ್ದಾರೆ. ಅಲ್ಲದೆ, 9ನೇ ಆಯುರ್ವೇದ ದಿನ ಮತ್ತು ಧನ್ವಂತರಿ ಜನ್ಮದಿನದ ಅಂಗವಾಗಿ 12,850 ಕೋಟಿ ರು. ಅಭಿವೃದ್ಧಿ ಯೋಜನೆಗಳನ್ನು ಅನಾವರಣಗೊಳಿಸಿದ್ದಾರೆ. ಆದರೆ, ದೆಹಲಿ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ಆಯುಷ್ಮಾನ್ ಭಾರತ ಯೋಜನೆಯನ್ನು ಅನುಷ್ಠಾನಗೊಳಿಸದಿರುವುದರಿಂದ ಅಲ್ಲಿನ ಹಿರಿಯ ನಾಗರಿಕರಿಗೆ ಆರೋಗ್ಯ ಸೇವೆಗಳ ಪ್ರಯೋಜನ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಮೋದಿ ಟೀಕಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿಶುಕುಮಾರ್ ಪ್ರಶಸ್ತಿಗೆ ಬಾಬು ಶಿವ ಆಯ್ಕೆ

ಮಂಗಳೂರು: ಯುವವಾಹಿನಿ ಸಂಸ್ಥೆ ನೀಡುವ ಪ್ರಸಕ್ತ ಸಾಲಿನ 'ವಿಶುಕುಮಾರ್ ಪ್ರಶಸ್ತಿ'ಗೆ ಪತ್ರಿಕಾ ಸಂಪಾದಕ, ಸಾಹಿತಿ, ಸಂಶೋಧಕ, ಬಾಬು ಶಿವ ಪೂಜಾರಿ ಆಯ್ಕೆಯಾಗಿದ್ದಾರೆ. ಕಾದಂಬರಿಕಾರ, ಕತೆಗಾರ, ನಾಟಕಕಾರ, ರಂಗನಟ, ರಂಗ ನಿರ್ದೇಶಕ, ಚಲನಚಿತ್ರ ನಿರ್ದೇಶಕ, ಪತ್ರಕರ್ತ, ಅಂಕಣಕಾರ, ಸಂಘಟಕ ವಿಶು ಕುಮಾರ್ ಸ್ಮರಣಾರ್ಥ ಯುವವಾಹಿನಿ ಸಂಸ್ಥೆಯು ಕಳೆದ 20 ವರ್ಷಗಳಿಂದ ವಿಶುಕುಮಾರ್ ಪ್ರಶಸ್ತಿ ನೀಡುತ್ತಾ ಬಂದಿದೆ. ಈ ಸಾಲಿನ ಪ್ರಶಸ್ತಿಗೆ ಬಿ.ಎಂ. ರೋಹಿಣಿ, ಮುದ್ದು ಮೂಡುಬೆಳ್ಳೆ, ಡಾಟ ಪ್ರಭಾಕರ ನೀರುಮಾರ್ಗ, ಡಾ. ಯೋಗೀಶ್ ಕೈರೋಡಿ, ಪ್ರೊ. ಶಶಿಲೇಖಾ ಅವರನ್ನೊಳಗೊಂಡ ಆಯ್ಕೆ ಸಮಿತಿ ಆಯ್ಕೆ ನಡೆಸಿದೆ. ನ. 10ರಂದು ಉರ್ವ ಸ್ಟೋರ್‌ನ ತುಳು ಭವನದ ಅಮೃತ ಸೋಮೇಶ್ವರ ಸಭಾಂಗಣದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಎಂದು ಯುವವಾಹಿನಿ ಸಂಸ್ಥೆಯ ವಿಶುಕುಮಾರ್ ದತ್ತಿ ನಿಧಿ ಸಮಿತಿಯ ಸಂಚಾಲಕ ಸುರೇಶ್ ಪೂಜಾರಿ ಹಾಗೂ ಯುವವಾಹಿನಿ (ರಿ) ಕೇಂದ್ರ ಸಮಿತಿಯ ಅಧ್ಯಕ್ಷ ಹರೀಶ್ ಕೆ. ಪೂಜಾರಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸರಕಾರಿ ಬಸ್ ವ್ಯವಸ್ಥೆ ಕಲ್ಪಿಸುವ ಪ್ರಯತ್ನ

ಸುಳ್ಯ: ಪ್ರವಾಸಿ ತಾಣ ಕಾಸರಗೋಡು ಜಿಲ್ಲೆಯ ಬೇಕಲ ಕೋಟೆ ಮತ್ತು ಪುಣ್ಯ ಕ್ಷೇತ್ರ ಸುಬ್ರಹ್ಮಣ್ಯ ಸಂಪರ್ಕಿಸುವ ನಿಟ್ಟಿನಲ್ಲಿ ಬೇಕಲ್ಲ, ಬಂದಡ್ಕ, ಸುಳ್ಯ, ಸುಬ್ರಹ್ಮಣ್ಯ ಅಂತಾರಾಜ್ಯ ಮಾರ್ಗದಲ್ಲಿ ಸರಕಾರಿ ಬಸ್ ಸೇವೆ ಆರಂಭಿಸಲು ಎಲ್ಲಾ ಪ್ರಯತ್ನ ನಡೆಸಲಾಗುವುದು ಎಂದು ಶಾಸಕ ಸಿ.ಎಚ್.ಕುಂಞಂಬು ಅವರು ತಿಳಿಸಿದ್ದಾರೆ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹಾಗು ಬಂದಡ್ಕ ಗೌಡ ಗ್ರಾಮ ಸಮಿತಿಯ ವತಿಯಿಂದ ಬಂದಡ್ಕದಲ್ಲಿ ನಡೆದ ಅರೆಭಾಷೆ ಗಡಿನಾಡ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಅವರು ಈ ವಿಷಯ ತಿಳಿಸಿದರು. ಅಂತಾರಾಜ್ಯ ಬಸ್ ಸರ್ವೀಸ್ ಆರಂಭಿಸಬೇಕು ಎಂದು ಅರೆಭಾಷೆ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ ಹಾಗೂ ಬಂದಡ್ಕದ ಪ್ರಮುಖರು ಮನವಿ ಸಲ್ಲಿಸಿದರು. ಈ ಮಾರ್ಗದಲ್ಲಿ ಹೊಸ ಬಸ್ ರೂಟ್ ಮಂಜೂರು ಮಾಡಿಸಿ ಕೇರಳದಿಂದ ಹಾಗೂ ಕರ್ನಾಟಕ ಸರಕಾರಿ ಬಸ್ ಸರ್ವೀಸ್ ನಡೆಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುವುದು ಎಂದು ಅವರು ಹೇಳಿದರು.

ಕಾರ್ಕಳ ತಹಸೀಲ್ದಾರ್ ಪ್ರದೀಪ್ ನೇಮಕ

ಕಾರ್ಕಳ: ತಾಲೂಕಿನ ತಹಸೀಲ್ದಾರ್ ಆಗಿ ಪ್ರದೀಪ್ ಆರ್. ಅವರು ನೇಮಕಗೊಂಡಿದ್ದಾರೆ. ಮೂಲತ: ಚಿತ್ರದುರ್ಗದವರಾದ ಪ್ರದೀಪ್ ಅವರು ಈ ಮೊದಲು ಒಂದು ವರ್ಷಗಳ ಕಾಲ ಬೈಂದೂರು ತಾಲೂಕು ತಹಸೀಲ್ದಾರ್ ಆಗಿ ಕರ್ತವ್ಯ ಸಲ್ಲಿಸಿದ್ದರು. ಈ ಹಿಂದೆ ಕಾರ್ಕಳದಲ್ಲಿ ತಹಸೀಲ್ದಾರ್ ಆಗಿದ್ದ ನರಸಪ್ಪ ಅವರು ಬಳ್ಳಾರಿಗೆ ವರ್ಗಾವಣೆಗೊಂಡಿದ್ದು, ನೂತನ ತಹಸೀಲ್ದಾರ್ ನಿಯೋಜನೆಯಾಗದ ಹಿನ್ನೆಲೆ ಕಾಪು ತಾಲೂಕಿನ ತಹಸೀಲ್ದಾರ್ ಪ್ರತಿಭಾ ಆರ್. ಪ್ರಭಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಕ್ಲಿಕ್
ವಿ+
ಸೋಮವಾರ

ಮಾನ್ಯ ಪ್ರಧಾನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಕ್ರಿ.ಮಿಸ್.ನಂ:583/2024
ಅರ್ಜಿದಾರರು : ಶ್ರೀಮತಿ ಗಂಗಮ್ಮ ಚಂದ್ರಪ್ಪ ಕೆಳಗಿನಮನಿ ಬಿನ್ ಚಂದ್ರಪ್ಪ ವಯಸ್ಸು : 35 ವರ್ಷ, ವಾಸ : ಯತ್ತಿನಹಳ್ಳಿ ಗ್ರಾಮ, ಕೋಡ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.
-:ವಿರುದ್ಧ: -
ಎದುರುದಾರರು : ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಹಶೀಲ್ದಾರರು ಹರಿಹರ ತಾಲ್ಲೂಕು ಕಚೇರಿ ಹರಿಹರ.
ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು
ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ತಮ್ಮ ತಾಯಿಯಾದ "ಶ್ರೀಮತಿ ಹನುಮವ್ವ ಚಂದ್ರಪ್ಪ ಕೆಳಗಿನಮನಿ ಕೋಂ ಚಂದ್ರಪ್ಪ" ಇವರು ದಿನಾಂಕ ; 01-08-1990ರಂದು ಹಳ್ಳಿಹಾಳ್ ಗ್ರಾಮ ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿದಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂದಿಸಿದಂತೆ ಬೇರೆ ಯಾರದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ; 11-12-2024 ರಂದು ಬೆಳಿಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿಯಾಗಲಿ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷಿಯವಾಗಿ ತೆಗೆದು ಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:-29-10-2024 ರಂದು ನೀಡಲಾಗಿದೆ.
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ 2ನೇ ಹೆಚ್ಚುವರಿ ಸಿವಿಲ್ ನ್ಯಾಯದೀಶರು & ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ.
ಅರ್ಜಿದರಾರ ಪರ ವಕೀಲರು
ರಘು ಹೆಚ್
ಸ್ಥಳ : ಹರಿಹರ
ದಿನಾಂಕ; 29-10-2024

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್.ನಂ: 654/2024
ಅರ್ಜಿದಾರರು : ಅರುಣಕುಮಾರ ಜಿ ಬೊಂಗಾಳೆ ತಂದೆ ಬಿ.ಜ್ಞಾನದೇವರಾವ್ ವಯಸ್ಸು ಸುಮಾರು 55 ವರ್ಷ, ವಾಸ : ದೇವಸ್ಥಾನ ರಸ್ತೆ, ಹರಿಹರ, ದಾವಣಗೆರೆ ಜಿಲ್ಲೆ.
-ವಿರುದ್ಧ: -
ಎದುರುದಾರರು : ಜನನ ಮತ್ತು ಮರಣ ನೊಂದಣಾಧಿಕಾರಿಗಳು ನಗರಸಭೆ ರವರ ಕಛೇರಿ, ಹರಿಹರ.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ತಾಯಿಯಾದ "ರತ್ನಾಬಾಯಿ ಬೊಂಗಾಳೆ ಕೋಂ ಬಿ.ಜ್ಞಾನದೇವರಾವ್" ಇವರು ದಿನಾಂಕ; 02-12-1994 ರಂದು ಹರಿಹರ ದೇವಸ್ಥಾನ ರಸ್ತೆಯ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿ ಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಅದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ; 06-12-2024 ರಂದು ಬೆಳಿಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:-23-10-2024 ರಂದು ನೀಡಲಾಗಿದೆ.
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ & ಪ್ರದ.ನ್ಯಾ.ದಂ. ನ್ಯಾಯಾಲಯ, ಹರಿಹರ.
ಅರ್ಜಿದರಾರ ಪರ ವಕೀಲರು
ಜಿ.ಕೆ. ನಾಯ್ಕ
ಸ್ಥಳ : ಹರಿಹರ
ದಿನಾಂಕ: 23-10-2024

ಸೈಬ್ರಕಟ್ಟೆ ಹವಾನಿಯಂತ್ರಿತ ಶಾಖೆ ನಿರ್ದೇಶಕ ಡಾ.ಎಂ.ಎನ್. ರಾಜೇಂದ್ರ ಎಟಿಎಂ ಉದ್ಘಾಟನೆ

ಸಹಕಾರಿ ಬ್ಯಾಂಕ್‌ನಿಂದ ದೇಶದ ಅಭಿವೃದ್ಧಿ

ಮಂಗಳೂರು: ಪ್ರತಿಷ್ಠಿತ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಸೈಬ್ರಕಟ್ಟೆ ಶಾಖೆಯು ಬ್ರಹ್ಮಾವರ- ಹಾಲಾಡಿ ಮುಖ್ಯರಸ್ತೆ ಯಲ್ಲಿರುವ ಸೈಬ್ರಕಟ್ಟೆಯ ಎಸ್.ಎಸ್.ಕಾಂಪ್ಲೆಕ್ಸ್‌ನ ನೆಲ ಅಂತಸ್ತಿಗೆ ಸ್ಥಳಾಂತರಗೊಂಡಿದ್ದು ಸಂಪೂರ್ಣ ಹವಾನಿಯಂತ್ರಿತ ಸ್ಥಳಾಂತರ ಶಾಖೆ ಉದ್ಘಾಟನೆ ಹಾಗೂ ಎಟಿಎಂ ಉದ್ಘಾಟನೆ ನಡೆಯಿತು.

ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ, ಇಫ್ಕೋ ನಿರ್ದೇಶಕ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಸ್ಥಳಾಂತರ ಶಾಖೆಯನ್ನು ದೀಪ ಪ್ರಜ್ವಲಿಸಿ ಲೋಕಾರ್ಪಣೆಗೊಳಿಸಿದರು.

ಡಾ.ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ದೇಶದ ಬೆಳವಣಿಗೆಯಲ್ಲಿ ಸಹಕಾರಿ ಕ್ಷೇತ್ರ ಪ್ರಬಲವಾದ ಪಾತ್ರವನ್ನು ನಿರ್ವಹಿಸಿದ್ದು, ಜನರ ಕಷ್ಟ, ಸುಖಗಳಿಗೆ ಸ್ಪಂದಿಸುತ್ತಿದೆ. ರೈತರು, ಮಹಿಳೆಯರು ಸೇರಿದಂತೆ ಗ್ರಾಮೀಣ ಭಾಗದ ಜನರ ಸ್ವಾವಲಂಬಿ ಬದುಕಿಗೆ ಆಸರೆಯಾಗಿದೆ ಎಂದರು.

ಹವಾನಿಯಂತ್ರಿತ ಸ್ಥಳಾಂತರ ಶಾಖೆ ಉದ್ಘಾಟನೆ ಹಾಗೂ ಎಟಿಎಂ ಉದ್ಘಾಟನೆ ನಡೆಯಿತು.

ನಗುಮೊಗದ ಸೇವೆ: ಗ್ರಾಮೀಣ ಜನರ ಅಭಿವೃದ್ಧಿಯ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕಾರ್ಯಾಚರಿಸುತ್ತಿದೆ. ಜನರಿಗೆ ಅಗತ್ಯವಿರುವ ಸೇವೆಯನ್ನು ಮನೆಬಾಗಿಲಿಗೆ ತೆಗೆದುಕೊಂಡು ಹೋಗಿದೆ.

ಸ್ವಾತಂತ್ರ್ಯಕ್ಕೂ ಮುನ್ನವೇ ಸಹಕಾರಿ ಕ್ಷೇತ್ರವಿದ್ದು,

> ವಾಣಿಜ್ಯ ಬ್ಯಾಂಕ್‌ಗಳ ತವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ವಾಣಿಜ್ಯ ಬ್ಯಾಂಕ್‌ಗಳು ಕಾಣುತ್ತಿಲ್ಲ. ಭಾಷೆ, ಸಂಸ್ಕೃತಿಯನ್ನು ಅರಿಯದ ಸಿಬ್ಬಂದಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಸಹಕಾರಿ ಕ್ಷೇತ್ರ ವಿಭಜನೆ ಮಾಡದೇ ಜನರ ಬಳಿ ಹೋಗಿ ಸೇವೆ ನೀಡುತ್ತಿದೆ. ಹೀಗಾಗಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ.
> -ಡಾ.ಎಂ.ಎನ್. ರಾಜೇಂದ್ರ ಕುಮಾರ್

ಸಹಕಾರಿಯ ಮಹತ್ವ ಅವರಿಗೂ ಗೊತ್ತಿತ್ತು. ಸ್ವಸಹಾಯ ಗುಂಪುಗಳ ಮೂಲಕ ಮಹಿಳೆಯರ ಸ್ವಾವಲಂಬಿ ಬದುಕಿಗೆ ಆಸರೆಯಾಗಿದೆ ಎಂದರು.

ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಡಾ.ಎಂ.ಎನ್. ರಾಜೇಂದ್ರ ಕುಮಾರ್‌ರ ಮಾರ್ಗದರ್ಶನದ ದಕ್ಷ ಆಡಳಿತ ಮಂಡಳಿ, ಪ್ರಾಮಾಣಿಕ ಮತ್ತು ನಗುಮೊಗದ ಸಿಬ್ಬಂದಿ, ಪೂರಕ ವಾತಾವರಣದೊಂದಿಗೆ ಬ್ಯಾಂಕ್ ಉತ್ತುಂಗದ ಶಿಖರಕ್ಕೇರಿದ್ದು, ರೈತರಿಗೆ ಪೂರಕವಾಗಿ ಸ್ಪಂದಿಸುತ್ತಿದೆ ಎಂದರು.

ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಬಿ. ಜಯಕರ್ ಶೆಟ್ಟಿ ಇಂದ್ರಾಳಿ, ಶಿರಿಯಾದ ವ್ಯವಸಾಯ ಸೇವಾ ಸಹಕಾರಿ ಸಂಘ ಸೈಬ್ರಕಟ್ಟೆ , ಅಧ್ಯಕ್ಷ ಬಿ. ಪ್ರದೀಪ್ ಬಲ್ಲಾಳ್, ಶಿರಿಯಾರ ಗ್ರಾಮ ಪಂಚಾಯಿತಿ ಅಧ್ಯಕ್ಷ ಸುಧೀಂದ್ರ ಶೆಟ್ಟಿ, ಶಾಖಾ ಕಟ್ಟಡ ಮಾಲೀಕರಾದ ಸುರೇಶ್ ಶೆಟ್ಟಿ ಬಿ., ಶರತ್ ಕುಮಾರ್ ಶೆಟ್ಟಿ, ಸಹಕಾರ ಸಂಘಗಳ ಉಪನಿಬಂಧಕ ಕೆ.ಆರ್. ಲಾವಣ್ಯ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ಮುಖ್ಯ ಕಾರ್ಯನಿರ್ವಹಣಾಕಾರಿ (ಪ್ರಭಾರ) ಗೋಪಾಲಕೃಷ್ಣ ಭಟ್ ಕೆ., ನಿರ್ದೇಶಕ ಎಸ್. ರಾಜು ಪೂಜಾರಿ, ಶಶಿಕುಮಾರ್.ರೈ.ಬಿ, ಕೆ. ಹರಿಶ್ಚಂದ್ರ, ಎಂ. ಮಹೇಶ್ ಹೆಗ್ಡೆ, ಬಿ.ಅಶೋಕ್ ಕುಮಾರ್ ಶೆಟ್ಟಿ, ರಾಜೇಶ್ ರಾವ್ ಉಪಸ್ಥಿತರಿದ್ದರು.

ಐಕಳಬಾವ ಡಾ. ದೇವಿಪ್ರಸಾದ್ ಶೆಟ್ಟಿ ಸ್ವಾಗತಿಸಿದರು. ದಾಮೋದರ ಶರ್ಮ ಕಾರ್ಯಕ್ರಮ ನಿರೂಪಿಸಿದರು. ಸ್ಥಳೀಯ ಸಹಕಾರಿಗಳಿಂದ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಅಪಘಾತ ತಡೆಗೆ ರಸ್ತೆ ನಿಯಮ ಪಾಲಿಸಿ

ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿದ್ಯಾಕುಮಾರಿ ಮಾತನಾಡಿದರು.

ಉಡುಪಿ: ಜಿಲ್ಲೆಯಲ್ಲಿ ಗುರುತಿಸಲಾದ ರಸ್ತೆ ಅಪಘಾತ ವಲಯಗಳಲ್ಲಿ ಅಪಘಾತ ತಡೆಗಟ್ಟುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಂಡು ಅಪಘಾತ ಮುಕ್ತ ವಲಯಗಳನ್ನಾಗಿಸಬೇಕೆಂದು ಜಿಲ್ಲಾಧಿಕಾರಿ ಡಾ. ಕೆ. ವಿದ್ಯಾಕುಮಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ 2020 ರಿಂದ 22ರ ವರೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೆಚ್ಚು ಅಪಘಾತವಾದ ಸ್ಥಳಗಳನ್ನು ಬ್ಲ್ಯಾಕ್ ಸ್ಪಾಟ್ ಗಳನ್ನಾಗಿ ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ಪಾದಚಾರಿಗಳ ಕ್ರಾಸಿಂಗ್ ಹಾಗೂ ಜೀಬ್ರಾ ಕ್ರಾಸಿಂಗ್, ಸೂಚನಾ ಫಲಕ, ಹೈಮಾಸ್ಟ್ ದ್ವೀಪ, ಬ್ಲಿಂಕರ್ಸ್, ರಸ್ತೆ ಬದಿಯಲ್ಲಿ ಮೆಟಲ್ ಕ್ರಾಸ್ ಬ್ಯಾರಿಯರ್ಸ್, ಹಂಪ್ಸ್, ಫೂಟ್ ಓವರ್ ಬ್ರಿಡ್ಜ್, ಮಳೆಯ ನೀರು ಸರಾಗವಾಗಿ ಹರಿದು ಹೋಗಲು ಒಳಚರಂಡಿ, ಎಂ.ಎಸ್. ರೈಲಿಂಗ್ಸ್ ಮೊದಲಾದ ಕಾರ್ಯಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದು ಡಿಸಿಯವರು ಸೂಚನೆ ನೀಡಿದರು.

ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೆಚ್ಚು ಅಪಘಾತ ಸಂಭವಿಸುವ ಸ್ಥಳಗಳಲ್ಲಿ

> ವಾಹನ ಸವಾರರು ಸಾರ್ವಜನಿಕ ರಸ್ತೆಯಲ್ಲಿ ಚಲಿಸುವಾಗ ತಪ್ಪದೇ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಿದ್ದಲ್ಲಿ ಹಾಗೂ ವೇಗ ಮಿತಿಯೊಳಗೆ ಸುಗಮವಾಗಿ ಸಂಚರಿಸಿದ್ದಲ್ಲಿ ಮಾತ್ರ ಅಪಘಾತಗಳನ್ನು ತಪ್ಪಿಸಲು ಸಾಧ್ಯ. ಇದಕ್ಕೆ ಸಾರ್ವಜನಿಕರು ಹೆಚ್ಚಿನ ಆದ್ಯತೆ ನೀಡಬೇಕು.
> -ಡಾ. ಕೆ. ವಿದ್ಯಾಕುಮಾರಿ, ಜಿಲ್ಲಾಧಿಕಾರಿ

ಅಗತ್ಯವಿರುವ ಸುರಕ್ಷತಾ ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಕ್ರಿಯಾ ಯೋಜನೆಯಡಿ ನೀಡಿರುವ ಅನುದಾನ ಸಮರ್ಪಕವಾಗಿ ಬಳಸುವುದರೊಂದಿಗೆ, ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಗರಸಭೆ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಅಬ್ದುಲ್ಲಾ ಮೊಹಮ್ಮದ್ ಅಜ್ಮಿ, ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಹಾಯಕಿ ಜೆ.ಜಿ. ಶಾಂತಲಾ, ಪೌರಾಯುಕ್ತ ರಾಯಪ್ಪ, ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ್ ಬಿ. ಉಪಸ್ಥಿತರಿದ್ದರು.

ಗ್ರಾಮೀಣ ಸಮಸ್ಯೆ ಬಗ್ಗೆ ಗಮನ ಹರಿಸಿ

ಕುತ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸಿದರು.

ಮಂಗಳೂರು: ಗ್ರಾಮೀಣ ಭಾಗದ ಜನರ ಸಮಸ್ಯೆ ಗಳ ಬಗ್ಗೆ ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಪರಿಗಣಿಸಲ್ಪಟ್ಟ ಮಾಧ್ಯಮ ರಂಗದ ಪ್ರತಿನಿಧಿಗಳು ಗಮನ ಹರಿಸಿ ನಿವಾರಣೆಗೆ ನಿರಂತರವಾಗಿ ಪ್ರಯತ್ನಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ.

ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ದಕ್ಷಿಣ ಕನ್ನಡ ಕಾರ್ಯ ನಿರತ ಪತ್ರಕರ್ತರ ಸಂಘದ ವತಿಯಿಂದ ಎಂಸಿಎಫ್ ಸಂಸ್ಥೆಯ ಸಿಎಸ್ ಆರ್ ನಿಧಿಯ ಮೂಲಕ ಕುತ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಸೋಮವಾರ ಸಮವಸ್ತ್ರ ವಿತರಿಸಿ ಮಾತನಾಡಿದರು. ಮಾಧ್ಯಗಳು ಜನರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವುದರ ಜತೆ ಸಮಸ್ಯೆ ಪರಿಹಾರಕ್ಕೆ ಜಿಲ್ಲಾಡಳಿತದ ಜತೆ ಅಲ್ಲಿನ ಸ್ಥಳ ಜನರ ಜತೆ ಸೇರಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ.

ಇದೇ ಸಂದರ್ಭದಲ್ಲಿ ಕುತ್ಲೂರು ಗ್ರಾಮದ ಸಾಹಸ ಪ್ರವಾ ಸೋದ್ಯಮ ಸಾಕ್ಷ್ಯ ಚಿತ್ರದ ಮೂಲಕ ಪ್ರಶಸ್ತಿ ಪಡೆದ ಕುತ್ಲೂರು ಗ್ರಾಮದ ಪ್ರತಿನಿಧಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಸನ್ಮಾನಿಸಿದರು.

ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ

> ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘ ಗ್ರಾಮೀಣ ಭಾಗದಲ್ಲಿ ನಡೆಸುತ್ತಿರುವ ಗ್ರಾಮ ವಾಸ್ತವ್ಯದ ಮೂಲಕ ಅವರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಿರುವುದು ಮತ್ತು ಆ ಸಮಸ್ಯೆ ಪರಿಹರಿಸಲು ಗ್ರಾಮದ ಜನರು ಜೊತೆ ಸೇರಿ ಮಾಡುತ್ತಿರುವ ಕೆಲಸ ತಾನು ಇತರ ಕಡೆ ನೋಡಿಲ್ಲ ಇದು ಜಿಲ್ಲೆಯ ಅಭಿವೃದ್ಧಿ ಗೆ ಪೂರಕ.
> -ಮುಲ್ಲೈ ಮುಗಿಲನ್, ಜಿಲ್ಲಾಧಿಕಾರಿ

ಸಂಘದ ಅಧ್ಯಕ್ಷ ಶ್ರೀನಿವಾಸ್ ನಾಯಕ್ ಇಂದಾಜೆ ಅಧ್ಯಕ್ಷತೆವಹಿಸಿ ಸ್ವಾಗತಿಸಿದರು. ಎಂಸಿಫ್ ಸಾರ್ವಜನಿಕ ಸಂಪರ್ಕ ಅಧಿಕಾರಿ ಅವಿನಂದನ್, ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್.ರೈ, ಕುತ್ಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ರಾಮಚಂದ್ರ ಭಟ್ ಉಪಸ್ಥಿತರಿದ್ದರು. ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದ ಕೋಶಾಧಿಕಾರಿ ಪುಷ್ಪ ರಾಜ್‌ಬಿ.ಎನ್ ಕಾರ್ಯಕ್ರಮ ನಿರೂಪಿಸಿ, ಪ್ರದಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ವಂದಿಸಿದರು.

ಜಿಲ್ಲಾಡಳಿತದಿಂದ ರಾಜ್ಯೋತ್ಸವ ನ.1ಕ್ಕೆ

ಚಿಕ್ಕಮಗಳೂರು: ಜಿಲ್ಲಾಡಳಿತ ವತಿಯಿಂದ ನವೆಂಬರ್ 01 ರಂದು ಬೆ.09.ಗಂಟೆಗೆ ನಗರದ ನೇತಾಜಿ ಸುಭಾಷ್‌ಚಂದ್ರ ಬೋಸ್‌ಜಿಲ್ಲಾ ಮೈದಾನದಲ್ಲಿ ಕನ್ನಡರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಂಧನ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ರಾಷ್ಟ್ರ ಧ್ವಜಾರೋಹಣ ಮಾಡಲಿದ್ದು, ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಬೆಂಗಳೂರು ಹಾಗೂ ಶೃಂಗೇರಿ ವಿಧಾನಸಭಾ ಕ್ಷೇತ್ರ ಶಾಸಕ ಟಿ.ಡಿ.ರಾಜೇಗೌಡ, ಅನಿವಾಸಿ ಭಾರತೀಯ ಕೋಶ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ, ಕರ್ನಾಟಕರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಘನ ಉಪಸ್ಥಿತರಿರಲಿದ್ದಾರೆ, ಚಿಕ್ಕಮಗಳೂರು ವಿಧಾನ ಸಭಾಕ್ಷೇತ್ರದ ಶಾಸಕ ಹೆಚ್.ಡಿ. ತಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಉಡುಪಿ-ಚಿಕ್ಕಮಗಳೂರು ಲೋಕಸಭಾಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ರಾಜ್ಯಸಭೆ ಸಂಸದಜೈರಾಮ್ ರಮೇಶ್, ಹಾಸನ ಲೋಕಸಭಾಕ್ಷೇತ್ರದ ಸಂಸದರಾದ ಶ್ರೇಯಸ್ ಎಂ ಪಟೇಲ್, ವಿಧಾನ ಪರಿಷತ್ ಶಾಸಕರಾದಎಸ್. ಎಲ್. ಭೋಜೆಗೌಡ, ಶಾಸಕರುಗಳಾದ ಜಿ. ಎಚ್. ಶ್ರೀನಿವಾಸ್, ಕೆ.ಎಸ್. ಆನಂದ್, ನಯನ ಮೋಟಮ್ಮ, ವಿಧಾನ ಪರಿಷತ್ ಶಾಸಕ ಸಿ.ಟಿ. ರವಿ, ವಿಧಾನ ಪರಿಷತ್ ಶಾಸಕರಾದಡಾ. ಧನಂಜಯ ಸರ್ಜಿ, ಭದ್ರಾಕಾಡಾ ಶಿವಮೊಗ್ಗ ಅಧ್ಯಕ್ಷ ಡಾ. ಅಂಶುಮಂತ್, ಕ.ರಾ. ಕೃಷಿ ಉತ್ಪನ್ನ ಸಂಸ್ಕರಣೆ ಮತ್ತುರಫ್ತು ನಿಗಮ ಅಧ್ಯಕ್ಷರಾದಬಿ.ಹೆಚ್. ಹರೀಶ್, ನಗರಸಭೆ ಅಧ್ಯಕ್ಷೆ ಸುಜಾತ ಶಿವಕುಮಾರ್ ಮುಂತಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರಾಷ್ಟ್ರಮಟ್ಟದ ಮನ್ನಣೆಗೆ ಕ್ರಿಕೆಟ್ ಸಹಕಾರಿ

ಚಿಕ್ಕಮಗಳೂರು: ಯುವಸಮೂಹಕ್ಕೆ ದೈಹಿಕ ಸಾಮರ್ಥ್ಯ ಹಾಗೂ ರಾಷ್ಟ್ರಮಟ್ಟದ ಲ್ಲಿ ಮನ್ನಣೆ ಗಳಿಸಲು ಕ್ರಿಕೆಟ್ ಅತ್ಯಂತ ಸಹಕಾರಿ. ಆ ನಿಟ್ಟಿನಲ್ಲಿ ಕ್ರೀಡಾಪಟುಗಳು ನಿರಂತರ ಅಭ್ಯಾಸದಿಂದ ಕೂಡಿದರೆ ಮಾತ್ರ ಯಶಸ್ಸಿನ ಮೆಟ್ಟಿಲೇರಲು ಸಾಧ್ಯ ಎಂದು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ. ರಾಜಶೇಖರ್ ಹೇಳಿದರು.

ನಗರ ಹೊರವಲಯದಲ್ಲಿ ಚಿಕ್ಕಮಗಳೂರು ರಾಣಾ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ರಾಜ್ಯ ಪ್ರಶಸ್ತಿ ವಿಜೇತೆ ದಿ.ಗೌರಮ್ಮ ಬಸವೇಗೌಡ ಸ್ಮರಣಾರ್ಥ 7ನೇ ವರ್ಷದ ಚಿಕ್ಕಮಗಳೂರು ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಆಟಗಾರರ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಅನೇಕ ಯುವಪ್ರತಿಭೆಗಳನ್ನು ಮುಂಚೂಣಿಗೆ ತರುವ ನಿಟ್ಟಿನಲ್ಲಿ ರಾಣಾ ಸ್ಪೋರ್ಟ್ಸ್ ಕ್ಲಬ್ ಪಂದ್ಯಾವಳಿ ಆಯೋಜಿಸಿ ಪ್ರೋತ್ಸಾಹಿಸುತ್ತಿದ್ದು ಅದರಂತೆ ಸರಕಾರವು ಯುವ ಕರಿಗೆ ಗುಣಮಟ್ಟ ಕ್ರೀಡಾಂಗಣದ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್.ದೇವರಾಜ್‌ಶೆಟ್ಟಿ ಮಾತನಾಡಿ, ರಾಜ್ಯಮಟ್ಟದಲ್ಲಿ ಕ್ರೀಡಾಪಟುಗಳನ್ನು ಗುರು ತಿಸಲು ರಾಣಾ ಸ್ಪೋರ್ಟ್ಸ್ ಕ್ಲಬ್ ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿದೆ. ಪಂದ್ಯಾವಳಿಯಲ್ಲಿ ಭಾಗವಹಿಸಿದ ತಂಡಗಳು ಸೋತರೆಂಬ ಕಾರಣಕ್ಕೆ ಸುಮ್ಮನಾಗದೇ ನಿರಂತರ ಅಭ್ಯಾಸದಲ್ಲಿ ತೊಡಗಬೇಕು. ಇದೇ ವೇಳೆ 120 ಆಟಗಾರರು ಪಂದ್ಯಾವಳಿಯಲ್ಲಿ ನೋಂದಾಯಿಸಿದ್ದು ಐದು ಕ್ರಿಕೆಟ್ ತಂಡದ ಮಾಲೀಕರು ಆಟಗಾರರ ಆಯ್ಕೆ ಪ್ರಕ್ರಿಯೆಯನ್ನು ಹರಾಜಿನ ಮೂಲಕ ಪೂರ್ಣಗೊಳಿಸಿದರು. ಈ ಸಂದರ್ಭದಲ್ಲಿ ರಾಣಾ ಸ್ಪೋರ್ಟ್ಸ್ ಕ್ಲಬ್ ಮಾಜಿ ಆಟಗಾರ ಐ.ಫ್ರಾನ್ಸಿಸ್, ಇ-ಸ್ಪೋರ್ಟ್ಸ್ ವ್ಯವಸ್ಥಾಪಕ ವೈಶಿಷ್ಟ, ಸಿಪಿಎಲ್‌ನ ಸದಸ್ಯರುಗಳಾದ ನಟರಾಜ್, ಹರೀಶ್, ಅಭಿಷೇಕ್, ಸಂತೋಷ್ ಮತ್ತಿತರರಿದ್ದರು.

ಕ್ರಿಕೆಟ್ ಪಂದ್ಯಾವಳಿಯ ಆಟಗಾರರ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮವನ್ನು ಟಿ.ರಾಜಶೇಖರ್ ಉದ್ಘಾಟಿಸಿದರು.

> ಹಳ್ಳಿಯಿಂದ ಪಟ್ಟಣದವರೆಗೂ ಕ್ರಿಕೆಟ್ ಆಡಿದವರೇ. ಪ್ರತಿಭೆ ಎಲ್ಲಿ ಅರಳುವುದೇ ತಿಳಿಯದು. ಹಾಗಾ ಗಿ ಸರಕಾರವು ಯುವಕರಿಗೆ ಪ್ರೋತ್ಸಾಹಿಸಲು ವಿಶೇಷ ಸವಲತ್ತು ಒದಗಿಸಿಕೊಡಬೇಕು. ಇದರಿಂದ ಮುಂ ದೊಂದು ದಿನ ರಾಷ್ಟ್ರಮಟ್ಟ ಕ್ರಿಕೆಟ್‌ನಲ್ಲಿ ಸ್ಥಳೀಯರು ಛಾಪು ಮೂಡಿಸಬಹುದು.
> -ಟಿ.ರಾಜಶೇಖರ್, ಅಧ್ಯಕ್ಷ

ಮಾಲಿನ್ಯ ರಹಿತ ದೀಪಾವಳಿ ಆಚರಿಸಿ

ಚಿಕ್ಕಮಗಳೂರು: ದೀಪಾವಳಿ ಹಬ್ಬದಲ್ಲಿ ಹಸಿರು ಪಟಾಕಿಗಳನ್ನು ಹೊರತು ಪಡಿಸಿ ಬೇರೆಯಾವುದೇ ಪಟಾಕಿಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್‌ಸಿ.ಎನ್. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಕೆಸ್ವಾನ್‌ನಲ್ಲಿ ಮಂಗಳವಾರ ಜಿಲ್ಲೆಯಲ್ಲಿ ಪಟಾಕಿ ತಯಾರಿಕೆ, ದಸ್ತಾನು ಹಾಗೂ ಹಸಿರು ಪಟಾಕಿ ಮಾರಾಟ ಮಾಡುವ ಕುರಿತು ಅಧಿಕಾರಿಗಳೊಂದಿಗೆ ನಡೆದ ವೀಡಿಯೋ ಸಂವಾದದಲ್ಲಿ ಅವರು ಮಾತನಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಂ ಅಮ್ಟೆ ಮಾತನಾಡಿ, ಜಿಲ್ಲೆಯಲ್ಲಿ ಪಟಾಕಿ ಮಾರಾಟ ಮಾಡಲು ಪರವಾನಗಿ ಪಡೆದಿರುವ ಮಾರಾಟಗಾರರು ಮಾತ್ರ ಪಟಾಕಿ ಮಾರಾಟ ಮಾಡಬೇಕು. ಅನಧಿಕೃತವಾಗಿ ಪಟಾಕಿ ಮಾರಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದ ಅವರು ಆನ್ ಲೈನ್ ಮೂಲಕ ಪಟಾಕಿ ಖರೀದಿಸುವುದನ್ನು ನಿಷೇಧಿಸಲಾಗಿದೆ ಎಂದರು. ಸಭೆಯಲ್ಲಿ ಚಿಕ್ಕಮಗಳೂರು ಉಪವಿಭಾಗದ ಉಪವಿಭಾಗಾಧಿಕಾರಿ ದಲ್ಜಿತ್ ಕುಮಾರ್, ಎಲ್ಲಾ ತಾಲ್ಲೂಕುಗಳ ತಹಸೀಲ್ದಾರ್‌ರು, ನಗರಸಭೆ ಆಯುಕ್ತ ಬಸವರಾಜು, ಅಗ್ನಿಶಾಮಕ ದಳದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಅಧಿಕಾರಿಗಳೊಂದಿಗೆ ವೀಡಿಯೋ ಸಂವಾದದಲ್ಲಿ ಜಿಲ್ಲಾಧಿಕಾರಿ ಮೀನಾ ನಾಗರಾಜ್‌ಸಿ.ಎನ್ ಪಾಲ್ಗೊಂಡಿದ್ದರು.

> ಹಸಿರು ಪಟಾಕಿಗಳನ್ನು ಹೊರತುಪಡಿಸಿ ಬೇರೆ ಪಟಾಕಿಗಳನ್ನು ಬಳಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶ ಮಾಡಿದೆ. ರಾತ್ರಿ 8.00 ರಿಂದ 10.00 ಗಂಟೆ ವರೆಗೆ ಮಾತ್ರಪಟಾಕಿ ಸಿಡಿಸಲು ಅವಕಾಶ ನೀಡಿದೆ. ಆದ ಕಾರಣ ವ್ಯಾಪಾರಸ್ಥರು ಸಾರ್ವಜನಿಕರಿಗೆ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಬೇಕೆಂದು ತಿಳಿಸಿದ ಅವರು ಪರಿಸರ ಸ್ನೇಹಿ ಪಟಾಕಿಗಳನ್ನು ಸಿಡಿಸುವ ಕುರಿತು ತಮ್ಮ ವ್ಯಾಪ್ತಿಯ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು.
> -ಮೀನಾ ನಾಗರಾಜ್‌ಸಿ.ಎನ್, ಜಿಲ್ಲಾಧಿಕಾರಿ

ಇಂಗಾಲ ಸೂಸುವಿಕೆ ನಿಯಂತ್ರಣಕ್ಕೆ ಸಹಭಾಗಿತ್ವ

ಮಂಗಳೂರು: ಭಾರತದಲ್ಲಿ ದೀರ್ಘಾವಧಿಯ ಸಾರಿಗೆಗಾಗಿ ಕಡಿಮೆ ಇಂಗಾಲ ಇಂಧನಗಳ (ಎಲ್‌ಸಿಎಫ್) ಅಭಿವೃದ್ಧಿ ಮತ್ತು ಅಳವಡಿಕೆಗೆ ಅಮೆಜಾನ್ ಇಂಡಿಯಾ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಸಹಭಾಗಿತ್ವ ಘೋಷಿಸಿವೆ. ಈ ಸಹಭಾಗಿತ್ವವು ಸಾರಿಗೆ ವಲಯದಲ್ಲಿ ಇಂಗಾಲದ ಹೊರಸೂಸುವಿಕೆ ಕಡಿಮೆ ಮಾಡಲು ಮಹತ್ವದ ಹೆಜ್ಜೆ ಎನಿಸಲಿದೆ. 2040ರ ವೇಳೆಗೆ ತನ್ನ ಕಾರ್ಯಾಚರಣೆಗಳಾದ್ಯಂತ ನಿವ್ವಳ-ಶೂನ್ಯ ಇಂಗಾಲ ಗುರಿ ಸಾಧಿಸುವ ಅಮೆಜಾನ ಜಾಗತಿಕ ಬದ್ಧತೆಗೆ ಇದು ಅನುಗುಣವಾಗಿರುತ್ತದೆ. ಇದು 2070ರ ವೇಳೆಗೆ ಭಾರತದ ರಾಷ್ಟ್ರೀಯ ನಿವ್ವಳ-ಶೂನ್ಯ ಇಂಗಾಲದ ಗುರಿ ಸಾಧನೆಗೆ ಕೊಡುಗೆ ನೀಡುತ್ತದೆ ಎಂದು ಅಮೆಜಾನ್ ಇಂಡಿಯಾದ ಕಾರ್ಯಾಚರಣೆ ವಿಭಾಗದ ಉಪಾಧ್ಯಕ್ಷ ಅಭಿನವ್ ಸಿಂಗ್ ಪ್ರಕಟಣೆಯಲ್ಲಿ ಹೇಳಿದ್ದಾರೆ. ದಹಿಸುವ ಇಂಧನಕ್ಕೆ ಹೋಲಿಸಿದರೆ ಇಂಗಾಲದ ತೀವ್ರತೆ ಗಣನೀಯವಾಗಿ ಕಡಿಮೆ ಮಾಡುವ ನವೀಕರಿಸಬಹುದಾದ ಡೀಸೆಲ್ (ಆರ್ ಡಿ) ಮತ್ತು ಸಾಂದ್ರಿತ ಜೈವಿಕ ಅನಿಲ (ಸಿಬಿಜಿ) ಯಂತಹ ಕಡಿಮೆ ಇಂಗಾಲ ಇಂಧನಗಳ ಪೂರೈಕೆ ಮತ್ತು ಬೇಡಿಕೆ ಹೆಚ್ಚಿಸುವ ಮೇಲೆ ಅಮೆಜಾನ್ ಮತ್ತು ಎಚ್ ಪಿಸಿಎಲ್ ತಿಳಿವಳಿಕೆ ಪತ್ರ (ಎಂಒಯು)ಕ್ಕೆ ಸಹಿ ಹಾಕಿವೆ. ಈ ಸಹಭಾಗಿತ್ವದ ಮೂಲಕ, ಅಮೆಜಾನ್‌ನ ದೀರ್ಘಾವಧಿಯ ಸಾರಿಗೆ ವಾಹನಗಳಲ್ಲಿ ಇಂಧನ ಪರೀಕ್ಷಿಸಲು ಅಮೆಜಾನ್ ಮತ್ತು ಎಚ್ ಪಿಸಿಎಲ್ ಪ್ರಾಯೋಗಿಕ (ಪೈಲಟ್) ಯೋಜನೆ ನಡೆಸಲಿವೆ. ಕಡಿಮೆ ಇಂಗಾಲ ಇಂಧನಗಳಿಗೆ ಸುಲಭವಾಗಿ ಪ್ರವೇಶಿಸಲು ಇಂಧನ ಕೇಂದ್ರಗಳು ಮತ್ತು ಮೊಬೈಲ್ ಇಂಧನ ತುಂಬುವ ಕೇಂದ್ರಗಳ ಸಾಧ್ಯತೆಗಳನ್ನು ಅನ್ವೇಷಿಸುತ್ತವೆ ಎಂದು ಪ್ರಕಟಣೆ ಹೇಳಿದೆ.

ಒಳ ಮೀಸಲಿಗೆ ಸಂಪುಟದಲ್ಲಿ ಅಸ್ತು

ಚಿಕ್ಕಮಗಳೂರು: ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಕಲ್ಪಿಸಲು ಕಾಂಗ್ರೆಸ್ ನೇತೃತ್ವ ದ ರಾಜ್ಯ ಸರಕಾರ ಸಂಪುಟ ಸಭೆಯಲ್ಲಿ ಬಹುಮತದಿಂದ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ ಎಂದು ಕೆಪಿಸಿಸಿ ಸಂಯೋಜಕ ಹಿರೇಮಗಳೂರು ರಾಮಚಂದ್ರ ಹೇಳಿದ್ದಾರೆ. ಈ ಕುರಿತು ಮಂಗಳವಾರ ಹೇಳಿಕೆಯಲ್ಲಿ ತಿಳಿಸಿರುವ ಅವರು ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ನೀಡಲು ಸುಪ್ರೀಂ ಕೋರ್ಟ್ ತೀರ್ಪು ಬೆನ್ನಲ್ಲೇ ರಾಜ್ಯ ಸರಕಾರ ಸಂಪುಟದಲ್ಲಿ ಚರ್ಚೆ ನಡೆಸಿ ಒಳ ಮೀಸಲಾತಿ ಕಲ್ಪಿಸಲು ನಿರ್ಣಯ ಮಾಡಿರುವುದು ಜನಾಂಗದ ಅಭಿವೃದ್ಧಿ ನಾಂದಿಯಾಗಲಿದೆ ಎಂದಿದ್ದಾರೆ. ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶವು ಬಹುಸಂಖ್ಯಾತ ಪರಿಶಿಷ್ಟ ಜಾತಿಯ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಔದ್ಯೋಗಿಕವಾಗಿ ವರದಾನವಾಗಿದೆ. ಇಡೀ ದೇಶದಲ್ಲಿ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಕಲ್ಪಿಸಲು ಸುಪ್ರೀಂ ಕೋರ್ಟ್ ತೀರ್ಪು ನೀಡಿ ರಾಜ್ಯಗಳಿಗೆ ಅಧಿಕಾರ ನೀಡಿತ್ತು. ಆ ಹಿನ್ನೆಲೆ ಎಸ್ಸಿ ಒಳ ಮೀಸಲಾತಿ ಜಾರಿಗೆ ಸಂಪುಟ ಒಪ್ಪಿಗೆ ನೀಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮನ್ನಾಳುವ ಮನುವಾದಿ ಪಕ್ಷಗಳು, ಸಂವಿಧಾನದ ಆಶಯಗಳನ್ನು ಯಥಾವತ್ತು ಜಾರಿಮಾಡದೆ ಶೋಷಿತ ಸಮುದಾಯಗಳ ಸೊಂಟ ಮುರಿದಿದೆ. ಹಾಗಾಗಿ ಸರ್ವೋಚ್ಚನ್ಯಾಯಾ ಲಯದ ಆದೇಶವನ್ನು ರಾಜ್ಯದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಮಂತ್ರಿ ಹಾಗೂ ಸಚಿವರು ಎತ್ತಿ ಹಿಡಿದಿರುವುದಕ್ಕೆ ಸಮುದಾಯದ ಪರವಾಗಿ ಕೃತಜ್ಞತೆ ಸಲ್ಲಿಸಿದ್ದಾರೆ.

ಸಮೃದ್ ಪ್ರಥಮ ಸ್ಥಾನ

ಚಿಕ್ಕಮಗಳೂರು: ಚಿತ್ರದುರ್ಗದಲ್ಲಿ ನಡೆದ ರಾಜ್ಯಮಟ್ಟದ ಅಬಾಕಸ್ ಸ್ಪರ್ಧೆಯಲ್ಲಿ ಜಿಲ್ಲೆಯ ಸೇಂಟ್ ಮೇರಿಸ್ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಎಂ.ಸಿ.ಸಮೃದ್ ಅವರು 100 ಮೊತ್ತದ ಲೆಕ್ಕಾಚಾರವನ್ನು ಕೇವಲ 5 ನಿಮಿಷದಲ್ಲಿ ಪರಿಹರಿಸಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾನೆ. ಜಿಲ್ಲಾ ಸಹಾಯಕ ಖಜಾನಾಧಿಕಾರಿ ಎಂ.ಆರ್.ಚೇತನ್ ಮತ್ತು ವನಜಾಕ್ಷಿ ಪುತ್ರರಾಗಿದ್ದು. ಕಲ್ಯಾಣ ನಗರದ ಐಡಿಯಲ್ ಪ್ಲೇ ಅಬಕಾಸ್ ಸಂಸ್ಥೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದನು.

ಪಾಸ್‌ಪೋರ್ಟ್ : ಲಂಚಕ್ಕೆ ಬೇಡಿಕೆ

ಮಂಗಳೂರು: ಕಡಬ ಅಂಬೇಡ್ಕರ ಭವನದಲ್ಲಿ ಕರ್ನಾಟಕ ಲೋಕಾಯುಕ್ತ ದ.ಕ ಜಿಲ್ಲಾ ಪೊಲೀಸ್ ವತಿಯಿಂದ ಸೋಮವಾರ ಭ್ರಷ್ಟಾಚಾರ ವಿರುದ್ಧದ ಜಾಗೃತಿ ಕಾರ್ಯ ಕ್ರಮದಲ್ಲಿ ದ.ಕ ಜಿಲ್ಲಾ ಡಿವೈಎಸ್ಪಿ ಡಾ.ಗಾನಾ ಪಿ.ಕುಮಾರ್ ಮಾಹಿತಿ ನೀಡುತ್ತಿದ್ದ ಮಧ್ಯೆ ಸಾರ್ವಜನಿಕರು ತಮ್ಮ ಅಹವಾಲು ಮಂಡಿಸಿದ್ದಾರೆ. ಕಡಬ ಪೊಲಿಸ್ ಠಾಣೆಯಲ್ಲಿ ಪಾಸ್ ಪೋರ್ಟ್ ವೆರಿಫಿಕೇಶನ್‌ಗೆ ಸತಾಯಿಸಿದ್ದಲ್ಲದೆ ಹಣ ನೀಡುವಂತೆ ಪೊಲೀಸೊಬ್ಬರು ಪೀಡಿಸಿದ್ದಾರೆ, ಹಣವನ್ನು ಗೂಗುಲ್ ಅಥವಾ ಫೋನ್ ಪೇ ಮಾಡುತ್ತೇವೆ ಎಂದು ಹೇಳಿದಾಗ ಕ್ಯಾಶ್ ಕೊಡಿ ಎಂದಿದ್ದಾರೆ. ಠಾಣೆಯ ಮೇಲಾಧಿಕಾರಿಗಳು ಗೌರವ ನೀಡುತ್ತಾರೆ ಆದರೆ ಕೆಲವು ಪೊಲೀಸರು ಗೌರವ ನೀಡದೆ ಅವಮಾನಿಸುತ್ತಿದ್ದಾರೆ ಎಂದು ಕೋರಂದುರು ನಿವಾಸಿ ಬಶೀರ್ ಆರೋಪಿಸಿದರು. ಇದಕ್ಕೆ ಉತ್ತರಿಸಿದ ಲೋಕಾಯುಕ್ತ ಅಧಿಕಾರಿಗಳು ಲಿಖಿತ ದೂರು ನೀಡುವಂತೆ ಸಭೆಯಲ್ಲಿ ತಿಳಿಸಿದರು. ಕುಟ್ರುಪ್ಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಳಿಯದಲ್ಲಿ ಗದ್ದೆಗೆ ಮಣ್ಣ ಹಾಕಿ ನೀರು ನಿಂತು ಸೊಳ್ಳೆ ಉತ್ಪತ್ತಿಯಾಗುತ್ತಿದೆ. ಕೋಣಾಜೆ ಗ್ರಾಮ ಪಂಚಾಯಿತಿಯಲ್ಲಿ ಒಂದೇ ಕಾಮಗಾರಿಗೆ ಬೇರೆ ಬೇರೆ ಬಿಲ್ ಮಾಡಿ ಭ್ರಷ್ಟಾಚಾರ ಎಸಗಲಾಗಿದೆ. ಸರಕಾರಿ ಶಾಲಾ ಶಿಕ್ಷಕರು ಶಾಲೆಯಲ್ಲಿ ಪಾಠ ಮಾಡದೆ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸರಕಾರಕ್ಕೆ ವಂಚಿಸುತ್ತಿದ್ದಾರೆ ಎಂದು ನಾಗರಿಕರು ಆರೋಪಿಸಿದರು. ಪ್ರಮುಖರಾದ ಶಶಿಧರ ಬೊಟ್ಟಡ್ಕ, ಪುಷ್ಪಾವತಿ , ಲೋಕಯ್ಯ ಗೌಡ ಕೊಣಾಜೆ, ಫಯಾಜ್ ಕುಂತೂರು, ವಿನಿಶ್ ಬಿಳಿನೆಲೆ , ಕುಶಾಲಪ್ಪ ಗೌಡ ಕಲಪ್ಪಾರು ಮತ್ತಿತರರು ಅಹವಾಲು ಸಲ್ಲಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಪ್ಪು ಪುಣ್ಯ ಸ್ಮರಣೆ ಆಚರಣೆ

ಶಿವಮೊಗ್ಗ: ವಿದ್ಯಾನಗರದ ಯಲ್ಲಕಪ್ಪನಕೇರಿಯ ಶ್ರೀ ವೀರ ಕೇಸರಿ ಯುವಕರ ಸಂಘದಿಂದ ಡಾ. ಪುನೀತ್ ರಾಜಕುಮಾರ್ ರವರ 3ನೇ ವರ್ಷದ ಪುಣ್ಯ ಸ್ಮರಣೆಯನ್ನು ಬಹಳ ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾನಗರದ ಪುನೀತ್ ರಾಜಕುಮಾರ ಅಭಿಮಾನಿಗಳು ರಕ್ತದಾನ ಶಿಬಿರ ಕಾ ರ್ಯಕ್ರಮ ಮತ್ತು ಅನ್ನ ಸಂತರ್ಪಣೆ ಹಮ್ಮಿಕೊಂಡಿ ದ್ದರು. ಈ ಕಾರ್ಯಕ್ರಮದಲ್ಲಿ ಯಲಕಪ್ಪನ ಕೇರಿಯ ಮುಖಂಡಡರಾದ ಆನಂದಪ್ಪ. ಕರಿಯಪ್ಪ. ಪುನೀತ್ ಕುಮಾರ್, ಚೌಡಪ್ಪ, ಗಣೇಶ. ಅಕ್ಷಯ್, ಮೋಹನ, ಪಿ. ವಿನಯ್, ನಾಗಣ್ಣ, ಪ್ರದೀಪ, ಶಿಕಾರಿ ಮಂಜಣ್ಣ, ವರುಣ, ರಂಜೇಶ್, ಪುನೀತ್ ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

ರಾಜ್ಯ ಸರಕಾರಿ ನೌಕರರ ಸಂಘಕ್ಕೆ ಆಯ್ಕೆ

ಶಿವಮೊಗ್ಗ: ರಾಜ್ಯ ಸರಕಾರಿ ನೌಕರರ ಸಂಘಕ್ಕೆ ಸೊರಬ ತಾಲೂಕಿನ ಶಿಕ್ಷಣ ಇಲಾಖೆಯ ಪ್ರಾಥಮಿಕ ವಿಭಾಗದ ಸ್ಪಂದನ ತಂಡದಿಂದ ತುಡಿನೀರು ಸರಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಯ ಶಿಕ್ಷಕರಾದ ಕುಮಾರ, ಬಿದರಗೆರೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ. ಶಿವಮೂರ್ತಿ ಕೆ.ಎಂ.,ಜಿರಲೆಕೊಪ್ಪ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಓಂಕಾರಪ್ಪ ಟಿ ವಿ ಅವರು ಆಯ್ಕೆಯಾದರು.

ನ.15ಕ್ಕೆ ರಾಜ್ಯ ಮಟ್ಟದ ಅಥ್ಲೇಟಿಕ್ ಕ್ರೀಡಾಕೂಟ

ಶಿವಮೊಗ್ಗ: ಶಿವಮೊಗ್ಗ ಶಾಲಾ ಶಿಕ್ಷಣ ಇಲಾಖೆಯು 2024-25ನೇ ಸಾಲಿನ 14 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರ ರಾಜ್ಯ ಮಟ್ಟದ ಕ್ರೀಡಾಕೂಟವನ್ನು ನ.15 ಮತ್ತು 16 ರಂದು ಎರಡು ದಿನಗಳು ನಗರದ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಿದೆ. ಶಿವಮೊಗ್ಗ ಜಿಲ್ಲೆಗೆ ರಾಜ್ಯದ ಎಲ್ಲಾ ಸರಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರು ನ.14 ಮಧ್ಯಾಹ್ನ 2.30ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ವರದಿ ಮಾಡಿಕೊಳ್ಳುವಂತೆ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಪ್ರಕಾಶ್ ಎಂ. -9448964356 ಇವರನ್ನು ಸಂಪರ್ಕಿಸುವುದು.

ಅವಧಿ ವಿಸ್ತರಣೆ

ಶಿವಮೊಗ್ಗ: ಶಿವಮೊಗ್ಗ -ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶಿವಮೊಗ್ಗದ ಊರಗಡೂರು ವಸತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಕುರಿತು ಆಗಸ್ಟ್-2024ರಲ್ಲಿ ಪ್ರಕಟಣೆ ನೀಡಲಾಗಿದ್ದು, ನಿವೇಶನ ಹಂಚಿಕೆಯ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ದಿ:25/11/2024ರವರೆಗೆ ವಿಸ್ತರಿಸಲಾಗಿದೆ ಎಂದು ಶಿ-ಭ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಗೋಲೋಕದಲ್ಲಿ ದೀಪಾವಳಿ ಆಚರಣೆ

ಹೊಸನಗರ: ರಾಮಚಂದ್ರಾಪುರದಲ್ಲಿರುವ ಮಹಾನಂದಿ ಗೋಲೋಕದಲ್ಲಿ ನ 2 ರಂದು ದೀಪಾವಳಿ ವಿಶೇಷ ಗೋಪೂಜೆ ಕಾರ್ಯಕ್ರಮ ಜರುಗಲಿದೆ. ಸುಂದರ ಗೋವರ್ಧನ ಗಿರಿಧಾರಿ ಪರಿಸರದಲ್ಲಿ 400 ಕ್ಕೂ ಹೆಚ್ಚು ದೇಸಿ ಗೋವುಗಳಿದ್ದು ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 12.30 ರವರೆಗೂ ಸಾಮೂಹಿಕವಾಗಿ ಗೋಪೂಜೆ ಅವಕಾಶ ಕಲ್ಪಿಸಲಾಗಿದೆ. ಗೋಪ್ರೇಮಿಗಳು, ಆಸಕ್ತರು ಗೋಪೂಜೆಯಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9449022228 ಸಂಪರ್ಕಿಸಬಹುದು.

ಶಿವ ಸಹಕಾರಿ ಬ್ಯಾಂಕ್ ಚುನಾವಣೆ ಡಿ.29ಕ್ಕೆ

ಶಿಕಾರಿಪುರ: ಪ್ರತಿಷ್ಠಿತ ಶಿವ ಸಹಕಾರಿ ಬ್ಯಾಂಕ್ ನ ಆಡಳಿತ ಮಂಡಳಿಯ ಚುನಾವಣೆಯನ್ನು ಡಿ.29 ರ ಭಾನುವಾರ ನಿಗದಿಪಡಿಸಲಾಗಿದೆ ಎಂದು ಬ್ಯಾಂಕ್ ನ ಪ್ರಧಾನ ವ್ಯವಸ್ಥಾಪಕ ಕೆ.ಆರ್ ಬಸವರಾಜಪ್ಪ ತಿಳಿಸಿ ದ್ದಾರೆ. ಪತ್ರಿಕಾ ಹೇಳಿಕೆಯಲ್ಲಿ ಈ ಬಗ್ಗೆ ತಿಳಿಸಿರುವ ಅವರು, ಈಗಾಗ ಲೇ ಕರಡು ಮತದಾರರ ಪಟ್ಟಿ ಯನ್ನು ಸಿದ್ದಪಡಿಸಿ ಬ್ಯಾಂಕ್‌ನ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದ್ದು, ಸದಸ್ಯರು ಕರಡು ಮತದಾರರ ಪಟ್ಟಿ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಇಚ್ಚಿಸಿದಲ್ಲಿ ತಮ್ಮಲ್ಲಿರುವ ಮೂಲ ದಾಖಲೆ ಸಹಿತ ಲಿಖಿತ ಅರ್ಜಿಯನ್ನು ಡಿ.7 2024ರ ಮದ್ಯಾಹ್ನ 2 ರೊಳಗಾಗಿ ಬ್ಯಾಂಕ್ ನ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸತಕ್ಕದ್ದು ಹಾಗೂ ಸುಸ್ತಿ ಸಾಲಗಾರರು ಡಿ.7 ರ ಮದ್ಯಾಹ್ನ 2 ರೊಳಗಾಗಿ ಸಾಲ ಮರುಪಾವತಿಸಲು ಅವರು ಮನವಿ ಮಾಡಿದ್ದಾರೆ.

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ಒಳಮೀಸಲು ಜಾರಿ ಬಗ್ಗೆ ಪರಾಮರ್ಶೆ ನಡೆಸಿ ವರದಿ ನೀಡಲು ರಚಿಸಲಾಗುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಏಕ ಸದಸ್ಯ ಆಯೋಗದ ವರದಿ ಬರುವವರೆಗೆ ಯಾವುದೇ ಹೊಸ ನೇಮಕಾತಿಗಳಿಗೆ ಅಧಿಸೂಚನೆ ಹೊರಡಿಸುವುದಿಲ್ಲ. ಆದರೆ, ಸದ್ಯ ಪ್ರಗತಿಯಲ್ಲಿರುವ ಎಲ್ಲ ನೇಮಕಾತಿ ಪ್ರಕ್ರಿಯೆಗಳು ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾಡಾನೆ ತೆರವು ಕಾರ್ಯಾಚರಣೆ

ಇಲಾಖೆ ಸಾಕಾನೆಗಳಿಂದ ಆರಂಭ | ಉಪಟಳ ತಪ್ಪಿಸಲು ರೈತರ ಮೊರೆಗೆ ಕೊನೆಗೂ ಮುಕ್ತಿ

ಶಿವಮೊಗ್ಗ: ರೈತರಿಗೆ ಉಪಟಳ ನೀಡುತ್ತಿರುವ ಕಾಡಾನೆಗಳ ಓಡಿಸಲು ಅರಣ್ಯ ಇಲಾಖೆ ಇದೀಗ ಸಾಕಾನೆಗಳನ್ನು ಬಳಕೆ ಮಾಡುತ್ತಿದ್ದು, ಕಾರ್ಯಾಚರಣೆ ತೀವ್ರಗೊಂಡಿದೆ.

ಶೆಟ್ಟಿಹಳ್ಳಿ ಅಭಯಾರಣ್ಯದ ಪುರದಾಳು, ಮಲೆಶಂಕರ, ಬೇಳೂರು, ಸಿರಿಗೆರೆ, ಆಲದೇವರ ಹೊಸೂರು, ಮುಂತಾದ ಭಾಗಗಳಲ್ಲಿ ಪದೇ ಪದೇ ಕಾಡಾನೆಗಳ ದಾಳಿ ನಡೆಯುತ್ತಿತ್ತು. ಫಸಲಿಗೆ ಬಂದ ಬೆಳೆಗಳನ್ನು ಆನೆಗಳ ಹಿಂಡು ಧ್ವಂಸ ಮಾಡುತ್ತಿದ್ದು, ಸಾಕಷ್ಟು ನಷ್ಟವಾಗುತ್ತಿದೆ. ಅಲ್ಲದೇ ಕಾಡಾನೆಗಳು ನಾಡಿಗೆ ಬಂದಿದ್ದರಿಂದ ರೈತರು ಕೂಡ ಭಯದ ವಾತಾವರಣದಲ್ಲಿ ಇದ್ದಾರೆ.

ಹಲವು ಬಾರಿ ಅರಣ್ಯ ಇಲಾಖೆಗೆ ಈ ಬಗ್ಗೆ ಮನವಿ ಮಾಡಿದ್ದರೂ ಕೂಡ ಅರಣ್ಯ ಇಲಾಖೆಯವರು ನಿರ್ಲಕ್ಷ್ಯ ತೋರಿದ್ದರು. ಇದರ ವಿರುದ್ಧ ರೈತರು ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಕೂಡ ಮಾಡಿದ್ದರು. ಅಲ್ಲದೇ, ಅರಣ್ಯ ಸಚಿವರು ಶಿವಮೊಗ್ಗಕ್ಕೆ ಬಂದಿದ್ದಾಗ ಅರಣ್ಯ ಇಲಾಖೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ಕಾಡಾನೆ ಸೆರೆ ಹಿಡಿಯುವಂತೆ ಮನವಿ ಕೂಡ ಮಾಡಿದ್ದರು.

ಸಚಿವರು ಕೂಡ ಅರಣ್ಯ ಇಲಾಖೆಗೆ ಈ ಬಗ್ಗೆ ಸೂಚನೆ ಕೂಡ ನೀಡಿದ್ದರು. ಇದೀಗ ಅರಣ್ಯ ಇಲಾಖೆ ಕಾಡಾನೆಗಳನ್ನು ಮತ್ತೆ ಕಾಡಿಗೆ ಕಳಿಸುವ ಕಾರ್ಯಾಚರಣೆ ನಡೆಸಿದೆ. ಇದಕ್ಕಾಗಿ ಸಕ್ರೆಬೈಲಿನ ಬಹದ್ದೂರು, ಆಲೆ, ಸೋಮಣ್ಣ ಆನೆಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳುತ್ತಿದ್ದು, ಓಡಿಸುವ ಕಾರ್ಯದಲ್ಲಿ ಇದೀಗ ಮುಂದಾಗಿವೆ.

ಇದಕ್ಕಾಗಿ ಈಗಾಗಲೇ ಆನೆಗಳ ಚಲನವಲನಗಳ ಬಗ್ಗೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿಗಾವಹಿಸಿದ್ದು, ಅರಣ್ಯ ಇಲಾಖೆ ಕೊನೆಗೂ ಈ ಕಾರ್ಯಾಚರಣೆಗೆ ಮುಂದಾಗಿರುವುದನ್ನು ಮಲೆನಾಡಿನ ಆ ಭಾಗದ ರೈತರು ಸ್ವಾಗತಿಸಿದ್ದಾರೆ. ಆದರೆ, ಕಾರ್ಯಾಚರಣೆಯನ್ನು ಅರ್ಧಕ್ಕೆ ನಿಲ್ಲಿಸದೇ ಪೂರ್ಣಗೊಳಿಸಬೇಕು. ತೋರಿಕೆಗೆ ಮಾತ್ರ ರಾತ್ರಿ ವೇಳೆ ಪಟಾಕಿ ಸಿಡಿಸಬಾರದು. ಶಾಶ್ವತವಾಗಿ ಆನೆಗಳನ್ನು ದಟ್ಟ ಅರಣ್ಯಕ್ಕೆ ಕಳಿಸಬೇಕು ಎಂದು ರೈತರು ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಆನೆಗಳನ್ನು ಕಾಡಿಗೆ ಕಳುಹಿಸುವ ಪ್ರಕ್ರಿಯೆ ಆರಂಭವಾಗಿದೆ. ಈಗಾಗಲೇ ಬೆಳಗ್ಗೆಯಿಂದಲೇ ಕಾರ್ಯಾಚರಣೆ ಮಾಡುತ್ತಿದ್ದೇವೆ. ನಮ್ಮ ಸಿಬ್ಬಂದಿ ಕಾಡಾನೆಗಳ ಇರುವಿಕೆಯನ್ನು ಗುರುತಿಸಿ ಅವುಗಳನ್ನು ಭದ್ರಾ ಅಭಯಾರಣ್ಯಕ್ಕೆ ಕಳುಹಿಸುವ ಪ್ರಯತ್ನ ಮಾಡುತ್ತಿದ್ದಾರೆ.
-ಡಾ.ವಿನಯ, ಅರಣ್ಯ ಇಲಾಖೆ

ಈಗಾಗಲೇ ಅರಣ್ಯ ಇಲಾಖೆಯ ಸಿಬ್ಬಂದಿ ಒಂದು ಸುತ್ತಿನ ಕಾರ್ಯಾಚರಣೆಯನ್ನು ಮುಗಿಸಿದ್ದು, ವಾರದೊಳಗೆ ಆನೆಗಳನ್ನು ಕಾಡಿಗೆ ಕಳುಹಿಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಡಾನೆ ದಾಳಿಯಿಂದ ಬೆಳೆ ಮಾತ್ರವಲ್ಲದೆ ಪ್ರಾಣ ಹಾನಿಯಾಗುತ್ತಿರುವ ಕುರಿತು ಅರಣ್ಯ ಸಚಿವರ ಗಮನ ಸೆಳೆದಿದ್ದ ರೈತರು, ಅರಣ್ಯ ಇಲಾಖೆಯ ಅಧಿಕಾರಿಗಳು ಇದುವರೆಗೆ ದಾಳಿಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಸಚಿವರು ಸೂಚನೆ ನೀಡಿದ ಅನಂತರದಲ್ಲಿ ಈ ಕೆಲಸ ಆರಂಭವಾಗಿದೆ ಎಂಬ ಅಸಮಾಧಾನವೂ ರೈತರಲ್ಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಮಧುಬಂಗಾರಪ್ಪ ಜಿಲ್ಲಾ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಈಗಾಗಲೇ ಚರ್ಚೆ ನಡೆಸಿದ್ದು, ಆನೆ ದಾಳಿ ಹೆಚ್ಚುತ್ತಿರುವ ಬಗ್ಗೆ ಬಂದಿರುವ ದೂರಗಳನ್ನು ಪರಿಗಣಿಸಿ ತಕ್ಷಣ ಕಾರ್ಯಾಚರಣೆ ಆರಂಭ ಮಾಡಬೇಕೆಂದು ಕಳೆದ ವಾರವೇ ನಿರ್ದೇಶನ ನೀಡಿದ್ದರು.

ಆನೆಗಳನ್ನು ಕಾಡಿನೊಳಕ್ಕೆ ಕಳುಹಿಸಲು ಇರುವ ಅಡ್ಡಿ ಆತಂಕಗಳ ನಡುವೆಯೇ ಬೆಳಗ್ಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಭದ್ರಾ ಅಭಯಾರಣ್ಯದೆಡೆಗೆ ಆನೆಗಳನ್ನು ಕಳುಹಿಸಲಾಗುತ್ತಿದೆ. ಈ ಕುರಿತು ರೈತರು ಆತಂಕ ಪಡುವ ಅಗತ್ಯವಿಲ್ಲ. ಆನೆ ಉಪಟಳ ತಪ್ಪಿಸಲು ಅಧಿಕಾರಿಗಳು ನಿರತರಾಗಿದ್ದಾರೆ. ರೈತರ ಮನವಿಯನ್ನು ನಾವೂ ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಸೋಲು ಗೆಲುವು ಮುಖ್ಯವಲ್ಲ, ಭಾಗ ವಹಿಸುವುದು ಮುಖ್ಯ

ತುಂಗಾ ಕಲೋತ್ಸವ ವಲಯ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮವನ್ನು ರಂಗಾಯಣ ಮಾಜಿ ನಿರ್ದೇಶಕ ಸಂದೇಶ ಜವಳಿ ಉದ್ಘಾಟಿಸಿದರು.

ತೀರ್ಥಹಳ್ಳಿ: ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾದಾಗ ಉತ್ತಮ ವ್ಯಕ್ತಿಯಾಗಿ ರೂಪಗೊಳ್ಳಬಹುದು ಎಂದು ರಂಗಾಯಣ ಮಾಜಿ ನಿರ್ದೇಶಕ ಸಂದೇಶ ಜವಳಿ ಹೇಳಿದರು.

ತೀರ್ಥಹಳ್ಳಿಯ ಸೊಪ್ಪುಗುಡ್ಡೆಯಲ್ಲಿರುವ ಗೋಪಾಲಗೌಡ ರಂಗಮಂದಿರದಲ್ಲಿ ರೋಟರಿ ಕ್ಲಬ್ ತೀರ್ಥಹಳ್ಳಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ತುಂಗಾ ಕಲೋತ್ಸವ ವಲಯ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ನಂತರ ಅನೇಕರು ದುಶ್ಚಟಗಳನ್ನು ತ್ಯಜಿಸಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡ ಉದಾಹರಣೆಗಳಿವೆ ಎಂದು ತಿಳಿಸಿದರು.

ರೋಟರಿ ಸಹಾಯಕ ಗವರ್ನರ್ ಎಚ್.ಎಂ.ಸುರೇಶ್, ಸಾಂಸ್ಕೃತಿಕ ಕಾರ್ಯಕ್ರಮಗಳು ಭಾಗವಹಿಸುವುದರಿಂದ ಪ್ರತಿಭೆ ಅನಾವರಣಕ್ಕೆ ಸಹಕಾರಿಯಾಗುತ್ತದೆ. ಪರಸ್ಪರರಲ್ಲಿ ಒಡನಾಟ ಜೊತೆಗೆ ಕುಟುಂಬದ ಎಲ್ಲ ಸದಸ್ಯರು ಸೇರಿ ಮಾಡುವಂತಹ ಸಾಂಸ್ಕೃತಿಕ ಕಾರ್ಯಕ್ರಮ ರೋಟರಿ ಸಂಸ್ಥೆಗಳ ಅವಿಭಾಜ್ಯ ಅಂಗ.

ರೋಟರಿ ಸಂಸ್ಥೆಯು ಸಮಾಜಮುಖಿ ಹಾಗೂ ಸೇವಾ ಕಾರ್ಯಗಳ ಜತೆಯಲ್ಲಿ ರೋಟರಿ ಸದಸ್ಯರಿಗಾಗಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಇದರಿಂದ ಪರಸ್ಪರ ಸಂವಹನ ವೃದ್ಧಿಯಾಗುತ್ತದೆ.
-ಧರ್ಮೇಂದ್ರ ಸಿಂಗ್, ಜಿಲ್ಲಾ ಸಾಂಸ್ಕೃತಿಕ ಉಪಾಧ್ಯಕ್ಷ

ಸೋಲು ಗೆಲುವು ಮುಖ್ಯವಲ್ಲ, ಭಾಗ ವಹಿಸುವುದು ಮುಖ್ಯ. ಇಲ್ಲಿ ವಿಜೇತ ತಂಡ ಕುಂದಾಪುರದಲ್ಲಿ ನಡೆಯುವ ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದೆ ಎಂದರು.

8 ರೋಟರಿ ಕ್ಲಬ್‌ಗಳಿಂದ 150ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿ ದ್ದರು. ಜೋನಲ್ ಲರ್ನಿಂಗ್ ಫೆಸಿಲಿಟೇಟರ್ ಕೆ.ಪಿ.ಎಸ್.ಸ್ವಾಮಿ, ಪಿ.ವಿ.ಭರತ್ ಕುಮಾರ್, ಶ್ರೀಕಾಂತ್ ಯಡಗೆರೆ, ರಾಧಾಕೃಷ್ಣ, ಸಂತೋಷ್, ಮಂಜುನಾಥ್ ರಾವ್ ಕದಂ, ಶಿವಪ್ರಸಾದ್ ಇದ್ದರು.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ರೈತರಿಗೆ ನೋಟಿಸ್

ಮುಸ್ಲಿಂ ರಾಜ್ಯವನ್ನಾಗಿಸಲು ಹೊರಟ ಸರಕಾರ

ಶಿವಮೊಗ್ಗ: ಕರ್ನಾಟಕ ರಾಜ್ಯವನ್ನು ವಕ್ಫ್ ಮಂಡಳಿ ಮೂಲಕ ಮುಸ್ಲಿಂ ರಾಜ್ಯವನ್ನಾಗಿ ಮಾಡಲು ಸರಕಾರ ಹೊರಟಿದೆ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಹಾಗೂ ಮಾಜಿ ಶಾಸಕ ಹರತಾಳು ಹಾಲಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ಮಂಡಳಿಯಿಂದ ರೈತರಿಗೆ ನೋಟಿಸ್ ನೀಡುತ್ತಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ರೈತರ ಜಮೀನುಗಳನ್ನು ಕಸಿದುಕೊಂಡು ವಕ್ಫ್ ಮಂಡಳಿಗೆ ಸೇರಿಸುತ್ತಿದ್ದಾರೆ ಎಂದು ಆರೋಪಿಸಿದರು. ಶಾಸಕ ಚನ್ನಬಸಪ್ಪ ಮಾತನಾಡಿ, ಮುಸ್ಲಿಮರನ್ನು ನಾವು ಬಂಧುಗಳು ಎಂದು ಕರೆಯುತ್ತೇವೆ. ಈಗ ಹಾಗೆ ಕರೆಯಲು ಅಸಹ್ಯವಾಗುತ್ತಿದೆ. ಮಾಡಬಾರದ ಕೆಲಸಕ್ಕೆ ಅವರು ಕೈಹಾಕುತ್ತಿದ್ದಾರೆ. ಮುಸಲ್ಮಾನ್ ಲ್ಯಾಂಡ್ ಮಾಫಿಯಾವನ್ನು ವಕ್ಫ್ ಮೂಲಕ ಕಾಂಗ್ರೆಸ್ ಮಾಡುತ್ತಿದೆ. ರೈತರಿಗೆ ನೋಟಿಸ್ ಕೊಟ್ಟರೂ, ಸರಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿಗಳೇ ನಿಮ್ಮ ಮುಸ್ಲಿಂ ಓಲೈಕೆಯನ್ನು ಎಲ್ಲಿಯವರೆಗೂ ಮುಂದುವರೆಸುತ್ತೀರಿ. ಒಂದು ಕೆಲಸ ಮಾಡಿ ಇಡೀ ರಾಜ್ಯವನ್ನೇ ವಕ್ಫ್ ಮಂಡಳಿಗೆ ಬರೆದುಕೊಟ್ಟು ಬಿಡಿ. ಒಂದು ಕಡೆ ಓಲೈಕೆಯಾದರೆ ಮತ್ತೊಂದು ಕಡೆ ರಾಜ್ಯ ಸರಕಾರ ರೈತ ದ್ರೋಹಿ ಸರಕಾರವಾಗಿದೆ ಎಂದು ದೂರಿದರು.

ಶಿವಮೊಗ್ಗದಲ್ಲಿ ಕೂಡ ಶಿವಪ್ಪನಾಯಕನ ವಂಶಸ್ಥರ ಸಮಾಧಿ ಜಾಗವನ್ನು ವಕ್ಫ್ ಮಂಡಳಿಗೆ ಸೇರಿಸುವ ಹುನ್ನಾರ ನಡೆದಿದೆ. ಈಗಾಗಲೇ ಈದ್ಗಾ ಮೈದಾನ ನಮ್ಮ ಜಾಗ ಎಂದು ಹೇಳುತ್ತಿದ್ದಾರೆ. ಅದು ಮಹಾನಗರ ಪಾಲಿಕೆ ಹೆಸರಿನಲ್ಲಿದೆ. ಆಸ್ತಿ ಸಂರಕ್ಷಣೆ ಮಾಡಲು ಆಗದಿರುವ ಸರ್ಕಾರ ಇದು. ಜಮೀರ್ ಇದು ನಿಮ್ಮಪ್ಪನ ಮನೆ ಆಸ್ತಿಯಲ್ಲ, ನೀನು ಇರುವ ಬಂಗಲೆ ಜಾಗ ವಕ್ಫ್ ಬೋರ್ಡ್‌ಗೆ ಬರೆದುಕೊಡು. ಆಗ ಗೊತ್ತಾಗುತ್ತದೆ. ಈ ರಾಜ್ಯವನ್ನು ವಕ್ಫ್ ರಾಜ್ಯವನ್ನಾಗಿ ಮಾಡಲು ಹಿಂದೂ ಸಮಾಜ ಬಿಡುವುದಿಲ್ಲ ಎಂದರು.

ಮಾಜಿ ಸಚಿವ ಹರತಾಳು ಹಾಲಪ್ಪ ಮಾತನಾಡಿ, ರೈತರ ಜಮೀನನ್ನು ನಮ್ಮ ಜಮೀನು ಎಂದು ಹೇಳಿ ಸುಪರ್ದಿಗೆ ತೆಗೆದುಕೊಳ್ಳಲು ಜಮೀರ್ ಅಹಮ್ಮದ್ ಹೊರಟಿದ್ದಾರೆ. ಅವರಿಗೆ ತಳಬುಡ ಗೊತ್ತಿಲ್ಲ.

ಪಹಣಿ ತಿದ್ದಪಡಿಯಾಗಿದೆ ಎಂದು ಭೂಸ್ವಾಧೀನಕ್ಕೆ ಹೋಗುವ ಕೆಲಸವನ್ನು ಅವರು ಮಾಡಿ ಶಾಂತಿಯನ್ನು ಕದಡುತ್ತಿದ್ದಾರೆ ಎಂದು ದೂರಿದರು.

ದೇಶದಲ್ಲಿ ವಕ್ಫ್ ಕಾಯ್ದೆ ಹಾಗೂ ಅರಣ್ಯ ಕಾಯ್ದೆಗಳು ಬದಲಾಗಬೇಕು. ವಕ್ಫ್ ಬಗ್ಗೆ ಪ್ರಶ್ನೆ ಮಾಡಲು ಕೋರ್ಟ್‌ನಲ್ಲಿ ಬರುವುದಿಲ್ಲ, ವಕ್ಫ್ ಕೋರ್ಟ್‌ನಲ್ಲೇ ಆಗಬೇಕು. ಸಾಗರದಲ್ಲೂ ಕೂಡ ವಿವಾದವಿದೆ. ಗಣಪತಿ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡು ವಕ್ಫ್ ಜಮೀನು ಎಂದು ಹೇಳಿಕೊಂಡು ಬಂದಿದ್ದರು. ಇದಕ್ಕೆಲ್ಲಾ ಪರಿಹಾರ ಎಂದರೆ ವಕ್ಫ್ ಕಾಯ್ದೆ ತಿದ್ದುಪಡಿಯಾಗಬೇಕು ಎಂದರು.

ಸಂಸದ ಬಿವೈಆರ್ ತೀವ್ರ ಆಕ್ಷೇಪ

ಶಿವಮೊಗ್ಗ ವಿಜಯಪುರದಲ್ಲಿ ರೈತರ ಹೊಲಕ್ಕೆ ವಕ್ಫ್ ಬೋರ್ಡ್ ಬೇಲಿ ಹಾಕಿರುವ ಪ್ರಕರಣಕ್ಕೆ ಸಂಸದ ಬಿ.ವೈ. ರಾಘವೇಂದ್ರ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಒಂದು ಲಕ್ಷ ಎಕರೆ ಇದ್ದ ವಕ್ಫ್ ಜಮೀನು ಇಂದು 8-10 ಲಕ್ಷ ಎಕರೆ ಜಮೀನು ಆಗಿರುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ನಗರದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾರ್ಲಿಮೆಂಟ್ ನಲ್ಲಿ ವಕ್ಫ್ ಬಿಲ್ ತಿದ್ದುಪಡಿ ತರುವ ಮುನ್ನ ಈ ಎಲ್ಲಾ ಆಸ್ತಿಯನ್ನ ವಕ್ಫ್ ಆಸ್ತಿ ಎಂದು ಘೋಷಿಸಿಕೊಳ್ಳುವ ತರಾತು ನಡೆದಿದೆ. ಇದು ಆಸ್ತಿ ಕಬಳಿಸುವ ಷಡ್ಯಂತ್ರ. ಅದಕ್ಕಾಗಿಯೇ ವಿಜಯಪುರದಲ್ಲಿ ರೈತರ ಹೊಲಕ್ಕೂ ವಕ್ಫ್ ಬೋರ್ಡ್ ನೋಟಿಸ್ ನೀಡಿದೆ ಎಂದು ಕಿಡಿಕಾರಿದರು. ವಕ್ಫ್ ಬೋರ್ಡ್ ಕ್ರಮದ ವಿರುದ್ಧ ಹರಿಹಾಯ್ದ ಅವರು, ಜಂಟಿ ಸಂಸದೀಯ ಸಮಿತಿಯ ಮುಂದೆ ವಕ್ಫ್ ಬೋರ್ಡ್ ತಿದ್ದುಪಡಿ ಚರ್ಚೆ ಆಗಲಿದೆ. ಚಳಿಗಾಲದ ಅಧಿವೇಶನದಲ್ಲಿ ಸುಧೀರ್ಘ ಚರ್ಚೆ ನಡೆಯುವ ಸಾಧ್ಯತೆ ಇದೆ. ಆಗ ಇದಕ್ಕೆಲ್ಲ ಕಡಿವಾಣ ಬೀಳಲಿದೆ ಎಂದರು.

70ನೇ ಬಾರಿ ರಕ್ತದಾನ ಮಾಡಿದ ಆತ್ಮಾರಂಗದೋಳ್

ಶಿವಮೊಗ್ಗ: ನಗರದ ರಂಗದೋಳ್ ಕನ್ಸ್ಟ್ರಕ್ಷನ್ ಸಂಸ್ಥೆ ಮಾಲೀಕ, ಇಂಜಿನಿಯರ್ ಆತ್ಮಾರಂಗದೋಳ್ ಅವರು 70ನೇ ಬಾರಿ ರಕ್ತದಾನ ಮಾಡಿದ್ದಾರೆ. ಹೆಚ್ಚಿನ ಬಾರಿ ರಕ್ತದಾನ ಮಾಡಿದ ಆತ್ಮಾರಂಗದೋಳ್ ಅವರಿಗೆ ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದ ವಾಕಿಂಗ್ ಸ್ನೇಹಿತರು ಸನ್ಮಾನ ಮಾಡಿದರು.

ಎಲ್ಲ ಸ್ನೇಹಿತರು ಆತ್ಮಾರಂಗದೋಳ್ ಹೆಚ್ಚು ಬಾರಿ ರಕ್ತದಾನ ಮಾಡಿರುವ ಬಗ್ಗೆ ಮೆಚ್ಚುಗೆಯ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ರಕ್ತದಾನ ಮಾಡುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಬಹುದು. ತುರ್ತು ಸಂದರ್ಭಗಳಲ್ಲಿ ಜೀವ ಉಳಿಸಲು ರಕ್ತದಾನ ತುಂಬಾ ಅವಶ್ಯಕವಾಗಿದೆ. ಮರ್ನಾಲ್ಕು ತಿಂಗಳಿಗೊಮ್ಮೆ ಆರೋಗ್ಯವಂತ ಜನತೆ ರಕ್ತದಾನ ಮಾಡಬಹುದಾಗಿದೆ. ರಕ್ತದಾನ ಮಾಡುವುದರಿಂದ ಸದೃಢ ಆರೋಗ್ಯ ಕಾಪಾಡಿಕೊಳ್ಳಲು ಪೂರಕವಾಗಲಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ನರಸೋಜಿರಾವ್, ಶ್ರೀನಿವಾಸ್, ಹಾಲಪ್ಪ, ಇಂಜಿನಿಯರ್‌ಗಳಾದ ಉಮೇಶ್, ಮಂಜಣ್ಣ, ಸಿ.ರವಿಕುಮಾರ್, ಜಯಣ್ಣ, ಮೋಹನರಾವ್, ಮಧುಕರ್, ರಾಜೇಂದ್ರ, ಸುಬ್ಬಣ್ಣ, ರಮೇಶ್, ರುದ್ರಮೂರ್ತಿ ಇತರರು ಉಪಸ್ಥಿತರಿದ್ದರು.

ನೌಕರರಿಗೆ ಸನ್ಮಾನಿಸಿ ಬೀಳ್ಕೊಡುಗೆ

ನಿವೃತ್ತಿ ಹೊಂದಿದ ರತ್ನಾಕರ್, ಸೂಲಯ್ಯ, ನಾರಾಯಣ್, ಮೂರ್ತಿ, ಬೈಲಪ್ಪ, ನರಸಿಂಹಮೂರ್ತಿ, ನಾಗರಾಜ್, ನರಸ, ಪೆಂಚಾಲಮ್ಮ, ಮುನಿನರಸಮ್ಮ ಅವರನ್ನು ಗೌರವಿಸಲಾಯಿತು.

ಶಿವಮೊಗ್ಗ: ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ 10 ಜನ ನೌಕರರಿಗೆ ಇಂದು ಪಾಲಿಕೆಯ ಪರಿಷತ್ ಸಭಾಂಗಣದಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಾಲಿಕೆ ಆಯುಕ್ತರಾದ ಕವಿತಾ ಯೋಗಪ್ಪನವರ್, ತಮ್ಮ ಸುದೀರ್ಘ ವೃತ್ತಿ ಜೀವನದಲ್ಲಿ ಇಂದು ನಿವೃತ್ತಿ ಹೊಂದಿದ ಪೌರ ಕಾರ್ಮಿಕರು ಎಲ್ಲರೂ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯ ನಿಷ್ಠೆ ಮೆರೆದಿದ್ದಾರೆ. ಸರಕಾರಿ ಕೆಲಸ ಎಂಬುದು ಥ್ಯಾಂಕ್ ಲೆಸ್ ಜಾಬ್ ಆಗಿದೆ. ಆದರೂ ನಮ್ಮ ಕರ್ತವ್ಯವನ್ನು ನಾವೆಲ್ಲೂರ ಪ್ರಾಮಾಣಿಕವಾಗಿ ಮಾಡಲೇಬೇಕು ಎಂದರು.

ಪೌರ ಕಾರ್ಮಿಕರು ಕಷ್ಟದ ವಾತಾವರಣದಲ್ಲಿ ಕೆಲಸ ಮಾಡುತ್ತಾರೆ. ಹಲವು ಕಡೆ ಪೌರ ಕಾರ್ಮಿಕರಿಗೆ ವಿನಾಕಾರಣ ಕಿರಿಕಿರಿ ಉಂಟಾಗುತ್ತದೆ. ಆದರೂ ಹಿರಿಯ ಕಾರ್ಮಿಕರು ಅನುಸರಿಸಿಕೊಂಡು ಕೆಲಸ ಮಾಡುತ್ತಾರೆ. ಅದು ಪಾಲಿಕೆಗೆ ಒಳ್ಳೆಯ ಹೆಸರು ತರುತ್ತದೆ ಎಂದರು.

ಕಾರ್ಮಿಕರಿಗೆ ಸಲ್ಲಬೇಕಾದ ಪಿಂಚಣಿ ಮತ್ತು ನೂತನ ವೇತನ ಶ್ರೇಣಿ ಸೇರಿದಂತೆ ಎಲ್ಲಾ ನಿವೃತ್ತಿ ಸೌಲಭ್ಯಗಳನ್ನು ತಕ್ಷಣದಿಂದಲೇ ಕೊಡಲು ಬೇಕಾದ ಎಲ್ಲಾ ಕಾರ್ಯಗಳನ್ನು ಪಾಲಿಕೆ ಆಡಳಿತ ವಿಭಾಗದಿಂದ ಈಗಾಗಲೇ ಮಾಡಲಾಗಿದೆ. ಕಳೆದ 3 ತಿಂಗಳಿಂದ 20ಕ್ಕೂ ಹೆಚ್ಚು ನೌಕರರು ನಿವೃತ್ತಿ ಹೊಂದಿದ್ದಾರೆ. ಇದರಿಂದ ಪಾಲಿಕೆಯ ನಿತ್ಯ ಕಾರ್ಯಗಳಿಗೆ ಸ್ವಲ್ಪಮಟ್ಟಿನ ಹಿನ್ನಡೆಯಾಗುತ್ತದೆ. ಆದರೂ ನಿವೃತ್ತಿ ಸ್ವಾಭಾವಿಕ ಪ್ರಕ್ರಿಯೆ. ಒಳ್ಳೆಯ ನೌಕರರನ್ನು ಬೀಳ್ಕೊಡುವಾಗ ಅತ್ಯಂತ ದುಃಖವಾಗುತ್ತದೆ. ನಿಮ್ಮ ಮುಂದಿನ ಜೀವನ ಸುಖಕರವಾಗಿರಲಿ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಎಂದರು.

ಈ ಸಂದರ್ಭದಲ್ಲಿ ಉಪ ಆಯುಕ್ತರಾದ ತುಷಾರ್ ಹೊಸೂರು, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಎನ್. ಗೋವಿಂದಪ್ಪ, ಉಪಾಧ್ಯಕ್ಷ ಕುಮಾರ್, ಮುಖ್ಯ ಲೆಕ್ಕಾಧಿಕಾರಿ ಡಕ್ಕಾನಾಯ್ಕ್, ಮಂಜುನಾಥ್, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ದಿ. ಎನ್.ಜೆ. ರಾಜಶೇಖರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಾಡಿಗೆ ಬೆಳಕು ಚೆಲ್ಲುತ್ತಿದ್ದ ನಾಯಕ ಜೆ.ಎಚ್.ಪಟೇಲರು

ಭದ್ರಾವತಿ: ನಾಡಿನ ಸಮಸ್ಯೆಗಳಿಗೆಸದನದಲ್ಲಿ ಹಾಸ್ಯ ಚಟಾಕಿ ಹಾರಿಸುತ್ತಲೇ ಬೆಳಕು ಚೆಲ್ಲುತ್ತಿದ್ದ ಧೀಮಂತ ರಾಜಕೀಯ ಮುತ್ಸದಿ ಮಾಜಿ ಮುಖ್ಯಮಂತ್ರಿ ದಿ| ಜೆ.ಹೆಚ್ .ಪಟೇಲರು ಸರ್ವ ಕಾಲಕ್ಕೂ ಪ್ರಸ್ತುತರೆಂದು ಬಗರ್ ಹುಕುಂ ಸಮಿತಿ ಅಧ್ಯಕ್ಷ ಎಸ್.ಮಣಿಶೇಖರ್ ಹೇಳಿದರು.

ಅವರು ಹಳೇನಗರದ ಶ್ರೀ ವೀರಭದ್ರೇಶ್ವರ ಸ್ವಾಮಿ ಸಮುದಾಯ ಭವನದಲ್ಲಿ ಜೆ.ಹೆಚ್. ಪಟೇಲರ ಅಭಿಮಾನಿ ಬಳಗದಿಂದ ಹಮ್ಮಿಕೊಂಡಿದ್ದ 94 ನೇ ಜನ್ಮ ದಿನಾಚರಣೆ ಹಾಗೂ ವಿಐಎಎಲ್-ಎಂಪಿಎಂ ಕಾರ್ಖಾನೆಗಳ ಪುನಶ್ಚೇತನ ಕುರಿತು ಚಿಂತನ ಮಂಥನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪಟೇಲರು ಕರ್ನಾಟಕ ರಾಜ್ಯದ ಸಿಎಂ ಆಗಿದ್ದಾಗ ರಾಜ್ಯದ ಜನತೆಗಾಗಿ ಹಲವು ರೂಪಿಸಿದರು ಯೋಜನೆ ಕಾರ್ಮಿಕರು ಮತ್ತು ಬಡವರ ಕಾಳಜಿ ಹೊಂದಿದ್ದರು. ಎಂಪಿಎಂ ಕಾರ್ಖಾನೆಗೆ ಸಾಕಷ್ಟು ಅಭಿವೃದ್ಧಿಗೆ ಒತ್ತು ನೀಡಿದ್ದರು. ಅದೇ ರೀತಿ ಕಾರ್ಮಿಕರನ್ನು ಮತ್ತು ಕಾರ್ಮಿಕ ಕುಟುಂಬಗಳನ್ನು ಉಳಿಸಲು ನಷ್ಟದಲ್ಲಿದ್ದ ವಿಐಎಸ್‌ಎಲ್ ಕಾರ್ಖಾನೆಯನ್ನು ಅಂದಿನ ಸಂಸದರಾಗಿದ್ದ ಟಿ.ವಿ.ಚಂದ್ರಶೇಖರಪ್ಪ ಜೊತೆಗೂಡಿ ಕಾಯಕಲ್ಪ ಮತ್ತು ಬಂಡವಾಳ ತೊಡಗಿಸಿ ಉದ್ಯೋಗವಕಾಶ ಕಲ್ಪಿಸಲು ಅಂದಿನ ಕೇಂದ್ರ ಸರಕಾರದ ಉಕ್ಕು ಪ್ರಾಧಿಕಾರಕ್ಕೆ ಸೇರಿಸಲು ಯಶಸ್ವಿಯಾಗಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಅವರಿಗೆ ಆಹ್ವಾನಿಸಿ ಕೇವಲ ಒಂದು ರೂ ಮುಖ ಬೆಲೆಗೆ ಸಂಪೂರ್ಣ ಕಾರ್ಖಾನೆಯ ಆಸ್ತಿಯನ್ನು ಹಸ್ತಾಂತರಿಸಿದರು. ಆದರೆ ಕೇಂದ್ರ ಬಿಜೆಪಿ ಸರಕಾರ ಈ ಉದ್ದಿಮೆಯನ್ನು ಹಿಂಡಿ ಹಿಪ್ಪೆ ಮಾಡಿ ಒಂದು ಬಿಡಿಗಾಸು ಮಾರಾಟಕ್ಕೆ ಬಂಡವಾಳ ತೊಡಗಿಸದೆ ಮುಂದಾಗಿರುವುದು ಶೋಚನೀಯವಾಗಿದೆ.

ಸಂಸದರು ವಿಐಎಸ್‌ಎಲ್ ಉಳಿಸುವ ಭರವಸೆ ನೀಡಿದ್ದರೆ, ಶಾಸಕರು ಎಂಪಿಎಂ ಪುನರ್ ಆರಂಭಿಸುವ ಕಾರ್ಯದಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಜೆಡಿಯು ರಾಜ್ಯ ಮಾಜಿ ಕಾರ್ಯದರ್ಶಿ ಶಶಿಕುಮಾರ್ ಎಸ್.ಗೌಡ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಕೀಲ ಶಿವಕುಮಾರ್ ಉಪನ್ಯಾಸ ನೀಡಿದರು. ಕುವೆಂಪು ವಿವಿ ಸಿಂಡಿಕೇಟ್ ಸದಸ್ಯ ಶಿವಕುಮಾರ್, ಮಾನವ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಬಿ.ಎನ್.ರಾಜು, ಪಡಿತರ ವಿತರಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸಿದ್ದಲಿಂಗಯ್ಯ, ನಿವೃತ್ತ ಎಇಇ ದಯಾನಂದ್, ಕಾಂಗ್ರೆಸ್ ಮುಖಂಡರಾದ ರವಿಕುಮಾರ್, ಗಂಗಾಧರ್, ಎಂಪಿಎಂ ನಿವೃತ್ತ ಕಾರ್ಮಿಕರ ನೊಂದ ವೇದಿಕೆ ಸಂಚಾಲಕ ಬಸವರಾಜಯ್ಯ, ಕರವೇ ಡಾ.ಜ್ಯೋತಿ ಸೋಮಶೇಖರ್ ಮುಂತಾದವರಿದ್ದರು.

ಶಿವಮೊಗ್ಗ ತಹಸೀಲ್ದಾರ್ ಕಚೇರಿ ಆವರಣದಲ್ಲಿರುವ ಸಂಸದ ಬಿ.ವೈ. ರಾಘವೇಂದ್ರ ಅವರ ನವೀಕೃತ ನೂತನ ಕಚೇರಿಗೆ ಮಂಗಳವಾರ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್, ಮಾಜಿ ಸಚಿವ ಹರತಾ ಳು ಹಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಟಿ.ಡಿ. ಮೇಘರಾಜ್, ಆರ್.ಕೆ. ಸಿದ್ಧರಾಮಣ್ಣ, ಪದ್ಮನಾಭ ಭಟ್, ಬಳ್ಳೆಕೆರೆ ಸಂತೋಷ್, ಪದ್ಮಿನಿ, ಸುಮಾ, ಮಾಲತೇಶ್, ವಿನ್ಸೆಂಟ್, ದತ್ತಾತ್ರಿ, ತೇಜಸ್ವಿನಿ ರಾಘವೇಂದ್ರ, ಅರುಣಾದೇವಿ, ನಾಗರಾಜ್ ಶುಭ ಹಾರೈಸಿದರು.

ಪಾಲಿಕೆ ಕಟ್ಟಡದ ಮೇಲೆ ಕನ್ನಡದ ಧ್ವಜ ಇರಲಿ

ಶಿವಮೊಗ್ಗ: ಶಿವಮೊಗ್ಗ ಮಹಾನಗರ ಪಾಲಿಕೆ ಕಟ್ಟಡದ ಮೇಲೆ ಕನ್ನಡದ ಧ್ವಜವನ್ನು ನಿರಂತರವಾಗಿ ಹಾರಿಸಬೇಕು ಎಂದು ದುರ್ಗಿಗುಡಿ ಕನ್ನಡ ಸಂಘದ ನಿರ್ದೇಶಕ ಹಾಗೂ ಪತ್ರಿಕೆ ಸಂಪಾದಕ ಜಿ. ಚಂದ್ರಶೇಖರ್ ಆಗ್ರಹಿಸಿದ್ದಾರೆ. ನಮ್ಮದು ಹೆಮ್ಮೆಯ ಕನ್ನಡನಾಡು. ಈ ನಾಡಿಗೆ ಅಧಿಕೃತವಾಗಿ ಕನ್ನಡದ ಧ್ವಜ ಇರಬೇಕು ಎಂಬುದು ಹಲವು ವರ್ಷಗಳ ಕನ್ನಡ ಸಂಘಗಳ ಆಗ್ರಹವಾಗಿದೆ. ಅದು ಅಧಿಕೃತವಾಗಿ ಇಲ್ಲದಿದ್ದರೂ ಕೂಡ ಸರಕಾರ ಮತ್ತು ಕನ್ನಡ ಪರ ಸಂಘಟನೆಗಳು ಕನ್ನಡ ಬಾವುಟವನ್ನು ಹೆಮ್ಮೆಯಿಂದಲೇ ಹಾರಿಸುತ್ತಾ ಬಂದಿದ್ದಾರೆ. ಹಳದಿ ಮತ್ತು ಕೆಂಪು ಬಣ್ಣದ ಎರಡು ಸಮಭಾಗದ ಬಾವುಟವನ್ನು ನಾವು ಇಂದು ಹಾರಿಸುತ್ತಾ ಬಂದಿದ್ದೇವೆ. ಕೆಂಪು ಮತ್ತು ಹಳದಿ ಬಣ್ಣಗಳು ಶಾಂತಿ ಮತ್ತು ಧೈರ್ಯವನ್ನು ಸೂಚಿಸುತ್ತವೆ. ಅಷ್ಟೇ ಅಲ್ಲ, ಕನ್ನಡಿಗ ಹೆಣ್ಣುಮಗಳ ಅರಿಶಿಣ ಕುಂಕುಮದ ಪ್ರತೀಕವೂ ಆಗಿದೆ. ಇಂತಹ ಧ್ವಜವು ಮಹಾನಗರ ಪಾಲಿಕೆ ಕಟ್ಟಡದ ಮೇಲೆ ಹಾರುತ್ತಿದ್ದರೆ ನಾವು ಕನ್ನಡಿಗರು ಎಂಬ ಭಾವ ವಿಶೇಷವಾಗಿ ಮೂಡುತ್ತದೆ. ನವೆಂಬರ್ ತಿಂಗಳಲ್ಲಿ ಮಾತ್ರ ನಾವು ಕನ್ನಡದ ಧ್ವಜವನ್ನು ಹಾರಿಸುತ್ತಾ ಬಂದಿದ್ದೇವೆ. ಇದು ತುಂಬಾ ವಿಷಾದಕರ ಎಂದು ಅವರು ತಿಳಿಸಿದ್ದಾರೆ. ಆದರೆ, ಕಳೆದ ಎರಡು ಮೂರು ವರ್ಷಗಳಿಂದ ಕನ್ನಡದ ಧ್ವಜವನ್ನು ತೆಗೆಯಲಾಗಿದೆ. ಆದ್ದರಿಂದ ಮಹಾನಗರ ಪಾಲಿಕೆ ಅಧಿಕಾರಿಗಳು ಈಗಲಾದರೂ ಪಾಲಿಕೆ ಕಟ್ಟಡದ ಮೇಲೆ ಶಾಶ್ವತ ಧ್ವಜ ಹಾರಿಸಲು ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಇ-ಸ್ವತ್ತು ಅಕ್ರಮ: ತಡೆಗೆ ಮನವಿ

ಶಿವಮೊಗ್ಗ: ಮಹಾನಗರ ಪಾಲಿಕೆಯಲ್ಲಿ ಇ-ಸ್ವತ್ತು ಮಾಡಿಸಲು ತುಂಬಾ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಮಲೆನಾಡು ಕೇಸರಿಪಡೆ ಕಾರ್ಯಕರ್ತರು ಮಂಗಳವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಸರಕಾರವು ಖಾಸಗಿ ಸ್ವತ್ತುಗಳ ಅಕ್ರಮ ಪರಭಾರೆ ಖಾತೆಯಾಗುವುದನ್ನು ತಡೆಗಟ್ಟಲು ಇ-ಸ್ವತ್ತನ್ನು 2018ರಿಂದಲೇ ಜಾರಿಗೆ ತಂದಿದೆ. ಇದಕ್ಕಾಗಿ ಮಹಾನಗರ ಪಾಲಿಕೆ ಕೂಡ ಜಾಗೃತಿ ಕಾರ್ಯಕ್ರಮಕ್ಕಾಗಿ ಸುಮಾರು 15ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಂಡಿತ್ತು. ಆದರೂ ಕೂಡ ಪಾಲಿಕೆಯಿಂದ ಇ-ಸ್ವತ್ತು ಪಡೆಯಲಾಗುತ್ತಿಲ್ಲ ಎಂದು ಮನವಿದಾರರು ದೂರಿದರು. ಅಪ್ಲೋಡ್ ಆಗಲು ತಾಂತ್ರಿಕ ದೋಷವಿದೆ. ಸರ್ವರ್ ಕೆಲಸ ಮಾಡುತ್ತಿಲ್ಲ ಎಂಬ ಸಬೂಬನ್ನು ಅಧಿಕಾರಿಗಳು ಹೇಳುತ್ತಿದ್ದಾರೆ. ಇ-ಸ್ವತ್ತು ಇಲ್ಲದೇ ಯಾವುದೇ ಸ್ವತ್ತುಗಳು ನೋಂದಣಿಯಾಗುತ್ತಿಲ್ಲ. ಇದರಿಂದಾಗಿ ಮದುವೆ ಮಾಡುವವರು, ವಿದೇಶಕ್ಕೆ ಹೋಗುವವರು, ಆಸ್ಪತ್ರೆ ಖರ್ಚು ಭರಿಸಲು ಸಾರ್ವಜನಿಕರಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಇ-ಸ್ವತ್ತು ನೀಡಲಿಕ್ಕಾಗಿಯೇ ಒಬ್ಬ ಅಧಿಕಾರಿಯನ್ನು ನೇಮಿಸಬೇಕು. ಮತ್ತು ಇ-ಸ್ವತ್ತು ಮಾಡಿಸಲು ಕೆಲವು ನೌಕರರು ಹಣದ ಬೇಡಿಕೆ ಕೂಡ ಇಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆಯೂ ಕೂಡ ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಕೇಸರಿಪಡೆಯ ಅಧ್ಯಕ್ಷ ಎಸ್.ಜೆ. ರಾಜು, ಪ್ರಮುಖರಾದ ರಾಕೇಶ್ ಕುಮಾರ್, ಮಂಜುನಾಥ್, ಶ್ರೀನಿವಾಸ್, ಚಂದನ್, ಅಪ್ಪು, ಯಶವಂತ್ ಸೇರಿದಂತೆ ಹಲವರಿದ್ದರು.

ಆಯುರ್ವೇದ ವಿವಿ ಆರಂಭಕ್ಕೆ ಒತ್ತಾಯ

ಶಿವಮೊಗ್ಗ: ಶಿವಮೊಗ್ಗದಲ್ಲಿ ನೆನೆಗುಂದಿಗೆ ಬಿದ್ದಿರುವ ಆಯುರ್ವೇದ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವಂತೆ ವಿಧಾನಪರಿಷತ್ ಸದಸ್ಯ ಡಿ.ಎಸ್. ಅರುಣ್ ಒತ್ತಾಯಿಸಿದ್ದಾರೆ. ಇಂದು ಶಿವಮೊಗ್ಗದ ಸುವರ್ಣ ಸಂಸ್ಕೃತಿ ಭವನ ದಲ್ಲಿ ಆಯೋಜನೆಗೊಂಡ 9 ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಮತ್ತು ಧನ್ವಂತರಿ ಜಯಂತಿ -2024 ರ ಕಾರ್ಯಕ್ರಮದಲ್ಲಿ ಉಚಿತ ಮಧುಮೇಹ ತಪಾಸಣೆ ಹಾಗು ಔಷಧಿ ವಿತರಣೆ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು. 150 ದೇಶದಲ್ಲಿ ಆಯುರ್ವೇದ ದಿನ ಆಚರಿಸುತ್ತಿದ್ದು, ನರೇಂದ್ರಮೋದಿಯವರ ಕೇಂದ್ರ ಸರಕಾರದಿಂದ ಅನುದಾನವನ್ನು ನೀಡುತ್ತಿದ್ದು, ರಾಜ್ಯ ಸರಕಾರ ಇದಕ್ಕೆ ಸ್ಪಂದಿಸುವುದರಲ್ಲಿ ಹಿಂದೇಟು ಹಾಕುತ್ತಿದ್ದು, ಈ ಹಿಂದೆ ಆಯುರ್ವೇದ ವಿಶ್ವ ವಿದ್ಯಾಲಯ ನಿರ್ಮಾಣ ಆದೇಶಗೊಂ ಡು ಪ್ರಸ್ತುತ ನೆನೆಗುಂದಿಗೆ ಬಿದ್ದಿದೆ. ಆಯುರ್ವೇದ ವಿಶ್ವ ವಿದ್ಯಾಲಯ ನಿರ್ಮಾಣಕ್ಕೆ ಬೇಕಾಗಿರುವ ಎಲ್ಲಾ ಸಹಕಾರ 'ವನ್ನು ರಾಜ್ಯ ಸರಕಾರ ಒದಗಿಸಿ ಸಹಕರಿಸಬೇಕೆಂದು ಆಗ್ರಹಪಡಿಸಿದರು. ಶಿವಮೊಗ್ಗ ನಗರ ಶಾಸಕ ಎಸ್.ಎನ್. ಚನ್ನಬಸಪ್ಪ, ಗ್ಯಾರಂಟಿ ಯೋಜನೆ ಅನುಷ್ಠಾನದ ಜಿಲ್ಲಾ ಅಧ್ಯಕ್ಷ ಚಂದ್ರಭೂಪಾಲ್ ಹಾಗೂ ಆಯುರ್ವೇದ ಕಾಲೇಜಿನ ವೈದ್ಯರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೌಹಾರ್ದತೆಗೆ ದರ್ಮದ ಪಾತ್ರ ಕುರಿತು ಉಪನ್ಯಾಸ

ಶಿವಮೊಗ್ಗ: ಶರಾವತಿ ನಗರದ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ನವೆಂಬರ್ 4 ಮತ್ತು 5 ರಂದು ವಿಶೇಷ ಕಾರ್ಯಕ್ರಮಗಳನ್ನು ಆಯೋಹಿಸಲಾಗಿದೆ. ನವಂಬರ್ 4 ರಂದು ಬೆಳಿಗ್ಗೆ 9.30 ರಿಂದ ರಾತ್ರಿ 10. 30 ರವರಗೆ ನಡೆಯಲಿರುವ ಭಗವತ್ ಚಿಂತನ, ಧರ್ಮ ಸಂಕಥನ, ಮನು ಕುಲದ ಪರಿವರ್ತನೆ, ವಿಶ್ವಶಾಂತಿ ಹಾಗೂ ಸೌಹಾರ್ದತೆಯಲ್ಲಿ ಧರ್ಮಗಳ ಪಾತ್ರ ಕುರಿತು ಉಪನ್ಯಾಸ, ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 72ನೇ ಪೀಠಾ ಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಹಾಗೂ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯ ದರ್ಶಿಗಳಾದ ಪೂಜ್ಯ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ದಿವ್ಯ ಸತ್ಸಂಗ, ಧರ್ಮ ಸಂಕಥನ ಹಾಗೂ ಸಾಧಕರಿಗೆ ಸನ್ಮಾನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 34 ನೇ ವಾರ್ಷಿಕೋತ್ಸವದ ಸಮಾರಂಭ ಹಾಗೂ ಸತ್ಸಂಗ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಹಾಗೂ ಸಂಸ್ಥೆಯ ಶಿಕ್ಷಕ ಹಿರಿಯ ವಿದ್ಯಾರ್ಥಿಗಳಿಗೆ ಪೂಜ್ಯರಿಂದ ಸನ್ಮಾನಿಸುವ ಕಾರ್ಯಕ್ರಮ ನಡೆಯುವುದು. ಕಾರ್ಯಕ್ರಮಕ್ಕೆ ಸರ್ವರನ್ನು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಶಾಖಾ ಮಠ ಸ್ವಾಗತಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದಂತೆ ಸಿಎಂ ಗರಂ | ನಿಗದಿತ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗದಿದ್ದರೆ ಕ್ರಮ

ಪ್ರಗತಿಯಿಲ್ಲದಿದ್ದರೆ ವರ್ಗಾವಣೆಯ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತೆರಿಗೆ ಸಂಗ್ರಹದಲ್ಲಿ ರಾಜ್ಯ ಮುಂದಿದ್ದರೂ, ಈ ವಿಷಯದಲ್ಲಿ ಯಾವ ಅಧಿಕಾರಿಯೂ ನಿರ್ಲಕ್ಷ್ಯ ತೋರುವಂತಿಲ್ಲ. ನಿರೀಕ್ಷಿತ ಪ್ರಗತಿ ಕಾಣಿಸದಿದ್ದರೆ ಬದಲಾಯಿಸಬೇಕಾಗುತ್ತದೆ ಎನ್ನುವ ಸ್ಪಷ್ಟ ಎಚ್ಚರಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದಾರೆ.

ವಿಧಾನಸೌಧದಲ್ಲಿ ನಡೆದ ವಾಣಿಜ್ಯ ತೆರಿಗೆ ಸಂಗ್ರಹ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸ್ಪಷ್ಟ ಎಚ್ಚರಿಕೆ ನೀಡಿರುವ ಸಿದ್ದರಾಮಯ್ಯ ಅವರು, ಮುಂದಿನ ದಿನದಲ್ಲಿ ಪ್ರತಿ ತಿಂಗಳ ಕೊನೆಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು. ತೆರಿಗೆ ಸಂಗ್ರಹದಲ್ಲಿ ಪ್ರಗತಿ ಕಾಣದಿದ್ದರೆ ಮುಲಾಜಿಲ್ಲದೇ ಕ್ರಮವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

2024-25 ನೇ ಸಾಲಿನಲ್ಲಿ ಒಟ್ಟು ಗುರಿ 1,10,000 ಕೋಟಿ ರು. ತೆರಿಗೆ ಸಂಗ್ರಹ ಗುರಿ ಹೊಂದಲಾಗಿದೆ. ಅಕ್ಟೋಬರ್ ಅಂತ್ಯದವರೆಗೆ ಒಟ್ಟು 58,773 ಕೋಟಿ ಸಂಗ್ರಹಿಸಲಾಗಿದ್ದು, ಇದರಲ್ಲಿ ಜಿಎಸ್‌ಟಿ 44,783 ಕೋಟಿ, ಕೆಎಸ್‌ಟಿ 13,193 ಕೋಟಿ ಹಾಗೂ ವೃತ್ತಿ ತೆರಿಗೆ 797 ಕೋಟಿ ಸೇರಿದೆ. ಅಕ್ಟೋಬರ್ ಅಂತ್ಯಕ್ಕೆ ಶೇ.53.5 ರಷ್ಟು ಗುರಿ ಸಾಧಿಸಲಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ 5,957 ಕೋಟಿ ಹೆಚ್ಚುವರಿ ಸಂಗ್ರಹವಾಗಿರುತ್ತದೆ ಎಂದರು.

ವಿಧಾನಸೌಧದಲ್ಲಿ ನಡೆದ ವಾಣಿಜ್ಯ ತೆರಿಗೆ ಸಂಗ್ರಹ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಮುಂದಿನ ಐದು ತಿಂಗಳ ಅವಧಿಯಲ್ಲಿ ಪ್ರತಿ ತಿಂಗಳು 10,200 ಕೋಟಿ ರು. ತೆರಿಗೆ ಸಂಗ್ರಹ ಗುರಿಯನ್ನು ಹಾಕಿಕೊಳ್ಳಬೇಕು. ಮಾರ್ಚ್ ಒಳಗಾಗಿ ಈ ಗುರಿಯನ್ನು ಸಾಧಿಸಬೇಕು. ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಮಾತ್ರ ಗುರಿ ಸಾಧನೆ ಸಾಧ್ಯ. ರಾಜ್ಯದ ಅಭಿವೃದ್ಧಿಗೆ ತೆರಿಗೆ ಸಂಗ್ರಹದಲ್ಲಿ ಗುರಿಯನ್ನು ಸಾಧಿಸಬೇಕಿದೆ ಎಂದು ಸಲಹೆ ನೀಡಿದರು.

ಪ್ರತಿ ತಿಂಗಳು ಸಭೆ: ಇನ್ನು ಮುಂದೆ ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ನಡೆಸಲಾಗುವುದು. ನಿಗದಿತ ಗುರಿಯನ್ನು ಸಾಧಿಸದ ಅಧಿಕಾರಿಗಳನ್ನು ಹೊಣೆಗಾರ ಮಾಡಲಾಗುವುದು. ಯಾವುದೇ ಕಾರಣಕ್ಕೂ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಗುರಿಗಿಂತ ಕಡಿಮೆಯಾಗಬಾರದು. ಕರ ಸಮಾಧಾನ ಯೋಜನೆಯಲ್ಲಿ ಎರಡು ಸಾವಿರ ಕೋಟಿ ರು. ಹೆಚ್ಚುವರಿ ಸಂಗ್ರಹದ ನಿರೀಕ್ಷೆಯಿದೆ ಎಂದರು. ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರಾದ ಸಿ.ಎ.ಶಿಖಾ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಸೇರಿ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾರಿಗೆ ಇಲಾಖೆ ಪ್ರಗತಿ ಪರಿಶೀಲನೆ

2024-25ನೇ ಸಾಲಿನಲ್ಲಿ ವಾರ್ಷಿಕ ರಾಜಸ್ವ ಸಂಗ್ರಹ ಗುರಿ 13000 ಕೋಟಿಯಾಗಿದ್ದು, ಸೆಪ್ಟೆಂಬರ್ ವರೆಗೆ 5569 ಕೋಟಿ ರು. ಸಂಗ್ರಹ ಮಾಡಲಾಗಿದೆ. ಹಿಂದಿನ ಸಾಲಿಗಿಂತ ಈ ಅವಧಿಯಲ್ಲಿ 308.98 ಕೋಟಿ ಹೆಚ್ಚುವರಿ ರಾಜಸ್ವ ಸಂಗ್ರಹವಾಗಿದೆ ಎಂದು ಸಾರಿಗೆ ಅಧಿಕಾರಿಗಳು ಮುಖ್ಯ ಮಂತ್ರಿಗಳಿಗೆ ವಿವರಿಸಿದರು. ಇನ್ನು ಮುಂದಿನ ಮಾರ್ಚ್‌ವರೆಗೆ ಪ್ರತಿ ತಿಂಗಳು 2400 ಕೋಟಿ ರಾಜಸ್ವ ಸಂಗ್ರಹ ಗುರಿ ಸಾಧಿಸಬೇಕು ಎಂದು ಮುಖ್ಯಮಂತ್ರಿಗಳು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 2024-25ರ ಸಾಲಿನಲ್ಲಿ 26000 ಕೋಟಿ ರಾಜಸ್ವ ಸಂಗ್ರಹ ಗುರಿ ಹೊಂದಿದ್ದು, ಅಕ್ಟೋಬರ್ ತಿಂಗಳ ಅಂತ್ಯದವರೆಗೆ 13,724 ಕೋಟಿ ಸಂಗ್ರಹವಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ನಡೆಸಲಿದ್ದೇನೆ. ನಿಗದಿತ ಗುರಿ ಸಾಧಿಸದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಗೋವಾದಿಂದ ಕರ್ನಾಟಕಕ್ಕೆ ಸಾಗಾಟವಾಗುತ್ತಿರುವ ಅಕ್ರಮ ಮದ್ಯವನ್ನು ಸಂಪೂರ್ಣವಾಗಿ ತಡೆಯಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರುಗಳು ಬಂದರೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.
- ಸಿದ್ದರಾಮಯ್ಯ, ಮುಖ್ಯಮಂತ್ರಿ

- **2024-25ನೇ ಸಾಲಿನಲ್ಲಿ ಅಬಕಾರಿ ತೆರಿಗೆಯಿಂದ ಒಟ್ಟು 38,525 ಕೋಟಿ ಸಂಗ್ರಹ ಗುರಿ ಹೊಂದಲಾಗಿದ್ದು, ಅ.28ರವರೆಗೆ 20237 ಕೋಟಿ ಸಂಗ್ರಹವಾಗಿದೆ.**
- **ಈವರೆಗೆ ಶೇ.52.53 ಗುರಿ ಸಾಧನೆ ಮಾಡಲಾಗಿದ್ದು, ಮಾರ್ಚ್ ಒಳಗಾಗಿ ನಿಗದಿತ ಗುರಿಯನ್ನು ಸಾಧಿಸಲು ಕ್ರಮ ಕೈಗೊಳ್ಳಬೇಕು.**
- **ಕಳೆದ ವರ್ಷಕ್ಕಿಂತ ಈ ಬಾರಿ 1301.15 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹ**

15 ದಿನದಲ್ಲಿ ವಕ್ಫ್ ಗೊಂದಲ ಪರಿಹರಿಸದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ ನೀಡಿದ ಬಿಜೆಪಿ

ಕಾಂಗ್ರೆಸ್‌ನಿಂದ ರೈತರ ಭೂಮಿ ಕಬಳಿಸುವ ಹುನ್ನಾರ

ವಿಜಯಪುರ: ರಾಜ್ಯ ಕಾಂಗ್ರೆಸ್ ಸರಕಾರ ವಕ್ಫ್ ಮೂಲಕ ರೈತರ, ಮಂದಿರಮಸೀದಿಗಳ ಸಾರ್ವಜನಿಕ ಆಸ್ತಿಗಳನ್ನು ಹಗಲು ದರೋಡೆ ಮಾಡುವ ಹುನ್ನಾರ ನಡೆಸುತ್ತಿದೆ. ಕಾಂಗ್ರೆಸ್ ಸರಕಾರ ವಿಜಯಪುರ ಜಿಲ್ಲೆ ಸೇರಿ ರಾಜ್ಯದಲ್ಲಿ ಎದ್ದಿರುವ ವಕ್ಫ್ ಗೊಂದಲವನ್ನು 15 ದಿನಗಳಲ್ಲಿ ಬಗೆಹರಿಸದಿದ್ದರೆ ಬಿಜೆಪಿ ರೈತರೊಂದಿಗೆ ಒಗ್ಗೂಡಿಸಿಕೊಂಡು ರಾಜ್ಯಾದ್ಯಾಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಸಂಸದ ಗೋವಿಂದ ಕಾರಜೋಳ ಕಾಂಗ್ರೆಸ್ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆಯಲ್ಲಿ ವಕ್ಫ್ ಕಾಯಿದೆ ತಿದ್ದುಪಡಿ ಮಸೂದೆ ಮಂಡಿಸಿದ್ದಕ್ಕೆ ಕಾಂಗ್ರೆಸ್ಸಿಗರು ವಿರೋಧಿಸಿದರು. ಹಾಗಾಗಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಕಳಿಸಿದ್ದು, ಅದರ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡಿ ಮುಂದಿನ ಅಧಿವೇಶನದಲ್ಲಿ ಮಂಡನೆಗೆ ಸಿದ್ಧತೆ ನಡೆದಿದೆ ಎಂದರು. ವಿಜಯಪುರದಲ್ಲಿ 4370 ಆಸ್ತಿಗಳ 14,201 ಎಕರೆಗೆ ಸಂಬಂಧಿಸಿದಂತೆ ಪ್ರಕರಣಗಳಿವೆ. ಮುಲ್ಲಾ, ಮೌಲ್ವಿಗಳು, ಸಣ್ಣ ಕುಲ ಕಸುಬ ಮಾಡುತ್ತಾ ದೇವರ ಪೂಜೆ ಮಾಡುವವರಿಗೆ ಜಮೀನು ಕೊಟ್ಟಿದ್ದಾರೆ. ರೈತರ ಆಸ್ತಿಯನ್ನು ವಕ್ಫ್ ಹೆಸರಲ್ಲಿ ನುಂಗುವ ಹುನ್ನಾರ ಬಲವಾಗಿ ನಡೆದಿದ್ದು, ಇಂದು ರೈತರು ಆಸ್ತಿ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ರೈತರ ರಕ್ಷಣೆಗೆ ಬಿಜೆಪಿ ಸಿದ್ಧವಿದೆ. ಮಂದಿರ, ಮಸೀದಿಗಳನ್ನೂ ಕಳೆದುಕೊಳ್ಳುವ ಭೀತಿಯಲ್ಲಿರುವವರ ಪರವಾಗಿ ನಾವು ನಿಲ್ಲುತ್ತೇವೆ ಎಂದರು.

ಸುದ್ದಿಗಾರರೊಂದಿಗೆ ಸಂಸದ ಗೋವಿಂದ ಕಾರಜೋಳ ಮಾತನಾಡಿದರು.

ಶಾಸಕ ಯತ್ನಾಳ, ಸಂಸದ ಜಿಗಜಿಣಗಿ ಗೈರು

ಮಂಗಳವಾರ ಬಿಜೆಪಿ ತಂಡ ಜಿಲ್ಲೆಯಲ್ಲಿ ಸಂಚರಿಸಿ ಮಠಗಳಿಗೆ ಹಾಗೂ ಹಳ್ಳಿಗಳಲ್ಲಿ ಹೋಗಿ ರೈತರಿಂದ ಅಹವಾಲು ಸ್ವೀಕರಿಸಿದರು. ಯಾರೊಬ್ಬರ ಜಮೀನು ಕೂಡ ವಕ್ಫ್‌ಗೆ ಹೋಗಲು ಬಿಡುವುದಿಲ್ಲ, ಬಿಜೆಪಿ ನಿಮ್ಮೊಂದಿಗೆ ಇದೆ ಎಂದು ಧೈರ್ಯ ತುಂಬಿದರು. ಜಿಲ್ಲೆಯಲ್ಲಿ ವಕ್ಫ್ ಆಸ್ತಿ ಗೊಂದಲ ಹಾಗೂ ರೈತ ಸಮುದಾಯ ಆತಂಕ ಹೋಗಲಾಡಿಸಿ, ರೈತರ ಪರ ಧ್ವನಿಯಾಗಲು ಹಾಗೂ ಅವರ ಅಹವಾಲು ಆಲಿಸಲು ಮಾಜಿ ಡಿಸಿಎಂ ಸಂಸದ ಗೋವಿಂದ ಕಾರಜೋಳ ನೇತೃತ್ವದ ತಂಡದಲ್ಲಿ ಯತ್ನಾಳ ಹಾಗೂ ಜಿಗಜಿಣಗಿ ಅವರು ಇಡಿ ತಂಡದೊಂದಿಗೆ ಎಲ್ಲಿಯೂ ಬರದೆ ಗೈರಾಗಿ ಉಳಿದಿದ್ದರು.

ಕಾವೇರಿದ ವಕ್ಫ್ ಕಿಚ್ಚು

← ಮೊದಲಪುಟದಿಂದ

ವಿಜಯಪುರ ಜಿಲ್ಲೆಯ ಸಿಂದಗಿಯ ವಿರಕ್ತ ಮಠದ ಸರ್ವೆ ನಂ. 1020ರ ಆಸ್ತಿ ಇದೀಗ ಖಬರಸ್ಥಾನ ವಕ್ಫ್ ಬೋರ್ಡ್ ಎಂದು ನೋಂದಣಿ ಆಗಿದೆ. ಗೋವಿಂದ್ ಕಾರಜೋಳ ನೇತೃತ್ವದ ಬಿಜೆಪಿ ತಂಡ ಮಠಕ್ಕೆ ಭೇಟಿ ನೀಡಿದ್ದು, ಪಹಣಿ ಪರಿಶೀಲಿಸಿದ್ದು, ಇದೀಗ ಮತ್ತೊಂದು ಸುತ್ತಿನ ವಿವಾದಕ್ಕೆ ಕಾರಣ ವಾಗಿದೆ. ವಿರಕ್ತಮಠದ ಬಸವಪ್ರಭು ಶ್ರೀಗಳು ಬಿಜೆಪಿ ನಾಯಕರಿಗೆ ಸೂಕ್ತ ಮಾಹಿತಿ ನೀಡುತ್ತಿದ್ದಾರೆ. ಆದರೆ ಈ ನಡುವೆ ಯಾವ ರೈತರನ್ನೂ ತಮ್ಮ ಜಮೀನುಗಳಿಂದ ಒಕ್ಕಲೆಬ್ಬಿಸುವುದಿಲ್ಲ ಹಾಗೂ ರೈತರಿಗೆ ನೋಟಿಸ್ ನೀಡಲಾಗಿದ್ದರೆ, ಅದನ್ನು ವಾಪಸು ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಪಡಿಸಿದ್ದಾರೆ. ವಿಜಯಪುರ, ಯಾದಗಿರಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ವಕ್ಫ್ ಆಸ್ತಿ ಎಂದು ರೈತರಿಗೆ ನೋಟಿಸ್ ನೀಡಿರುವ ಸಂಬಂಧ ಕಂದಾಯ ಸಚಿವ ಕೃಷ್ಣಬೈರೇಗೌಡ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್, ವಕ್ಫ್ ಸಚಿವ ಜಮೀರ್ ಅಹಮದ್ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ ಎಂದರು.

ರೈತರಿಂದ ಪ್ರತಿಭಟನೆ ಆರಂಭ: ನೋಟಿಸ್ ವಿಚಾರಕ್ಕೆ ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲೇ ರೈತರು ಹೋರಾಟ ಆರಂಭಿಸಿದ್ದು, ಕಚೇರಿ ಮುಂದೆ ದೀಪಹಚ್ಚಿ ವಾಸ್ತವ್ಯ ಹೂಡಲಿದ್ದಾರೆ ಎನ್ನಲಾಗಿದೆ. ಹೋರಾಟಕ್ಕಾಗಿ ಈಗಾಗಲೇ ಜಿಲ್ಲೆಯ ವಿವಿಧ ಭಾಗಗಳಿಂದ ನೂರಾರು ರೈತರು ಆಗಮಿಸಿದ್ದಾರೆ. ಈ ಪ್ರಕರಣ ಚಿತ್ರದುರ್ಗಕ್ಕೂ ವ್ಯಾಪಿಸಿಕೊಂಡಿದ್ದು ಎಸ್‌ಸಿ ಸಮುದಾಯಕ್ಕೆ ಸೇರಿದ್ದ ಭೂಮಿ ವಕ್ಫ್‌ಗೆ ಸೇರಿಸಬೇಕೆಂದು ನರಸಭೆಗೆ ಜಾಮಿಯಾ ಮಸೀದಿ ಮನವಿ ಮಾಡಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಇದಲ್ಲದೆ ಬೀದರ್, ಯಾದಗಿರಿ ಭಾಗದಲ್ಲೂ ಕೆಲವೆಡೆ ನೋಟಿಸ್ ನೀಡಲಾಗಿದ್ದು, ಪ್ರಕರಣ ಮತ್ತಷ್ಟು ಕಗ್ಗಂಟಾಗಲಿದೆ ಎನ್ನಲಾಗಿದೆ.

ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ಕೆಟ್ಟ ರಾಜಕಾರಣ ಮಾಡುತ್ತಿದೆ. ಆದರೆ 2019ರಿಂದ 2022ರವರೆಗೆ ರಾಜ್ಯದಲ್ಲಿ ಅವರದ್ದೇ ಸರಕಾರವಿದ್ದಾಗ ವಿಜಯಪುರ ಜಿಲ್ಲೆಯ ರೈತರಿಗೆ ವಕ್ಫ್ ಮಂಡಳಿ ಮೂಲಕ ನೋಟಿಸ್ ಕೊಡಲಾಗಿತ್ತು. ಆಗ ಇರದ ಹಿಂದೂ ಪ್ರೇಮವನ್ನು ಈಗ ಕಪೋಲಕಲ್ಪಿತ ಸುಳ್ಳುಗಳ ಮೂಲಕ ವ್ಯಕ್ತಪಡಿಸಲಾಗುತ್ತಿದೆ.
-ಎಂ.ಬಿ.ಪಾಟೀಲ್ ಸಚಿವ

ಉಸ್ತುವಾರಿ ಸಚಿವರ ಸೂಚನೆ ಮೇರೆಗೆ ನಮ್ಮ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಲಾಗಿದೆ. ಭೂ ಸುಧಾರಣೆ ಕಾಯ್ದೆ, ವಕ್ಫ್ ಇನಾಮ್ ಅಡಿಯಲ್ಲಿ ರೈತರಿಗೆ ಹೋಗಿರುವ ಜಮೀನುಗಳ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಅವುಗಳ ಪ್ರತ್ಯೇಕ ಪಟ್ಟಿಮಾಡಿ ಸಚಿವರಿಗೆ ನೀಡಲಾಗುವುದು. ಬಳಿಕ ಅದು ಸರಕಾರದ ಮಟ್ಟದಲ್ಲಿ ನಿರ್ಧಾರ ಆಗಲಿದೆ.
-ಟಿ.ಭೂಬಾಲನ್ ವಿಜಯಪುರ ಜಿಲ್ಲಾಧಿಕಾರಿ

ರಾಜ್ಯ ಸರಕಾರ ಮಣ್ಣು ತಿನ್ನುವ ಕೆಲಸ ಮಾಡುತ್ತಿದೆ. ಅಲ್ಪಸಂಖ್ಯಾತರನ್ನು ಎತ್ತಿಕಟ್ಟಿ ದೇಶದಲ್ಲಿ ಜಾತಿ, ಧರ್ಮದ ಆಧಾರದಲ್ಲಿ ವಿಭಜಿಸುವ ಕೆಲಸ ಕಾಂಗ್ರೆಸ್ ಹಿಂದಿನಿಂದಲೂ ಮಾಡುತ್ತಾ ಬಂದಿದೆ. ಸಚಿವ ಜಮೀರ್ ನೇತೃತ್ವದಲ್ಲಿ ಕಾಂಗ್ರೆಸ್ ರಾಜ್ಯಕ್ಕೆ ಬೆಂಕಿ ಹಚ್ಚುತ್ತಿದೆ. ನಾವಿದರ ವಿರುದ್ಧ ಹೋರಾಟ ಮಾಡುತ್ತೇವೆ. ರೈತರಿಗೆ ಧ್ವನಿಗೂಡಿಸುತ್ತೇವೆ.
- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ದೇಶಾದ್ಯಂತ ಮುಸ್ಲಿಂ ಸಮುದಾಯವನ್ನು ತಮ್ಮ ಪಕ್ಷದ ಮತಬ್ಯಾಂಕ್ ಆಗಿ ಹಿಡಿದಿಟ್ಟುಕೊಳ್ಳಲು 2013ರಲ್ಲಿ ಸೋನಿಯಾ ಗಾಂಧಿ ಮತ್ತು ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ವಕ್ಫ್ ಬೋರ್ಡ್‌ಗೆ ಸುಪ್ರೀಂ ಪರ್ವ ಕೊಟ್ಟಿದ್ದಾರೆ.
- ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

ಕಾಂಗ್ರೆಸ್ ಪ್ರಚಾರ ಉಸ್ತುವಾರಿ ನೇಮಕ

ಬೆಂಗಳೂರು: ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ಉಪ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್ ಕ್ಷೇತ್ರಗಳಿಗೆ ಪ್ರಚಾರ ಉಸ್ತುವಾರಿಗಳನ್ನು ನೇಮಿಸಿ ಆದೇಶ ಹೊರಡಿಸಿದೆ. ಶಿಗ್ಗಾವಿ ಕ್ಷೇತ್ರಕ್ಕೆ ಸಚಿವ ಈಶ್ವರ್ ಖಂಡ್ರೆ, ಎಚ್.ಕೆ ಪಾಟೀಲ್, ಜಮೀರ್ ಅಹ್ಮದ್ ಖಾನ್, ಲಕ್ಷ್ಮೀ ಹೆಬ್ಬಾಳ್ಕರ್, ಆರ್.ಬಿ. ತಿಮ್ಮಾಪುರ, ಎಸ್.ಎಸ್ ಮಲ್ಲಿಕಾರ್ಜುನ, ಬೈರತಿ ಸುರೇಶ್ ಮತ್ತು ಶಿವರಾಜ್ ತಂಗಡಗಿ ಅವರನ್ನೊಳಗೊಂಡ ತಂಡವನ್ನು ಪಕ್ಷ ನೇಮಿಸಿದೆ. ಸಂಡೂರು ಕ್ಷೇತ್ರಕ್ಕೆ ಸಚಿವ ಎಚ್. ಮುನಿಯಪ್ಪ, ಕೆ.ಜೆ ಜಾರ್ಜ್, ಸಂತೋಷ್ ಲಾಡ್, ನಾಗೇಂದ್ರ, ಜಮೀರ್ ಅಹ್ಮದ್, ಪ್ರಿಯಾಂಕ್ ಖರ್ಗೆ ಸೇರಿ ಶಾಸಕರ ತಂಡವನ್ನು ರಚಿಸಲಾಗಿದೆ. ಚನ್ನಪಟ್ಟಣಕ್ಕೆ ಸಚಿವ ರಾಮಲಿಂಗ ರೆಡ್ಡಿ, ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ಶಾಸಕರು ಮತ್ತು ಸಂಸದರನ್ನೊಳಗೊಂಡ ತಂಡವನ್ನು ಚನ್ನಪಟ್ಟಣ ಕ್ಷೇತ್ರಕ್ಕೆ ನೇಮಕ ಮಾಡಲಾಗಿದೆ.

ವಾಹನ ಡಿಕ್ಕಿ: ಕಾಡಾನೆ ಸಾವು

ಬೆಂಗಳೂರು: ಅಪರಿಚಿತ ವಾಹನ ಡಿಕ್ಕಿ ಹೊಡೆದು ಕಾಡಾನೆ ಮೃತಪಟ್ಟ ಘಟನೆ ಬನ್ನೇರುಘಟ್ಟ ತಟ್ಟೆಕೆರೆ ಅರಣ್ಯ ವ್ಯಾಪ್ತಿಯ ಹುರುಗನ ದೊಡ್ಡಿಯಲ್ಲಿ ನಡೆದಿದೆ. ಮಂಗಳವಾರ ಬೆಳಗ್ಗೆ ಕಾಡಾನೆ ರಸ್ತೆ ದಾಟುತ್ತಿದ್ದಾಗ ವಾಹನ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಕಾಡಾನೆ ಎರಡು ಗಂಟೆಗೂ ಹೆಚ್ಚು ಕಾಲ ರಸ್ತೆಯಲ್ಲೇ ನರಳಾಡಿದೆ.

ಅನಧಿಕೃತ ಸ್ಕ್ಯಾನಿಂಗ್: ಸಿಕ್ಕಿಬಿದ್ದ ಮಹಿಳಾ ವೈದ್ಯೆ

ಕೋಲಾರ: ಸೀಜ್ ಮಾಡಿದ್ದ ಸ್ಕ್ಯಾನಿಂಗ್ ಸೆಂಟರ್‌ನ್ನು ಅನಧಿಕೃತವಾಗಿ ಮರು ಆರಂಭಿಸಿದ್ದ ಮಹಿಳಾ ವೈದ್ಯರನ್ನು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಂದನ್ ಕುಮಾರ್ ನೇತೃತ್ವದ ತಂಡವು ಕಾರ್ಯಾಚರಣೆ ಮೂಲಕ ರೆಡ್ ಹ್ಯಾಂಡ್ ಆಗಿ ಹಿಡಿದು ಕೇಂದ್ರಕ್ಕೆ ಬೀಗ ಜಡಿದಿದ್ದಾರೆ.

ಕೆಜಿಎಫ್ ಸಮೀಪದ ದಾಸರಹೊಸಹಳ್ಳಿ ದೀಪಕ್ ನರ್ಸಿಂಗ್ ಹೋಂನ ಡಾ.ಸರಸ್ವತಿ ಅವರು ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಕಾರಣ 2 ವರ್ಷದ ಹಿಂದೆ ಡಾ.ಚಂದನ್ ಕುಮಾರ್ ಸೀಜ್ ಮಾಡಿದ್ದರು. ಆದರೆ ಡಾ.ಸರಸ್ವತಿ ಅವರು ಅನಧಿಕೃತವಾಗಿ ಪುನಃ ಸ್ಕ್ಯಾನಿಂಗ್ ಮಾಡುತ್ತಿದ್ದಾರೆಂಬ ಗುಪ್ತ ಮಾಹಿತಿ ಚಂದನ್ ಅವರ ಗಮನಕ್ಕೆ ಬಂದಿತ್ತು. ಈ ಬಗ್ಗೆ ಕಾರ್ಯಾಚರಣೆ ಮಾಡಲು ಮುಂದಾದ ಚಂದನ್ ಅವರು ಮಂಗಳವಾರ ಗರ್ಭಿಣಿ ಮಹಿಳೆಯೊಬ್ಬರಿಗೆ 20 ಸಾವಿರ ರು. ಹಣ ಕೊಟ್ಟು ದೀಪಕ್ ನರ್ಸಿಂಗ್ ಹೋಂಗೆ ಸ್ಕ್ಯಾನಿಂಗ್‌ಗಾಗಿ ಕಳುಹಿಸಿ 100 ಮೀಟರ್ ದೂರದಲ್ಲಿ ಕುಳಿತಿದ್ದರು. ಗರ್ಭಿಣಿ ಜತೆಗೆ ತೆರಳಿದ್ದ ಮಹಿಳೆಯಿಂದ ಸಿಗ್ನಲ್ ಬಂದ ತಕ್ಷಣ ದಿಢೀರ್ ದಾಳಿ ನಡೆಸಿದಾಗ ಮತ್ತೊಂದು ಮಿಷನ್ ಮೂಲಕ ಸ್ಕ್ಯಾನಿಂಗ್ ಮಾಡುತ್ತಿರುವುದು ಪತ್ತೆ ಆಗಿದೆ.

ಕಾರ್ಯಾಚರಣೆಯಲ್ಲಿ ಬೆಂಗಳೂರು ಕೇಂದ್ರ ಕಚೇರಿಯ ಉಪ ನಿರ್ದೇಶಕ ಡಾ. ವಿವೇಕ್ ದೊರೈ, ರೇಡಿಯಾಲಜಿಸ್ಟ್ ಡಾ.ರಾಜೇಂದ್ರ, ಸಿಬ್ಬಂದಿ ಕೀರ್ತಿ, ಸರವಣ ಇದ್ದರು.

ಕೋಲಾರದ ದಾಸರಹೊಸಹಳ್ಳಿ ದೀಪಕ್ ನರ್ಸಿಂಗ್ ಹೋಂನ ಡಾ.ಸರಸ್ವತಿ ಅನಧಿಕೃತ ಸ್ಕ್ಯಾನಿಂಗ್ ಜತೆ ಸಿಕ್ಕಿ ಬಿದ್ದಿರುವುದು.

SBI The banker to every Indian

ಭಾರತೀಯ ಸ್ಟೇಟ್ ಬ್ಯಾಂಕ್
ಆವರಣ ಮತ್ತು ಸಂಪದ ವಿಭಾಗ
ಸ್ಥಳೀಯ ಪ್ರಧಾನ ಕಛೇರಿ
IIನೇ ಮಹಡಿ, ಅನೆಕ್ಸ್ ಬಿಲ್ಡಿಂಗ್
ನಂ.65, ಸಂತ ಮಾರ್ಕರ ರಸ್ತೆ
ಬೆಂಗಳೂರು 560 001

ಟೆಂಡರ್ ಆಮಂತ್ರಿಸುವ ಸೂಚನೆ

ಭಾರತೀಯ ಸ್ಟೇಟ್ ಬ್ಯಾಂಕ್ 2025ನೇ ಸಾಲಿನ ಬ್ಯಾಂಕ್ ಉಪಯೋಗಕ್ಕಾಗಿ ಒಟ್ಟು ವೆಚ್ಚದ ಆಧಾರದ ಮೇಲೆ ಕ್ಯಾಲೆಂಡರ್‌ಗಳ ಮುದ್ರಣ ಮತ್ತು ವಿತರಣೆಗಾಗಿ ಈ ಮೊದಲು ಸಾರ್ವಜನಿಕ ವಲಯದ ಉದ್ಯಮ/ವಾಣಿಜ್ಯಿಕ ಬ್ಯಾಂಕ್‌ಗಳಿಗಾಗಿ ಯಶಸ್ವಿಯಾಗಿ ಮುದ್ರಿಸಿಕೊಟ್ಟಿರುವ ಕರ್ನಾಟಕ ಮೂಲದ ಮುದ್ರಕರಿಂದ ಎರಡು ಬಿಡ್ ವ್ಯವಸ್ಥೆಯಲ್ಲಿ ಇ-ಟೆಂಡರನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಭಾರತೀಯ ಸ್ಟೇಟ್ ಬ್ಯಾಂಕ್ ಅಡಿಯಲ್ಲಿ ನಮ್ಮ ವೆಬ್ ಸೈಟ್ www.bank.sbi>SBI in the News> Procurement News ಗೆ ಲಾಗಿನ್ ಆಗಿ, ಅಥವಾ ಆವರಣ ಮತ್ತು ಸಂಪದ ವಿಭಾಗ, ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು 080-25944120 ಸಂಪರ್ಕಿಸಿ. ಬ್ಯಾಂಕ್ ಯಾವುದೇ ಕಾರಣವನ್ನು ನೀಡದೆ ಯಾವುದೇ/ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ 20.11.2024 ಮಧ್ಯಾಹ್ನ 3.00 ಘಂಟೆಯವರೆಗೆ.

ಸಹಾಯಕ ಪ್ರಧಾನ ವ್ಯವಸ್ಥಾಪಕರು,
ಆವರಣ ಮತ್ತು ಸಂಪದ ವಿಭಾಗ
ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಸಾಮಾಜಿಕ ಅರಣ್ಯ ವಿಭಾಗ, ಕಾರವಾರ
ಕೋಡಿಭಾಗ, ಸಾಗರದರ್ಶನ ಕಲ್ಯಾಣ ಮಂಟಪ ಎದುರುಗಡೆ, ಕಾರವಾರ, ಉ.ಕ-581303
ದೂರವಾಣಿ: 08382-296176 ಇ-ಮೇಲ್: dcfsfkwr@gmail.com
ನಂ. ಎ4/ಕಟ್ಟಡ/ವಿವ/ಇ-ಟೆಂಡರ್/2024-25/595 ದಿನಾಂಕ: 28-10-2024

ಪತ್ರಿಕಾ ಪ್ರಕಟಣೆ

2024-25ನೇ ಸಾಲಿಗೆ ಕಾರವಾರ ಸಾಮಾಜಿಕ ಅರಣ್ಯ ವಿಭಾಗದ ಅಧೀನ ವಲಯಗಳ ವಲಯ ಕಚೇರಿ ಹಾಗೂ ವಸತಿಗೃಹ ಕಟ್ಟಡ ನಿರ್ಮಾಣದ ಕುರಿತು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಇ-ಟೆಂಡರ ಕರೆಯಲಾಗಿರುತ್ತದೆ. ಇ-ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 19-11-2024 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ಕಾರವಾರ ರವರನ್ನು ಸಂಪರ್ಕಿಸುವದು (ದೂರವಾಣಿ ಸಂಖ್ಯೆ: 08382-296176 ಮತ್ತು ಇ-ಮೇಲ್ ವಿಳಾಸ: dcfsfkwr@gmail.com)

ಸಹಿ/- (ಮಂಜುನಾಥ ಜಿ. ನಾವಿ. ಕ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಜಿಲ್ಲಾ ಪಂಚಾಯತ್, ಕಾರವಾರ
DIPR/KWR/MCA/456/24-25 Dt.29.10.2024

REVENUE COMMISSIONERATE
Room No: 711, 7th Floor, Second Gate, Multi-Storied Building, Dr. B.R. Ambedkar Veedhi,Bangalore - 560001.
No: RC-CFSOADMN(ADM)/120/2024 Date: 29.10.2024

E-TENDER NOTIFICATION

The Tender Schedule is as mentioned below:

Tender Reference No	RCO/SERV01/2024-25
Date from which Bid Document is ready for download through e-procurement portal of Government of Karnataka	30.10.2024
Last date for seeking clarification if any	05.11.2024 @ 11-00 AM
Date of Pre-Bid meeting	05.11.2024 @ 03-00 PM
Last date and time for uploading of tender in e-Procurement platform	11.11.2024 up to 17-30 PM
Date and Time of opening of tenders: Technical Bid & Technical Evaluation	13.11.2024 @ 11-00 PM
Date and Time of opening of Tenders: Commercial Bid	16.11.2024 @ 11-00 PM
Contact Person for Queries	Tahsildar, Admin, Revenue Commissionerate, Phone No: 080-22032691 E-mail: commrrd@gmail.com
Place of Opening of Tenders and Address for Communication	Revenue Commissionerate, Room No: 711, 7th floor, 2nd Gate, M.S.Building, Dr.B.R.Ambedkar Veedhi, Bengaluru-560001 Phone No: 080-22032691

Note: Completed Tender shall be uploaded through KPP PORTAL only in the manner described under instructions to Tenderers of RFP Documents on or before the last date & time stipulated.

Sd/- Tahsildar (Admin),
Revenue Commissionerate
DIPR/CP/SPAN/2820/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ,
ವಿಜಯಪುರ ವಿಭಾಗ, ವಿಜಯಪುರ
ಸಂಖ್ಯೆ: ಕಕರಸಾ/ವಿವಿ/ಸಂಚಾರ/ವಾಣಿಜ್ಯ/3067/2024-25 ದಿನಾಂಕ:28.10.2024

ಇ-ಟೆಂಡರ್ ಪ್ರಕಟಣೆ ಸಂಖ್ಯೆ: 713/23/ಇ-21
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು / ತೆರೆದ ಸ್ಥಳಗಳು & ಉಪಹಾರ ಗೃಹಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತವೆ.
1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 11.11.2024 ರ 17.30 ಗಂಟೆಯ ವರೆಗೆ.**
2) ಆನ್‌ಲೈನ್ ಮೂಲಕ ಇ-ಟೆಂಡರ್ ತೆರೆಯುವ **ದಿನಾಂಕ:13.11.2024 ರಂದು ಬೆಳಿಗ್ಗೆ 10.00 ಗಂಟೆಯ ನಂತರ.**
ಟೆಂಡರ್ ಪ್ರಕಟಣೆಯ ಪ್ರತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ರವರ ಹೊಸ ತಂತ್ರಾಂಶ https://kppp.karnataka.gov.in ದಿಂದ ಪಡೆಯಬಹುದಾಗಿದೆ ಅಥವಾ D.T.O ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ವಿಷಯ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಬಂದು ವಿಚಾರಿಸಬಹುದಾಗಿದೆ ವಿಳಾಸ,ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗದ ವಿಭಾಗೀಯ ಕಚೇರಿ, ಸಂಚಾರ ಶಾಖೆಯಲ್ಲಿ ಬಂದು ವಿಚಾರಿಸಬಹುದಾಗಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ಸಂಸ್ಥೆ, ವಿಜಯಪುರ ವಿಭಾಗ
ವಾಸಾಸಂಇ/ವಿಜಯಪುರ/362/ಕೆಎಸ್‌ಎಂಸಿಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ,
12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ,
ಬಿಬಿಎಂಪಿ, ಬೆಂಗಳೂರು - 560086
ನಂ.: ಕಾಪಾಅ/ಮಲಪು/ಟೆಂಡರ್/ಇ-ಪ್ರೊಕ್/06/2024-25 ದಿನಾಂಕ: 28.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಮಹಾಲಕ್ಷ್ಮೀಪುರಂ), ಬಿಬಿಎಂಪಿ, ಬೆಂಗಳೂರು ಇವರು **ಮಹಾಲಕ್ಷ್ಮೀಪುರಂ ವಿಭಾಗದಲ್ಲಿ ಅನಧಿಕೃತ ರಚನೆಗಳು ಮತ್ತು ಕಟ್ಟಡದ ಅನಧಿಕೃತ ಭಾಗವನ್ನು ದರ ಒಪ್ಪಂದದ ಆಧಾರದ ಮೇಲೆ ತೆಗೆದುಹಾಕಲು** ಪ್ರತಿಷ್ಠಿತ ಸಂಸ್ಥೆ / ಏಜೆನ್ಸಿಗಳಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.
ಇಎಂಡಿ ಮತ್ತು ಅರ್ಜಿ ಶುಲ್ಕದೊಂದಿಗೆ ಕೇವಲ ಒಂದು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿರುತ್ತದೆ.
ವೇಳಾಪಟ್ಟಿ: (1) ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಮತ್ತು ಕರಡು ಒಪ್ಪಂದ ಸೇರಿದಂತೆ ಬಿಡ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ **30.10.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ದಸ್ತಾವೇಜಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಕಟಣೆಗಳು, ಬದಲಾವಣೆಗಳು ಮತ್ತು ತಿದ್ದುಪಡಿಗಳು ಇದ್ದಲ್ಲಿ ಅವುಗಳೆಲ್ಲವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. (2) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಪೂರ್ವಭಾವಿ ಸಭೆ: **04.11.2024ರ ಮಧ್ಯಾಹ್ನ 3:00 ಗಂಟೆಗೆ.** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.11.2024ರ ಸಂಜೆ 4:00 ಗಂಟೆವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.11.2024ರ ಸಂಜೆ 4:30 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.**
ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ (ಮಧ್ಯಾಹ್ನ 3:00 ಗಂಟೆಯಿಂದ ಸಂಜೆ 5:00 ಗಂಟೆವರೆಗೆ) ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾಲಕ್ಷ್ಮೀಪುರಂ ವಿಭಾಗ, ಬಿಬಿಎಂಪಿ

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcbellary@gmail.com,
website : https://vims.karnataka.gov.in
ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ-1/ಟೆಂಡರ್/06/2024-25ದಿನಾಂಕ:28.10.2024

ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಬಳ್ಳಾರಿಯ ಕಾಲೇಜು ಮತ್ತು ಸಮೂಹ ಆಸ್ಪತ್ರೆಗಳಿಗೆ ಗಣಕಯಂತ್ರ ನಿರ್ವಾಹಕ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ಒಂದು-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ:28.10.2024ರಿಂದ 11.11.2024 ಸಂಜೆ 5.00 ಗಂಟೆಯ ಒಳಗಾಗಿಸಲ್ಲಿ ಸಲುಕೋರಿದೆ. ಟೆಂಡರಿನ ಅಂದಾಜುಮೊತ್ತ ರೂ.166.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನವೆಬ್ ಸೈಟ್ www.bmcrc.karnataka.gov.in. ನಲ್ಲಿಪಡೆಯಬಹುದಾಗಿದೆ.

ಸಹಿ/- ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/573/ಕೆಎಸ್‌ಎಂಸಿಎ/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಛೇರಿ (ಯೋಜನೆ) 3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂ. ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ-ಡಿಸಿಡಬ್ಲ್ಯೂ)/1463/2024-25		ದಿನಾಂಕ : 28.10.2024
1.	ವೈಟ್ ಫೀಲ್ಡ್ ಮೆಟ್ರೋ ಸ್ಟೇಷನ್ ರೀಚ್-1ಬಿ ಯಿಂದಾಚೆಗೆ ಮೆಟ್ರೋ ಮಾರ್ಗವನ್ನು ವಿಸ್ತರಿಸಲು ಮತ್ತು ಬಿಎಂಆರ್‌ಸಿಎಲ್ 2ನೇ ಘಟ್ಟದ ವೈಟ್‌ಫೀಲ್ಡ್ ಡಿಪೋನಲ್ಲಿ 3ನೇ ಮಾರ್ಗವನ್ನು ವಿಸ್ತರಣೆ ಮಾಡುವುದಕ್ಕೆ ಸೌಲಭ್ಯ ಕಲ್ಪಿಸಲು ಹಾಲಿ ಇರುವ ನೀರು ಸರಬರಾಜು ಜಾಲದ ಮಾರ್ಗವನ್ನು ಬೇರೆಡೆಗೆ ಸ್ಥಳಾಂತರಗೊಳಿಸುವ ಕಾಮಗಾರಿ.	ರೂ. 3,67,41,000/- ; ರೂ. 5.65 ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 11.11.2024 ರಂದು ಮಧ್ಯಾಹ್ನ 12.00 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 12.11.2024 ರ ಮಧ್ಯಾಹ್ನ 1.00 ಗಂಟೆಗೆ.

ಸಹಿ/- ಮುಖ್ಯ ಅಭಿಯಂತರರು (ಯೋಜನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/2822/Zen/2024-25

ನಗರಸಭಾ ಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ಆಶಾ/ಸಿವಿಲ್ ವರ್ಕ್ಸ್(ಡಿ.ಪಿ.ಆರ್)/ಎಸ್.ಬಿ.ಎಂ/ಟೆಂಡರ್/2024-25
ದಿನಾಂಕ: 25.10.2024

ಟೆಂಡರ್ ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

ಸ್ವಚ್ಛ ಭಾರತ್ ಮಿಷನ್ ಯೋಜನೆ(ಎಸ್.ಬಿ.ಎಂ) ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಸಲ್ಲಿಸಬಹುದು. 1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 31.10.2024** ಮಧ್ಯಾಹ್ನ 2.00 ಗಂಟೆಗೆ, 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 12.11.2024** ಸಂಜೆ 5.00 ಗಂಟೆ ವರೆಗೆ. 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.11.2024** ಸಂಜೆ 5.10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.11.2024. ಸಂಜೆ 5.10ಕ್ಕೆ, **INDENT No. DMA/2024-25/BD/WORK_INDENT31287** ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜೂ ಮೊತ್ತ **ರೂ. 498.95 ಲಕ್ಷ,** ಠೇವಣಿ(90 ದಿನಗಳ ವ್ಯಾಲಿಡಿಟಿ) **ರೂ. 6,29,000.00** ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ-ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕೆಲಸದಂದು ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಹೊಸಪೇಟೆ
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/335

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ: ಬೆಂಅಪ್ರಾ/ನಯೋಸ/CLU-171/1815/2024-25 ದಿನಾಂಕ: 28.10.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ರವಿಕುಮಾರ್ ಮತ್ತು ಗಣೇಶ್ ಕೆ.	ಬೆಂಗಳೂರು ಪೂರ್ವ	ಬಿದರಹಳ್ಳಿ	ಆದೂರು	130/1	2A-00G	ವ್ಯವಸಾಯ	ವಸತಿ
					130/2	2A-00G		
					131/1(P)	1A-06G		
					131/2	2A-00G		
					Total	7A-06G		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಕನ್ನಡಿಗರೇ ಎಚ್ಚರ..ಎಚ್ಚರ..ಎಚ್ಚರ..! ನಿಮ್ಮ ಬಳಿ ಸ್ವಂತ ಮನೆ, ಜಮೀನು , ಸೈಟ್ ಇದೆಯೇ..? ಪಕ್ಕದಲ್ಲಿ ದರ್ಗಾ ಇದೆಯೇ..? ಈ ಕೂಡಲೇ ನಿಮ್ಮ ಆಸ್ತಿಗಳ ಮೂಲ ದಾಖಲೆಗಳನ್ನು ಕೂಡಲೇ ಪರಿಶೀಲಿಸಿಕೊಳ್ಳಿ..!

ಧಾರವಾಡಿ, ಬೆಂಗಳೂರು

ಏನೂ ಇಲ್ಲದೇ ಶೇ.40 ಕಮೀಷನ್ ಅಂತ ಡಂಗೂರು ಹೊಡೆದಾಗಲೇ ನೀವು ಏನೂ ಕಿಸೀಲಿಲ್ಲ...ಈ ಸರಕಾರ ಇಷ್ಟೆಲ್ಲಾ ಮಾಡ್ತಿದ್ರೂ ನೀವು ಹೊಂದಾಣಿಕೆ ಮಾಡಿಕೊಂಡು ಒಳ ರಾಜಕೀಯ ಮಾಡಿಕೊಂಡು ಇರಿ..!

ದೂರು ದುಮ್ಮಾನ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು?

- ಗುಲ್ಬರ್ಗಾ ವಿವಿ ಮಹಿಳಾ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಶುದ್ಧ ಕುಡಿಯುವ ನೀರು, ಪೌಷ್ಠಿಕ ಆಹಾರ ಸೇರಿದಂತೆ ಹಲವು ಸಮಸ್ಯೆ. ಆಡಳಿತ ಮಂಡಳಿಯಿಂದ ಶೋಷಣೆಯ ಆರೋಪ

- **ಸಮಸ್ಯೆ ಎಲ್ಲಿ**

ಗುಲ್ಬರ್ಗಾ ವಿಶ್ವವಿದ್ಯಾಲಯ

ಪರಿಹಾರ?

- ಊಟ ವಿತರಿಸುತ್ತಿದ್ದ ಗುತ್ತಿಗೆದಾರರ ಟೆಂಡರ್ ರದ್ದುಪಡಿಸಿ ಪ್ರತ್ಯೇಕ ವ್ಯವಸ್ಥೆಗೆ ಕ್ರಮ. ವಿದ್ಯಾರ್ಥಿನಿಯರಿಗೆ ಅಗತ್ಯವಿರುವ ಲೈಟ್, ಫ್ಯಾನ್ ವ್ಯವಸ್ಥೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಕೂಡಲೇ ಕ್ರಮ.

- **ನಿಮ್ಮ ಸಮಸ್ಯೆಯನ್ನು ತಿಳಿಸಲು**

ಇಮೇಲ್ : <officeofosdtocm@gmail.com>
ದೂರವಾಣಿ : 08022033347
ವಿಳಾಸ : ಡಾ. ವೈಷ್ಣವಿ, ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಸಾರ್ವಜನಿಕ ಕುಂದುಕೊರತೆ ವಿಭಾಗ, 241 ವಿಧಾನಸೌಧ

ಫನ್‌ತರಂಗ

– ರಘುಪತಿ ಶೃಂಗೇರಿ –

ಟ್ರಯತ್ಲಾನ್ ಸ್ಪರ್ಧೆಯಲ್ಲಿ 'ಐರನ್ ಮ್ಯಾನ್' ಪ್ರಶಸ್ತಿ ಗೆದ್ದ ಬಿಜೆಪಿ ಸಂಸದ

ಸುದ್ದಿ



ಸಮಾಚಾರ ಸಣ್ಣದಲ್ಲ

ಮುಸ್ಲಿಂ ರಾಜ್ಯ ಮಾಡಲು ಜಮೀರ್ ಯತ್ನ

ಶಿವಮೊಗ್ಗ: ಸಚಿವ ಜಮೀರ್ ಅಹ್ಮದ್ ಕರ್ನಾಟಕವನ್ನು ವಕ್ಫ್ ಮಂಡಳಿ ಮೂಲಕ ಮುಸ್ಲಿಂ ರಾಜ್ಯ ಮಾಡಲು ಹೊರಟಿದ್ದಾರೆ ಎಂದು ಶಾಸಕ ಚನ್ನಬಸಪ್ಪ ಆಕ್ರೋಶ ಹೊರ ಹಾಕಿದ್ದಾರೆ. ವಕ್ಫ್ ನಿಂದ ರೈತರಿಗೆ ನೋಟಿಸ್ ನೀಡುತ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ವಕ್ಫ್ ಉದ್ದೇಶ ಬೇರೆ ಬೇರೆ. ಆದರೆ ರೈತರ ಜಮೀನು ಕಸಿದು ವಕ್ಫ್ ಗೆ ಸೇರಿಸುವ ಕುತಂತ್ರಿ ಬುದ್ಧಿಯನ್ನು ಮುಸ್ಲಿಂಮರು ಮಾಡುತ್ತಿದ್ದಾರೆ, ಮುಸ್ಲಿಂ ಬಂಧುಗಳು ಎನ್ನಲು ನನಗೆ ಅಸಹ್ಯ ಅನ್ನಿಸಲು ಶುರುವಾಗಿದೆ ಎಂದರು.

ಡಿಕೆ ಸಹೋದರರಿಂದ ನಡೆದ ಸಂಧಾನ ಸಭೆ | ಯೋಗೇಶ್ವರ-ರಘುನಂದನ್ ರಾಮಣ್ಣ ಸಂಧಾನ

ಸೈನಿಕನಿಗಿದ್ದ ಬಂಡಾಯ ಶಮನಗೊಳಿಸಿದ ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿನ ಉಪಚುನಾವಣೆಯಲ್ಲಿ ಭಾರಿ ಕುತೂಹಲಕ್ಕೆ ಕಾರಣವಾಗಿರುವ ಚನ್ನಪಟ್ಟಣದ ಬಂಡಾಯದ ಬಿಸಿ ತಣಿಸುವ ಪ್ರಯತ್ನಕ್ಕೆ ಡಿ.ಕೆ. ಸಹೋದರರು ಮುಂದಾಗಿದ್ದು, ಮೇಲ್ನೋಟಕ್ಕೆ ಇದರಲ್ಲಿ ಯಶಸ್ವಿಯಾಗಿದ್ದಾರೆ ಎನ್ನಲಾಗಿದೆ.

ಈ ಬಾರಿ ಚನ್ನಪಟ್ಟಣದಿಂದ ಡಿ.ಕೆ.ಸುರೇಶ್ ಸ್ಪರ್ಧಿಸಿದ್ದರೆ ಟಿಕೆಟ್ ಆಕಾಂಕ್ಷಿಯಾಗಿದ್ದ ರಘುನಂದನ್ ರಾಮಣ್ಣ ಅವರು ಯೋಗೇಶ್ವರ್‌ಗೆ ಟಿಕೆಟ್ ನೀಡಿದ್ದಕ್ಕೆ ಅಸಮಾಧಾನಗೊಂಡಿದ್ದರು. ಇದೇ ಕಾರಣಕ್ಕೆ, ಚುನಾವಣಾ ಪ್ರಚಾರದಿಂದಲೂ ಅಂತರ ಕಾಯ್ದುಕೊಂಡಿದ್ದರು. ಆದರೀಗ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಡಿ.ಕೆ. ಸುರೇಶ್ ಮಧ್ಯಸ್ಥಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ ಹಾಗೂ ರಘುನಂದನ್ ರಾಮಣ್ಣ ಸಂದಾನ ಸಭೆ ನಡೆದಿದ್ದು, ಪಕ್ಷದ ಪರವಾಗಿ ಕೆಲಸ ಮಾಡಲು ರಘುನಂದನ್ ರಾಮಣ್ಣ ಒಪ್ಪಿದ್ದಾರೆ ಎನ್ನಲಾಗಿದೆ.

ಮಂಗಳವಾರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿವಾಸಕ್ಕೆ ಯೋಗೇಶ್ವರ್ ಹಾಗೂ ರಘುನಂದನ್ ರಾಮಣ್ಣ ಅವರನ್ನು ಕರೆಸಿಕೊಳ್ಳಲಾಗಿತ್ತು. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡಿದ್ದ ಬೆಂಗಳೂರು – ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ಲಾನಿಂಗ್ ಅಥಾರಿಟಿ ಅಧ್ಯಕ್ಷ ರಘುನಂದನ್ ರಾಮಣ್ಣ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ ಯೋಗೇಶ್ವರ್ ನಡುವೆ ಸಂಧಾನ ನಡೆಸಿ, ಸಮಸ್ಯೆ ಬಗೆಹರಿಸಿದ್ದಾರೆ ಎನ್ನಲಾಗಿದೆ.

ಈ ವೇಳೆ ಯೋಗೇಶ್ವರ್ ಅವರ ಪರ ಪ್ರಚಾರ ನಡೆಸಿ, ಅವರ ಗೆಲುವಿಗೆ ಶ್ರಮಿಸುವುದಾಗಿ ರಘುನಂದನ್ ರಾಮಣ್ಣ ಅವರು ಇದೇ ಸಂದರ್ಭದಲ್ಲಿ ಹೇಳಿದರು. ಕಳೆದ ಲೋಕಸಭಾ ಚುನಾವಣೆ ವೇಳೆ ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಚುನಾವಣೆ ಉಸ್ತುವಾರಿ ವಹಿಸಿಕೊಂಡಿದ್ದ ರಘುನಂದನ್ ರಾಮಣ್ಣ ಅವರು ತಳಮಟ್ಟದಿಂದ ಪಕ್ಷ ಸಂಘಟನೆ ಮಾಡಿದ್ದರು. ಚನ್ನಪಟ್ಟಣ ನಗರಸಭೆಯ 14 ಮಂದಿ ಜೆಡಿಎಸ್ ಸದಸ್ಯರು ಹಾಗೂ ಇಬ್ಬರು ಬಿಜೆಪಿ ಸದಸ್ಯರನ್ನು ಕಾಂಗ್ರೆಸ್‌ಗೆ ಕರೆತರುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಯೋಗೇಶ್ವರ್ ಹಾಗೂ ರಘುನಂದನ್ ರಾಮಣ್ಣ ನಡುವೆ ಸಂಧಾನ ಸಭೆ ನಡೆಯಿತು.

- ಚನ್ನಪಟ್ಟಣದಲ್ಲಿ ಪಕ್ಷ ಸಂಘಟನೆ ಮಾಡಿದ್ದ ರಘುನಂದನ್ ರಾಮಣ್ಣ
- ಉಪಚುನಾವಣೆ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡಿದ್ದ ರಘುನಂದನ್ ರಾಮಣ್ಣ
- ರಘುನಂದನ್ ರಾಮಣ್ಣ , ಸಿ.ಪಿ ಯೋಗೇಶ್ವರ್ ನಡುವೆ ಸಂಧಾನ ನಡೆಸಿ ಸಮಸ್ಯೆ ಬಗೆಹರಿಸಿದ ಡಿಕೆ ಸಹೋದರರು.

ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು

ತಾಲೂಕಿನಾದ್ಯಂತ ನೂರಾರು ಬಿಜೆಪಿ ಮತ್ತು ಜೆಡಿಎಸ್ ನಾಯಕರು, ಕಾರ್ಯಕರ್ತರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತರುವಲ್ಲಿ ರಘುನಂದನ್ ರಾಮಣ್ಣ ಯಶಸ್ವಿಯಾಗಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ 15 ಸಾವಿರವಿದ್ದ ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಲೋಕಸಭೆ ಚುನಾವಣೆ ವೇಳೆಗೆ 87 ಸಾವಿರಕ್ಕೆ ಏರಿಕೆಯಾಗಿತ್ತು. ಇದಲ್ಲದೆ ಕ್ಷೇತ್ರಕ್ಕೆ ಸರಕಾರದ ನಾನಾ ಅಭಿವೃದ್ಧಿ ಕಾರ್ಯಕ್ರಮಗಳು ಬರುವಲ್ಲಿಯೂ ರಘುನಂದನ್ ರಾಮಣ್ಣ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಯೋಗೇಶ್ವರ್‌ರನ್ನು ಹೆಚ್ಚಿನ ಬಹುಮತದಿಂದ ಗೆಲ್ಲಿಸಿ: ಡಿಕೆಸು

ಕಾಂಗ್ರೆಸ್‌ಗೆ ಬಿಜೆಪಿಯ ಆರು ನಗರಸಭೆ ಸದಸ್ಯರು ಸೇರ್ಪಡೆ

ಚನ್ನಪಟ್ಟಣದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್ ಸಮ್ಮುಖದಲ್ಲಿ ಬಿಜೆಪಿಯಿಂದ ಚುನಾಯಿತರಾಗಿದ್ದ ಆರು ಮಂದಿ ನಗರಸಭೆ ಸದಸ್ಯರು ಹಾಗೂ ಬಿಜೆಪಿ ವಿವಿಧ ವಿಭಾಗಗಳ ಪದಾಧಿಕಾರಿಗಳು ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ರಾಮನಗರ: ಬಿಜೆಪಿಯಿಂದ ಚುನಾಯಿತರಾಗಿದ್ದ ಆರು ಮಂದಿ ನಗರಸಭೆ ಸದಸ್ಯರು ಹಾಗೂ ಬಿಜೆಪಿ ವಿವಿಧ ವಿಭಾಗಗಳ ಪದಾಧಿಕಾರಿಗಳು ಮಾಜಿ ಸಂಸದ ಡಿ.ಕೆ.ಸುರೇಶ್ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಮಾಜಿ ಸಂಸದ ಡಿ.ಕೆ.ಸುರೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಸಿದ್ಧಾಂತ ಮೆಚ್ಚಿ ಹಾಗೂ ಯೋಗೇಶ್ವರ್ ಅವರನ್ನು ಬೆಂಬಲಿಸಲು ಬಿಜೆಪಿ ನಗರಸಭೆ ಸದಸ್ಯರು ಬಂದಿದ್ದಾರೆ, ಅವರ ಜೊತೆಗೆ ವಿವಿಧ ಮೋರ್ಚಾ ಪದಾಧಿಕಾರಿಗಳು ಸಹ ಪಕ್ಷಕ್ಕೆ ಬಂದಿದ್ದಾರೆ ಅವರೆಲ್ಲರನ್ನೂ ಸ್ವಾಗತಿಸುತ್ತೇನೆ. ಪಕ್ಷಕ್ಕಾಗಿ ದುಡಿದು ಯೋಗೇಶ್ವರ್ ಅವರನ್ನು ಹೆಚ್ಚಿನ ಬಹುಮತದಿಂದ ಗೆಲ್ಲಿಸಬೇಕು ಎಂದು ಕರೆನೀಡಿದರು.

ಚನ್ನಪಟ್ಟಣದಲ್ಲಿ ನಮಗೆ ಹುರುಪು ಬಂದಿದೆ, ಯೋಗೇಶ್ವರ್ ಕಾಂಗ್ರೆಸ್‌ಗೆ ಬಂದಿದ್ದು ಅನಿರೀಕ್ಷಿತ. ಅವರಿಗೆ ನಾವು ಸ್ವಾಗತ ಕೋರುತ್ತೇನೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ, ಎಲ್ಲರಿಗೂ ಕೆಲವೊಂದು ಆಸೆ ಇರುತ್ತವೆ, ಅದನ್ನ ಸರಿಪಡಿಸಿದ್ದೇವೆ, ಚುನಾವಣೆಯಲ್ಲಿ ಒಗ್ಗಟ್ಟಾಗಿ ದುಡಿಯುತ್ತೇವೆ ಎಂದರು.

ಸಂದರ್ಭದಲಿ ಜಿಲ್ಲಾಧ್ಯಕ್ಷ ಎಸ್. ಗಂಗಾಧರ್, ಮುಖಂಡ ರಘುನಂದನ್ ರಾಮಣ್ಣ, ಮಾಜಿ ಶಾಸಕ ಎಂ.ಸಿ.ಅಶ್ವಥ್, ನಗರಸಭಾ ಸದಸ್ಯರಾದ ಜಯಮಾಲ, ಮನೋಹರ್, ಚಂದ್ರಶೇಖರ್, ಮಂಗಳಮ್ಮ, ಕಸ್ತೂರಿ ಮಂಜುನಾಥ್, ಕಮಲರಾಮು ಮತ್ತಿತರರು ಹಾಜರಿದ್ದರು.

ವಕ್ಫ್ ವಿಚಾರದಲ್ಲಿ ಬಿಜೆಪಿ ರಾಜಕೀಯ

ರೈತರ ಜಮೀನು ವಕ್ಫ್ ಬೋರ್ಡ್‌ಗೆ ಸೇರಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕೆಲವೊಂದು ಸಮಸ್ಯೆಯ ಬಗ್ಗೆ ಸಂಬಂಧಿಸಿದ ಸಚಿವರು ತಿಳಿಸಿದ್ದಾರೆ, ಯಾರ ಜಮೀನು ಯಾರಿಗೂ ಸೇರುವುದಿಲ್ಲ. ಇದನ್ನು ಬಿಜೆಪಿಯವರು ರಾಜಕೀಯಕ್ಕೆ ಬಳಸುತ್ತಿದ್ದಾರೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಕಿಡಿಕಾರಿದರು.

ಕಾಂಗ್ರೆಸ್ ಸರಕಾರ ದಿವಾಳಿ: ನಿಖಿಲ್ ಕುಮಾರಸ್ವಾಮಿ ಟೀಕೆ

ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ

ರಾಮನಗರ: ಕಾಂಗ್ರೆಸ್ ಸರಕಾರ ದಿವಾಳಿಯಾಗಿದ್ದು, ಅದರಲ್ಲಿ ದುಡ್ಡಿಲ್ಲ, ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ, ಇದಕ್ಕೆ ವಾಲ್ಮೀಕಿ ಹಗರಣ, ಮುಡಾ ಹಗರಣವೇ ಸಾಕ್ಷಿ. ಇಂತಹ ಸರಕಾರವನ್ನು ನಾವು ಕಿತ್ತೊಗೆಯ ಬೇಕಿದೆ ಎಂದು ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಕರೆ ನೀಡಿದ್ದಾರೆ.

ಚನ್ನಪಟ್ಟಣ ತಾಲೂಕಿನ ದೊಡ್ಡಮಳೂರು, ಕೋಟಮಾರನಹಳ್ಳಿ, ಬೈರಾಪಟ್ಟಣ, ದೇವರಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಪ್ರಚಾರ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪ್ರತಿದಿನ ಹಗರಣಗಳು ಹೊರಬರುತ್ತಿವೆ, ಜನರ ಹಣವನ್ನು ಲೂಟಿ ಮಾಡುತ್ತಿದ್ದಾರೆ, ಇಂತಹ ಸರಕಾರ ನಮಗೆ ಬೇಡ ಎನ್ನುವುದು ಜನರ ಅನಿಸಿಕೆಯಾ ಗಿದೆ, ಇದನ್ನು ಕಿತ್ತೊಗೆಯಲು ಜನತೆ ಎನ್‌ಡಿಎ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಮೂರನೇ ಬಾರಿ ಗೆಲುವು ಕೊಡಿ: ಈ ಚುನಾವಣೆ ನನ್ನ ಪಾಲಿಗೆ ಅನಿರೀಕ್ಷಿತ, ಬಯಸದೇ ಬಂದ ಚುನಾವಣೆ. ಎಚ್.ಡಿ.ಕುಮಾರಸ್ವಾಮಿ ಅವರನ್ನು ಎರಡು ಬಾರಿ ಈ ಕ್ಷೇತ್ರ ದ ಜನರು ಶಾಸಕರಾಗಿ ಆಯ್ಕೆಮಾಡಿದ್ದಾರೆ. ಕಳೆದ ಲೋಕಸಭಾ ಚುನಾವಣೆ ವೇಳೆ ಒತ್ತಡಕ್ಕೆ ಮಣಿದು ಮಂಡ್ಯದಲ್ಲಿ ಸ್ಪರ್ಧಿಸಿದ್ದರು. ಹಾಗಾಗಿ ಚುನಾವಣೆ ಎದುರಾಗಿದೆ, ಚಿಕ್ಕ ವಯಸ್ಸಿನಲ್ಲೇ ಎರಡು ಚುನಾವಣೆ ಎದುರಿಸಿದ್ದೇನೆ. ಈ ಬಾರಿ ನನಗೆ ಅವಕಾಶ ಕೊಡಿ ಎಂದು ಮತದಾರರಲ್ಲಿ ವಿನಂತಿಸಿದರು.

> ಚನ್ನಪಟ್ಟಣ ಕ್ಷೇತ್ರದಲ್ಲಿ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರಿಗೆ ನೀವು ಶಕ್ತಿ ತುಂಬಿದ್ದೀರಿ. ಇದು ನಮ್ಮ ಎನ್‌ಡಿಎ ಕುಟುಂಬಕ್ಕೆ ಅಗ್ನಿ ಪರೀಕ್ಷೆ. ಈ ಪರೀಕ್ಷೆಯಲ್ಲಿ ನಮಗೆ ಜಯ ನೀಡಿ. ಎರಡು ಬಾರಿ ಜೀವನದಲ್ಲಿ ಪೆಟ್ಟು ತಿಂದಿದ್ದೇನೆ. ನಿಮ್ಮನ್ನು ನಂಬಿಕೊಂಡು ಬಂದಿದ್ದೇನೆ. ನಿಮ್ಮ ಪರವಾಗಿ ಕೆಲಸ ಮಾಡುತ್ತೇನೆ, ದಯಮಾಡಿ ಗೆಲ್ಲಿಸಿಕೊಡಿ.
>
> **ನಿಖಿಲ್ ಕುಮಾರಸ್ವಾಮಿ,** ಎನ್‌ಡಿಎ ಅಭ್ಯರ್ಥಿ

ಬಂಗಾರು ಹನುಮಂತ ಪರ ಶ್ರೀರಾಮುಲು ಭರ್ಜರಿ ಪ್ರಚಾರ

ಸರಕಾರದ ಹಣಬಲ ನಡೆಯಲ್ಲ

ಸಂಡೂರು: ಸಂಸದ ತುಕಾರಾಂ ಅವರು ವಾಲ್ಮೀಕಿ ನಿಗಮದ ಹಣದಿಂದ ಲೋಕಸಭಾ ಚುನಾವಣೆಯಲ್ಲಿ ಕಾನೂನು ಬಾಹಿರವಾಗಿ ಆಯ್ಕೆಯಾಗಿದ್ದು, ಈ ಉಪ ಚುನಾವಣೆಯಲ್ಲಿ ಸರಕಾರದ ಹಣ ಬಲ, ತೋಳ್ಬಲ ನಡೆಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನ ಗೆಲ್ಲಬೇಕಾದರೆ ಕಾಂಗ್ರೆಸ್ ಸೋಲಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಮೆಟ್ರಿಕಿ ಗ್ರಾಮದಲ್ಲಿ ಸಂಡೂರು ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಸಂಡೂರು ಕ್ಷೇತ್ರದಲ್ಲಿ ಬಿಜೆಪಿ ಜಯ ಗಳಿಸಿದರೆ ಮುಂದಿನ ದಿನಗಳಲ್ಲಿ ಮೆಟ್ರಿಕಿ ಗ್ರಾಮ ಸೇರಿದಂತೆ ಸುತ್ತಲಿನ ಗ್ರಾಮೀಣ ಪ್ರದೇಶಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಗಾಗಿ ನೂತನ ಪ್ರೌಢಶಾಲೆಯನ್ನು ಮೆಟ್ರಿಕಿ ಗ್ರಾಮದಲ್ಲಿ ಆರಂಭಿಸಲಾ ಗುವುದು. ತೋರಣಗಲ್ಲು ಹೋಬಳಿಯ ಎಲ್ಲ ಗ್ರಾಮಗಳಿಗೆ ರಸ್ತೆ, ಕುಡಿಯುವ ನೀರು, ವಸತಿ ಸೇರಿದಂತೆ ಇತರೆ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಜನಾರ್ಧನ ರೆಡ್ಡಿ, ಅಭ್ಯರ್ಥಿ ಬಂಗಾರು ಹನುಮಂತ, ಬಿಜೆಪಿಯ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷ ಜಿ.ಟಿ. ಪಂಪಾಪತಿ, ಮುಖಂಡರಾದ ಕೆ.ಎಸ್ .ದಿವಾಕರ, ಕೃಷ್ಣಪ್ಪ, ಕಾರ್ಯಕರ್ತರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಹೇಳಿಕೆ

ವೈಯಕ್ತಿಕವಾಗಿ ಜನರು ಗೆಲ್ಲಿಸಿದ್ದೇ ಹೆಚ್ಚು

ರಾಮನಗರ: ನಾನು ಪಕ್ಷಾಂತರಿ ಅನ್ನುವುದು ಜಗಜ್ಜಾಹಿರ, ಅದಕ್ಕೆ ನನಗೆ ಮುಜುಗರ ಇಲ್ಲ, ನಾನು ಕ್ಷೇತ್ರದ ಅಭಿವೃದ್ಧಿಗಾಗಿ ಪಕ್ಷಾಂತರ ಮಾಡ್ತಿದ್ದೇನೆಯೇ ವಿನಃ ನನ್ನ ವೈಯಕ್ತಿಕ ಉದ್ದೇಶಕ್ಕಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಹೇಳಿದರು.

ಚನ್ನಪಟ್ಟಣ ತಾಲೂಕಿನ ಮಾಕಳಿ ಗ್ರಾ.ಪಂ ವ್ಯಾಪ್ತಿಯಲ್ಲಿ ಪ್ರಚಾರ ಕೈಗೊಂಡು ಮಾತನಾಡಿ, ಜನ ನನ್ನನ್ನು ಪಕ್ಷಕ್ಕಿಂತ ವೈಯಕ್ತಿಕವಾಗಿ ಗೆಲ್ಲಿಸಿದ್ದೇ ಹೆಚ್ಚು, ಹಾಗಾಗಿ ಅವರು ಏನು ಹೇಳಿದರೂ ನಾನು ಬೇಸರ ಮಾಡಿಕೊಳ್ಳಲ್ಲ. ಜನತೆಗೆ ನನ್ನ ಬಗ್ಗೆ ತಿಳಿದಿದೆ, ಜನ ಉತ್ತಮವಾಗಿ ಸ್ಪಂದನೆ ಕೊಡುತ್ತಿದ್ದಾರೆ. ಎರಡು ಬಾರಿ ಸೋತಿದ್ದೇನೆ, ಜನ ಈ ಬಾರಿ ಆಶೀರ್ವಾದ ಮಾಡುತ್ತಾರೆ ಎನ್ನುವ ವಿಶ್ವಾಸ ಇದೆ ಎಂದರು.

ಈ ಭಾಗದಲ್ಲಿ ಬಿಜೆಪಿಯನ್ನು ಕಟ್ಟಿದ್ದೆ, ಈಗ ಕಾಂಗ್ರೆಸ್‌ಗೆ ಬಂದಿದ್ದೇನೆ, ನನ್ನ ಕೆಲಸಗಳು ಈ ಬಾರಿ ಗೆಲುವಿಗೆ ಅವಕಾಶ ಮಾಡುತ್ತವೆ. ಈ ಕ್ಷೇತ್ರದ ಅಭಿವೃದ್ಧಿಗಾಗಿ ಜನ ಬೆಂಬಲ ನೀಡುತ್ತಾರೆ. ನನ್ನ ಪಕ್ಷಾಂತರದಿಂದ ಅಸಮಾಧಾನಿತರ ಮನವೊಲಿಸುವ ಕೆಲಸ ಯಶಸ್ವಿ ಆಗಿದೆ. ಎಲ್ಲರೂ ಬೇಸರ ಬಿಟ್ಟು ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿದ್ದಾರೆ. ನಾನು, ಡಿಸಿಎಂ ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಸೇರಿ ಅಸಮಾಧಾನಿತರನ್ನು ಭೇಟಿಯಾಗಿ ಮಾತನಾಡಿದ್ದೇವೆ ಎಂದರು.

ಸಂದರ್ಭದಲ್ಲಿ ಮಾಜಿ ಸಂಸದ ಡಿ.ಕೆ. ಸುರೇಶ್, ಮುಖಂಡ ರಘುನಂದನ್ ರಾಮಣ್ಣ, ಮಾಜಿ ಶಾಸಕ ಎಂ.ಸಿ.ಅಶ್ವತ್ಥ್, ಮುಖಂಡ ಕರಣ್ ಆನಂದ್ ಸೇರಿದಂತೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

ಚನ್ನಪಟ್ಟಣ ತಾಲೂಕಿನ ಮಾಕಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪ್ರಚಾರ ನಡೆಸಿದರು. ಸಂದರ್ಭದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಮುಖಂಡ ರಘುನಂದನ್ ರಾಮಣ್ಣ ಇದ್ದರು.

> ಎಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಬಿಟ್ಟು ಮಂಡ್ಯಕ್ಕೆ ಹೋಗಿದ್ದಾರೆ, ಇಲ್ಲಿಗೆ ಈಗ ಅವರ ಮಗನನ್ನು ತಂದು ಚುನಾವಣೆಗೆ ನಿಲ್ಲಿಸಿದ್ದಾರೆ. ಜೆಡಿಎಸ್ ಜೆಡಿಎಸ್ ಎಂದು ಜನ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಈ ಬಾರಿ ಅದಕ್ಕೆ ಅವಕಾಶ ಕೊಡಬೇಡಿ, ದಯಮಾಡಿ ಈ ಬಾರಿ ಒಂದು ಅವಕಾಶ ಕೊಟ್ಟು ಗೆಲ್ಲಿಸಿಕೊಡಿ.
>
> – **ಸಿ.ಪಿ.ಯೋಗೇಶ್ವರ್,** ಕಾಂಗ್ರೆಸ್ ಅಭ್ಯರ್ಥಿ

ಸರಕಾರ ಲೋಕಾಯುಕ್ಕೆ ಸರೆಂಡರ್: ಜೋಶಿ

ಹುಬ್ಬಳ್ಳಿ: ರಾಜ್ಯದಲ್ಲಿ ಲೋಕಾಯುಕ್ತ ತನಿಖಾ ಸಂಸ್ಥೆ ಸಿಎಂ ಮತ್ತು ಕಾಂಗ್ರೆಸ್ ಸರಕಾರಕ್ಕೆ ಸಂಪೂರ್ಣ ಶರಣಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಾಯುಕ್ತ ಹಿಂದಿನಂತೆ ಖಡಕ್ ತನಿಖಾ ಸಂಸ್ಥೆಯಾಗಿ ಉಳಿದಿಲ್ಲ. ಬದಲಿಗೆ ಕಾಂಗ್ರೆಸ್ ಆಯೋಗವಾಗಿದೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬಕ್ಕೆ ಅನುಕೂಲಕರ ರೀತಿಯಲ್ಲಿ ತನಿಖೆ ನಡೆಯುತ್ತಿದೆ. 30 ಲಕ್ಷ ರೂಪಾಯಿ ಎಣಿಸುವ ವಿಡಿಯೊ ಸಮೇತ ಸುದ್ದಿ ಮಾಧ್ಯಮವೊಂದರಲ್ಲಿ ಬಿತ್ತರವಾಗಿದೆ. ಇಷ್ಟೊಂದು ದೊಡ್ಡ ಪ್ರಕರಣ ನಡೆದರೂ ಇದುವರೆಗೆ ಯಾರೊಬ್ಬರನ್ನೂ ಬಂಧಿಸಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾಲ್ಮೀಕಿ, ಮುಡಾ ಹೀಗೆ ಸಾಕಷ್ಟು ಹಗರಣ ನಡೆದರೂ ಕಾಂಗ್ರೆಸ್ ಹೈಕಮಾಂಡ್ ಸಿಎಂ ಸಿದ್ದರಾಮಯ್ಯ ಅವರ ಕೈ ಹಿಡಿದಿದೆ ಎಂದು ಟೀಕಿಸಿದರು. ರಾಜ್ಯ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲು ತೀರ್ಮಾನ ಮಾಡಿದಂತಿದೆ ಎಂದು ಹೇಳಿದರು.

ವಿಶ್ವವಾಣಿ ಹೊರತಂದಿರುವ ವಿಶೇಷಾಂಕ ಮಾರುಕಟ್ಟೆಯಲ್ಲಿ ಲಭ್ಯ | ಸಂಗ್ರಹ ಯೋಗ್ಯ ಸಂಚಿಕೆ

ದೀಪಾವಳಿ ವಿಶೇಷಾಂಕ ಬಿಡುಗಡೆಗೊಳಿಸಿದ ಸಿಎಂ

ಬೆಂಗಳೂರು: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ವಿಶೇಷಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು.

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕೃಷ್ಣದಲ್ಲಿ ಸಿದ್ದರಾಮಯ್ಯ ಅವರು ವಿಶ್ವವಾಣಿ ದೀಪಾವಳಿ ವಿಶೇಷಾಂಕವನ್ನು ಮಂಗಳವಾರ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, 'ವಿಶ್ವವಾಣಿ ದೀಪಾವಳಿ ವಿಶೇಷಾಂಕವನ್ನು ಅತ್ಯಂತ ಸಂತೋಷದಿಂದ ಬಿಡುಗಡೆ ಮಾಡಿದ್ದೇನೆ. ವಿಶ್ವೇಶ್ವರ ಭಟ್ಟರು ಈ ವೀಶೇಷಾಂಕಕ್ಕಾಗಿ ಉತ್ತಮ ಲೇಖನಗಳನ್ನೇ ಬರೆಸಿರುತ್ತಾರೆ. ಜನರಿಗೆ ಉಪಯುಕ್ತವಾದ ಲೇಖನಗಳೇ ಈ ವಿಶೇಷಾಂಕದಲ್ಲಿರಲಿದೆ' ಎಂದು ಅಭಿಪ್ರಾಯಪಟ್ಟರು.

ಬೋವಿ ಮಠದ ಪೀಠಾಧಿಪತಿ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರು ಮಾತನಾಡಿ, ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ ಎಂಬ ಬಸವಣ್ಣನವರ ವಚನದಂತೆ ವಿಶ್ವೇಶ್ವರ ಭಟ್ಟರು ಪ್ರತಿ ಮನೆಯಲ್ಲಿ ಜ್ಞಾನದ ಜ್ಯೋತಿ ಬೆಳಗಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು. ವಿಶ್ವವಾಣಿಯ ಪ್ರಯತ್ನವೇ ವಿಶ್ವವನ್ನು ಜ್ಞಾನದ ಕಡೆ ತೆಗೆದುಕೊಂಡು ಹೋಗುವುದಾಗಿದೆ ಎಂದರು.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಮಾತನಾಡಿ, ವಿಶೇಷಾಂಕಗಳ ಮುಖಪುಟಕ್ಕೆ ಸಾಮಾನ್ಯವಾಗಿ ಸಿನಿಮಾ ತಾರೆಯರ, ಸೆಲೆಬ್ರಿಟಿಗಳ ಫೋಟೊಗಳನ್ನು ಬಳಸುತ್ತಾರೆ. ಆದರೆ ನಾವು ಈ ಸಂಪ್ರದಾಯ ಮುರಿದು ಸ್ವಾಮೀಜಿಗಳ ಫೋಟೊಗಳನ್ನು ಬಳಸುತ್ತಿದ್ದೇವೆ ಎಂದರು.

ವಿಶ್ವವಾಣಿ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ ಉಪಸ್ಥಿತರಿದ್ದರು.

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷ ಸಂಚಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಬಿಡುಗಡೆಗೊಳಿಸಿದರು. ಈ ವೇಳೆ ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಬೋವಿಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ವಿಶ್ವವಾಣಿ ಕಾರ್ಯನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ ಇದ್ದರು.

ವಿಶೇಷಾಂಕದಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಕುರಿತ ಲೇಖನ ಸಂಗ್ರಹ

ಅನ್ನ, ಅಕ್ಷರ, ಆರ್ಥಿಕ ಸದೃಢತೆಯ ಹರಿಕಾರ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ವಿಶೇಷ ಲೇಖನವನ್ನು ಈ ವಿಶೇಷ ಸಂಚಿಕೆ ಹೊಂದಿದೆ. ಡಾ ಸಿ ಜಿ ರಾಘವೇಂದ್ರ ವೈಲಾಯ, ಬಿ ಸತ್ಯನಾರಾಯಣ ಅರಸ, ರಾ ನಂ ಚಂದ್ರಶೇಖರ, ಗೌರಿ ಚಂದ್ರಕೇಸರಿ ಮತ್ತಿತರರ ಉಪಯುಕ್ತ ಬರಹಗಳಿವೆ. ಸಂಧ್ಯಾ ಹೆಗಡೆ, ಗೀತಾ ಕುಂದಾಪುರ, ಟಿ.ಎಸ್. ಶ್ರವಣಕುಮಾರಿ, ಡಾ. ಆರ್.ಜಿ ಹೆಗಡೆ, ಬಿ ಕೆ ಮೀನಾಕ್ಷಿ, ದಿನೇಶ ಉಪ್ಪೂರ, ಮಡೋಡಿ ಅವರ ಮನೋಜ್ಞ ಸಣ್ಣ ಕತೆಗಳಿವೆ. ಬೆಂ ಶ್ರೀ ರವೀಂದ್ರ, ಚಂದ್ರಶೇಖರ ಹೆಗಡೆ, ಡಾ ಗೋವಿಂದ ಹೆಗಡೆಯವರ ಮನಮುಟ್ಟುವ ಕವನಗಳಿವೆ. ಮಹಾಂತೇಶ ಮಾಗನೂರ ಮತ್ತು ಡಾ. ವಿಶ್ವನಾಥ ನೇರಳಕಟ್ಟೆಯವರ ಚುರುಕಾದ ಚುಟುಕುಗಳು ಈ ಸಂಚಿಕೆಯ ಮೆರುಗು ಹೆಚ್ಚಿಸಿವೆ. ನಾನೇಕೆ ರೀಲ್ಸ್ ಮಾಡುತ್ತೇನೆ ಎಂಬ ವಿಷಯ ಕುರಿತ ಓದುಗರ ಬರಹಗಳು ಕುತೂಹಲಕರ ಮೂಡಿಸುತ್ತವೆ. ಪರಿಸರ ಲೋಕದ ಕೀಟ ಕುರಿತು ಶಶಿಧರ ಹಾಲಾಡಿ ಅವರು ಬರೆದ ವಿಸ್ಮಯಕಾರಿ ಮಾಹಿತಿ ಇದೆ. ಜತೆಗೆ, ಸಿನಿಮಾ ಲೋಕದ ಮನರಂಜನೆಯೂ ಇದೆ.

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಓದುತ್ತಿರುವುದು.

ವಿಶ್ವವಾಣಿ

ಸಂಪಾದಕೀಯ

‘ತೋಳ ಬಂತು ತೋಳ’ ಆಗದಿರಲಿ

ಹುಸಿ ಬೆದರಿಕೆ ಒಡ್ಡುವವರು ಸಾಕಷ್ಟು ಚಿಗಿತುಕೊಂಡಂತಿದೆ. ಕಾರಣ, ಬಹುತೇಕರಿಗೆ ಗೊತ್ತಿರುವಂತೆ ಏರ್ ಇಂಡಿಯಾ, ಇಂಡಿಗೋ, ವಿಸ್ತಾರಾ ಹೀಗೆ ದೇಶದ ವಿವಿಧ ವಾಯುಯಾನ ಸಂಸ್ಥೆಗಳಿಗೆ ಸೇರಿದ 50ಕ್ಕೂ ಹೆಚ್ಚು ವಿಮಾನಗಳಿಗೆ ಮೊನ್ನೆ ಸೋಮವಾರ ಬಾಂಬ್ ಬೆದರಿಕೆಗಳು ಬಂದಿವೆ. ಕಳೆದ ಸುಮಾರು 15 ದಿನಗಳಿಂದ ನಡೆಯುತ್ತಿರುವ ಈ ನೌಟಂಕಿಯನ್ನು ಅವಲೋಕಿಸಿದಾಗ, 410ಕ್ಕೂ ಹೆಚ್ಚು ಇಂಥ ಹುಸಿಬಾಂಬ್ ಬೆದರಿಕೆ ಕರೆಗಳು ಬಂದಂತಾಗಿದೆ. ಇಂಥ ಬೆದರಿಕೆ ಸಂದೇಶಗಳು ಬಂದಾಗಲೆಲ್ಲಾ ಆಯಾ ವಾಯುಯಾನ ಸಂಸ್ಥೆಗಳು ಅಗತ್ಯ ಭದ್ರತಾ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುತ್ತಿವೆಯಾದರೂ, ಆಗ ತಲೆದೋರುವ ಅಸ್ತವ್ಯಸ್ತತೆ-ಅಸಹಾಯಕತೆಗಳು ಅಸಹನೀಯವಾಗಿರುತ್ತವೆ. ಅಷ್ಟೇ ಅಲ್ಲ, ಭೀತಿ, ತಲ್ಲಣ, ಅಸುರಕ್ಷತೆಯ ಭಾವನೆಗಳು ಪ್ರಯಾಣಿಕ ಸಮುದಾಯವನ್ನೂ ತೀವ್ರವಾಗಿ ಕಾಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಆಂಧ್ರಪ್ರದೇಶದ ತಿರುಪತಿಯಲ್ಲಿರುವ ಇಸ್ಕಾನ್ ದೇಗುಲಕ್ಕೂ ಸೋಮವಾರ ಮತ್ತೊಮ್ಮೆ ಬಾಂಬ್ ಬೆದರಿಕೆಯ ಸಂದೇಶ ಬಂದಿದೆ. 3 ದಿನಗಳ ಅಂತರದಲ್ಲಿ ಇದು 4ನೇ ಬೆದರಿಕೆ ಸಂದೇಶವಾಗಿರುವುದರಿಂದ ದೇಗುಲದಲ್ಲಿ ಭದ್ರತೆಯನ್ನು ಹೆಚ್ಚಿಸಬೇಕಾಗಿ ಬಂದಿದೆ. ಇವು ಸುಲಭಕ್ಕೆ ತಳ್ಳಿಹಾಕುವಂಥ ಸಂಗತಿಗಳಲ್ಲ. ಏಕೆಂದರೆ, ಶುರುವಿನಲ್ಲಿ ಹೀಗೆ ಬಾರಿಬಾರಿಗೆ ಹುಸಿ ಬೆದರಿಕೆಗಳನ್ನು ಒಡ್ಡಿದವರು, ಕೆಲ ಕಾಲದ ನಂತರ ‘ತೋಳ ಬಂತು ತೋಳ’ ಕಥೆಯ ರೀತಿಯಲ್ಲಿ ನಿಜವಾಗಿಯೂ ತೀವ್ರದಾಳಿಗೆ ಮುಂದಾಗಬಹುದು. ಜನದಟ್ಟಣೆ ಇರುವ ಪ್ರದೇಶಗಳಲ್ಲೇ ಇಂಥ ದಾಳಿಗಳಾಗುವ ಸಾಧ್ಯತೆ ಜಾಸ್ತಿಯಿರುತ್ತದೆ. ಆದ್ದರಿಂದ, ಭದ್ರತೆಯ ಹೊಣೆ ಹೊತ್ತವರು ಮೈಯೆಲ್ಲಾ ಕಣ್ಣಾಗಿರಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಪಾಕಿಸ್ತಾನ ಮೂಲದ ಐಎಸ್ಐ ಉಗ್ರರು ಸೇರಿದಂತೆ, ಭಾರತದ ಏಕತೆ, ಭದ್ರತೆ, ಅಖಂಡತೆ ಮತ್ತು ಸಾರ್ವಭೌಮತೆಗಳನ್ನು ಪುಡಿಗಟ್ಟಲು ಸೂಕ್ತ ಸಮಯಕ್ಕಾಗಿ ಹೊಂಚುಹಾಕುತ್ತಿರುವ ಕುತ್ಸಿತ ಶಕ್ತಿಗಳು ಸಾಕಷ್ಟಿರಬಹುದು. ಅದರಲ್ಲೂ, ಕಳೆದೊಂದು ದಶಕದಲ್ಲಿ ಭಾರತವು ವಿಶ್ವ ಭೂಪಟದಲ್ಲಿ ಢಾಳಾಗಿ ಕಾಣಿಸಿಕೊಳ್ಳತೊಡಗಿದಾಗಿನಿಂದ ಇಂಥವರ ಹೊಟ್ಟೆಯುರಿ ಜಾಸ್ತಿಯೇ ಆಗಿದೆ ಎನ್ನಬೇಕು. ಒಟ್ಟಿನಲ್ಲಿ, ನಮ್ಮ ಹುಷಾರಿನಲ್ಲಿ ನಾವಿರೋಣ, ಅಷ್ಟೇ.

ಸೊಂಪಾದಕೀಯ

ಟಿಕೆಟ್, ಟಿಕೆಟ್

ಕರ್ನಾಟಕದಲ್ಲಿ ಕನ್ನಡ ಚಿತ್ರಗಳಿಗೆ ಹಲವು ಸಂಕಟಗಳು. ಕಾಲಕ್ಕೆ ತಕ್ಕಂತೆ ನಡೆಯಬೇಕು ಅನ್ನೋ ನಿಟ್ಟಿನಲ್ಲಿ ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತಿದ ಮೇಲೆ ಹಲವಾರು ಸಮಸ್ಯೆಗಳು ತಲೆದೋರಿವೆ. ಅವುಗಳಲ್ಲಿ ಒಂದು ಟಿಕೆಟ್ ದರ. ಅದರಲ್ಲೂ ಬೆಂಗಳೂರಿನಲ್ಲಿ ಟಿಕೆಟ್ ದರದ ಹಾವಳಿ ಹೆಚ್ಚೇ ಆಗಿದೆ. ಸಂಸಾರ ಸಮೇತ ಮಲ್ಟಿಪ್ಲೆಕ್ಸ್‌ಗೆ ಹೋಗಲು ಮಧ್ಯಮ ವರ್ಗದ ಜನ ಹಿಂದೇಟು ಹಾಕುತ್ತಿದ್ದಾರೆ. ದುಬಾರಿ ಟಿಕೆಟ್ ದರ ಅವುಗಳಲ್ಲಿ ಒಂದು ಅಷ್ಟೇ. ಮಾತ್ರವಲ್ಲ, ಮಕ್ಕಳೊಂದಿಗೆ ಚಿತ್ರಮಂದಿರಕ್ಕೆ ಹೋದವರಿಗೆ ಸಿನಿಮಾ ತೋರಿಸುವುದರ ಜತೆಗೆ ಅಲ್ಲಿನ ತಿಂಡಿ ತಿನಿಸುಗಳನ್ನು ಕೊಡಿಸೋದು ದೊಡ್ಡ ಸವಾಲಾಗಿಬಿಡುತ್ತದೆ. ಒಂದು ಮಾಮೂಲಿ ಪಾಪ್‌ಕಾರ್ನ್ ಕೂಡಾ ಕೈಗೆ ಎಟುಕದಷ್ಟು ದುಬಾರಿ. ಇನ್ನು ಮತ್ತಿತರ ಮಾಡರ್ನ್ ತಿನಿಸುಗಳ ಸಹವಾಸಕ್ಕೆ ಹೋಗೋದು ಸಾಹಸದ ವಿಷಯವೇ ಸರಿ. ಆದರೆ ಇದು ಬೆಂಗಳೂರಿನ ಸಮಸ್ಯೆ ಮಾತ್ರ. ಪಕ್ಕದ ಆಂಧ್ರ, ತಮಿಳುನಾಡುಗಳ ಚಿತ್ರಮಂದಿರಗಳಲ್ಲಿ ಟಿಕೆಟ್ ದರ ಸಾಮಾನ್ಯ ಮಟ್ಟದಲ್ಲಿದೆ. ಅಲ್ಲಿನ ಸೂಪರ್ ಸ್ಟಾರ್‌ಗಳ ಸಿನಿಮಾಗಳ ದರ ಕೂಡಾ ಅಲ್ಲಿ ತೀರಾ ಕಡಿಮೆ ಇರುತ್ತದೆ. ಆದರೆ ಅದೇ ಸಿನಿಮಾಗೆ ಬೆಂಗಳೂರಿನಲ್ಲಿ ಮಾತ್ರ ಟಿಕೆಟ್ ದರ ಸಾವಿರ ದಾಟುತ್ತದೆ. ಅದನ್ನು ನೋಡಿ ಇಲ್ಲಿನ ನಮ್ಮ ದೊಡ್ಡ ಬಜೆಟ್ ಸಿನಿಮಾದವರೂ ತಾವೇನೂ ಕಮ್ಮಿ ಇಲ್ಲ ಎನ್ನುವಂತೆ ಟಿಕೆಟ್ ದರ ಏರಿಸುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ಏನು ಅಂತ ಹುಡುಕಿದರೆ ಸರಿಯಾದ ಉತ್ತರ ಸಿಗೋದಿಲ್ಲ. ಬಹುಶಃ ನಮ್ಮ ಸಿನಿಮಾ ಮಂದಿ, ಬೆಂಗಳೂರಿನ ಸಿನಿಮಾ ಪ್ರೇಮಿಗಳು ಅಂದ್ರೆ, ಅಂಬಾನಿ ವಂಶಸ್ಥರು ಅಥವಾ ಮೈಸೂರಿನ ಅಂಬಾರಿ ವಂಶಸ್ಥರು ಅಂತ ತಿಳಿದುಕೊಂಡಿ ರೋ ಹಾಗಿದೆ. ಈಗ ಇದರ ವಿರುದ್ಧ ನಮ್ಮ ಚಲನಚಿತ್ರ ವಾಣಿಜ್ಯ ಮಂಡಳಿ ಸಭೆ ಕರೆದು, ಟಿಕೆಟ್ ದರವನ್ನು 200 ರುಪಾಯಿ ದಾಟದಂತೆ ನಿಗದಿಪಡಿಸಲು ಸರಕಾರವನ್ನು ಒತ್ತಾಯಿಸಿದೆ. ಇಲ್ಲವಾದರೆ ದುಬಾರಿ ಟಿಕೆಟ್ ದರ ವಸೂಲಿ ಮಾಡುವ ಮಲ್ಟಿಪ್ಲೆಕ್ಸ್‌ಗಳಿಗೆ ಮುತ್ತಿಗೆ ಹಾಕುವ ಎಚ್ಚರಿಕೆಯನ್ನೂ ನೀಡಿದೆ. ಒಟ್ಟಿನಲ್ಲಿ ದುಬಾರಿ ಟಿಕೆಟ್ ದರವನ್ನು ತೆರವು ಮಾಡಿಸಿದರೆ ನಾವು ನಿಮಗೆ ಆಭಾರಿ ಆಗಿರುತ್ತೇವೆ ಅನ್ನೋ ಮಾತು ನಮ್ಮ ವಾಣಿಜ್ಯ ಮಂಡಳಿಯದು. ಇದಕ್ಕೆ ಸರಕಾರ ಏನು ಹೇಳುತ್ತೋ ಗೊತ್ತಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನ ಮತ್ತು ಎತ್ತರದ ಹಾರಾಟ

ಕೆಲವು ವಿಮಾನ ಪ್ರಯಾಣಿಕರಲ್ಲಿ ಆಗಾಗ ಮೂಡುವ ಪ್ರಶ್ನೆ ಏನೆಂದರೆ, ವಿಮಾನವೇಕೆ ಇಷ್ಟು ಎತ್ತರದಲ್ಲಿ ಹಾರಬೇಕು? ಅದರಲ್ಲೂ ಎತ್ತರದ ಭಯ (height phobia) ಇದ್ದವರಿಗೆ, ವಿಮಾನ ಮೇಲಮೇಲಕ್ಕೆ ಹೋಗುತ್ತಿದ್ದಂತೆ ಆತಂಕ ಹೆಚ್ಚುತ್ತಾ ಹೋಗುತ್ತದೆ. ಅಂತಾರಾಷ್ಟ್ರೀಯ ವಿಮಾನಗಳು, ದೂರ ಪ್ರಯಾಣದ ವಿಮಾನಗಳು ಸಾಮಾನ್ಯವಾಗಿ 35,000 ಅಡಿಯಿಂದ 38,000 ಅಡಿ ಎತ್ತರದಲ್ಲಿ ಹಾರುವಾಗಂತೂ ಸಹಜವಾಗಿ ಈ ಪ್ರಶ್ನೆ ಏಳುವುದುಂಟು. ಅಷ್ಟು ಎತ್ತರದಲ್ಲಿ ಹಾರುವಾಗ, ತಾಂತ್ರಿಕ ದೋಷಗಳು ಕಂಡುಬಂದರೆ, ವಿಮಾನದ ಯಂತ್ರಗಳು ಕೆಟ್ಟುಹೋದರೆ ಏನು ಗತಿ ಎಂಬ ಪ್ರಶ್ನೆ ಸಾಮಾನ್ಯ ಪ್ರಯಾಣಿಕರ ಮನಸ್ಸಿನಲ್ಲಿ ಹಾದುಹೋದರೆ ಆಶ್ಚರ್ಯವೇನಿಲ್ಲ. ಅಷ್ಟು ಎತ್ತರದಲ್ಲಿ ವಿಮಾನವನ್ನು ಹಾರಿಸುವ ಬದಲು, ಏಳೆಂಟು ಸಾವಿರ ಅಡಿ ಎತ್ತರದಲ್ಲಿ ಹಾರಿಸಬಹುದಲ್ಲ ಎಂದು ಅನಿಸಬಹುದು. 38,000 ಅಡಿ ಎತ್ತರದಿಂದ ವಿಮಾನ ಬಿದ್ದರೆ ಯಾರೂ ಉಳಿಯುವುದಿಲ್ಲ, ಅದರ ಬದಲು ಏಳೆಂಟು ಸಾವಿರ ಅಡಿ ಎತ್ತರದಲ್ಲಿ ಹಾರಿಸಬಹುದಲ್ಲ ಎಂದು ಕೆಲವರು ಕೇಳುತ್ತಾರೆ. ಇದಕ್ಕೆ ಉತ್ತರ- ಏಳೆಂಟು ಸಾವಿರ ಅಡಿ ಎತ್ತರದಿಂದ ಬಿದ್ದರೂ ಯಾರೂ ಬದುಕಿ ಉಳಿಯುವುದಿಲ್ಲ. ಆದರೆ ವಿಮಾನವನ್ನು 38,000 ಅಡಿ ಎತ್ತರದಲ್ಲಿ ಹಾರಿಸುವುದಕ್ಕೆ ಹಲವು ಕಾರಣಗಳಿವೆ. ಈ ಎತ್ತರವನ್ನು ‘ಕ್ರೂಸ್ ಎತ್ತರ’ ಅಂತಾರೆ. ಈ ಎತ್ತರದಲ್ಲಿ ಗಾಳಿಯ ಒತ್ತಡ, ಘರ್ಷಣೆ ಕಡಿಮೆ ಇರುತ್ತದೆ. ಇದರಿಂದ ವಿಮಾನವು ಕಡಿಮೆ ಇಂಧನ ಬಳಸಿ ಹೆಚ್ಚು ದೂರ ಪ್ರಯಾಣಿಸಲು ಅನುಕೂಲವಾಗುತ್ತದೆ. ಇದು ವಿಮಾನಯಾನ ಕಂಪನಿಗಳಿಗೆ ಇಂಧನ ವೆಚ್ಚವನ್ನು ಕಡಿಮೆ ಮಾಡಲು ಸಹಾಯಕ. ಈ ಎತ್ತರದಲ್ಲಿ ಗಾಳಿಯ ಹರಿವು ಸಮತಟ್ಟಾಗಿರುತ್ತದೆ. ಇದರಿಂದ ವಿಮಾನವು ಸ್ಥಿರವಾಗಿ ಹಾರಾಟ ನಡೆಸಬಹುದು. ಇದು ಪ್ರಯಾಣಿಕರಿಗೆ ಸುಗಮ ಯಾನದ ಅನುಭವವನ್ನು ಒದಗಿಸುತ್ತದೆ. ಒಳಗಿರುವ ಪ್ರಯಾಣಿಕರಿಗೆ ವಿಮಾನ ನಿಂತಲ್ಲಿಯೇ ನಿಂತ ಅಥವಾ ನಿಶ್ಚಲವಾದ ಅನುಭವವನ್ನು ನೀಡುತ್ತದೆ. ಈ ಎತ್ತರದಲ್ಲಿ ಹವಾಮಾನದ ಅಡಚಣೆಗಳು ಕಡಿಮೆ. ಪ್ರಕ್ಷುಬ್ಧತೆ ಅಥವಾ ಟರ್ಬ್ಯುಲನ್ಸ್ (ದಢಕಿ) ಅನುಭವವೂ ತೀರಾ ಕಡಿಮೆ. ಇದರಿಂದ ವಿಮಾನವು ಯಾವ ತೊಂದರೆಯಿಲ್ಲದೇ ತನ್ನ ಗಮ್ಯಸ್ಥಾನವನ್ನು ತಲುಪಬಹುದು. ಅಷ್ಟೇ ಅಲ್ಲ, ಯಾವುದೇ ತುರ್ತು ಪರಿಸ್ಥಿತಿ ಉಂಟಾದರೆ, ವಿಮಾನವು ಹತ್ತಿರದ ನಿಲ್ದಾಣವನ್ನು ಹುಡುಕಿಕೊಂಡು ಇಳಿಯಲು ಸಾಕಷ್ಟು ಸಮಯವನ್ನು ಹೊಂದಿರುತ್ತದೆ. ವಾತಾವರಣದಲ್ಲಿನ ವಿವಿಧ ಸ್ತರಗಳಲ್ಲಿ ವಿಭಿನ್ನ ತಾಪಮಾನ ಮತ್ತು ಒತ್ತಡವಿರುತ್ತದೆ. ಕ್ರೂಸ್ ಎತ್ತರವು ವಿಮಾನಕ್ಕೆ ಅನುಕೂಲಕರವಾದ ವಾತಾವರಣವನ್ನು ಒದಗಿಸುತ್ತದೆ. ವಿಮಾನದ ವಿನ್ಯಾಸವು ಕ್ರೂಸ್ ಎತ್ತರವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ಗಮನಾರ್ಹ. ಪ್ರತಿಯೊಂದು ವಿಮಾನವು ವಿಭಿನ್ನ ಕ್ರೂಸ್ ಎತ್ತರವನ್ನು ಹೊಂದಿರುತ್ತದೆ. ವಿಮಾನವು ಯಾವಾಗಲೂ 38,000 ಅಡಿ ಎತ್ತರದಲ್ಲಿ ಹಾರಾಟ ನಡೆಸುವುದಿಲ್ಲ, ತನ್ನ ಪ್ರಯಾಣದ ವಿವಿಧ ಹಂತಗಳಲ್ಲಿ ವಿಭಿನ್ನ ಎತ್ತರಗಳಲ್ಲಿ ಹಾರಾಟ ನಡೆಸುತ್ತದೆ. ಉದಾಹರಣೆಗೆ, ವಿಮಾನವು ಟೇಕಾಫ್ ಆಗುವಾಗ ಮತ್ತು ಲ್ಯಾಂಡಿಂಗ್ ಮಾಡುವಾಗ ಕಡಿಮೆ ಎತ್ತರದಲ್ಲಿ ಹಾರುತ್ತದೆ. 38,000 ಅಡಿ ಎತ್ತರದಲ್ಲಿ ಹಾರುವಾಗ, ಕೆಲವು ಸಲ ಕ್ಯಾಬಿನ್ ಒತ್ತಡ ಇದ್ದಕ್ಕಿದ್ದಂತೆ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಇದರಿಂದ ವಿಮಾನದೊಳಗಿರುವವರಿಗೆ ಉಸಿರಾಡಲು ತೊಂದರೆಯಾಗಬಹುದು. ಕಮರ್ಷಿಯಲ್ ವಿಮಾನಗಳು 30 ಸಾವಿರದಿಂದ 42 ಸಾವಿರ ಅಡಿ ಎತ್ತರದಲ್ಲಿ ಹಾರುತ್ತವೆ. ಒಂದು ವೇಳೆ ಇದಕ್ಕಿಂತ ಹೆಚ್ಚಿನ ಎತ್ತರದಲ್ಲಿ ವಿಮಾನ ಹಾರಿದರೆ, ಅದಕ್ಕೆ ವಿಮಾನಯಾನ ಪರಿಭಾಷೆಯಲ್ಲಿ Coffin Corner ಅಂತಾರೆ. ವಿಮಾನವು ಅತಿ ಎತ್ತರದಲ್ಲಿ ಹಾರುವಾಗ, ಗರಿಷ್ಠ ವೇಗ ಮತ್ತು ಕನಿಷ್ಠ ವೇಗ (Stall speed) ಎರಡೂ ಸಮೀಪವಾಗುತ್ತವೆ. ಈ ಹಂತದಲ್ಲಿ ವಿಮಾನ ಅಸ್ಥಿರಗೊಳ್ಳುವ ಸಾಧ್ಯತೆ ಇರುತ್ತದೆ. ವಿಮಾನ Coffin Corner ಹಂತ ತಲುಪಿದಾಗ, ಹಠಾತ್ ನಿಯಂತ್ರಣ ತಪ್ಪುವ ಅಪಾಯವಿರುತ್ತದೆ. ಆದರೆ ಪೈಲಟ್ ಯಾವ ಕಾರಣಕ್ಕೂ ಅಂಥ ಪರಿಸ್ಥಿತಿಯನ್ನು ತಂದುಕೊಳ್ಳುವುದಿಲ್ಲ.

ಬುದ್ಧಿವಂತಿಕೆಗೆ, ದಡ್ಡತನಕ್ಕೆ ಕಾರಣ ‘ಕಬ್ಬಿಣ’

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

vveditoped@gmail.com

ನಮ್ಮ ಬ್ರಹ್ಮಾಂಡವು ಇಂದಿಗೆ ಸುಮಾರು 13.7 ಶತಕೋಟಿ (ಬಿಲಿಯನ್) ವರ್ಷಗಳ ಹಿಂದೆ ಹುಟ್ಟಿತು. ನಮ್ಮ ಸೌರಮಂಡಲವು 4.6 ಶತಕೋಟಿ ವರ್ಷಗಳ ಹಿಂದೆ ರೂಪುಗೊಂಡಿತು. ನಮ್ಮ ಭೂಮಿಯ ಒಡಲನ್ನು ಪ್ರಧಾನವಾಗಿ ನಾಲ್ಕು ಧಾತುಗಳು (ಶೇ.32.1ರಷ್ಟು ಕಬ್ಬಿಣ, ಶೇ.30.1ರಷ್ಟು ಆಮ್ಲಜನಕ, ಶೇ.15.1ರಷ್ಟು ಸಿಲಿಕಾನ್ ಹಾಗೂ ಶೇ.13.9ರಷ್ಟು ಮೆಗ್ನೀಷಿಯಂ) ರೂಪಿಸಿದವು. ಭೂಗರ್ಭದ ಒಳ ಹಾಗೂ ಹೊರ ತಿರುಳು ಕಬ್ಬಿಣದಿಂದಲೇ ಆಗಿದೆ. ಭೂಮಿಯ ತೊಗಟೆ ಅಥವಾ ಕ್ರಸ್ಟ್, ಈ ನಾಲ್ಕು ಪ್ರಧಾನ ಧಾತುಗಳಿಂದ ಆಗಿದೆ- ಆಮ್ಲಜನಕ, ಸಿಲಿಕಾನ್, ಅಲ್ಯುಮಿನಿಯಂ ಮತ್ತು ಕಬ್ಬಿಣ. ಭೂಮಿಯು ನಿರಂತರವಾಗಿ ಸುತ್ತುತ್ತಿರುವುದರಿಂದ, ಭೂಮಿಯ ಹೊರವಲಯದಲ್ಲಿ ಅಯಸ್ಕಾಂತೀಯ ವಲಯ (ಮ್ಯಾಗ್ನೆಟೋಸ್ಫಿಯರ್) ರೂಪುಗೊಂಡಿದೆ. ಈ ಅಯಸ್ಕಾಂತೀಯ ವಲಯವು ನಮ್ಮ ಭೂಮಿಯನ್ನು ಅಪಾಯಕಾರಿ ಸೌರ ವಿಕಿರಣ (ಸೋಲಾರ್ ರೇಡಿಯೇಶನ್) ಹಾಗೂ ಸೌರಗಾಳಿಗಳಿಂದ (ಸೋಲಾರ್ ಸ್ಟಾರ್ಮ್) ರಕ್ಷಿಸುತ್ತಿದೆ.

ನಮ್ಮ ಭೂಮಿಯ ಮೇಲೆ ಜೀವರಾಶಿಯ ಮೊದಲ ಉಗಮವು, ಇಂದಿಗೆ ಸುಮಾರು 3.5 ಶತಕೋಟಿ ವರ್ಷಗಳ ಹಿಂದೆ ನಡೆಯಿತು. ಆಗ ನಮ್ಮ ಭೂಮಿಯ ಪರಿಸರದಲ್ಲಿ ಆಮ್ಲಜನಕ ಇರಲಿಲ್ಲ, ಆದರೆ ಉಷ್ಣತೆಯು ಸುಮಾರು 100 ಡಿಗ್ರಿ ಸೆಲ್ಸಿಯಸ್ ಇತ್ತು. ಈ ಸ್ಥಿತಿಯಲ್ಲಿ ಕಬ್ಬಿಣ, ಗಂಧಕ ಹಾಗೂ ಹೈಡ್ರೋಜನ್ ಧಾತುಗಳು ಪರಸ್ಪರ ರಾಸಾಯನಿಕವಾಗಿ ವರ್ತಿಸಿದವು. ಇವುಗಳ ನಡುವೆ ಎಲೆಕ್ಟ್ರಾನುಗಳ ಆದಾನ ಪ್ರದಾನವಾದವು. ಅದರ ಫಲವಾಗಿ ಕಾರ್ಬನ್ ಮಾನಾಕ್ಸೈಡ್ ಹಾಗೂ ಕಾರ್ಬನ್ ಡೈ ಆಕ್ಸೈಡ್ ಉತ್ಪಾದನೆಯಾದವು. ಅನಂತರ ಆವಿ, ಮೀಥೇನ್, ಅಮೋನಿಯ ಇತ್ಯಾದಿ ಸಂಯುಕ್ತಗಳು ಜನಿಸಿದವು. ಇವುಗಳ ನಡುವೆ ಸಂಕೀರ್ಣ ರಾಸಾಯನಿಕ ಕ್ರಿಯೆಗಳು ನಡೆದು ಗ್ಲೈಸಿನ್, ಆಲ್ಫಾ ಅಲನೈನ್, ಬೀಟ ಅಲನೈನ್ ಮುಂತಾದ ಅಮೈನೋ ಆಮ್ಲಗಳು ಉತ್ಪಾದನೆಯಾದವು. ಇವೆಲ್ಲವೂ ಸೇರಿ ಏಕಕಣ ರೂಪದ ಆದಿಜೀವಿಗೆ ಜನ್ಮವನ್ನಿತ್ತವು. ಭೂಮಿಯ ಮೇಲೆ ಜೀವೋತ್ಪಾದನೆಯಾಗಲು ಕಬ್ಬಿಣವೂ ಒಂದು ಮುಖ್ಯವಾದ ಧಾತುವಾಗಿದೆ ಎನ್ನುವ ವಿಚಾರ ಬಹಳಷ್ಟು ಜನರಿಗೆ ತಿಳಿದಿರಲಾರದು.

ನಮ್ಮ ಪೂರ್ವಜರು, ಇಂದಿಗೆ ಸುಮಾರು 2,00,000 ವರ್ಷಗಳ ಹಿಂದೆ ಭೂಮಿಯ ಮೇಲೆ ಹುಟ್ಟಿದರು. ಸುಮಾರು ಕ್ರಿ.ಪೂ.15,000 ವರ್ಷಗಳ ಹಿಂದೆ ನಾಗರಿಕತೆಗಳು ಆರಂಭವಾದವು. ಆದಿ ಶಿಲಾಯುಗ, ನಡು ಶಿಲಾಯುಗ ಹಾಗೂ ನವಶಿಲಾಯುಗಗಳ ನಂತರ ಕಬ್ಬಿಣ ಯುಗವು ಸುಮಾರು ಕ್ರಿ.ಪೂ.1200-ಕ್ರಿ.ಪೂ.600 ವರ್ಷಗಳ ನಡುವೆ ಆರಂಭವಾಯಿತು. ಕಬ್ಬಿಣ ಯುಗದಲ್ಲಿ ನಮ್ಮ ಪೂರ್ವಜರು ಕಬ್ಬಿಣವನ್ನು ಬಳಸಿ ನಾನಾ ರೀತಿಯ ಶಕ್ತಿಶಾಲಿ ಆಯುಧಗಳನ್ನು ರೂಪಿಸಿಕೊಂಡರು. ಇದರೊಡನೆ ನಮ್ಮ ಪೂರ್ವಜರ ಮಹತ್ವಾಕಾಂಕ್ಷೆಯು ತೀವ್ರವಾಯಿತು. ಯುದ್ಧಗಳು ಹೆಚ್ಚಿದವು. ಹೊಸ ಹೊಸ ಸಾಮ್ರಾಜ್ಯಗಳು ಉದಯಿಸಿದವು. ಈ ವಿಚಾರವು ಸದ್ಯಕ್ಕೆ ನಮಗೆ ಅನಗತ್ಯ. ಆದರೆ ಕಬ್ಬಿಣ ಯುಗಕ್ಕೆ ಸೇರಿದ ಅಸ್ಸೀರಿಯನ್ನರು, ಕಬ್ಬಿಣವನ್ನು ಔಷಧವನ್ನಾಗಿ ಉಪಯೋಗಿಸಿದ ಮೊತ್ತ ಮೊದಲಿಗರು ಎನ್ನುವುದು ದಾಖಲೆಗೆ ಅರ್ಹವಾಗುವ ವಿಚಾರವಾಗಿದೆ.

ನಾವು ಬದುಕಲು ತೀರಾ ಅಗತ್ಯವಾದ ಎರಡು ಕಚ್ಚಾವಸ್ತುಗಳೆಂದರೆ ಗ್ಲೂಕೋಸ್ ಮತ್ತು ಆಮ್ಲಜನಕ. ನಾವು ಸೇವಿಸುವ ಆಹಾರವು ಜೀರ್ಣವಾಗಿ ಅಂತಿಮವಾಗಿ ಗ್ಲೂಕೋಸನ್ನು ಉತ್ಪಾದಿಸುತ್ತದೆ. ನಾವು ಉಸಿರಾಡುವಾಗ ಗಾಳಿಯೊಡನೆ ಆಮ್ಲಜನಕ ಶ್ವಾಸಕೋಶಗಳ ಒಳಗೆ ಬರುತ್ತದೆ. ಶ್ವಾಸಕೋಶಗಳ ಗಾಳಿಗೂಡುಗಳಲ್ಲಿ ಆಮ್ಲಜನಕ ರಕ್ತದೊಳಗೆ ನುಸುಳುತ್ತದೆ ಹಾಗೂ ಕಾರ್ಬನ್ ಡೈಯಾಕ್ಸೈಡ್ ಶ್ವಾಸಕೋಶಗಳ ಒಳಗೆ ಪ್ರವೇಶಿಸುತ್ತದೆ. ರಕ್ತದಲ್ಲಿ ಕೆಂಪು ರಕ್ತಕಣಗಳು ಇರುತ್ತವೆ. ಇವುಗಳ ಮೇಲೆ ಹಿಮೋಗ್ಲೋಬಿನ್ ಇರುತ್ತದೆ. ಇದು ಎರಡು ಘಟಕಗಳ ಸಂಯುಕ್ತ ರಚನೆ. ‘ಹೀಮ್’ ಎನ್ನುವ ಕಬ್ಬಿಣ ಭಾಗ ಹಾಗೂ ‘ಗ್ಲೋಬಿನ್’ ಎನ್ನುವ ಪ್ರೊಟೀನ್ ಭಾಗ. ಈ ಕಬ್ಬಿಣವು ಆಮ್ಲಜನಕವನ್ನು ಹೀರುತ್ತದೆ. ಕೆಂಪು ರಕ್ತಕಣವು ರಕ್ತಪ್ರವಾಹದಲ್ಲಿ ಹರಿಯುತ್ತ ನಮ್ಮ ದೇಹದ ಪ್ರತಿಯೊಂದು ಜೀವಕೋಶಕ್ಕೆ ಆಮ್ಲಜನಕವನ್ನು ಒದಗಿಸುತ್ತದೆ. ಜೀವಕೋಶ ಎನ್ನುವುದು ಜೈವಿಕ ಒಲೆ. ಗ್ಲೂಕೋಸ್ ಈ ಒಲೆಯನ್ನು ಪ್ರವೇಶಿಸುತ್ತದೆ. ಅದರೊಡನೆ ಆಮ್ಲಜನಕ ಸಹ ಒಳನುಗ್ಗುತ್ತದೆ. ಒಲೆಯ ಒಳಗೆ ಆಮ್ಲಜನಕ ಕಿಡಿಯನ್ನು ಹೊತ್ತಿಸಿ ಗ್ಲೂಕೋಸನ್ನು ಭಸ್ಮ (ಆಕ್ಸಿಡೀಕರಣ) ಮಾಡುತ್ತದೆ. ಆಗ ಶಕ್ತಿಯು ಉತ್ಪಾದನೆಯಾಗುತ್ತದೆ. ನಮ್ಮ ದೇಹದ ಪ್ರತಿಯೊಂದು ಜೀವಕೋಶವೂ ಈ ಶಕ್ತಿಯನ್ನು ಬಳಸಿಕೊಂಡು ತನ್ನ ಸಹಜ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ. ಹಾಗಾಗಿ ನಾವು ಬದುಕಲು ಅಗತ್ಯವಾದ ಆಮ್ಲಜನಕವನ್ನು ನಮಗೆ ಒದಗಿಸುವುದು ಕಬ್ಬಿಣ. ನಮ್ಮ ದೇಹದ ಎಲ್ಲ ಕೆಲಸ ಕಾರ್ಯಗಳು ಕ್ಲುಪ್ತವಾಗಿ ನಡೆಯಲು ಸಾಕಷ್ಟು ಆಮ್ಲಜನಕ ಬೇಕಾಗುತ್ತದೆ. ಅಷ್ಟು ಆಮ್ಲಜನಕವನ್ನು ಸಾಗಿಸಲು ಅಗತ್ಯ ಪ್ರಮಾಣದ ಕಬ್ಬಿಣವು ನಮ್ಮ ದೇಹದಲ್ಲಿ (ಯಾವುದೇ ಕಾರಣವಿರಲಿ) ದೊರೆಯದಿದ್ದರೆ, ಆ ಸ್ಥಿತಿಯನ್ನು ರಕ್ತಹೀನತೆ, ರಕ್ತಕೊರತೆ, ಅನೀಮಿಯ ಎಂದು ಕರೆಯುತ್ತೇವೆ. ಅನೀಮಿಯವು ವ್ಯಕ್ತಿಯ ಸರ್ವತೋಮುಖ ಪ್ರಗತಿಯನ್ನು ಕುಗ್ಗಿಸುತ್ತದೆ.

ನಮ್ಮ ದೇಹದಲ್ಲಿರುವ ಒಟ್ಟು ಆಮ್ಲಜನಕದಲ್ಲಿ ಶೇ.20ರಷ್ಟು ಭಾಗವನ್ನು ನಮ್ಮ ಮಿದುಳೇ ಬಳಸಿಕೊಳ್ಳುತ್ತದೆ. ಹಾಗಾಗಿ ಸಾಕಷ್ಟು ಆಮ್ಲಜನಕ ಇದ್ದರೆ ಮಾತ್ರ ಮಿದುಳು ಸರಿಯಾಗಿ ಕೆಲಸ ಮಾಡುತ್ತದೆ. ಕಡಿಮೆಯಾದರೆ, ಮಗುವು ಓದಿನಲ್ಲಿ ಹಿಂದೆ ಬೀಳುತ್ತದೆ. ಏಕಾಗ್ರತೆ, ಕಲಿಕೆ ಮತ್ತು ನೆನಪು ಕುಗ್ಗುತ್ತದೆ. ನಮ್ಮ ನರಮಂಡಲದಲ್ಲಿರುವ ನರಕೋಶಗಳು ಸಮಗ್ರವಾಗಿ ಕೆಲಸ ಮಾಡಬೇಕಾದರೆ ನರರಾಸಾಯನಿಕಗಳು ಅಥವಾ ನ್ಯೂರೋಟ್ರಾನ್ಸ್‌ಮಿಟರುಗಳು ಅಗತ್ಯ. ಡೋಪಮಿನ್, ಸೆರಟೋನಿನ್, ನಾರ್-ಎಪಿನೆಫ್ರಿನ್ ಮುಂತಾದವು ಉತ್ಪಾದನೆಯಾಗಲು ಕಬ್ಬಿಣ ಬೇಕು. ಈ ನರರಸಾಯನಿಕಗಳು ನಮ್ಮ ಭಾವನೆಗಳನ್ನು (ಮೂಡ್), ಚುರುಕುತನವನ್ನು ಹಾಗೂ ಕೌಶಲಗಳನ್ನು (ಕಾಗ್ನಿಟಿವ್) ನಿಯಂತ್ರಿಸುತ್ತವೆ. ಡೋಪಮಿನ್ ನಮಗೆ ಪ್ರೇರಣೆಯನ್ನು ಕೊಡುತ್ತದೆ. ಸೆರಟೋನಿನ್ ನಮ್ಮ ಭಾವನೆಗಳನ್ನು ಹಾಗೂ ನೆನಪಿನ ಶಕ್ತಿಯನ್ನು ನಿಯಂತ್ರಿಸುತ್ತದೆ. ನಮ್ಮ ನರಕೋಶಗಳನ್ನು ‘ಮಯಲಿನ್ ಶೀತ್’ ಎಂಬ ಕೊಬ್ಬು ಪದರವು ಆವರಿಸಿರುತ್ತದೆ. ಈ ಪದರವು ಆರೋಗ್ಯವಾಗಿದ್ದರೆ ಮಾತ್ರ, ನರಸಂಜ್ಞೆಗಳು ಪರಿಣಾಮಕಾರಿಯಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಬಲ್ಲವು. ಕಲಿತದ್ದು ನೆನಪಿನಲ್ಲಿ ಉಳಿಯಲು ಇದು ಅಗತ್ಯ. ಏಕಾಗ್ರತೆ ಬರಲು ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಲು ಕೊಬ್ಬುಪದರವು ಆರೋಗ್ಯವಾಗಿರಬೇಕು. ಅದಕ್ಕೆ ಕಬ್ಬಿಣವು ಬೇಕು. ನಮ್ಮ ಮಿದುಳಿನಲ್ಲಿ ‘ಹಿಪ್ಪೋಕ್ಯಾಂಪಸ್’ ಎಂಬ ಭಾಗವಿದೆ. ಕಲಿತದ್ದು ನೆನಪಾಗಿ ಉಳಿಯಲು ಈ ಭಾಗವು ಆರೋಗ್ಯವಾಗಿರಬೇಕು. ಅದಕ್ಕೆ ಸಾಕಷ್ಟು ಕಬ್ಬಿಣವು ದೊರೆಯಬೇಕು. ಕ್ರೀಡೆ, ನೃತ್ಯಗಳಲ್ಲಿ, ಅವಯವಗಳ ಸೂಕ್ಷ್ಮ ಚಲನೆಯಲ್ಲಿ ಪರಿಣತಿ ಗಳಿಸಲು ಈ ಭಾಗವು ಆರೋಗ್ಯವಾಗಿರಬೇಕು. ನಮ್ಮ ನರಕೋಶಗಳಿಗೆ ಸಾಕಷ್ಟು ಕಬ್ಬಿಣವು ದೊರೆಯದಿದ್ದರೆ, ನರಕೋಶಗಳು ನಶಿಸಲಾರಂಭಿಸುತ್ತವೆ. ನರಕೋಶಗಳನ್ನು ನಾಶಪಡಿಸುವ ಉತ್ಕರ್ಷಕಗಳನ್ನು (ಆಕ್ಸಿಡೆಂಟ್) ಕಬ್ಬಿಣವು ನಿರ್ಮೂಲನಗೊಳಿಸುತ್ತದೆ. ಅದರೊಡನೆ ಆಲ್ಜೈಮರ್ಸ್ ಮುಂತಾದ ಕಾಯಿಲೆಗಳು ಬರುವ ಸಾಧ್ಯತೆಯು ಹೆಚ್ಚುತ್ತದೆ.

ನಮ್ಮ ದೇಶದಲ್ಲಿ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆಯು (ಎನ್ಎಫ್ಎಚ್ಎಸ್-5) ನಡೆಯಿತು. ಅದರ ಅನ್ವಯ 6-59 ತಿಂಗಳ ಮಕ್ಕಳಲ್ಲಿ ಶೇ.67.1ರಷ್ಟು, 15-19 ವರ್ಷದ ಹೆಣ್ಣು ಮಕ್ಕಳಲ್ಲಿ ಶೇ.59.1ರಷ್ಟು, 15-19 ವರ್ಷದ ಗಂಡು ಹುಡುಗರಲ್ಲಿ ಶೇ.31.1ರಷ್ಟು, ಮಕ್ಕಳನ್ನು ಹೆರುವ 15-49 ವರ್ಷ ವಯಸ್ಸಿನ ಮಹಿಳೆಯರಲ್ಲಿ ಶೇ.57.2ರಷ್ಟು ಹಾಗೂ ಗರ್ಭವತಿಯರಲ್ಲಿ ಶೇ.52.2ರಷ್ಟು ಅನೀಮಿಯ ಕಂಡುಬರುತ್ತದೆ. ಭಾರತವನ್ನು ಅನೀಮಿಯ-ಮುಕ್ತ ದೇಶವನ್ನಾಗಿ ಮಾಡಲು ಪ್ರತಿಯೊಬ್ಬ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ವಿಶ್ವದ ಜನಸಂಖ್ಯೆ 8 ಬಿಲಿಯನ್. ಇವರಲ್ಲಿ 2 ಬಿಲಿಯನ್ ಜನರು ಅನೀಮಿಯದಿಂದ ನರಳುತ್ತಿದ್ದಾರೆ ಎಂದರೆ, ಅದು ನಿಜಕ್ಕೂ ಕಳವಳಕಾರಿ ವಿಷಯವಾಗಿದೆ.

ಅನೀಮಿಯವು ಬಹುಶಃ ಮನುಷ್ಯನಷ್ಟೇ ಅನಾದಿಕಾಲದ ಸಮಸ್ಯೆಯಾಗಿರಬೇಕು. ಇತಿಹಾಸಪೂರ್ವದ ಅಸ್ಥಿಪಂಜರಗಳನ್ನು ಗಮನಿಸಿದಾಗ, ಕಣ್ಣುಗುಳಿಯೊಳಗೆ (ಐ ಆರ್ಬಿಟ್) ಸೂರನ್ನು ರೂಪಿಸುವ ಮೂಳೆಯಲ್ಲಿ ಜರಡಿಯಂಥ ಸೂಕ್ಷ್ಮ ರಂಧ್ರಗಳು ಕಂಡುಬಂದಿವೆ. ಇದಕ್ಕೆ ಕಬ್ಬಿಣಾಂಶದ ಕೊರತೆ ಎನ್ನಲಾಗಿದೆ. ಇದನ್ನು ‘ಕ್ರಿಬ್ರ ಆರ್ಬಿಟೇಲಿಯ’ ಎಂದು ಕರೆಯುವುದುಂಟು. ಪ್ರಾಚೀನ ಈಜಿಪ್ಷಿಯನ್ ಮತ್ತು ಗ್ರೀಕ್ ವೈದ್ಯಕೀಯ ಸಾಹಿತ್ಯದಲ್ಲಿ, ರೋಗಿಗಳು ಬಿಳಿಚಿಕೊಳ್ಳುವುದು, ವಿಪರೀತ ಸುಸ್ತು, ತಲೆಸುತ್ತುವುದು, ಪ್ರಜ್ಞೆತಪ್ಪಿಬೀಳುವುದು ಇತ್ಯಾದಿ ಲಕ್ಷಣಗಳ ವರ್ಣನೆಗಳಿವೆ. ಬಹುಶಃ ಇದು ಅನೀಮಿಯವೇ ಆಗಿರಬೇಕು. ಕ್ರಿ.ಶ.16-20ನೆಯ ಶತಮಾನದವರೆಗೆ ‘ಕ್ಲೋರೋಸಿಸ್’ ಎನ್ನುವ ರೋಗವು ಬಹಳ ಪ್ರಚಲಿತದಲ್ಲಿತ್ತು. ಇದನ್ನು ‘ಗ್ರೀನ್ ಸಿಕ್ನೆಸ್’, ‘ವರ್ಜಿನ್ ಸಿಕ್ನೆಸ್’/‘ಮಾರ್ಬಸ್ ವರ್ಜಿನಸ್’ ಎಂದೂ ಕರೆಯುತ್ತಿದ್ದರು. ಇದೊಂದು ಗ್ರೀಕ್ ಶಬ್ದ. ‘ಹಸಿರು ಛಾಯೆಯ ಹಳದಿ’ ಎಂದರ್ಥ. ಮಾರ್ಬಸ್ ವರ್ಜಿನಸ್ ಎಂದರೆ ‘ಹದಿಹರೆಯದ ಹೆಣ್ಣುಮಕ್ಕಳಿಗೆ ಪ್ರಕೃತಿ ನೀಡಿದ ಶಾಪ’ ಎಂದರ್ಥ. ಅಂದಿನ ದಿನಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳು ಪೇಲವವಾಗಿ ಕಾಣುತ್ತಿದ್ದರು. ವಿಪರೀತ ತಲೆನೋವು. ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಹಸಿವೆಯಾಗುತ್ತಿರಲಿಲ್ಲ, ತಿಂದದ್ದು ಅರಗುತ್ತಿರಲಿಲ್ಲ. ವಿಪರೀತ ಸುಸ್ತು. ಪ್ರಖ್ಯಾತ ಇಂಗ್ಲಿಷ್ ವೈದ್ಯ ಥಾಮಸ್ ಸಿಡೆನ್‌ಹ್ಯಾಮ್ ಇದನ್ನು ಮನೋರೋಗವೆಂದು ಕರೆದ. ಆದರೆ ಈ ರೋಗವನ್ನು ನಿಗ್ರಹಿಸಲು ಕಬ್ಬಿಣಾಂಶವನ್ನು ಸೇವಿಸಬೇಕೆಂದ ಫ್ರೆಂಚ್ ವೈದ್ಯ ಪಿಯರಿ ಬ್ಲಾಡ್. ಫೆರಸ್ ಕಾರ್ಬೋನೇಟ್ ಇರುವ ಗುಳಿಗೆಗಳು ‘ಬ್ಲಾಡ್ ಪಿಲ್’ ಎಂಬ ಹೆಸರಿನಲ್ಲಿ ಜನಪ್ರಿಯವಾದವು. 20ನೆಯ ಶತಮಾನದಲ್ಲಿ ಫೆರಸ್ ಸಲ್ಫೇಟ್, ಫೆರಸ್ ಗ್ಲೂಕೋನೆಟ್, ಫೆರಿಕ್ ಕಾರ್ಬಾಕ್ಸಿಮಾಲ್ಟೋಸ್ ಇರುವ ಕಬ್ಬಿಣಯುಕ್ತ ಗುಳಿಗೆಗಳು ಜನಪ್ರಿಯವಾದವು. ಕಬ್ಬಿಣಾಂಶದ ಕೊರತೆಯು ತೀವ್ರವಾಗಿದ್ದಾಗ ಡ್ರಿಪ್ ಮೂಲಕ ಅದನ್ನು ಪೂರೈಸುವ ಪದ್ಧತಿಯು ಜಾರಿಗೆ ಬಂದಿತು. ಸಕ್ಕರೆ, ಉಪ್ಪು ಮುಂತಾದ ದೈನಂದಿನ ಆಹಾರ ಪದಾರ್ಥಗಳ ಜತೆಯಲ್ಲಿ ಕಬ್ಬಿಣಾಂಶವನ್ನು ಬೆರೆಸಿ ನೀಡುವ ಪದ್ಧತಿಯು ಆರಂಭವಾಯಿತು.

ಚರಕ ಸಂಹಿತ ಹಾಗೂ ಸುಶ್ರುತ ಸಂಹಿತೆಗಳು ‘ಪಾಂಡು ರೋಗ’ವನ್ನು ಪ್ರಸ್ತಾಪಿಸುತ್ತವೆ. ಪಾಂಡು ರೋಗವೇ ಅನೀಮಿಯ. ಮಹಾಭಾರತದಲ್ಲಿ ಬರುವ ಪಾಂಡು ಮಹಾರಾಜನಿಗೆ ಅನೀಮಿಯ ಇತ್ತು ಎನ್ನುವ ಹೇಳಿಕೆಯುಂಟು. ವಾತಜ ಪಾಂಡು, ಪಿತ್ತಜ ಪಾಂಡು, ಕಫಜ ಪಾಂಡು, ಸನ್ನಿಪಾತಜ ಪಾಂಡು ಎಂಬ ನಮೂನೆಗಳನ್ನು ಅವು ಪ್ರಸ್ತಾಪಿಸುತ್ತವೆ. ರೋಗಿಯ ದೈನಂದಿನ ಜೀವನಶೈಲಿಯನ್ನು ಅಧ್ಯಯನ ಮಾಡಿ, ಆತನ ನಾಡಿಯನ್ನು ಪರೀಕ್ಷಿಸಿ, ಕಣ್ಣು, ಚರ್ಮ, ಉಗುರನ್ನು ನೋಡಿ ರೋಗನಿದಾನ ಮಾಡುವ ಪದ್ಧತಿಯಿದೆ. ಪಂಚಕರ್ಮವನ್ನು ನೀಡಿ ತ್ರಿದೋಷವನ್ನು ಸರಿಪಡಿಸುವುದು ಅಗತ್ಯ. ನಂತರ ಲೋಹಭಸ್ಮ, ಮಂದುರ ಭಸ್ಮ, ಪುನರ್ನವ, ಆಮ್ಲ, ಅಶ್ವಗಂಧ, ಶತಾವರಿ ಮುಂತಾದವನ್ನು ನೀಡಿ ಪಾಂಡುರೋಗವನ್ನು ಗುಣಪಡಿಸುವ ಪದ್ಧತಿಯಿದೆ. ನಮ್ಮ ತಾಯಂದಿರು ಮನಸ್ಸು ಮಾಡಿದರೆ, ಅನೀಮಿಯ-ಮುಕ್ತ ಭಾರತದ ಕನಸನ್ನು ನನಸು ಮಾಡಬಹುದು. ಆರು ತಿಂಗಳಿಗೆ ಒಮ್ಮೆ ಹೊಟ್ಟೆ ಹುಳುವಿನ ಗುಳಿಗೆಯನ್ನು ನೀಡಿ. ಪ್ರತಿದಿನ ಒಂದು ಸೊಪ್ಪನ್ನು (ದಂಟು, ನುಗ್ಗೆ) ತಿನ್ನಲು ನೀಡಿ. ಸಕ್ಕರೆಯ ಬದಲು ಬೆಲ್ಲವನ್ನು ಬಳಸಿ. ಎಳ್ಳು, ಕುಂಬಳಬೀಜ, ಖರ್ಜೂರವನ್ನು ತಿನ್ನಲು ನೀಡಿ. ಸಪೋಟ, ಅಂಜೂರ, ದಾಳಿಂಬೆಯನ್ನು ನೀಡಿ. ರಾಗಿಯ ಹುರಿಹಿಟ್ಟನ್ನು ನೀಡಿ. ಹೆಣ್ಣುಮಕ್ಕಳ ಹಿಮೋಗ್ಲೋಬಿನ್ ಪ್ರಮಾಣವನ್ನು 6 ತಿಂಗಳಿಗೊಮ್ಮೆ ಪರೀಕ್ಷಿಸಿ. ಕಡಿಮೆಯಿದ್ದರೆ ಔಷಧವನ್ನು ನೀಡಿ ಸರಿಪಡಿಸಿ. ಆಗ ಮಾತ್ರ ನಿಮ್ಮ ಮಗಳು ಬುದ್ಧಿವಂತೆಯಾಗಲು ಸಾಧ್ಯ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅನನ್ಯ ಮಾರ್ಗದರ್ಶಿ

ಹರೀಶ್ ಕೇರ ಅವರ ‘ಒಂದು ನಗರ ಸಾಯುವುದು ಹೇಗೆ?’ ಎಂಬ ಅಂಕಣ ಬರಹವು (ವಿಶ್ವವಾಣಿ ಅ.25) ಪ್ರಬುದ್ಧವೂ ಚಿಂತನಾಪೂರ್ಣವೂ ಆಗಿತ್ತು. ಸುಂದರ ಬೆಂಗಳೂರು ಇಂದು ಹೀಗೇಕಾಯ್ತು ಎಂಬುದರ ಕಾರಣವನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸಿರುವ ಪರಿಯು ಲೇಖಕರ ಆಳ ಅಧ್ಯಯನದ ದ್ಯೋತಕ. ಇದರಲ್ಲಿನ ಒಂದೊಂದು ಅಂಶವೂ ಸತ್ಯಸ್ಯ ಸತ್ಯ, ಇಲ್ಲಿ ಕಲ್ಪನೆ ಅಥವಾ ಊಹೆಗಳಿಲ್ಲ. ದೇಹಕ್ಕೆ ತಗುಲಿಕೊಂಡ ರೋಗದ ಕಾರಣ ಕಂಡುಹಿಡಿಯುವ ರೀತಿಯಲ್ಲೇ ಒಂದು ನಗರದ ಅವನತಿಯ ಕಾರಣವನ್ನು ಇಲ್ಲಿ ವಿವರಿಸಲಾಗಿದೆ. ಬೆಂಗಳೂರಿನ ಇಂದಿನ ರೋಗಸ್ಥಿತಿಯ ಚಿಕಿತ್ಸೆಗೂ ಬಗ್ಗದ ರೀತಿಯಲ್ಲಿ ಉಲ್ಬಣಿಸಿಬಿಟ್ಟಿದೆ. ನಗರಸಭೆಗಳು, ಪಂಚಾಯಿತಿಗಳು ಈ ಲೇಖನವನ್ನು ಗಂಭೀರವಾಗಿ ಅಧ್ಯಯನ ಮಾಡಿ, ಅದರಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಅನುಷ್ಠಾನ ಮಾಡಿದಲ್ಲಿ, ತಂತಮ್ಮ ಊರುಗಳನ್ನು ಸುಂದರವಾಗಿಸಿಕೊಳ್ಳಬಹುದು. ಶಾಲೆಗಳ, ಆಸ್ಪತ್ರೆಗಳ ಕಾಯಕಲ್ಪಕ್ಕೆ ಮಾರ್ಗದರ್ಶಿಯಾಗಬಲ್ಲ ಇಂಥ ಲೇಖನಗಳು ಹೆಚ್ಚೆಚ್ಚು ಪ್ರಕಟವಾಗಲಿ. ಸಕಾಲಿಕ ಲೇಖನ ಬರೆದ ಹರೀಶ್ ಕೇರ ಅವರಿಗೆ ಅಭಿನಂದನೆಗಳು.

- ಸತ್ಯಬೋಧ, ಬೆಂಗಳೂರು

ಖರ್ಚು ವಸೂಲು ಮಾಡಿ

ದೇಶದಲ್ಲಿ ಕಳೆದ 15 ದಿನಗಳಲ್ಲಿ 410ಕ್ಕೂ ಹೆಚ್ಚು ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿರುವುದಾಗಿ ವರದಿಯಾಗಿದೆ. ವಿಮಾನದಲ್ಲಿ ಬಾಂಬ್ ಇರಿಸಲಾಗಿದೆಯೆಂಬ ಕರೆಬಂದಾಗ, ವಿಮಾನಯಾನ ಸಂಸ್ಥೆಯ ಸಿಬ್ಬಂದಿವರ್ಗ ಹಾಗೂ ಪ್ರಯಾಣಿಕರು ಗಾಬರಿಯಾಗುವುದು, ಬಾಂಬ್ ನಿಷ್ಕ್ರಿಯ ದಳವನ್ನು ಕರೆಸಿ ಪರಿಶೀಲನೆ ನಡೆಸುವುದು, ಒಂದೊಮ್ಮೆ ವಿಮಾನವು ಟೇಕಾಫ್ ಆಗಿದ್ದರೆ ಮರಳಿ ಲ್ಯಾಂಡ್ ಮಾಡುವಂತೆ ಅದರ ಪೈಲಟ್‌ಗೆ ಸೂಚಿಸುವುದು ಈ ಎಲ್ಲ ಬಾಬತ್ತುಗಳಿಗೆ ಗಣನೀಯ ಮೊತ್ತದ ಹಣವು ಖರ್ಚಾಗುತ್ತದೆ ಎಂಬ ಮಾಹಿತಿಯಿದೆ. ಆದರೆ ಹುಸಿಕರೆ ಮಾಡಿದ ದುಷ್ಕರ್ಮಿಗಳಿಗೆ ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ, ಇದಕ್ಕೆ ಕಾರಣ ನಮ್ಮ ಕಾನೂನು ವ್ಯವಸ್ಥೆಯಲ್ಲಿನ ನ್ಯೂನತೆಗಳು.

ಇಂಥ ಪ್ರಕರಣ ನಡೆದಾಗ ಅಬ್ಬಬ್ಬಾ ಎಂದರೆ ಏನಾಗುತ್ತದೆ? ಹುಸಿಕರೆಯ ಜಾಡುಹಿಡಿದು ಹೊರಟ ಪೊಲೀಸರು ದುಷ್ಕರ್ಮಿಯನ್ನು ಬಂಧಿಸುತ್ತಾರೆ. ಅವನ ವಿಚಾರಣೆ ನಡೆದು ಒಂದೋ ಎರಡೋ ತಿಂಗಳು ಶಿಕ್ಷೆಯಾಗಿ ಬಿಡುಗಡೆಯಾಗುತ್ತದೆ. ಇಂಥ ವ್ಯವಸ್ಥೆಯಿಂದ ಏನೂ ಪ್ರಯೋಜನವಾಗದು. ಇದಕ್ಕೆ ಪರಿಹಾರವೆಂದರೆ, ಹುಸಿಕರೆ ಮಾಡಿದ ದುಷ್ಕರ್ಮಿಯಿಂದಲೇ ಎಲ್ಲ ಖರ್ಚು-ವೆಚ್ಚಗಳನ್ನು ವಸೂಲಿಮಾಡಬೇಕು. ಆತ ಎಂಥವನೇ ಆಗಿರಲಿ, ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಖರ್ಚು ತುಂಬಲಾಗದ ವ್ಯಕ್ತಿಯನ್ನು ನಿರ್ದಾಕ್ಷಿಣ್ಯವಾಗಿ ಜೈಲಿಗೆ ತಳ್ಳಬೇಕು. ಇಂಥ ಕಠಿಣ ಕ್ರಮಗಳನ್ನು ಕೈಗೊಂಡರೆ ಮಾತ್ರವೇ ಸಮಾಜಘಾತುಕ ಶಕ್ತಿಗಳ ನಿರ್ಮೂಲನೆ ಸಾಧ್ಯ. ದೇಶದಲ್ಲಿ ಪ್ರಸ್ತುತ ಕಾಣಬರುತ್ತಿರುವ ಮತ್ತೊಂದು ಸಮಾಜಘಾತುಕ ಕಾರ್ಯವೆಂದರೆ, ರೈಲುಹಳಿಗಳ ಮೇಲೆ ಸಿಲಿಂಡರ್, ಮರದ ಬೊಡ್ಡೆ ಇಟ್ಟು ಅಥವಾ ಹಳಿಯ ಬೋಲ್ಟ್‌ಗಳನ್ನು ಸಡಿಲಗೊಳಿಸಿ ರೈಲಿನ ಹಳಿ ತಪ್ಪಿಸಲು ಯತ್ನಿಸುವುದು. ಈ ಎಲ್ಲದರ ಉದ್ದೇಶ ಜನರಲ್ಲಿ ತಲ್ಲಣವನ್ನೂ, ಸಮಾಜದಲ್ಲಿ ಅಸ್ಥಿರತೆಯನ್ನೂ ಉಂಟುಮಾಡುವುದು, ಅಂತಿಮವಾಗಿ ದೇಶದ ಆರ್ಥಿಕತೆಯನ್ನು ದುರ್ಬಲಗೊಳಿಸುವುದು. ಬೇರಾವ ಭಯೋತ್ಪಾದಕತೆಗೂ ಇದು ಕಮ್ಮಿಯಿಲ್ಲ, ಆದ್ದರಿಂದ ಇಂಥ ದುಷ್ಕರ್ಮಿಗಳನ್ನೂ ಮಟ್ಟಹಾಕಲೇಬೇಕು. ಅದರ ಮೊದಲ ಹೆಜ್ಜೆಯಾಗಿ, ಅವರಿಂದಲೂ ಖರ್ಚು-ವೆಚ್ಚ ವಸೂಲಿಮಾಡಿ ಜನರಿಗೆ ಗೊತ್ತಾಗುವಂತೆ ಅವರ ಮೆರವಣಿಗೆ ಮಾಡಬೇಕು.

- ಉಮೇಶ ಬೆಳಕೂಡ, ಮೂಡಲಗಿ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ರೈತರ ನೆತ್ತಿಯ ಮೇಲಿನ ತೂಗುಗತ್ತಿಯಾಗಿರುವ ವಕ್ಫ್

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್

vveditoped@gmail.com

ಮತಬ್ಯಾಂಕ್ ರಾಜಕಾರಣದ ಪರಾಕಾಷ್ಠೆಯ ಫಲವಾಗಿ 1995 ಮತ್ತು 2013ರಲ್ಲಿ ಕಾಂಗ್ರೆಸ್ ಸರಕಾರವು ಜಾರಿಗೆ ತಂದ ವಕ್ಫ್ ಕಾಯ್ದೆಯ ತಿದ್ದುಪಡಿಯ ದುರ್ಲಾಭವನ್ನು ಪಡೆದು, ತಮಿಳುನಾಡಿನ ತಿರುಚಂದೂರಿನಲ್ಲಿ ಚೋಳರು ನಿರ್ಮಿಸಿದ್ದ, 1500 ವರ್ಷಗಳ ಇತಿಹಾಸವಿದ್ದ ಸುಂದರೇಶ್ವರ ದೇವಸ್ಥಾನವೂ ಸೇರಿದಂತೆ ಇಡೀ ಗ್ರಾಮವನ್ನು ವಕ್ಫ್ ಆಸ್ತಿಯೆಂದು ಏಕಾಏಕಿ ಘೋಷಿಸಲಾಯಿತು. ಎಐಡಿಯುಎಫ್ ಮುಖ್ಯಸ್ಥ ಮತ್ತು ಸಂಸದ ಬದ್ರುದ್ದೀನ್ ಅಜ್ಮಲ್ ಅವರು ದೆಹಲಿಯ ಪಾರ್ಲಿಮೆಂಟ್ ಭವನವನ್ನು ವಕ್ಫ್ ಆಸ್ತಿಯ ಮೇಲೆ ನಿರ್ಮಿಸಲಾಗಿದೆ ಎಂದು ಬಾಂಬ್ ಸಿಡಿಸಿದರು. ಕರ್ನಾಟಕ ವಕ್ಫ್ ಬೋರ್ಡ್‌ನ ಮಾಜಿ ಅಧ್ಯಕ್ಷ ಶಫಿ ಸಾದಿಯವರು, ‘ವಿಧಾನಸೌಧ ಮತ್ತು ವಿಕಾಸಸೌಧಗಳು ವಕ್ಫ್ ಆಸ್ತಿ’ ಎಂದು ಹೇಳುತ್ತಾರೆ. ಇವು ವಕ್ಫ್ ಆಸ್ತಿಯ ವಿಷಯವು ಇತ್ತೀಚಿನ ದಿನಗಳಲ್ಲಿ ಉಂಟುಮಾಡಿರುವ ಸಂಚಲನದ ಕೆಲ ಸ್ಯಾಂಪಲ್‌ಗಳು.

‘ವಕ್ಫ್’ ಎಂದರೆ ಅರೇಬಿಕ್ ಭಾಷೆಯಲ್ಲಿ ‘ಶರಣಾಗು’ ಎಂದರ್ಥ. ದಾನವಾಗಿ ಪಡೆದ ಆಸ್ತಿಯನ್ನು ಧರ್ಮ ಮತ್ತು ಸೇವಾಕಾರ್ಯಗಳಿಗಾಗಿ ಮಾತ್ರ ಉಪಯೋಗಿಸಬೇಕು. ಅಂಥ ಆಸ್ತಿಯನ್ನು ‘ವಕ್ಫ್ ಆಸ್ತಿ’ ಎನ್ನಲಾಗುತ್ತದೆ. ಆಸ್ತಿಯು ಒಮ್ಮೆ ವಕ್ಫ್‌ನ ಪಾಲಾದರೆ ಅದನ್ನು ಮರಳಿ ಪಡೆಯಲು ಸಾಧ್ಯವಿಲ್ಲ; ವಕ್ಫ್ ಆಸ್ತಿಯನ್ನು ‘ದೇವರಿಗೆ ಸೇರಿದ್ದು’ ಎಂದು ಪರಿಗಣಿಸಲಾಗುವುದು. ಬ್ರಿಟಿಷರು 1913ರಲ್ಲಿ ಮೊದಲ ಬಾರಿಗೆ ವಕ್ಫ್ ಕಾಯ್ದೆಯನ್ನು ಜಾರಿಗೆ ತಂದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ತರುವಾಯ ಆಗಿನ ಪ್ರಧಾನಿ ನೆಹರು ಅವರು 1955ರಲ್ಲಿ ವಕ್ಫ್ ಕಾಯ್ದೆಯನ್ನು ಜಾರಿಗೆ ತಂದರು. 1995ರಲ್ಲಿ ಪಿ.ವಿ.ನರಸಿಂಹರಾವ್ ಅವರು ಈ ಕಾಯ್ದೆಗೆ ತಿದ್ದುಪಡಿ ತಂದು ಮತ್ತಷ್ಟು ಬಲವನ್ನು ತುಂಬಿದರು. 1995ರ ಕಾಯ್ದೆಯ ಸೆಕ್ಷನ್ 3ರ ಪ್ರಕಾರ, ವಕ್ಫ್ ಭೂಮಿಯು ಮುಸ್ಲಿಮರಿಗೆ ಸೇರಿದ್ದು ಎಂದು ಭಾವಿಸಿದರೆ ಸಾಕು ಅದು ವಕ್ಫ್‌ನ ಆಸ್ತಿಯಾಗುತ್ತದೆ. ತನ್ನ ಮಾಲೀಕತ್ವವನ್ನು ಸಾಬೀತು ಪಡಿಸಲು ವಕ್ಫ್ ಮಂಡಳಿಗೆ ಯಾವುದೇ ಪುರಾವೆಯ ಅಗತ್ಯವಿರುವುದಿಲ್ಲ. ಆಸ್ತಿ ಕಳೆದುಕೊಂಡ ಮಾಲೀಕ ನ್ಯಾಯಾಲಯದ ಮೊರೆಹೋಗಲಾಗುವುದಿಲ್ಲ. ಆತ ನ್ಯಾಯಕ್ಕಾಗಿ ವಕ್ಫ್ ಬೋರ್ಡ್ ಟ್ರಿಬ್ಯೂನಲ್‌ಗೆ (ನ್ಯಾಯಮಂಡಳಿಗೆ) ಮೊರೆಹೋಗಬೇಕಾಗುತ್ತದೆ. ವಕ್ಫ್ ಕಾಯ್ದೆಯ ಸೆಕ್ಷನ್ 85ರ ಪ್ರಕಾರ, ಇದು ನಿಮ್ಮ (ಅಂದರೆ ಮಾಲೀಕರ) ಸ್ವಂತ ಭೂಮಿ ಎಂಬುದನ್ನು ವಕ್ಫ್ ಬೋರ್ಡ್ ಟ್ರಿಬ್ಯೂನಲ್ ಸಮ್ಮುಖದಲ್ಲಿ ಸಾಬೀತುಮಾಡಲು ನಿಮಗೆ ಸಾಧ್ಯವಾಗದಿದ್ದರೆ, ಭೂಮಿಯನ್ನು ಖಾಲಿಮಾಡುವಂತೆ ನಿಮಗೆ ಆದೇಶಿಸಲಾಗುತ್ತದೆ. ವಕ್ಫ್ ಕಾಯ್ದೆಯ ಸೆಕ್ಷನ್ 40ರ ಪ್ರಕಾರ, ಭೂಮಿಯ ಮೇಲಿನ ಹಕ್ಕನ್ನು ಸಾಬೀತುಪಡಿಸುವುದು ವಕ್ಫ್ ಮಂಡಳಿಯ ಜವಾಬ್ದಾರಿಯಲ್ಲ, ಅದು ಭೂಮಿಯ ನಿಜವಾದ ಮಾಲೀಕನ ಹೆಗಲ ಮೇಲಿನ ಹೊಣೆ. ಇಲ್ಲಿ ನ್ಯಾಯಮಂಡಳಿಯ ತೀರ್ಮಾನವೇ ಅಂತಿಮ. ವಕ್ಫ್ ನ್ಯಾಯಮಂಡಳಿಯ ತೀರ್ಪನ್ನು ಯಾವುದೇ ನ್ಯಾಯಾಲಯ, ಅಷ್ಟೇಕೆ ಸುಪ್ರೀಂ ಕೋರ್ಟ್ ಕೂಡ ಬದಲಾಯಿಸಲು ಸಾಧ್ಯವಿಲ್ಲ. ಒಮ್ಮೆ ವಕ್ಫ್‌ನ ಆಸ್ತಿ ಎನಿಸಿಕೊಂಡರೆ ಅದು ಎಂದೆಂದಿಗೂ ವಕ್ಫ್‌ನ ಆಸ್ತಿಯೇ.

ಪ್ರಪಂಚದ ಎಲ್ಲಾ ಇಸ್ಲಾಮಿಕ್ ದೇಶಗಳು ವಕ್ಫ್ ಮಂಡಳಿಯನ್ನು ಹೊಂದಿಲ್ಲ. ಟರ್ಕಿ, ಲಿಬಿಯಾ, ಈಜಿಪ್ಟ್, ಸುಡಾನ್, ಲೆಬನಾನ್, ಸಿರಿಯಾ, ಜೋರ್ಡಾನ್, ಟುನೀಶಿಯಾ ಮತ್ತು ಇರಾಕ್‌ನಲ್ಲಿ ವಕ್ಫ್ ಇಲ್ಲ. ‘ಜಾತ್ಯತೀತ’ ಎಂದು ಹಣೆಪಟ್ಟಿ ಕಟ್ಟಿಕೊಂಡಿರುವ ಭಾರತದಲ್ಲಿ ಮಾತ್ರ ವಕ್ಫ್ ಬೋರ್ಡ್‌ಗಳು ಅತಿದೊಡ್ಡ ನಗರ ಭೂಮಾಲೀಕರಾಗಿರುವುದು ಮಾತ್ರವಲ್ಲದೆ, ಅವುಗಳ ಮೇಲೆ ನಿರಂಕುಶ ಅಧಿಕಾರವನ್ನು ಹೊಂದಿವೆ. ಪ್ರಸ್ತುತ ಭಾರತದಲ್ಲಿ ವಕ್ಫ್ ಮಂಡಳಿಗಳ ನಿಯಂತ್ರಣದಲ್ಲಿ 9.4 ಲಕ್ಷ ಎಕರೆ ಪ್ರದೇಶದಲ್ಲಿ 8.7 ಲಕ್ಷದಷ್ಟು ಆಸ್ತಿಗಳಿವೆ. ಭಾರತದಲ್ಲಿ ಅತಿಹೆಚ್ಚು ಭೂಮಿ ಹೊಂದಿರುವ ಸಂಸ್ಥೆಗಳ ಪಟ್ಟಿಯಲ್ಲಿ ವಕ್ಫ್ ಮೂರನೆಯ ಸ್ಥಾನದಲ್ಲಿದೆ (18 ಲಕ್ಷ ಎಕರೆ ಭೂಮಿಯನ್ನು ಹೊಂದಿರುವ ರಕ್ಷಣಾ ಇಲಾಖೆ ಮೊದಲನೆಯ ಸ್ಥಾನದಲ್ಲಿದ್ದರೆ, 12 ಲಕ್ಷ ಎಕರೆ ಭೂಮಿ ಹೊಂದಿರುವ ಭಾರತೀಯ ರೇಲ್ವೆಯು ಎರಡನೆಯ ಸ್ಥಾನದಲ್ಲಿದೆ).

ವಕ್ಫ್ ಮಂಡಳಿಯಲ್ಲಿ ಕಿಂಚಿತ್ತೂ ಪಾರದರ್ಶಕತೆಯಿಲ್ಲ. ಸಾವಿರಾರು ಕೋಟಿ ಮೌಲ್ಯದ ಆಸ್ತಿಯು ಅಕ್ರಮವಾಗಿ ಪರಭಾರೆಯಾಗಿದೆ. ಕೇವಲ ಕರ್ನಾಟಕದ ವಕ್ಫ್ ಆಸ್ತಿಯ ಬಗ್ಗೆ ತನಿಖೆಯನ್ನು ಕೈಗೊಂಡ ಅನ್ವರ್ ಮಣಿಪ್ಪಾಡಿ ಸಮಿತಿಯು ತಾನು ನೀಡಿದ 7,000 ಪುಟಗಳ ವರದಿಯಲ್ಲಿ, ವಕ್ಫ್ ಮಂಡಳಿಯಲ್ಲಿ 2.3 ಲಕ್ಷ ಕೋಟಿ ರುಪಾಯಿ ಮೊತ್ತದ ಭ್ರಷ್ಟಾಚಾರ ನಡೆದಿರುವುದನ್ನು ಬಯಲಿಗೆಳೆದಿದೆ. ರಾಜ್ಯದಲ್ಲಿ ಒಟ್ಟು 54,000 ಎಕರೆ ಜಮೀನು ವಕ್ಫ್ ಸುಪರ್ದಿನಲ್ಲಿದ್ದು, ಅದರಲ್ಲಿ 29,000 ಎಕರೆ ಅಕ್ರಮವಾಗಿ ಪರಭಾರೆಯಾಗಿರುವುದನ್ನು ಅದು ತಿಳಿಸಿದೆ. ಈ ಹಗರಣದಲ್ಲಿ ಅಂದಿನ ಕಾಂಗ್ರೆಸ್ ಸರಕಾರದ ಹಲವು ಪ್ರಮುಖ ನಾಯಕರು ಶಾಮೀಲಾಗಿರುವ ಬಗೆಗಿನ ವಿವರಗಳನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ‘ವಕ್ಫ್ ಹಗರಣವು ಕಲ್ಲಿದ್ದಲು ಹಗರಣಕ್ಕಿಂತ ದೊಡ್ಡದಾಗಿದ್ದು, ತನಿಖೆಯಾದರೆ ಹಲವರು ಜೈಲಿಗೆ ಹೋಗಬೇಕಾಗುತ್ತದೆ’ ಎನ್ನುತ್ತಾರೆ ಅನ್ವರ್ ಮಣಿಪ್ಪಾಡಿಯವರು.

ವಕ್ಫ್ ಮಂಡಳಿಯ ಆಡಳಿತದಲ್ಲಿನ ಪಾರದರ್ಶಕತೆಯ ಕೊರತೆಯಿಂದಾಗಿ ಅಲ್ಲಿ ನಡೆಯುವ ಹಗರಣಗಳಿಗೆ ಮುಸುಕು ಹಾಕಲಾಗಿದೆ. ಹೀಗಾಗಿ ವಕ್ಫ್ ಆಸ್ತಿಯನ್ನು ಮಾರಾಟ ಮಾಡಿಕೊಂಡು ತಮ್ಮ ಹೆಸರಿಗೆ ದಾಖಲೆ ಸೃಷ್ಟಿಸಿಕೊಳ್ಳುವುದು ವ್ಯಾಪಕವಾಗಿ ನಡೆದಿದೆ.

ಕೇಂದ್ರದಲ್ಲಿ ಯುಪಿಎ ಸರಕಾರವಿದ್ದಾಗ 2013ರಲ್ಲಿ ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡಿ, ಭೂಸ್ವಾಧೀನಪಡಿಸಿಕೊಳ್ಳಲು ವಕ್ಫ್ ಮಂಡಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಯಿತು. ದಾಖಲೆಯ ಸೂಕ್ತ ಪರಿಶೀಲನೆ ಇಲ್ಲದೆಯೇ ಯಾವುದೇ ಆಸ್ತಿಯನ್ನು ವಕ್ಫ್ ತನ್ನದು ಎಂದು ಹೇಳಬಹುದಾದ ಅತಿರೇಕದ ಅಧಿಕಾರವನ್ನು 2013ರ ಈ ತಿದ್ದುಪಡಿ ನೀಡಿತು. ಯುಪಿಎ ಸರಕಾರವು ತಾನು ಅಧಿಕಾರವನ್ನು ಕಳೆದುಕೊಳ್ಳುವ ಮುನ್ನ ಈ ತಿದ್ದುಪಡಿಯನ್ನು ತಂದು ಜನರ ತಲೆಯ ಮೇಲೆ ಚಪ್ಪಡಿ ಎಳೆದಿದೆ. ಇದಲ್ಲದೆ, 2013ರ ಅಂತ್ಯದಲ್ಲಿ ದೆಹಲಿಯಲ್ಲಿ ಸಾವಿರಾರು ಕೋಟಿ ಬೆಲೆಬಾಳುವ 123 ಆಸ್ತಿಗಳನ್ನು ವಕ್ಫ್ ಮಂಡಳಿಗೆ ಬಳುವಳಿಯಾಗಿ ಕೊಟ್ಟುಬಿಡಲಾಗಿದೆ.

2013ರ ಈ ಕಾಯ್ದೆಯ ದುರ್ಬಳಕೆ ಮಾಡಿಕೊಂಡು, ದೇಶದ ವಿವಿಧ ಭಾಗಗಳಲ್ಲಿನ ಹಲವಾರು ಪ್ರಮುಖ ಆಸ್ತಿಗಳ ಮೇಲೆ ವಕ್ಫ್ ಕಣ್ಣುಹಾಕಿ ಅವನ್ನು ತನ್ನವೆಂದು ಪ್ರತಿಪಾದಿಸುತ್ತಿದೆ. ಹರಿಯಾಣದ ಜತಲಾನ ಗ್ರಾಮದಲ್ಲಿ ಗುರುದ್ವಾರಕ್ಕೆ ಸೇರಿದ ಭೂಮಿಯನ್ನು ವಕ್ಫ್ ತನ್ನದೆಂದು ಘೋಷಿಸಿದೆ. 2021ರ ನವೆಂಬರ್‌ನಲ್ಲಿ, ಮುಗ್ಲಿಸರದಲ್ಲಿರುವ ಸೂರತ್ ಮುನ್ಸಿಪಲ್ ಕಾರ್ಪೊರೇಷನ್‌ನ ಪ್ರಧಾನ ಕಚೇರಿಯನ್ನು ತನ್ನ ಆಸ್ತಿ ಎಂದು ವಕ್ಫ್ ಘೋಷಿಸಿತು. ವಾರಾಣಸಿಯ ಪವಿತ್ರ ಕಾಶಿ ಮಂದಿರ ಇರುವ ಜಾಗವು ತನ್ನದೆಂದು ವಕ್ಫ್ ಹೇಳುತ್ತದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಈದ್ಗಾ ಮೈದಾನವನ್ನು ತನ್ನದು ಎಂಬುದಾಗಿ ಅದು ಯಾವುದೇ ದಾಖಲೆಯಿಲ್ಲದೆ ಹಕ್ಕುಸಾಧಿಸಿತ್ತು. ನಗರ ಪಾಲಿಕೆಯು ಸೂಕ್ತ ದಾಖಲೆಯನ್ನು ನೀಡಿದ ತರುವಾಯ ಈಗ ಆಸ್ತಿಯು ಪಾಲಿಕೆಯ ವಶವಾಗಿದೆ. ಸರಕಾರ ನೀಡಿದ ಶಾಸನ ಬಲವನ್ನು ವಕ್ಫ್ ದುರುಪಯೋಗ ಪಡಿಸಿಕೊಂಡು ಹಲವಾರು ಆಸ್ತಿಗಳ ಮೇಲೆ ತನ್ನ ಹಕ್ಕು ಸಾಧಿಸಲು ಮುಂದಾಗಿದ್ದರ ಪೈಕಿ ಇವು ಕೆಲವು ನಿದರ್ಶನಗಳಷ್ಟೇ. ಮೋದಿ ಸರಕಾರವು ಮೂರನೆಯ ಅವಧಿಗೆ ಅಧಿಕಾರಕ್ಕೆ ಬಂದ ತರುವಾಯ, ನಿಯಂತ್ರಣವಿಲ್ಲದ ವಕ್ಫ್ ಮಂಡಳಿಗಳ ಭೂದಾಹಕ್ಕೆ ಅಂಕುಶ ಹಾಕಲೆಂದು 1995ರ ಕಾಯ್ದೆಗೆ ತಿದ್ದುಪಡಿಯನ್ನು ತರಲು ನಿರ್ಣಯಿಸಿತು. ತತ್ಪರಿಣಾಮವಾಗಿ, ಈ ಬಗ್ಗೆ ವ್ಯಾಪಕವಾಗಿ ಸಮಾಲೋಚನೆ ನಡೆಸಲು ಹಾಗೂ ಸಂಬಂಧಿಸಿದ ವ್ಯಕ್ತಿಗಳ, ಸಂಸ್ಥೆಗಳ ಅಭಿಪ್ರಾಯ ಪಡೆಯಲು ಜಂಟಿ ಸದನ ಸಮಿತಿಯನ್ನು ರಚಿಸಲಾಗಿದೆ. ಇದರ ಕಲಾಪವು ಬಿಸಿಬಿಸಿಯಾಗಿಯೇ ಸಾಗುತ್ತಿದೆ. ಆದರೆ, ವಿರೋಧ ಪಕ್ಷಗಳ ಸದಸ್ಯರು ತಮ್ಮ ಮತಬ್ಯಾಂಕ್ ರಕ್ಷಣೆಗಾಗಿ ಜಂಟಿ ಸಂಸದೀಯ ಸಮಿತಿಯ ಸಭೆಯಲ್ಲಿ ಸದಸ್ಯರ ಜತೆ ಕೈ ಕೈ ಮಿಲಾಯಿಸುವ ಮಟ್ಟಕ್ಕೆ ಇಳಿಯಲೂ ಹೇಸಲಿಲ್ಲ. ಸಮಿತಿಯ ಅಧ್ಯಕ್ಷರ ಮೇಲೆ ಗಾಜಿನ ಬಾಟಲಿ ಎಸೆದ ಕಾರಣ ತೃಣಮೂಲ ಕಾಂಗ್ರೆಸ್‌ನ ಸಂಸದ ಕಲ್ಯಾಣ್ ಬ್ಯಾನರ್ಜಿಯವರನ್ನು ಸಮಿತಿಯಿಂದ ಅಮಾನತು ಮಾಡಲಾಗಿದೆ.

ಅಂದುಕೊಂಡಂತೆ ವಕ್ಫ್ ಕಾಯ್ದೆಗೆ ತಿದ್ದುಪಡಿಯಾದಲ್ಲಿ, ವಕ್ಫ್ ಮಂಡಳಿಯು ಸೂಕ್ತ ದಾಖಲೆಯಿಲ್ಲದೆಯೇ ಯಾವುದೇ ಆಸ್ತಿಯನ್ನು ತನ್ನದೆಂದು ಹೇಳಲು ಸಾಧ್ಯವಿರುವುದಿಲ್ಲ. ವಕ್ಫ್ ಆಸ್ತಿಗಳ ಕುರಿತಾದ ಅಂತಿಮ ತೀರ್ಮಾನವನ್ನು ವಕ್ಫ್ ಮಂಡಳಿಯ ಬದಲಿಗೆ ಜಿಲ್ಲಾಧಿಕಾರಿಗಳ ನ್ಯಾಯಾಧಿಕರಣವು ಕೈಗೊಳ್ಳುತ್ತದೆ. ಮೊದಲ ಬಾರಿಗೆ ಮಂಡಳಿಯಲ್ಲಿ ಮಹಿಳೆಯರಿಗೆ ಸದಸ್ಯತ್ವ ನೀಡಲಾಗುವ, ಮುಸ್ಲಿಮೇತರರಿಗೂ ಸ್ಥಾನ ಕಲ್ಪಿಸುವ ಮತ್ತು ಇನ್ನೂ ಇತರ 47 ತಿದ್ದುಪಡಿಗಳನ್ನು ಈಗಾಗಲೇ ಪ್ರಸ್ತಾವಿಸಲಾಗಿದೆ.

ಇದರ ನಡುವೆ, ಕರ್ನಾಟಕದ ವಿಜಯಪುರ ಜಿಲ್ಲೆಯ ಹೊನವಾಡದ ರೈತರಿಗೆ ವಕ್ಫ್ ಮಂಡಳಿಯು ನೀಡಿರುವ ಆಘಾತದಿಂದಾಗಿ, ತಲೆತಲಾಂತರದಿಂದ ಅವರ ಒಡೆತನದಲ್ಲಿದ್ದ 1,500 ಎಕರೆ ಜಮೀನು ವಕ್ಫ್ ಆಸ್ತಿಯೆಂದು ಘೋಷಿತವಾಗಿದೆ. ತತ್ಸಂಬಂಧವಾಗಿ ಅಕ್ಟೋಬರ್ 4ರಂದು ತಹಸೀಲ್ದಾರ್ ಅವರು ಇದನ್ನು ಪುಷ್ಟೀಕರಿಸಿ ನೋಟಿಸ್ ನೀಡಿದ್ದಾರೆ. ತಮ್ಮದಾಗಿದ್ದ ಜಮೀನು ಬೆಳಕು ಹರಿಯುವುದರೊಳಗಾಗಿ ವಕ್ಫ್ ಆಸ್ತಿ ಆಗಿರುವುದರಿಂದ ಸದರಿ ರೈತರ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಗಿದೆ. ರೈತರ ಹಿತಕಾಯಬೇಕಾದ ರೈತಸಂಘಗಳು ದಿವ್ಯಮೌನಕ್ಕೆ ಮೊರೆಹೋಗಿವೆ. ಜಿಲ್ಲೆಯ ಬಾಧಿತ ರೈತರು ‘ಈ ಬಾರಿ ದೀಪಾವಳಿ ಆಚರಿಸುವುದಿಲ್ಲ’ ಎಂದು ತೀರ್ಮಾನಿಸಿದ ಮೇಲೆ ಸರಕಾರವು ಸದ್ಯಕ್ಕೆ ಅವರಿಗೆ ಕೊಟ್ಟಿರುವ ನೋಟಿಸ್ ಅನ್ನು ಹಿಂದಕ್ಕೆ ಪಡೆದಿದೆ.

ಸಚಿವ ಎಂ.ಬಿ.ಪಾಟೀಲರು ಆರಂಭದಲ್ಲಿ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳದೆ, ‘ಬಿಜೆಪಿ ರಾಜಕೀಯ ಮಾಡುತ್ತಿದೆ’ ಎಂದು ತಳ್ಳಿಹಾಕಿದರು. ಆದರೆ, ತಮಗೆ ನೀಡಲಾದ ನೋಟಿಸ್‌ಗಳನ್ನು ರೈತರು ಪ್ರದರ್ಶಿಸಿದ ಮೇಲೆ, ‘ಕೇವಲ 11 ಎಕರೆ ವಕ್ಫ್ ಆಸ್ತಿ, ಮಿಕ್ಕಿದ್ದಲ್ಲ’ ಎಂದು ಸಮಜಾಯಿಷಿ ನೀಡಿದರು. ಆತಂಕದಲ್ಲಿರುವ ರೈತರಿಗೆ ಧೈರ್ಯ ತುಂಬಬೇಕಿದ್ದ ಕಾಂಗ್ರೆಸ್ ಸರಕಾರವು ತನ್ನ ವೋಟ್ ಬ್ಯಾಂಕ್ ರಾಜಕಾರಣದ ಅನಿವಾರ್ಯತೆಯಿಂದಾಗಿ ಮೌನವಹಿಸಿದೆ.

ವಿಜಯಪುರದಲ್ಲಾಗಿದ್ದು ರಾಜ್ಯಾದ್ಯಂತ ಹರಡುವುದರಲ್ಲಿ ಅನುಮಾನವೇ ಬೇಡ. ಈಗಾಗಲೇ ಯಾದಗಿರಿ ಮತ್ತು ಧಾರವಾಡ ರೈತರಿಗೆ ವಕ್ಫ್ ಬಿಸಿ ತಾಗಿದೆ. ಇತರ ಜಿಲ್ಲೆಯ ವಕ್ಫ್ ಮಂಡಳಿಗಳು ಇದೇ ರೀತಿಯಲ್ಲಿ ತಮ್ಮ ಹಕ್ಕನ್ನು ಮುಂದಿಟ್ಟು ರೈತರ ಜಮೀನಿಗೆ ಕಂಟಕ ತರುವುದು ನಿಶ್ಚಿತ. ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರು ಈ ಕಾರ್ಯಾಚರಣೆಯ ಹಿಂದಿರುವುದು ಮಂಡಳಿಗಳಿಗೆ ಬಲ ತುಂಬಿದೆ. ದೇವರ ಹೆಸರಿನಲ್ಲಿ ರೈತರ ಜಮೀನು ಕಬಳಿಸಲು ವಕ್ಫ್ ಮಂಡಳಿಗಳು ತುದಿಗಾಲ ಮೇಲೆ ನಿಂತಿರುವಂತೆ ತೋರುತ್ತಿದೆ. ತತ್ಪರಿಣಾಮವಾಗಿ ರಾಜ್ಯದ ರೈತರ ನೆತ್ತಿಯ ಮೇಲೆ ವಕ್ಫ್ ತೂಗುಕತ್ತಿಯು ತೂಗುತ್ತಿದ್ದು, ಅವರು ಆತಂಕದಿಂದ ದಿನಗಳನ್ನು ದೂಡುವಂತಾಗಿದೆ.

(ಲೇಖಕರು ಬಿಜೆಪಿ ವಕ್ತಾರರು)

ಭಟ್ಟರ್ ಸ್ಕಾಚ್

- ಕೇಶವ ಭಟ್, ಹೊನ್ನಾವರ
ಭಟ್ಟರೇ, ರಾಜಕಾರಣದಲ್ಲಿ ಬೇಗನೆ ಮೇಲೆ ಬರಲು ಏನು ಮಾಡಬೇಕು?
- ನೀವು ಅಧಿಕಾರದಲ್ಲಿರುವ ರಾಜಕಾರಣಿಯ ಮಗನೋ, ಮಗಳೋ ಆಗಿರಬೇಕು!

- ದಿನಕರ ಕೆದಿಲಾಯ, ಉಡುಪಿ
ಭಟ್ರೇ, ಪಕ್ಷದ ಕಾರ್ಯಕರ್ತರು ಹೇಳಿದರೆ ಮಾತ್ರ ಟಿಕೆಟ್ ಕೊಡ್ತಾರಾ?
- ಯಾರ ಪರವಾಗಿ ಟಿಕೆಟ್‌ಗೆ ಒತ್ತಾಯಿಸುತ್ತೇವೆಂಬುದನ್ನು ಪಕ್ಷದ ನಾಯಕರು ಕಾರ್ಯಕರ್ತರಿಗೆ ಮೊದಲೇ ಹೇಳಿರುತ್ತಾರೆ!

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಕರ್ನಾಟಕ ಬಿಜೆಪಿಯ ಕ್ರಿಸ್ ಗೇಲ್ ಯಾರು?
- ಸಿಕ್ಸರ್ ಮೇಲೆ ಸಿಕ್ಸರ್ ಹೊಡೆಯುತ್ತಿರುವ ಯತ್ನಾಳ್ ನೋಡಿಯೂ ಈ ಪ್ರಶ್ನೆಯಾ?!

- ರಾಜು ಕೆ., ದೊಡ್ಡಬಳ್ಳಾಪುರ
ಭಟ್ರೇ, ಕುಮಾರಣ್ಣನನ್ನು ಅಣಕಿಸಿ ಅವರಿಗೆ ಟಾಂಗ್ ಕೊಡುವುದು ಹೇಗೆ?
- 'ಸೂಕ್ತ ಸಮಯದಲ್ಲಿ ಎಲ್ಲ ದಾಖಲೆ ಬಿಡುಗಡೆ ಮಾಡುತ್ತೇನೆ' ಎಂದು ಹೇಳುವುದು!

- ನಾಗ್ರಾಜ್ ವಿಶ್ವನಾಥ, ಬಾಣಾವರ
ಭಟ್ರೇ, ದೇವಸ್ಥಾನಕ್ಕೂ ಬಾಂಬ್ ಬೆದರಿಕೆ ಹಾಕ್ತಾರಲ್ಲ?
- ಇದು ದೇವರಿಗೆ ತನ್ನನ್ನು ಬಚಾವ್ ಮಾಡಿಕೊಳ್ಳುವ ಸಾಮರ್ಥ್ಯ ಇದೆಯಾ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಟೆಸ್ಟ್!

- ರಾಜೇಶ್ವರ ಶರ್ಮ, ಶಿರಸಿ
ಭಟ್ರೇ, ನನ್ನನ್ನು ಡ್ರೋನ್ ಮೇಲೆ ಕುಳ್ಳಿರಿಸಿಕೊಂಡು ಹೋಗ್ತೀರಾ?
- ಅದೇನು ಪುಷ್ಪಕ ವಿಮಾನ ಅಂತ ಭಾವಿಸಿದ್ದೀರಾ?!

- ಗೋವಿಂದೇಗೌಡ, ಮೈಸೂರು
ಭಟ್ರೇ, ದೇವೇಗೌಡರ ಮುಂದಿನ ಹೆಜ್ಜೆ ಏನು?
- ಚನ್ನಪಟ್ಟಣದಲ್ಲಿ ಹೋಗಿ ಅತ್ತುಬಿಡುವುದು!

- ರಘುವೀರ ನಾಯಕ, ಬೆಂಗಳೂರು
ಭಟ್ರೇ, ರಾಜ್ಯ ರಾಜಕಾರಣ ರಂಗೇರಬೇಕು ಅಂದ್ರೆ ಏನು ಮಾಡಬೇಕು?
- ರೇಣುಕಾಚಾರ್ಯ, ವರ್ತೂರು, ಶರಣು ಮುಂತಾದವರೆಲ್ಲ ದಾರಿ ಬಿಡಬೇಕು!

- ಸುಂದರ ಅಡಿಗ, ಚಿಕ್ಕಸಂದ್ರ
ಭಟ್ರೇ, ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಮಹಿಳೆಗೆ ಅಂತ ತೀರ್ಮಾನಿಸಿದರೆ ನಿಮ್ಮ ಆಯ್ಕೆ ಯಾರು?
- ಆರ್.ಜಿ.ಹಳ್ಳಿ ನಾಗರಾಜ!

- ಪಟ್ಟಿ, ಹಾಸನ
ಭಟ್ರೇ, ಚಂದ್ರಶೇಖರ ಕಂಬಾರರು ಇತ್ತೀಚಿನ ದಿನಗಳಲ್ಲಿ ಏನೂ ಬರೆಯದೇ ಸುಮ್ಮನಿದ್ದಾರಲ್ಲ?
- ಸಾಹಿತಿಗಳು ಬರೆಯುವುದು ಅಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಕೊಡುವುದು ಅಂದ್ಕೊಂಡಿದ್ದೆ ಅವರು ಗಂಭೀರವಾಗಿ ತೆಗೆದುಕೊಂಡಿದ್ದರಂತೆ!

ನವೆಂಬರ್: ಇದು ಹಕ್ಕೊತ್ತಾಯದ ತಿಂಗಳು!

ಲೋಕಮತ

ಲೋಕೇಶ್ ಕಾಯರ್ಗ

kaayarga@gmail.com

ಕನ್ನಡಕ್ಕಾಗಿ 'ಎತ್ತಿದ ಕೈ' ಇಳಿಸುವುದೆಂದು ? ನವೆಂಬರ್ 1 ಮತ್ತೆ ಬಂದಿದೆ. ವರ್ಷಕ್ಕೊಮ್ಮೆ ನಮ್ಮ ಕನ್ನಡ ಪ್ರೀತಿ ಎಂಬ ದೀಪವನ್ನು ಬೆಳಗುವ ಕಾಲವಿದು. ಸರಕಾರದ ಪಾಲಿಗೆ ಕನ್ನಡಿಗರ ಹಿತರಕ್ಷಣೆಯ ಘೋಷಣೆಯನ್ನು ಪುನರುಚ್ಚರಿಸುವ ದಿನ. ಕನ್ನಡದ ರಕ್ಷಣೆಯ ಹೆಸರಿನಲ್ಲಿ ಸ್ಥಾಪನೆಯಾದ ನೂರಾರು ಸರಕಾರಿ ಮತ್ತು ಖಾಸಗಿ ಸಂಘಟನೆಗಳಿಗೆ ಹಕ್ಕೊತ್ತಾಯದ ಸಮಯ. ವಾರ್ಷಿಕ ಚಂದಾ ಎತ್ತುವವರಿಗೆ 'ರಾಜ್ಯೋತ್ಸವ' ಮಾಸ. ಮನೆಯಲ್ಲಿ ಕುಳಿತು ರಿಯಾಲಿಟಿ ಶೋಗಳ ರಿಪೀಟ್ ಟೆಲಿಕಾಸ್ಟ್ ವೀಕ್ಷಿಸುವ ಬಹುತೇಕ ಕನ್ನಡಿಗರಿಗೆ ರಜಾ-ಮಜಾ ದಿನ. ಅದರಲ್ಲೂ ದೀಪಾವಳಿ ಸಂದರ್ಭದಲ್ಲಿ ಬಂದ ಈ ಬಾರಿಯ ರಾಜ್ಯೋತ್ಸವ ಬೋನಸ್.

ಹಾಗೆಂದು ನವೆಂಬರ್ ಒಂದು ನಮಗಷ್ಟೇ ರಾಜ್ಯೋತ್ಸವ ದಿನವಲ್ಲ. ಇದೇ ದಿನ ಏಕೀಕರಣ ಕಂಡ ಹರಿಯಾಣ, ಪಂಜಾಬ್, ಆಂಧ್ರ ಪ್ರದೇಶ, ಕೇರಳ, ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್‌ಗಳಿಗೂ ಇದು ವಿಶೇಷ ದಿನ . ಆದರೆ ಏಕೀಕರಣ ಭಾಗ್ಯ ಕಂಡು 68 ವರ್ಷಗಳ ಬಳಿಕವೂ ಕನ್ನಡದ ಅಸ್ಮಿತೆ ಮತ್ತು ಅಸ್ತಿತ್ವದ ಹೆಸರಿನಲ್ಲಿ 'ಉಗ್ರ' ಹೋರಾಟ ನಡೆಸುತ್ತಿರುವುದು ನಾವು ಮಾತ್ರ. ಇದಕ್ಕಾಗಿ ಹತ್ತಾರು ಸರಕಾರಿ ಸಂಘಟನೆಗಳು, ಸಾವಿರಾರು ಖಾಸಗಿ ಸಂಘಟನೆಗಳಿವೆ. ಕಳೆದ ಏಳು ದಶಕಗಳಿಂದ ಕನ್ನಡದ ಹೆಸರಿನಲ್ಲಿ ನಾವು ಹೋರಾಡುತ್ತಲೇ ಬಂದಿದ್ದೇವೆ. ಆದರೆ ಗೋಕಾಕ್ ಚಳವಳಿ ಬಿಟ್ಟರೆ ನಿರ್ಣಾಯಕವಾದ, ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸಿದ ಮತ್ತೊಂದು ಚಳವಳಿಯನ್ನು ಇದುವರೆಗೆ ಕಂಡಿಲ್ಲ. ಈಗಿನ ನಮ್ಮ ಬಹುತೇಕ ಹೋರಾಟಗಳು ಕನ್ನಡದ ಹೆಸರಿನಲ್ಲಿ, ಅವರವರ ಅಸ್ತಿತ್ವಕ್ಕಾಗಿ ನಡೆಸುತ್ತಿರುವ ತೋರಿಕೆಯ ಪ್ರದರ್ಶನಗಳಾಗಿ ಕಾಣುತ್ತಿವೆಯೇ ಹೊರತು ಬೇರೇನೂ ಅಲ್ಲ. ಇಲ್ಲವಾಗಿದ್ದರೆ ಕಳೆದ ಹಲವು ದಶಕಗಳಿಂದ ನಮ್ಮ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಿ ಅಂಗೀಕರಿಸಿರುವ ಠರಾವುಗಳಲ್ಲಿ ಯಾವುದು ಜಾರಿಗೆ ಬಂದಿದೆ ಎಂದು ನೀವೇ ಯೋಚಿಸಿ.

ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವ ವಿಚಾರದಲ್ಲಿ ಕಟ್ಟುನಿಟ್ಟಿನ ಶಿಫಾರಸುಗಳನ್ನು ಮಾಡಿದ ಡಾ. ಸರೋಜಿನಿ ಮಹಿಷಿ ವರದಿಗೆ ಈಗ ಬರೋಬ್ಬರಿ 40 ವರ್ಷ. ರಾಮಕೃಷ್ಣ ಹೆಗಡೆ ಸರಕಾರ ಈ ವರದಿಯನ್ನು ಸ್ವೀಕರಿಸಿದ ಬಳಿಕ, ಬಹುತೇಕ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲೂ ಮಹಿಷಿ ವರದಿ ಜಾರಿಗೆ ತರಬೇಕೆಂಬ ಠರಾವುಗಳಿವೆ. ಆದರೆ ಎಲ್ಲವೂ ಘೋಷಣೆಗಳಾಗಿಯೇ ಉಳಿದಿವೆ. ಕನ್ನಡ ಅನ್ನದ ಭಾಷೆಯಾಗಬೇಕೆಂಬ ನಮ್ಮ ಕೂಗು ಈಗ ರೋದನವಾಗಿ ಮಾರ್ಪಟ್ಟಿದೆ. ಹಾಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಮೊದಲ ಅವಧಿಯಲ್ಲಿ ಸರೋಜಿನಿ ಮಹಿಷಿ ವರದಿಯನ್ನು ಪರಿಷ್ಕರಿಸಿ ವರದಿ ನೀಡಲು ಕನ್ನಡ ಪ್ರಾಧಿಕಾರದ ಅಂದಿನ ಅಧ್ಯಕ್ಷರಾಗಿದ್ದ ಎಸ್.ಜಿ.ಸಿದ್ದರಾಮಯ್ಯ ನೇತೃತ್ವದಲ್ಲಿ ಸಮಿತಿ ರಚಿಸಿದ್ದರು. 2017ರಲ್ಲಿ ಈ ಸಮಿತಿ ರಾಜ್ಯ ಸರಕಾರ ಅನುಷ್ಠಾನಗೊಳಿಸಬೇಕಾದ 24 ಶಿಫಾರಸುಗಳು ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ 7 ಸಲಹೆಗಳ ಸಹಿತ ವರದಿ ನೀಡಿತ್ತು. ಇದಾಗಿ ಏಳು ವರ್ಷಗಳಾಗಿವೆ. ಯಾವ ಶಿಫಾರಸುಗಳು ಅನುಷ್ಠಾನಕ್ಕೆ ಬಂದಿಲ್ಲ.

ಇದೊಂದೇ ಅಲ್ಲ, ಕನ್ನಡದ ವಿಚಾರದಲ್ಲಿ ನಮ್ಮ ಬಹುತೇಕ ಸಂಕಲ್ಪಗಳೆಲ್ಲವೂ, ಘೋಷಣೆಯ ಹಂತದಲ್ಲಿಯೇ ಉಳಿದುಕೊಂಡಿವೆ. ರಾಜ್ಯದಲ್ಲಿ ಕನ್ನಡವೇ ಪ್ರಧಾನ ಭಾಷೆಯಾಗಬೇಕು, ಪ್ರಾಥಮಿಕ ಶಾಲಾ ಹಂತದಲ್ಲಿ ಕನ್ನಡವೇ ಮಾಧ್ಯಮವಾಗಬೇಕು. ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗೆ ಕೇಂದ್ರ ಸರಕಾರದಿಂದ ಉಳಿದ ಭಾಷೆಗಳಿಗೆ ಸಿಗುವಷ್ಟೇ ಪ್ರೋತ್ಸಾಹ ಸಿಗಬೇಕು. ನಮ್ಮ ಥಿಯೇಟರ್‌ಗಳಲ್ಲಿ ಕನ್ನಡ ಭಾಷಾ ಚಿತ್ರಗಳಿಗೆ ಮೊದಲ ಆದ್ಯತೆ ನೀಡಬೇಕು, ಖಾಸಗಿ ಮಳಿಗೆಗಳ ನಾಮಫಲಕಗಳಲ್ಲಿ ಕನ್ನಡ ಪ್ರಧಾನವಾಗಿರಬೇಕು. ರೈಲ್ವೆ, ಬ್ಯಾಂಕ್ ಸೇರಿದಂತೆ ಕೇಂದ್ರ ಸರಕಾರಿ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕು. ಈ ನೆಲದಲ್ಲಿ ಕಾರ್ಯಾಚರಿಸುತ್ತಿರುವ ಖಾಸಗಿ ಕಂಪನಿಗಳ ಉದ್ಯೋಗಗಳಲ್ಲೂ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು. ಗಡಿ, ನೆಲ-ಜಲ ರಕ್ಷಣೆ, ಬಳಕೆ ವಿಚಾರದಲ್ಲಿ ರಾಜ್ಯಕ್ಕೆ ನ್ಯಾಯ ಸಿಗಬೇಕು... ಹೀಗೆ ಹತ್ತಾರು ಅಹವಾಲುಗಳು ಹಿಂದೆಯೂ ಕೇಳಿ ಬರುತ್ತಿದ್ದವು. ಈಗಲೂ ಕೇಳಿ ಬರುತ್ತಿವೆ. ಮುಂದೆಯೂ ಕೇಳಿ ಬರಲಿದೆ.

ಹಾಗೆ ನೋಡಿದರೆ 170 ವರ್ಷಗಳಷ್ಟು ಹಿಂದೆಯೇ ನಾವು ಕನ್ನಡಕ್ಕಾಗಿ ಕೈ ಎತ್ತಿದ್ದವು. 1924ರಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಜೊತೆಗೆ ನಡೆದ ಏಕೀಕರಣ ಸಭೆಯಲ್ಲಿ ಹುಯಿಲಗೋಲ ನಾರಾಯಣ ರಾವ್ ಅವರು, 'ಉದಯವಾಗಲಿ, ನಮ್ಮ ಚೆಲುವ ಕನ್ನಡ ನಾಡು' ಎಂಬ ಘೋಷಣೆ ಮೊಳಗಿಸಿ ಬರೋಬ್ಬರಿ ನೂರು ವರ್ಷಗಳಾಗಿವೆ. ಆದರೆ ಅಂದು ಎತ್ತಿದ ಕೈಯನ್ನು ಇಳಿಸುವ ಅವಕಾಶ ಇದುವರೆಗೆ ಸಿಕ್ಕಿಲ್ಲ.

ನಮ್ಮೊಂದಿಗೆ ಉದಯವಾದ ಇತರ ರಾಜ್ಯಗಳನ್ನು ಹೋಲಿಸಿ ನೋಡಿ. ದಕ್ಷಿಣದ ಕೇರಳ, ಆಂಧ್ರ, ತೆಲಂಗಾಣವಾಗಲಿ, ಉತ್ತರದ ಪಂಜಾಬ್, ಹರಿಯಾಣ ರಾಜ್ಯಗಳಲ್ಲೂ ನಾನಾ ಸಮಸ್ಯೆಗಳಿವೆ. ಆದರೆ ಭಾಷೆಯ ವಿಚಾರದಲ್ಲಿ ಅವರಿಗೆ ಆತಂಕಗಳಿಲ್ಲ. ಭಾಷೆಯ ರಕ್ಷಣೆಗೆ ಅಲ್ಲಿ ರಕ್ಷಣಾ ಪಡೆಗಳಿಲ್ಲ. ಕನ್ನಡಿಗರಷ್ಟು ಸ್ವಚ್ಛವಾಗಿ ಹಿಂದಿ, ಇಂಗ್ಲಿಷ್ ಮಾತನಾಡಲು ಬಾರದಿದ್ದರೂ ಮಲೆಯಾಳಿಗಳು ಮತ್ತು ತಮಿಳರು ರೈಲ್ವೆ ಸೇರಿದಂತೆ ಕೇಂದ್ರ ಸರಕಾರಿ ಉದ್ಯಮಗಳಲ್ಲಿ ಹೆಚ್ಚಿನ ಉದ್ಯೋಗ ಗಿಟ್ಟಿಸಿದ್ದಾರೆ. ಬ್ಯಾಂಕುಗಳಲ್ಲಿ, ಸಾರ್ವಜನಿಕ ಉದ್ದಿಮೆಗಳಲ್ಲಿ ಮೊದಲಿನಿಂದಲೂ ಅವರ ಬಾಹುಳ್ಯ ಹೆಚ್ಚಿದೆ. ಪಾಪ್ ಸಂಗೀತದ ಮೂಲಕ ಪಂಜಾಬಿ ಭಾಷೆ ಇಂದು ವಿಶ್ವಭಾಷೆಯಾಗಿದೆ. ಪಂಜಾಬಿಗಳು ಕೆನಡಾ, ಅಮೆರಿಕದಂತಹ ದೇಶಗಳಲ್ಲಿ ಸಂಸತ್ ಸ್ಥಾನವನ್ನು ಅಲಂಕರಿಸಿ ಆ ದೇಶಗಳನ್ನು ಆಳುವ ಮಟ್ಟಕ್ಕೆ ತಲುಪಿದ್ದಾರೆ. ಬೆಂಗಳೂರು ಸಿಲಿಕಾನ್ ಸಿಟಿಯಾದ ಕಾರಣಕ್ಕೆ ಕನ್ನಡಿಗರು ಇತ್ತೀಚಿನ ದಶಕಗಳಲ್ಲಿ ವಿದೇಶಕ್ಕೆ ಪ್ರಯಾಣ ಬೆಳೆಸುತ್ತಿದ್ದಾರೆ. ಆದರೆ ನಮ್ಮದೇ ದೇಶದ ಇತರ ರಾಜ್ಯಗಳಲ್ಲಿ ಕನ್ನಡಿಗರ ಕಾರುಬಾರು ಅಷ್ಟಕ್ಕಷ್ಟೇ. ಮುಂಬೈ, ಮದ್ರಾಸ್, ಬರೋಡ ಮುಂತಾದ ನಗರಗಳಲ್ಲಿ ಹೊಟೇಲ್ ಉದ್ದಿಮೆಯನ್ನು ಆಶ್ರಯಿಸಿ ಹೊರಟ ಕರಾವಳಿಯ ಒಂದಷ್ಟು ಜನರನ್ನು ಹೊರತುಪಡಿಸಿ ಉಳಿದಂತೆ ಕನ್ನಡಿಗರು, ಕನ್ನಡ ನೆಲದಲ್ಲಿಯೇ ಉಳಿದು ಬದುಕು ಕಟ್ಟಿಕೊಂಡವರು. ನಮ್ಮದೇ ನೆರೆಯ ತೆಲುಗರು, ತಮಿಳರು ಮತ್ತು ಮಲೆಯಾಳಿಗಳಷ್ಟು ಸೀಮೋಲ್ಲಂಘನ ಮಾಡಿದವರಲ್ಲ.

ನಮ್ಮ ಮಕ್ಕಳಿಗೆ ಗುವಾಹಟಿ, ಭುವನೇಶ್ವರ, ರೂರ್ಕಿ ಐಐಟಿಗಳಲ್ಲಿ ಸೀಟು ಸಿಕ್ಕಿದರೆ ಕಳಿಸಲು ಈಗಲೂ ಹಿಂದೇಟು ಹಾಕುತ್ತೇವೆ. ಉತ್ತರ ಭಾರತದ ಅತ್ಯಂತ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳು ಕೂಡ ಕರ್ನಾಟಕ ಇಲ್ಲವೇ ದಕ್ಷಿಣ ಭಾರತದ ಇನ್ನಾವುದೇ ನಗರಕ್ಕೆ ಬಂದು ಶಿಕ್ಷಣ ಇಲ್ಲವೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಹಿಂಜರಿಯುವುದಿಲ್ಲ. ಆದರೆ ಕನ್ನಡಿಗರಿಗೆ ಉತ್ತರ ಭಾರತ ಎಂದರೆ ಅಸುರಕ್ಷಿತ ಭಾವ. ಅಷ್ಟೇ ಏಕೆ, ನಮ್ಮದೇ ರಾಜ್ಯದ ಉತ್ತರಕ್ಕೆ ಸಾಗಲು ದಕ್ಷಿಣದವರು ಒಪ್ಪುವುದಿಲ್ಲ. ದಕ್ಷಿಣ ಕರ್ನಾಟಕದ ಮಂದಿಗೆ ನಮ್ಮದೇ ರಾಜ್ಯದ ಕಲಬುರ್ಗಿ,ಬೀದರ್, ಯಾದಗಿರಿ ಕೂಡ ಹೊರ ಪ್ರಪಂಚ. ಕನ್ನಡಿಗರು ತಮ್ಮ ಕಂಫರ್ಟ್ ಝೋನ್‌ನಿಂದ ಬರಲು ಇಷ್ಟಪಡುವುದು ಕಡಿಮೆ. ಸ್ಪರ್ಧೆ ಎಂದರೆ ನಮಗೆ ಹಿಂಜರಿಕೆ. ಐಐಎಸ್ಸಿ, ಐಐಎಂ, ನ್ಯಾಷನಲ್ ಲಾ ಕಾಲೇಜ್, ಎನ್‌ಐಟಿ-ಕೆ ಮುಂತಾದ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಕನ್ನಡಿಗರ ಸಂಖ್ಯೆಯೂ ಅನ್ಯ ರಾಜ್ಯದವರಿಗಿಂತ ಕಡಿಮೆ. ಮಣಿಪಾಲ್ ಇನ್‌ಸ್ಟಿಟ್ಯೂಟ್ ಟೆಕ್ನಾಲಜಿ (ಎಂಐಟಿ) ಯಂತಹ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ಕನ್ನಡಿಗರಿಗಿಂತ ಅನ್ಯ ರಾಜ್ಯದವರು, ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ.

ತಾತ್ಪರ್ಯ ಇಷ್ಟೇ. ಉದ್ಯೋಗದಲ್ಲಿ ನಮ್ಮ ಪಾಲು ಕಡಿತಗೊಳ್ಳಲು, ನಮ್ಮದೇ ನೆಲದಲ್ಲಿ ಅನ್ಯರು ವಿಜೃಂಭಿಸಲು, ನಾವು ಪರಭಾಷಿಕರನ್ನು ಅನುಕರಿಸುವಂತಾಗಲು ನಮ್ಮ ಸ್ವಭಾವವೇ ಮೂಲ ಕಾರಣ. ಕನ್ನಡಿಗರು ಸ್ವಭಾವತ: ಹಿಂಜರಿಕೆ ಸ್ವಭಾವದವರು. ಅಗತ್ಯಕ್ಕಿಂತ ಹೆಚ್ಚು ದಾಕ್ಷಿಣ್ಯ, ಸಂಕೋಚ ಬೆಳೆಸಿಕೊಂಡವರು, ಅತಿ ಸೌಜನ್ಯಪರರು, ಇನ್ನೊಬ್ಬರು ರೊಚ್ಚಿಗೆಬ್ಬಿಸದ ಹೊರತು ಜಗಳ ಕಾಯುವವರಲ್ಲ. ಮುಂದಾಳತ್ವ, ಮುಂದಾಲೋಚನೆ ಮತ್ತು ಮುನ್ನುಗ್ಗುವ ವಿಚಾರದಲ್ಲಿ ಒಂದು ಹೆಜ್ಜೆ ಹಿಂದೆ ನಿಲ್ಲುವವರು... ನಮ್ಮ ಈ ಹುಟ್ಟು ಗುಣವನ್ನು ಎತ್ತಿ ತೋರಿಸಲು ನೂರಾರು ಚಾರಿತ್ರಿಕ ಪುರಾವೆಗಳಿವೆ.

ಇಂದಿನ ನಮ್ಮ ನೆಲ-ಜಲ ಸಂಕಷ್ಟಗಳಿಗೆ ಆರಂಭದಲ್ಲಿಯೇ ಮುನ್ನುಗ್ಗದಿರುವ ನಮ್ಮ ನಾಯಕರ ಸ್ವಭಾವವೂ ಮುಖ್ಯ ಕಾರಣ. ಸ್ವತ: ಕೇರಳ ಸಿಎಂ ಇಎಂಎಸ್ ನಂಬೂದಿರಿಪಾಡ್ ಅವರು ಕಾಸರಗೋಡು ಕನ್ನಡ ನಾಡು ಎಂದು ಹೇಳಿದ ಬಳಿಕವೂ ಕೆಳದಿ ನಾಯಕ ಕಟ್ಟಿದ ಬೇಕಲ ಕೋಟೆ ಇರುವ ಈ ನೆಲವನ್ನು ನಾವು ಕಳೆದುಕೊಂಡಿದ್ದು ನಮ್ಮದೇ ನಾಯಕರ ದಾಕ್ಷಿಣ್ಯ ಧೋರಣೆಯಿಂದ. ಕಾಸರಗೋಡನ್ನು ವ್ಯವಸ್ಥಿತವಾಗಿ ಮಲೆಯಾಳೀಕರಣಗೊಳಿಸಿದ ಕೇರಳದ ತಂತ್ರವನ್ನು ನಾವು ಬೆಳಗಾವಿಯಲ್ಲಿ ಬಳಸಬಹುದಿತ್ತು. ಆದರೆ ಕನ್ನಡಿಗರ ಅತಿ ಸೌಜನ್ಯ, ಸ್ನೇಹಪರತೆ ಇದಕ್ಕೆ ಅವಕಾಶ ನೀಡಲಿಲ್ಲ. ಎಂ.ಜಿ. ರಾಮಚಂದ್ರನ್ ತಮಿಳುನಾಡು ಸಿಎಂ ಆಗಿದ್ದಾಗ ನಮ್ಮ ಪರವಾಗಿದ್ದ 'ಕಾವೇರಿ ಒಪ್ಪಂದ'ಕ್ಕೆ ಸಹಿ ಬೀಳದಿರಲು ನಮ್ಮ ನಾಯಕರ ಮಂದದೃಷ್ಟಿ ಕಾರಣ. ಮಹದಾಯಿ ವಿಚಾರದಲ್ಲೂ ಗೋವಾ ಹಿಂದೊಮ್ಮೆ ಒಪ್ಪಿದ್ದ ತೀರ್ಮಾನವನ್ನು ತಕ್ಷಣ ಕಾರ್ಯರೂಪಕ್ಕೆ ತರುವಲ್ಲೂ ನಮ್ಮ ನಾಯಕರ ಉಡಾಫೆ ಧೋರಣೆ ಅಡ್ಡಿಯಾಯಿತು.

ಕನ್ನಡ ಭಾಷೆಗೆ ಇಂದು ಶಾಸ್ತ್ರೀಯ ಸ್ಥಾನಮಾನ ದೊರೆತಿದ್ದರೆ ಇದಕ್ಕೆ ತಮಿಳುನಾಡಿಗೆ ಧನ್ಯವಾದ ಹೇಳಬೇಕು. ತಮಿಳುನಾಡು ಮೊದಲಾಗಿ ಕೇಂದ್ರದ ಮುಂದೆ ಹಕ್ಕೊತ್ತಾಯ ಸಲ್ಲಿಸಿ ತಮಿಳಿಗೆ ಶಾಸ್ತ್ರೀಯ ಸ್ಥಾನಮಾನ ಪಡೆಯದಿದ್ದಲ್ಲಿ ನಾವೂ ಬಿಲ್‌ಕುಲ್ ಈ ಸ್ಥಾನಮಾನ ಕೇಳುತ್ತಿರಲಿಲ್ಲ. ನೀಟ್, ರಾಷ್ಟ್ರೀಯ ಶಿಕ್ಷಣ ನೀತಿ, ಎಪಿಎಂಸಿ ಕಾಯಿದೆ, ಜಿಎಸ್‌ಟಿ ಸೇರಿದಂತೆ ಹಲವು ವಿಚಾರಗಳಲ್ಲಿ ಕೇಂದ್ರದ ಆಜ್ಞಾನುವರ್ತಿಗಳಾಗಿ ನಡೆದ ನಾವು ಈಗ ತಮಿಳುನಾಡಿನ ನಡೆ ನೋಡಿಕೊಂಡು ಮತ್ತೆ 'ಹಿಂತೆಗೆತ'ದ ನಡೆ ಆರಂಭಿಸಿದ್ದೇವೆ.

ಕುವೆಂಪು ಅವರಂತಹ ದಾರ್ಶನಿಕರು ಕಂಡ ನಾಡು, ನುಡಿಯ ಬೆಳವಣಿಗೆ, ಪ್ರಗತಿ ಆಗದಿರಲು ನಾವು ಮತ್ತು ನಮ್ಮ ಸರಕಾರಗಳ ಧೋರಣೆಯೇ ಮುಖ್ಯ ಕಾರಣ. ರಾಜ್ಯದ ಪ್ರತಿ ಶಾಲೆಯಲ್ಲೂ 10ನೇ ತರಗತಿವರೆಗೆ ಕನ್ನಡ ಕಲಿಸಲೇಬೇಕು. ಐಸಿಎಸ್‌ಇ, ಸಿಬಿಎಸ್‌ಇ ಯಾವುದೇ ಇರಲಿ, ಕನ್ನಡ ಪಠ್ಯ ಕಡ್ಡಾಯ ವಿಷಯವಾಗಿರಬೇಕು. ವಾರಕ್ಕೆ ಕನಿಷ್ಠ ಐದು ಪೀರಿಯಡ್‌ಗಳಲ್ಲಿ ಕಲಿಸಲೇಬೇಕು ಎಂಬ ನಿಯಮವನ್ನು ಕಡ್ಡಾಯಗೊಳಿಸಲು ಸಾಧ್ಯವಾಗಿದ್ದರೆ ನಮ್ಮ ಮಕ್ಕಳು ಇಂದು ಸಾರ್ವಜನಿಕ ವೇದಿಕೆಯಲ್ಲಿ ನಿಂತು ಒಂದೈದು ನಿಮಿಷ ನಿರರ್ಗಳವಾಗಿ ಕನ್ನಡ ಮಾತನಾಡಲು ತಡವರಿಸುವ ಪ್ರಸಂಗ ಬರುತ್ತಿರಲಿಲ್ಲ.

ಉದ್ಯಮಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗಲೇ ಕನ್ನಡಿಗರಿಗೆ ಇಂತಿಷ್ಟು ಉದ್ಯೋಗ ನೀಡಲೇಬೇಕು ಎಂಬ ಷರತ್ತು ವಿಧಿಸಿದ್ದರೆ, ಸಿ ಮತ್ತು ಡಿ ದರ್ಜೆಯ ಉದ್ಯೋಗಗಳನ್ನು ಕಡ್ಡಾಯವಾಗಿ ಕನ್ನಡಿಗರಿಗೆ ಮೀಸಲಿಡಬೇಕೆಂದು ಸೂಚನೆ ನೀಡಿರುತ್ತಿದ್ದರೆ ಇಂದು ಉದ್ಯೋಗಕ್ಕಾಗಿ ಅಂಗಲಾಚುವ ಪರಿಸ್ಥಿತಿ ಬರುತ್ತಿರಲಿಲ್ಲ. ಉದ್ದಿಮೆ ಪರವಾನಗಿ ನೀಡಲು ತಪ್ಪಿಲ್ಲದ ಕನ್ನಡದಲ್ಲಿ ನಾಮಫಲಕ ಪ್ರದರ್ಶನ ಕಡ್ಡಾಯಗೊಳಿಸಿದ್ದರೆ, ಎಲ್ಲೆಡೆ ಇಂಗ್ಲಿಷ್ ಬೋರ್ಡ್‌ಗಳನ್ನು ಕಾಣುವ ದೌರ್ಭಾಗ್ಯ ಬರುತ್ತಿರಲಿಲ್ಲ. ಅರ್ಧದಷ್ಟು ಅನುದಾನ ನಾವೇ ಭರಿಸಿ, ನಮ್ಮದೇ ಜಾಗವನ್ನು ಬಿಟ್ಟು ಕೊಟ್ಟು ಕೆ-ರೈಡ್ ಮಾದರಿಯಲ್ಲಿ ಜಾರಿಯಾದ ಕೊಂಕಣ ರೈಲ್ವೆಯಂತಹ ಯೋಜನೆಗಳಲ್ಲಿ ಉದ್ಯೋಗ ಮತ್ತು ರೈಲುಗಳ ವಿಚಾರದಲ್ಲಿ ಮೊದಲೇ ಪಾಲು ಕೇಳಿದ್ದರೆ, ಈ ಯೋಜನೆ ಕರ್ನಾಟಕದ ಬದಲು ಕೇರಳಕ್ಕೆ ಹೆಚ್ಚು ಪ್ರಯೋಜನವಾಗುವುದು ತಪ್ಪುತ್ತಿತ್ತು. ಸಂಸತ್ತಿನಲ್ಲಿ ನಮ್ಮ ಸಂಸದರು ಒಟ್ಟಾಗಿ ಧ್ವನಿ ಎತ್ತಿದ್ದರೂ ದಕ್ಷಿಣದ ಉಳಿದ ರಾಜ್ಯಗಳಷ್ಟೇ ರೈಲು ಕರ್ನಾಟಕಕ್ಕೆ ದಕ್ಕುತ್ತಿತ್ತು. ಅತಿ ಹೆಚ್ಚು ಆದಾಯವಿರುವ ಮಂಗಳೂರು ಪಾಲ್ಘಾಟ್ ರೈಲ್ವೆ ವಿಭಾಗಕ್ಕೆ ಸೇರುತ್ತಿರಲಿಲ್ಲ. ಖರ್ಗೆಯವರ ಕಾಲದಲ್ಲಿ ಘೋಷಣೆಯಾದ ಕಲಬುರಗಿ ರೈಲ್ವೆ ವಿಭಾಗ ಸಾಕಾರಗೊಳ್ಳುತ್ತಿತ್ತು.

ನಮ್ಮದೇ ರಾಜ್ಯದಲ್ಲಿ ಜನ್ಮ ತಳೆದ ಬ್ಯಾಂಕುಗಳು ವಿಲೀನದ ಹೆಸರಿನಲ್ಲಿ ಅಸ್ತಿತ್ವ ಕಳೆದುಕೊಂಡಾಗ ಪ್ರತಿಭಟಿಸಿದ್ದರೆ, ಬ್ಯಾಂಕುಗಳಲ್ಲಿ ಉತ್ತರದವರ ದರ್ಬಾರ್ ನಡೆಯುತ್ತಿರಲಿಲ್ಲ. ನಾವಾದರೂ ಅಲ್ಲಿನ ಹಿಂದಿ, ತಮಿಳು, ತೆಲುಗು, ಮಲೆಯಾಳಿ ಭಾಷಿಕ ಸಿಬ್ಬಂದಿಗಳ ಜತೆ ನಮ್ಮ ಅರೆಬರೆ ಅನ್ಯಭಾಷಾ ಜ್ಞಾನ ಪ್ರದರ್ಶಿಸದೆ ಕನ್ನಡದಲ್ಲಿಯೇ ಮಾತನಾಡಿದ್ದರೆ, ಅವರಿಗೆ ಉಳಿಗಾಲವಿರುತ್ತಿರಲಿಲ್ಲ. ಕನಿಷ್ಠ ಪಕ್ಷ ಕನ್ನಡಿಗರೆಲ್ಲರೂ ತಮ್ಮ ಬ್ಯಾಂಕ್ ಚೆಕ್‌ಗಳನ್ನು ಕನ್ನಡದಲ್ಲಿಯೇ ಬರೆದಿದ್ದರೂ ಕೂಡ, ಬ್ಯಾಂಕುಗಳಲ್ಲಿ ಅನ್ಯ ಭಾಷಿಕರ ಒಡ್ಡೋಲಗಕ್ಕೆ ಕಡಿವಾಣ ಹಾಕಬಹುದಿತ್ತು.

ಇಂತಹ 'ರೆ'ಗಳು ಬೇಕಾದಷ್ಟಿವೆ. ಆದರೆ ನಾವು ಕನ್ನಡಿಗರು ವಿಶ್ವಮಾನವರಾಗಲು ಹೊರಟಿದ್ದೇವೆ. ಮುಂದಿನ 3 ವರ್ಷಗಳಲ್ಲಿ ಕರ್ನಾಟಕದ ಪ್ರತಿಯೊಂದು ಗ್ರಾಮಗಳಲ್ಲಿ ಎನ್‌ಸಿಇಆರ್‌ಟಿ ಪಠ್ಯ ಬೋಧಿಸುವ ಆಂಗ್ಲ ಮಾಧ್ಯಮ ಕರ್ನಾಟಕ ಪಬ್ಲಿಕ್ ಶಾಲೆಗಳು ಸ್ಥಾಪನೆಯಾಗಲಿವೆ. ಅಲ್ಲಿಗೆ ನಮ್ಮೆಲ್ಲ ಕನ್ನಡ ಶಾಲೆಗಳು ದಿಡ್ಡು, ಬಾಗಿಲು ಹಾಕಿಕೊಳ್ಳುವುದು ಖಚಿತ. ನಮ್ಮ ಮಕ್ಕಳು, 'ಹುಯ್ಯೋ, ಹುಯ್ಯೋ ಮಳೆರಾಯ' ಎನ್ನುವ ಬದಲು 'ರೈನ್, ರೈನ್ ಗೋ ಅವೇ' ಎಂದು ಗುನುಗುನಿಸುವುದನ್ನು ಕೇಳಿ ನಾವು ಖುಷಿಪಡ ಬಹುದು. ಎಂದಿನಂತೆ ನವೆಂಬರ್ ತಿಂಗಳು ಬಂದಾಗ ಕನ್ನಡದ ಉಳಿವಿಗಾಗಿ, ನಾಡು -ನುಡಿಯ ರಕ್ಷಣೆಗಾಗಿ ಸರಕಾರ ಏನೇನು ಕ್ರಮ ಕೈಗೊಳ್ಳಬೇಕೆಂದು ಹಕ್ಕೊತ್ತಾಯ ಸಲ್ಲಿಸಬಹುದು.

ತನ್ನಿಮಿತ್ತ

ರಘು ಭಾರದ್ವಾಜ

ಏಕತೆಯ 'ಸರದಾರ'

ಸ್ವತಂತ್ರ ಭಾರತದ ಮೊದಲ ಉಪಪ್ರಧಾನ ಮಂತ್ರಿ ಮತ್ತು ಮೊದಲ ಗೃಹಮಂತ್ರಿ ಎಂಬ ಖ್ಯಾತಿ ಹೊತ್ತವರು, 'ಉಕ್ಕಿನ ಮನುಷ್ಯ' ಎಂದೇ ಕರೆಸಿಕೊಂಡವರು ಸರ್ದಾರ್ ವಲ್ಲಭಭಾಯಿ ಪಟೇಲರು. ಇವರು ಜನಿಸಿದ್ದು 1875ರ ಅಕ್ಟೋಬರ್ 31ರಂದು. ಗುಜರಾತ್‌ನ ನಡಿಯಾದ್ ಇವರ ಜನ್ಮಸ್ಥಳ. ವಸಾಹತುಶಾಹಿ ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿ ಸಿಲುಕಿ ನಲುಗಿದ್ದ ಭಾರತವು ಸ್ವತಂತ್ರವಾಗುವುದಕ್ಕೆ ಮತ್ತು ತರುವಾಯದಲ್ಲಿ ಏಕೀಕರಣಗೊಳ್ಳುವುದಕ್ಕೆ ಪಟೇಲರು ನೀಡಿದ ಕೊಡುಗೆ ಅನನ್ಯ. ಇದರ ಸ್ಮರಣಾರ್ಥವಾಗಿ, ಅವರ ಜನ್ಮದಿನವಾದ ಅಕ್ಟೋಬರ್ 31ನ್ನು ಪ್ರತಿವರ್ಷ 'ರಾಷ್ಟ್ರೀಯ ಏಕತಾ ದಿನ'ವಾಗಿ ಆಚರಿಸಲಾಗುತ್ತದೆ. ಭಾರತ ಸರಕಾರವು 2014ರಲ್ಲಿ ಈ ದಿನಾಚರಣೆಗೆ ಚಾಲನೆ ನೀಡಿತು. ಪ್ರಧಾನಿ ನರೇಂದ್ರ ಮೋದಿಯವರು 'ಏಕತೆಗಾಗಿ ಓಟ' ಎಂಬ ಧ್ಯೇಯದ ವಿಶಿಷ್ಟ ಉಪಕ್ರಮದೊಂದಿಗೆ ಮೊದಲ ರಾಷ್ಟ್ರೀಯ ಏಕತಾ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿದ್ದು ಗಮನಾರ್ಹ.

ಭಾರತವು ಮೊದಲಿನಿಂದಲೂ ವಿವಿಧ ಸಂಪ್ರದಾಯ-ಸಂಸ್ಕೃತಿಗಳು, ಭಾಷೆ-ಧರ್ಮಗಳ ಒಂದು ಅನನ್ಯ ಸಂಯೋಜನೆಯಾಗೇ ಉಳಿದುಕೊಂಡು ಬೆಳೆದುಕೊಂಡು ಬಂದಿದೆ. ಆದರೆ, ಹತ್ತು ಹಲವು ರಾಜಪ್ರಭುತ್ವಗಳು ಹಾಗೂ ತರುವಾಯದ ಬ್ರಿಟಿಷರ ಆಳ್ವಿಕೆಯಿಂದಾಗಿ ಸಾಮಾಜಿಕವಾಗಿ, ಭಾವನಾತ್ಮಕವಾಗಿ, ಆಡಳಿತಾತ್ಮಕವಾಗಿ ಭಾರತವು ಹರಿದು ಹಂಚಿಹೋಗಿತ್ತು. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಏಕತೆ, ಸಮಗ್ರತೆ ಮತ್ತು ಭದ್ರತೆಯ ಭಾವನೆಯನ್ನು ಗಟ್ಟಿಗೊಳಿಸಬೇಕಿರುವ ಅಗತ್ಯವನ್ನು ಮನಗಂಡ ಆಗಿನ ಗೃಹಮಂತ್ರಿ ವಲ್ಲಭಭಾಯಿ ಪಟೇಲರು 'ಭಾರತೀಯ ಸ್ವಾತಂತ್ರ್ಯ ಕಾಯ್ದೆ-1947'ರ ನೆರವಿನಿಂದ 550ಕ್ಕೂ ಹೆಚ್ಚು ರಾಜಪ್ರಭುತ್ವದ ಸಂಸ್ಥಾನಗಳನ್ನು ಭಾರತ ಒಕ್ಕೂಟದೊಳಗೆ ಸಂಯೋಜಿಸುವಲ್ಲಿ ಹಾಗೂ ಈ ನಿಟ್ಟಿನಲ್ಲಿ ಆಯಾ ರಾಜ-ಮಹಾರಾಜರನ್ನು ಮನವೊಲಿಸುವಲ್ಲಿ ಯಶಸ್ವಿಯಾದರು. ಇದು 1947ರಿಂದ 1949ರವರೆಗಿನ ಸುದೀರ್ಘ ಅವಧಿಯಲ್ಲಿ ನೆರವೇರಿದ ತಪಸ್ಸು. ಈ ಕಾರ್ಯಸಾಧನೆಗಾಗಿ ಪಟೇಲರನ್ನು 'ಭಾರತದ ಬಿಸ್ಮಾರ್ಕ್' ಎಂದೂ ಕರೆಯುವುದುಂಟು.

'ಏಕತೆಗಾಗಿ ಓಟ', ಪ್ರತಿಜ್ಞಾ ಸ್ವೀಕಾರ ಸಮಾರಂಭ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಷ್ಟ್ರೀಯ ಏಕತೆ-ಸಮಗ್ರತೆಯನ್ನು ಬಿಂಬಿಸುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಪ್ರತಿ ವರ್ಷದ ಅಕ್ಟೋಬರ್ 31ರಂದು ರಾಷ್ಟ್ರಾದ್ಯಂತ 'ರಾಷ್ಟ್ರೀಯ ಏಕತಾ ದಿನ'ವನ್ನು ಆಚರಿಸಲಾಗುತ್ತದೆ ಎಂಬುದು ಗಮನಾರ್ಹ. ಈ ದಿನದಂದು ಬೆಳಗ್ಗೆ, ನವದೆಹಲಿಯ ಪಟೇಲ್ ಚೌಕ್‌ನಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಗುತ್ತದೆ. ನಂತರ ವಿಜಯ್ ಚೌಕ್‌ನಿಂದ ರಾಜ್‌ಪಥದಲ್ಲಿರುವ ಇಂಡಿಯಾ ಗೇಟ್‌ವರೆಗೆ ಹಮ್ಮಿಕೊಳ್ಳಲಾಗುವ 'ಏಕತೆಗಾಗಿ ಓಟ' ಕಾರ್ಯಕ್ರಮದಲ್ಲಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಸಮಾಜದ ವಿವಿಧ ಸ್ತರದ ಹಾಗೂ ಕಾರ್ಯಕ್ಷೇತ್ರಗಳ ಜನರು ಪಾಲ್ಗೊಳ್ಳುತ್ತಾರೆ ಎಂಬುದು ವಿಶೇಷ.

ದೇಶಾದ್ಯಂತದ ಸರಕಾರಿ ಕಚೇರಿಗಳು, ಸಾರ್ವಜನಿಕ ಮತ್ತು ಖಾಸಗಿ ವಲಯದ ಸಂಸ್ಥೆಗಳು/ಕಂಪನಿಗಳು, ಸ್ಥಳೀಯ ಪೌರಾಡಳಿತ ಸಂಸ್ಥೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರಾಷ್ಟ್ರೀಯ ಏಕತಾ ದಿನದಂದು ಹಮ್ಮಿಕೊಳ್ಳಲಾಗುವ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸದಾಶಯದ ಸಂಕಲ್ಪವನ್ನು ಮಾಡುತ್ತಾರೆ. ಅದರ ಸಾಲುಗಳು ಹೀಗಿರುತ್ತವೆ: ''ದೇಶದ ಏಕತೆ, ಸಮಗ್ರತೆ ಹಾಗೂ ಭದ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ನನ್ನನ್ನು ಸಮರ್ಪಿಸಿಕೊಳ್ಳುವೆ ಮತ್ತು ಈ ಸಂದೇಶವನ್ನು ನನ್ನ ಒಡನಾಡಿಗಳ ನಡುವೆ ಪಸರಿಸಲು ಶ್ರಮಿಸುವೆ ಎಂದು ಪ್ರಾಮಾಣಿಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಸರ್ದಾರ್ ವಲ್ಲಭಭಾಯಿ ಪಟೇಲರ ದೂರದೃಷ್ಟಿ ಹಾಗೂ ಪರಿಶ್ರಮದ ಕಾರ್ಯಚಟುವಟಿಕೆಗಳಿಂದಾಗಿ ನನ್ನ ದೇಶದ ಏಕೀಕರಣವು ಸಾಕಾರಗೊಂಡಿದ್ದರ ಉತ್ಸಾಹದಲ್ಲಿ ಈ ಪ್ರತಿಜ್ಞೆಯನ್ನು ನಾನು ಸ್ವೀಕರಿಸುತ್ತಿದ್ದೇನೆ. ರಾಷ್ಟ್ರದ ಭದ್ರತೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ನನ್ನದೇ ಆದ ಕೊಡುಗೆಯನ್ನು ನೀಡಲು ಗಂಭೀರವಾಗಿ ಸಂಕಲ್ಪವನ್ನು ಮಾಡುತ್ತೇನೆ''.

ದೇಶಕ್ಕೆ ವಲ್ಲಭಭಾಯಿ ಪಟೇಲರು ನೀಡಿದ ವೈವಿಧ್ಯಮಯ ಕೊಡುಗೆಗಳನ್ನು ಗೌರವಿಸುವ ಸಲುವಾಗಿ ಭಾರತ ಸರಕಾರವು ಗುಜರಾತ್‌ನಲ್ಲಿ ಪಟೇಲರ ಪ್ರತಿಮೆಯನ್ನು ಸ್ಥಾಪಿಸಿದೆ. ಅಲ್ಲಿನ ನರ್ಮದಾ ಜಿಲ್ಲೆಯ ಕೇವಡಿಯಾ ಎಂಬಲ್ಲಿ ನರ್ಮದಾ ನದಿಗೆ ನಿರ್ಮಿಸಲಾಗಿರುವ ಸರ್ದಾರ್ ಸರೋವರ್ ಅಣೆಕಟ್ಟೆಗೆ ಅಭಿಮುಖವಾಗಿ ಸ್ಥಾಪಿಸಲಾಗಿರುವ ಈ ಪ್ರತಿಮೆಯು ವಿಶ್ವದ ಅತಿ ಎತ್ತರದ ಪ್ರತಿಮೆ (182 ಮೀಟರ್) ಮತ್ತು 8ನೇ ಅದ್ಭುತ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು 'ಏಕತೆಯ ಪ್ರತಿಮೆ' ಎಂದೇ ಕರೆಯಲ್ಪಡುತ್ತದೆ.

ಬೆಂಗಳೂರು ವರುಣಾಘಾತ: ಅದೇ ರಾಗ, ಅದೇ ಹಾಡು



ಅವಲೋಕನ

ರಮಾನಂದ ಶರ್ಮಾ

vveditoped@gmail.com

ಬೆಂಗಳೂರಿನ ಜಲಪ್ರಳಯ ಅಥವಾ ವರುಣಾಘಾತವನ್ನು ವರ್ಷಗಳಿಂದ ನೋಡುತ್ತಿದ್ದವರಿಗೆ, ಇತ್ತೀಚಿನ ಮಳೆ ಅವಾಂತರವು 'ಅದೇ ರಾಗ, ಅದೇ ಹಾಡು' ಎಂಬ ಮಾತನ್ನು ನೆನಪಿಸುತ್ತದೆ. ಬೆಂಗಳೂರಿನ ಮಳೆಯ ಅವಾಂತರ ದೇಶಾದ್ಯಂತ ಚರ್ಚೆಗೆ ಆಹಾರವಾಗುತ್ತಿದೆ, ಬೆಂಗಳೂರನ್ನು ಟೀಕಿಸುತ್ತಿರುವವರಿಗೆ ಇನ್ನೊಂದು ಅಸ್ತ್ರ ನೀಡಿದೆ. 'ಭಾರತದ ಸಿಲಿಕಾನ್ ಸಿಟಿ ಮುಳುಗುತ್ತಿದೆ' ಎನ್ನುವ ಗುಲ್ಲು ಎಲ್ಲೆಲ್ಲೂ ಕೇಳುತ್ತಿದೆ. ಈ ಬಾರಿಯ ವಿಶೇಷವೆಂದರೆ ಆಲಾಪನೆ ಸ್ವಲ್ಪ ಉದ್ದವಾಗಿದೆ ಮತ್ತು ಉಚ್ಚ ಸ್ಥಾಯಿಯಲ್ಲಿದೆ. ಇದಕ್ಕೆ ಕಾರಣ, ಮಳೆಯ ಪ್ರಮಾಣ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ ಮತ್ತು ಬಹುಶಃ ಇದು ತಾರತಮ್ಯ ಎಣಿಸದೆ ನಗರದ ಎಲ್ಲಾ ಭಾಗದಲ್ಲೂ ಬಿದ್ದಿದೆ.

ಬೆಂಗಳೂರಿನಲ್ಲಿ ವರುಣಾಘಾತ ಹೊಸದೇನೂ ಅಲ್ಲ. ಆದರೆ ಈ ಬಾರಿಯ ರಣಚಂಡಿ ಮಳೆಯು ಶಾಲಾ-ಕಾಲೇಜುಗಳನ್ನು ಒಂದೆರಡು ದಿನ ಮುಚ್ಚುವಂತೆ ಮಾಡಿತು. 'ಮನೆಯಿಂದಲೇ ಕೆಲಸ' ಮಾದರಿಗೆ ಐಟಿ ಕಂಪನಿಗಳು ಶರಣಾಗುವಂತಾಗಿದ್ದು, ನಗರದ ಸಹಜ ಜನಜೀವನ ಅಸ್ತವ್ಯಸ್ತವಾಗಿದ್ದು ಈ ಬಾರಿಯ ಮಳೆಯ ವಿಶೇಷ. ಇದು ರಾಜ್ಯದಲ್ಲಿ ಅಧಿಕ ಮಳೆಯಾಗುವ ಮಲೆನಾಡು ಮತ್ತು ಕರಾವಳಿ ಪ್ರದೇಶಗಳನ್ನು ಬೆಂಗಳೂರಿಗರಿಗೆ ನೆನಪಿಸಿದ್ದರ ಜತೆಗೆ, ಮಳೆಗಾಲದಲ್ಲಿ ಆ ಪ್ರದೇಶಗಳ ಜನರು ಅನುಭವಿಸುವ ಯಾತನೆಯ 'ಟೆಸ್ಟ್ ಡೋಸ್' ಅನ್ನೂ ನೀಡಿದೆ ಎನ್ನಲಡ್ಡಿಯಿಲ್ಲ.

ಮೊದಲೇ ಹೇಳಿದಂತೆ, ಈ ಬಾರಿ ಬೆಂಗಳೂರಿನಲ್ಲಿ ವಾಡಿಕೆಗಿಂತ ಹೆಚ್ಚೇ ಮಳೆಯಾಗಿದೆ. ವಾಡಿಕೆಯ ಮಳೆ ಎದುರಿಸುವುದಕ್ಕೇ ನಮ್ಮಲ್ಲಿ ಸಾಕಷ್ಟು ಸಿದ್ಧತೆ ಇಲ್ಲದಿರುವಾಗ, ಅತಿರೇಕದ ಮಳೆಯಾದಾಗಿನ ಅವಾಂತರವನ್ನು ನಿಭಾಯಿಸಿಬಿಡುತ್ತಾರೆ ಎಂದು ನಿರೀಕ್ಷಿಸುವುದು ಹಾಸ್ಯಾಸ್ಪದವಾದೀತು. ಮಳೆಯಿಂದ ಅನಾಹುತವಾದಾಗ ಮುಂದೆ ಕೈಗೊಳ್ಳಬೇಕಾಗುವ ಕ್ರಮಗಳ ಬಗ್ಗೆ ಸುದೀರ್ಘ ಚರ್ಚೆಯಾಗುತ್ತದೆ, ಅದಕ್ಕಾಗಿ ಇಂತಿಷ್ಟು ಹಣವನ್ನು ನಿಗದಿಪಡಿಸಲಾಗಿದೆ ಎಂದೂ ಹೇಳಲಾಗುತ್ತದೆ. ಆರಂಭಿಕ ಚಟುವಟಿಕೆಗಳನ್ನು ನೋಡಿದಾಗ, 'ಕೆಲಸವು ಪ್ರಾರಂಭವಾಗಿದೆ, ಇನ್ನೇನು ಜನರು ನೆಮ್ಮದಿಯ ನಿಟ್ಟುಸಿರು ಬಿಡಬಹುದು' ಎಂಬ ಭರವಸೆ ಮೂಡುತ್ತದೆ. ಆದರೆ ವಾಸ್ತವದಲ್ಲಿ 'back to square one' ಎಂಬ ಪರಿಸ್ಥಿತಿ ಇರುತ್ತದೆ. ಕಳೆದ ವರ್ಷವೂ ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ 'ಜಲದಿಗ್ಬಂಧನ'ಕ್ಕೆ ಒಳಗಾಗಿ ಅಲ್ಲಿನ ನಿವಾಸಿಗಳ ಬದುಕು ಹೈರಾಣಾಗಿತ್ತು. ಕೂಡಲೇ ಸೂಕ್ತ ಕ್ರಮವನ್ನು ಕೈಗೊಳ್ಳುವ ಭರವಸೆಯು ಸಂಬಂಧಿತ ಇಲಾಖೆ ಮತ್ತು ಸರಕಾರದಿಂದ ಹೊಮ್ಮಿತ್ತು. ಆದರೆ, 'ಹಾಕಿದ ಬಟ್ಟೆ ಹಾಕಿದ ಜಾಗದಲ್ಲೇ ಇದೆ' ಎನ್ನುವಂತೆ ಪರಿಸ್ಥಿತಿಯಲ್ಲಿ ಬದಲಾವಣೆಯೇನೂ ಆಗಿಲ್ಲ. ಕಾರಣ, ಜನರು ಸಂಕಷ್ಟದಲ್ಲಿ ಸಿಲುಕಿದಾಗ ಬಣ್ಣಬಣ್ಣದ ಭರವಸೆಗಳನ್ನು ನೀಡುವ ಅಧಿಕಾರಿಗಳು ಮತ್ತು ರಾಜಕಾರಣಿಗಳು, ಮತ್ತೆ ಆ ಕಡೆ ಗಮನ ಕೊಡುವುದು ಅಂಥ ಅವಾಂತರ ಮತ್ತೊಮ್ಮೆ ಸಂಭವಿಸಿದಾಗ ಮಾತ್ರ.

ಬೆಂಗಳೂರಿನ ಜಲ ಅವಾಂತರದ ಹಿಂದಿನ ಕಾರಣಗಳನ್ನು ಪಟ್ಟಿಮಾಡುತ್ತಾ ಹೋದರೆ, ದೂರದರ್ಶಿತ್ವ ಇಲ್ಲದ ಮತ್ತು ಅವೈಜ್ಞಾನಿಕ ಯೋಜನೆಗಳು ಮೊದಲ ಸಾಲಿನಲ್ಲಿ ಕಾಣುತ್ತವೆ. ಇವನ್ನು ಇಂದಿನ ಅವಶ್ಯಕತೆಗಳನ್ನಷ್ಟೇ ಗಮನದಲ್ಲಿರಿಸಿಕೊಂಡು ರೂಪಿಸಿರುತ್ತಾರೆಯೇ ವಿನಾ, ನಾಳೆ ಮತ್ತು ಅದರಾಚೆಯ ದಿನಗಳಲ್ಲಿ ನಗರ ಬೆಳೆಯುವುದನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಯೋಜನೆ ಕಾರ್ಯಗತವಾಗುವಾಗಲೇ ಸಾಕಷ್ಟು ವಿಳಂಬವಾಗುವುದು ಒಂದಾದರೆ, ಅದರ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿ ಯೋಜನೆಯ ಉದ್ದೇಶವೇ ವಿಫಲಗೊಳ್ಳುವುದು ಇನ್ನೊಂದು ಮಗ್ಗುಲು. ಹೂಳು-ಕಸ ತುಂಬಿದ ಚರಂಡಿ, ಗಟಾರಗಳನ್ನು ಚೊಕ್ಕಮಾಡುವುದೇ ಇಲ್ಲ; ಒಂದೊಮ್ಮೆ ಮಾಡಿದರೂ, ಹೊರತೆಗೆದ ಕಸವನ್ನು ಕೂಡಲೇ ವಿಲೇವಾರಿ ಮಾಡದೆ ಅವು ಮರಳಿ ಚರಂಡಿ ಸೇರುವುದು ಮಾಮೂಲಾಗಿದೆ. ರಾಜಕಾಲುವೆಗಳನ್ನು ಅತಿಕ್ರಮಿಸಿ ಮನೆ, ಅಪಾರ್ಟ್‌ಮೆಂಟ್, ಷಾಪಿಂಗ್ ಮಾಲ್‌ಗಳನ್ನು ನಿರ್ಮಿಸುವುದು, ಚರಂಡಿಗೂ ಜಾಗ ನೀಡದೆ ರಸ್ತೆ ರೂಪಿಸುವುದು, ಅಕ್ರಮ ಕಟ್ಟಡಗಳಿಗೆ ನೋಟಿಸ್ ನೋಡಿ ಮುಂದಿನ ಕ್ರಮ ಕೈಗೊಳ್ಳದಿರುವುದು, ಅಕ್ರಮ ತೆರವು ಕಾರ್ಯಾಚರಣೆಯಲ್ಲೂ ಸಾಮಾನ್ಯರಿಗೊಂದು ಪ್ರಭಾವಿಗಳಿಗೊಂದು ನಿಯಮ ಅನುಸರಿಸುವುದು ಹೀಗೆ ಅಪಸವ್ಯಗಳು ಒಂದೆರಡಲ್ಲ.

ವಸತಿ ಸಮುಚ್ಚಯಗಳಿಂದ ಹೊರಬರುವ ಭಾರಿ ಪ್ರಮಾಣದ ತ್ಯಾಜ್ಯನೀರು ಹರಿದುಹೋಗಲು ಸರಿಯಾದ ಒಳಚರಂಡಿ ಇಲ್ಲದಿರುವುದು ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸಿದೆ. ಹೊಸ ಅಪಾರ್ಟ್‌ಮೆಂಟ್‌ಗಳಿಗೆ ಅನುಮತಿಸುವಾಗ ಇಂಥ ಸೌಲಭ್ಯ ಕಲ್ಪಿಸುವ ಬಗ್ಗೆ ನಿರ್ಲಕ್ಷ್ಯ ತೋರುವುದು ಎದ್ದು ಕಾಣುತ್ತದೆ. 'ಮಳೆಗಾಲದ ಅವಾಂತರಗಳನ್ನು ಎದುರಿಸಲು ಸಕಲ ಸಿದ್ಧತೆಗಳಾಗಿವೆ' ಎಂಬ ಆಳುಗರ ಮುಂಗಾರುಪೂರ್ವ ಹೇಳಿಕೆಗಳನ್ನು ಬೆಂಗಳೂರಿಗರು ಭರವಸೆಯಿಂದಲೇ ಸ್ವಾಗತಿಸಿದ್ದರು. 'ಇವರು ಕಳೆದ ವರ್ಷದ ಅಧ್ವಾನದಿಂದ ಪಾಠ ಕಲಿತುಕೊಂಡಿರಬಹುದು' ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೆ ಎರಡೇ ದಿನದ ಮಳೆಗೆ ನೀರು ಮನೆಯೊಳಗೆ ನುಗ್ಗಿತು, ಚರಂಡಿ ನೀರು ರಸ್ತೆಯಲ್ಲಿ ಹರಿಯಿತು, ಅಂಡರ್‌ಪಾಸ್‌ಗಳು ಕೆರೆಗಳಾದವು, ರಾಜಕಾಲುವೆಗಳು ಉಕ್ಕಿಹರಿದವು, ಮ್ಯಾನ್‌ಹೋಲ್‌ಗಳು ಬಾಯ್ತೆರೆದುಕೊಂಡವು. ಸಾಲದೆಂಬಂತೆ ಹಾವು-ಚೇಳುಗಳು ರಸ್ತೆಯಲ್ಲಿ ಸ್ವಾತಂತ್ರ್ಯವನ್ನು ಅನುಭವಿಸಿದವು. ಬಡಾವಣೆಗಳು, ಮನೆಗಳು, ಅಪಾರ್ಟ್‌ಮೆಂಟ್‌ಗಳು ಜಲಾವೃತವಾಗಿ ಅಕ್ಷರಶಃ ನಡುಗಡ್ಡೆಗಳಾದವು. ಜನರನ್ನು ಬೋಟ್‌ಗಳ ಮೂಲಕ ಹೊರಸಾಗಿಸಬೇಕಾಗಿ ಬಂತು. ಹೀಗೆ ನಿಂತನೀರಿನಲ್ಲಿ ಮುಳುಗೆದ್ದ ಮನೆ, ಅಪಾರ್ಟ್‌ಮೆಂಟ್‌ಗಳು ಮುಂದಿನ ದಿನಗಳಲ್ಲಿ ವಾಸಯೋಗ್ಯವಾಗಿರುತ್ತವೆಯೇ? ಮೊದಲಿನಷ್ಟು ದೃಢವಾಗಿರುತ್ತವೆಯೇ? ಎಂಬ ಆತಂಕ ಅಲ್ಲಿನ ನಿವಾಸಿಗಳನ್ನು ಕಾಡುತ್ತಿದೆ.

ಕೋಟ್ಯಂತರ ಹಣ ವ್ಯಯಿಸಿ ಖರೀದಿಸಿದ ವಿಲ್ಲಾಗಳು, 'ಗೇಟೆಡ್ ಕಮ್ಯುನಿಟಿ'ಗಳು, ಐಷಾರಾಮಿ ಕಟ್ಟಡಗಳು ಜಲಾವೃತವಾಗಿರುವುದನ್ನು ಮತ್ತು ಲಕ್ಷಾಂತರ ಬೆಲೆಯ ವಾಹನಗಳು ನೀರಿನಲ್ಲಿ ತೇಲುವುದನ್ನು ಕಂಡಾಗ ಕರುಳು 'ಚುರ್' ಎನ್ನುತ್ತದೆ. ಇವುಗಳು ದುರಸ್ತಿಯಾಗಬಹುದೇ? ಅದಕ್ಕೆ ಖರ್ಚಾಗುವುದೆಷ್ಟು? ವಿಮೆ ಪರಿಹಾರ ದೊರಕೀತೇ? ವಿಮಾ ಕಂಪನಿಗಳು ಅಷ್ಟು ಸುಲಭವಾಗಿ ಪರಿಹಾರ ನೀಡಿಯಾವೇ? ಹೀಗೆ ಹಲವಾರು ಪ್ರಶ್ನೆಗಳಿಂದ ಬಾಧಿತರಾಗಿರುವ ಮಳೆ ಸಂತ್ರಸ್ತರು, ಅಂತ್ಯವಿಲ್ಲದ ಚರ್ಚೆಯಲ್ಲಿ ವ್ಯಸ್ತರಾಗಿದ್ದಾರೆ. ತಾವು ಬೆವರು-ರಕ್ತ ಬಸಿದು ಗಳಿಸಿಕೊಂಡಿದ್ದನ್ನು ಮಹಾನಗರಪಾಲಿಕೆಯ ತಪ್ಪಿನಿಂದಾಗಿ ಜನರು ಕಳೆದುಕೊಳ್ಳುವುದು ದುರದೃಷ್ಟವಲ್ಲ, ಒಂದು ದುರಂತ. ರಿಯಲ್ ಎಸ್ಟೇಟ್ ವ್ಯವಹಾರಸ್ಥರು ಇನ್ನು ಮುಂದೆ ನಗರದಲ್ಲಿ ಮನೆ ಮಾರುವಾಗ 'ಮಳೆಗಾಲದ ಮಳೆಯಿಂದ ಸುರಕ್ಷಿತ' ಎಂಬುದಾಗಿ ತಮ್ಮ ಜಾಹೀರಾತಿನಲ್ಲಿ ನಮೂದಿಸಬೇಕಾದ ಅನಿವಾರ್ಯತೆ ಎದುರಾದರೂ ಅಚ್ಚರಿಯಿಲ್ಲ.

ಬೆಂಗಳೂರು ಮಹಾನಗರಿಗೆ ಕಳೆದ 5 ವರ್ಷಗಳಿಂದ ಜನಪ್ರತಿನಿಧಿಗಳ ಆಡಳಿತವೇ ಇಲ್ಲದಿರುವುದು ಮತ್ತೊಂದು ವಿಪರ್ಯಾಸ ಮತ್ತು ದುರಂತ. ಎಲ್ಲಿಂದಲೋ ಬಂದಿರುವ ಅಧಿಕಾರಿಶಾಹಿಗಳ ದರ್ಬಾರು ನಡೆಯುತ್ತಿದ್ದು, ಇವರು ಜನರ ಸಮಸ್ಯೆ-ಸಂಕಷ್ಟಗಳಿಗೆ ಎಷ್ಟರಮಟ್ಟಿಗೆ ಸ್ಪಂದಿಸಿಯಾರು ಎಂಬುದು ಚರ್ಚಾಸ್ಪದ ವಿಷಯ. ಜನಪ್ರತಿನಿಧಿಗಳೇ ತಮ್ಮ ಕರ್ತವ್ಯದ ನಿಭಾವಣೆಯನ್ನು ನಿರ್ಲಕ್ಷಿಸುವಾಗ ಅಧಿಕಾರಿಶಾಹಿಯನ್ನು ದೂರಲಾದೀತೇ? ಮಹಾನಗರಪಾಲಿಕೆಯ ಕ್ಷೇತ್ರಗಳ ಮರುವಿಂಗಡಣೆ, ಮೀಸಲಾತಿ, ವಾರ್ಡ್‌ಗಳ ಸಂಖ್ಯೆಯಲ್ಲಿ ಹೆಚ್ಚಳ, ಪಾಲಿಕೆಯ ವಿಭಜನೆ ಮುಂತಾದ ವಿಷಯಗಳಲ್ಲೇ ಚರ್ಚೆ ಸಾಗುತ್ತಿದ್ದು, ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಪಾಲಿಕೆ ಚುನಾವಣೆಯು ಕಳೆದ 5 ವರ್ಷಗಳಿಂದಲೂ 'ಇಂದಲ್ಲ ನಾಳೆ' ಮೋಡ್‌ನಲ್ಲಿದೆ. ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಇದ್ದಾಕ್ಷಣ ಎಲ್ಲಾ ಸಮಸ್ಯೆ-ಸಂಕಷ್ಟಗಳಿಗೆ ಪರಿಹಾರ ಸಿಕ್ಕಿಬಿಡುತ್ತದೆ ಎನ್ನಲಾಗದು; ಆದರೆ 'ದೊರೆಯ ತನಕ ದೂರು' ಎನ್ನುವಂತೆ, ಅವರ ಮೂಲಕ ಪಾಲಿಕೆಯ ಗಮನಕ್ಕಾದರೂ ತರಬಹುದು ಎನ್ನುವ ಸಣ್ಣ ಆಸೆಯಷ್ಟೇ. ಜನಪ್ರತಿನಿಧಿಗಳ ಮಾತಿಗೇ ಸ್ಪಂದನೆ ಸಿಗದಿರುವಾಗ ಸಾಮಾನ್ಯ ಜನತೆಯ ಅಹವಾಲಿಗೆ ಉತ್ತರ ಸಿಗುವುದೇ ಎಂಬ ಜಿಜ್ಞಾಸೆಯಲ್ಲೂ ಅರ್ಥವಿದೆ.

ಬೆಂಗಳೂರಿನ ಇಂದಿನ ಮಳೆ ಅವಾಂತರಗಳಿಗೆ ಪಾಲಿಕೆಯನ್ನಷ್ಟೇ ದೂಷಿಸುವುದು ತರ್ಕಹೀನ. ಸುಮಾರು 1.34 ಕೋಟಿಯಷ್ಟು ಜನಸಂಖ್ಯೆ ಇರುವ, ದಿನಂಪ್ರತಿ 5,000 ಟನ್ ತ್ಯಾಜ್ಯ ಉತ್ಪತ್ತಿಯಾಗುವ, 741 ಚ.ಕಿ.ಮೀ. ವಿಸ್ತಾರದ ಬೆಂಗಳೂರಿನ ನಿಭಾವಣೆಯು ಒಂದು ನಗರ ಪಾಲಿಕೆಯಿಂದ ಸಾಧ್ಯವೇ ಎಂಬ ಬಗ್ಗೆ ಗಂಭೀರ ಚಿಂತನೆಯಾಗಲೇ ಇಲ್ಲ. ಕನಿಷ್ಠಪಕ್ಷ ಆಡಳಿತಾತ್ಮಕವಾಗಿಯಾದರೂ ಪಾಲಿಕೆಯನ್ನು ವಿಭಜಿಸುವ ಅವಶ್ಯಕತೆಯಿದೆ ಎಂದು ಪ್ರಜ್ಞಾವಂತರು ಆಗ್ರಹಿಸುತ್ತಾರೆ. ಪಾಲಿಕೆಯ ಆಯುಕ್ತರ ಕಾರ್ಯಬಾಹುಳ್ಯವನ್ನೊಮ್ಮೆ ನೋಡಿದರೆ, ಅವರು ಇಷ್ಟು ನಿಭಾಯಿಸುತ್ತಿರುವುದೇ ಒಂದು ಅಚ್ಚರಿ ಎನ್ನಬಹುದು. 'ನನ್ನ ಇಡೀ ದಿನವು ಚೆಕ್‌ಗೆ ಸಹಿಹಾಕುವುದರಲ್ಲೇ ವ್ಯಯವಾಗುತ್ತದೆ' ಎಂದು ಆಯುಕ್ತರೊಬ್ಬರು ಅಲವತ್ತುಕೊಂಡಿದ್ದರಂತೆ. ಪಾಲಿಕೆಯ ವಿಭಜನೆಗೆ ಸಮಿತಿಯೊಂದು ಶಿಫಾರಸು ಮಾಡಿದ್ದರೂ, ಅದರ ಅನುಷ್ಠಾನದ ನಿಟ್ಟಿನಲ್ಲಿ ಹಲವು ವಿರೋಧ, ಜಿಜ್ಞಾಸೆ, ಜಂಜಾಟ ವ್ಯಕ್ತವಾಗುತ್ತಿದ್ದು, ವಿಭಜನೆ ತೂಗುಯ್ಯಾಲೆಯಲ್ಲಿದೆ. ಉತ್ತಮ ಆಡಳಿತಕ್ಕಾಗಿ ಯಾವ ರೀತಿಯಲ್ಲಿ ವಿಭಜನೆಯಾಗಬೇಕು ಎಂಬುದರ ಬಗೆಗೆ ಒಮ್ಮತ ಮೂಡುತ್ತಿಲ್ಲ. ಇದು ಒಂದು ರೀತಿಯಲ್ಲಿ, 'ಹುಚ್ಚು ಬಿಡದ ಹೊರತು ಮದುವೆಯಿಲ್ಲ, ಮದುವೆಯಾಗದ ಹೊರತು ಹುಚ್ಚು ಬಿಡಲ್ಲ' ಎನ್ನುವಂತೆ, ಪಾಲಿಕೆಯ ಆಡಳಿತ ವ್ಯವಸ್ಥೆಗೆ ಕಾಯಕಲ್ಪವಾಗದೆಯೇ ಚುರುಕುತನ ಮತ್ತು ಕ್ರಿಯಾಶೀಲತೆಯನ್ನು ನಿರೀಕ್ಷಿಸಲಾಗದು; ಆದರೆ ಈ ಕಾಯಕಲ್ಪ ಚಿಕಿತ್ಸೆ ಚರ್ಚೆಯಲ್ಲಿ ಮಾತ್ರ ಇದೆ.

ಬೆಂಗಳೂರಿನ ವರುಣಾಘಾತಕ್ಕೆ ಹಲವು ಸೂತ್ರಧಾರರಿದ್ದು, ಯಾರೊಬ್ಬರ ಕಡೆಗೂ ನೇರವಾಗಿ ಬೆರಳುಮಾಡಿ ತೋರಿಸುವಂತಿಲ್ಲ. ವ್ಯತ್ಯಾಸ ಇರುವುದು, 'ಯಾರು ಹೆಚ್ಚು, ಯಾರು ಕಡಿಮೆ' ಎನ್ನುವುದರಲ್ಲಿ ಮಾತ್ರ. ನಗರ ಪಾಲಿಕೆಗೆ ಜನಪ್ರತಿನಿಧಿಗಳ ಆಡಳಿತ ನೀಡಲು ಹಿಂದೇಟು ಹಾಕುತ್ತಿರುವ ಸರಕಾರಗಳು ಹೆಚ್ಚಿನ ಜವಾಬ್ದಾರಿ ಹೊರಬೇಕಾಗುತ್ತದೆಯೇನೋ?

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ನಾರದ ಸಂಚಾರ

ಕಲಹಪ್ರಿಯ

naadigru@gmail.com

ಖುಲಾಯಿಸುತ್ತಾ ಅದೃಷ್ಟ?

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಸೋದರ-ಸಂಬಂಧಿ ಹಾಗೂ ಲಾಲು ಪ್ರಸಾದ್ ಯಾದವ್ ಅವರ ಅಳಿಮಯ್ಯ ಎನಿಸಿಕೊಂಡಿರುವ ತೇಜ್‌ಪ್ರತಾಪ್ ಸಿಂಗ್ ಯಾದವ್ ಸುದ್ದಿಯಲ್ಲಿದ್ದಾರೆ. ಕಾರಣ, ಸದ್ಯದಲ್ಲೇ ಉತ್ತರ ಪ್ರದೇಶದ ಕರ್‌ಹಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ನಡೆಯಲಿದ್ದು, ತೇಜ್‌ಪ್ರತಾಪ್ ಸಿಂಗ್ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎನ್ನಲಾಗುತ್ತಿದೆ.



ಕನಿಷ್ಠಪಕ್ಷ ಈಗಲಾದರೂ ಈ ಅದೃಷ್ಟ ಅವರ ಕೈಹಿಡಿಯಲಿ ಎಂಬುದಾಗಿ ತೇಜ್‌ಪ್ರತಾಪರ ಅನುಯಾಯಿಗಳು ದೇವರಲ್ಲಿ ಹರಕೆ ಕಟ್ಟಿಕೊಳ್ಳುತ್ತಿದ್ದಾರಂತೆ. ಕಾರಣ, ಇದಕ್ಕೂ ಮೊದಲು ಅವರಿಗೆ 2 ಬಾರಿ ಅದೃಷ್ಟ ಕೈಕೊಟ್ಟಿತ್ತು. ಅಂದರೆ, ಇತ್ತೀಚಿನ ಲೋಕಸಭಾ ಚುನಾ ವಣೆಯ ವೇಳೆ ರಾಮ್‌ಪುರ ಮತ್ತು ಕನ್ನೌಜ್ ಲೋಕಸಭಾ ಕ್ಷೇತ್ರಗಳಿಗೆ ಅವರ ಹೆಸರೇ ನಿಕ್ಕಿ ಎಂದು ಹೇಳಲಾಗಿದ್ದರೂ, ಕೊನೇ ಕ್ಷಣದಲ್ಲಿ ಅದು ಬದಲಾಗಿ ಮತ್ಯಾರದ್ದೋ ಪಾಲಾಗಿತ್ತು. ಹೀಗಾಗಿ ಪ್ರಸಕ್ತ ವರ್ಷದಲ್ಲಿ ಚುನಾವಣಾ ಸ್ಪರ್ಧೆಗೆ ತೇಜ್‌ಪ್ರತಾಪ್ ಸಿಂಗ್ ಯಾದವ್ ಅವರ ಹೆಸರು ಹೀಗೆ ಕೇಳಿಬರುತ್ತಿರುವುದು ಇದು ಮೂರನೇ ಬಾರಿ. ಈ 'ಹ್ಯಾಟ್ರಿಕ್' ಯತ್ನವಾದರೂ ಅವರ ಕೈಹಿಡಿಯಲಿ ಎಂಬುದು ಅಭಿಮಾನಿಗಳ ಹಾರೈಕೆಯಂತೆ. ಅಖಿಲೇಶ್ ಯಾದವ್ ಅವರು ತಾವು ಪ್ರತಿನಿಧಿಸುತ್ತಿದ್ದ ಕರ್‌ಹಲ್ ಕ್ಷೇತ್ರಕ್ಕೆ ರಾಜೀನಾಮೆಯಿತ್ತ ಕಾರಣ (ಪ್ರಸ್ತುತ ಅವರೀಗ ಕನ್ನೌಜ್ ಕ್ಷೇತ್ರದ ಸಂಸದರು), ತೇಜ್‌ಪ್ರತಾಪರು ಆ ಸ್ಥಾನಕ್ಕೆ ಟವೆಲ್ ಹಾಕಲು ಹವಣಿಸುತ್ತಿದ್ದಾರಂತೆ. ಈ ಯತ್ನವಾದರೂ ಅವರ 'ರಾಜಕೀಯ ಶಾಪವಿಮೋಚನೆ'ಗೆ ಕಾರಣವಾಗುತ್ತದಾ ಎಂಬುದನ್ನು ಕಾದುನೋಡಬೇಕಿದೆಯಷ್ಟೇ. 2004ರಿಂದಲೂ ರಾಜಕೀಯದಲ್ಲಿ ಸಕ್ರಿಯರಾಗಿರುವ ತೇಜ್‌ಪ್ರತಾಪರು ಸ್ಥಳೀಯ ಸಂಸ್ಥೆಗಳ ಮಟ್ಟದ ಹಲವು ಚುನಾವಣೆಗಳಲ್ಲಿ ಗೆಲುವಿನ ನಗೆ ಬೀರಿದ್ದರ ಜತೆಗೆ, 2014ರಲ್ಲಿ ಮೈನ್‌ಪುರಿ ಲೋಕಸಭಾ ಸ್ಥಾನವನ್ನೂ ತಮ್ಮದಾಗಿಸಿಕೊಂಡಿದ್ದುಂಟು. ಈಗ, 2024ರ ವರ್ಷ ಅವರಿಗೆ 'ಶುಭ'ವಾಗಲಿದೆಯೇ ಎಂಬುದನ್ನು 'ಶಕುನದ ಹಕ್ಕಿ'ಯೇ ಹೇಳಬೇಕು!

ಇದು ದೊಡ್ಡೋರ ವಿಷಯ

ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರತಿವರ್ಷ ತಮ್ಮ ಮನೆಯಲ್ಲಿ ವರಲಕ್ಷ್ಮಿ ಪೂಜೆಯನ್ನು ಆಚರಿಸುವಾಗ ಪತ್ರಕರ್ತೆಯರಿಗಾಗಿ ಅನೌಪಚಾರಿಕ ಭೋಜನಕೂಟವನ್ನು ಹಮ್ಮಿಕೊಳ್ಳುವುದುಂಟು. ಸಂಪತ್ತು ಕರುಣಿಸುವ ದೇವಿ ಲಕ್ಷ್ಮಿಯ ಕೃಪಾಶೀರ್ವಾದವನ್ನು ಕೋರುವ ಈ ಕಾರ್ಯಕ್ರಮವು ಈ ಬಾರಿ ಆಯೋಜನೆಗೊಂಡಿದ್ದು ಅಕ್ಟೋಬರ್ ಮಧ್ಯಭಾಗದಲ್ಲಿ. ಈ ವೇಳೆ, ಉತ್ತರ ಮತ್ತು ದಕ್ಷಿಣ ಭಾರತೀಯ ಶೈಲಿಯ ಭಕ್ಷ್ಯ-ಭೋಜ್ಯಗಳನ್ನು ವ್ಯವಸ್ಥೆ ಮಾಡಲಾಗಿತ್ತಂತೆ. ಈ ಬಾರಿಯ ಸಮಾರಂಭವು ಹಿಂದಿನ ವರ್ಷಗಳಲ್ಲಿ ಕಂಡುಬಂದುದಕ್ಕಿಂತ ವೈಭವಪೂರ್ಣವಾಗಿತ್ತಂತೆ, ಊಟೋಪಚಾರವೂ ಭರ್ಜರಿಯಾಗಿತ್ತಂತೆ. ಸಾಂಪ್ರದಾಯಿಕ ಅರಗಿನ ಬಳೆ ಮತ್ತು ಅಲಂಕಾರಿಕ ಲೋಹದ ಬಳೆಯ ತಯಾರಕರೊಬ್ಬರನ್ನು ರಾಜಸ್ಥಾನದಿಂದ ಕರೆಸಲಾಗಿತ್ತಂತೆ. 'ದೊಡ್ಡೋರ ಮನೆಯ ನೋಟ ಚಂದ' ಅಂತ ಬಲ್ಲವರು ಹೇಳುವುದು ಇದಕ್ಕೇ ಇರಬೇಕು!

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:310

ಸಮಾಚಾರ ಸಣ್ಣದಲ್ಲ

ರಸ್ತೆ ಬದಿ ಮೊಮೊಸ್ ಸೇವಿಸಿ ಮಹಿಳೆ ಸಾವು

ಹೈದರಾಬಾದ್: ತೆಲಂಗಾಣದ ಹೈದರಾಬಾದ್‌ನಲ್ಲಿ ರಸ್ತೆ ಬದಿ ಹೋಟೆಲ್‌ನಲ್ಲಿ ತಯಾರಾದ ಮೊಮೊಸ್ ಸೇವಿಸಿ ಮಹಿಳೆಯೊಬ್ಬರು ಮೃತರಾಗಿದ್ದು ಇತರೆ 15 ಜನರು ಅಸ್ವಸ್ಥಗೊಂಡಿದ್ದಾರೆ. ಬಿಹಾರದಿಂದ ಬಂದ ಆರು ಜನರು 3 ತಿಂಗಳ ಹಿಂದೆ ಚಿಂತಲ್ ಬಸ್ತಿಯಲ್ಲಿ 'ದೆಹಲಿ ಮೊಮೊಸ್' ಆಹಾರ ಘಟಕ ಸ್ಥಾಪಿಸಿದ್ದರು. ಇಲ್ಲಿಂದಲೇ ಮಹಿಳೆ ಮತ್ತಿತರರು ಮೊಮೊಸ್ ಖರೀದಿಸಿ ಸೇವಿಸಿದ್ದರು. ಘಟನೆ ಬಳಿಕ ಹೋಟೆಲ್ ನಡೆಸುತ್ತಿದ್ದವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಮೊಮೊಸ್ ತಿಂದು ಅಸ್ವಸ್ಥಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ. ಮೋಮೋಸ್ ಸೇವಿಸಿದ 1 ಗಂಟೆ ನಂತರ ಮಹಿಳೆ ತೀವ್ರ ಅಸ್ವಸ್ಥಗೊಂಡರು. ತಕ್ಷಣ ಆಕೆಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಮಹಿಳೆ ಮೃತಪಟ್ಟರು.

ಛತ್ತೀಸ್‌ಗಢದಲ್ಲಿ 19 ನಕ್ಸಲರ ಬಂಧನ

ಸುಕ್ಮಾ: ಛತ್ತೀಸ್‌ಗಢ ರಾಜ್ಯದ ಸುಕ್ಮಾ ಜಿಲ್ಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ನಡೆದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ 19 ನಕ್ಸಲರನ್ನು ಭದ್ರತಾ ಪಡೆಗಳು ಬಂಧಿಸಿವೆ. ಬಂಧಿತ ನಕ್ಸಲರಲ್ಲಿ ಮೂವರ ಸೆರೆಗೆ ಸಹಕರಿಸಿದರೆ 1 ಲಕ್ಷ ರು. ನಗದು ಬಹುಮಾನ ನೀಡಲಾಗುವುದೆಂದು ಸರಕಾರದಿಂದ ಘೋಷಿಸಲಾಗಿತ್ತು. ಜಾಗರಗುಂಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 14 ನಕ್ಸಲರು ಸೆರೆ ಸಿಕ್ಕರೆ, ಭೆಜ್ಜಿ ಪೊಲೀಸ್ ಠಾಣೆ ಸರಹದ್ದಿನಲ್ಲಿ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. 14 ನಕ್ಸಲರು 18 ವರ್ಷದಿಂದ 40 ವರ್ಷದವರೆಗಿನ ವಯೋಮಾನದವರು. ಬಂಧಿತ ನಕ್ಸಲರಿಂದ ಜಿಲೆಟಿನ್ ಕಡ್ಡಿಗಳು, ಗನ್ ಪೌಡರ್, ಸಿಡಿಮದ್ದು, ಡೆಟೊನೇಟರ್‌ಗಳು, ಎಲೆಕ್ಟ್ರಿಕ್ ವಯರ್ ಮತ್ತು ಬ್ಯಾಟರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ವಿವರ ನೀಡಿದ್ದಾರೆ.

ಟೆಕ್ಕಿ ಪ್ರಭಾ ಹಂತಕನ ಪತ್ತೆಗೆ 10 ಲಕ್ಷ ಡಾಲರ್

ಕ್ಯಾನ್ಬೆರಾ: ಕರ್ನಾಟಕ ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ಪ್ರಭಾ ಅರುಣ್ ಕುಮಾರ್ ಅವರು

ಆಸ್ಟ್ರೇಲಿಯದಲ್ಲಿ 10 ವರ್ಷಗಳ ಹಿಂದೆ ಹತ್ಯೆಯಾ ಗಿದ್ದು, ಹಂತಕನ ಸುಳಿವು ನೀಡಿದರೆ 10 ಲಕ್ಷ ಡಾಲರ್(8.40 ಕೋಟಿ ರು.) ಬಹುಮಾನ ನೀಡುವುದಾಗಿ ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸ್ ಆಡಳಿತ ಘೋಷಿಸಿದೆ. 2015ರ ಮಾ.7ರಂದು ಪ್ರಭಾ (41) ಕೆಲಸ ಮುಗಿಸಿ ಮನೆಗೆ ವಾಪಸಾಗು ತ್ತಿದ್ದಾಗ ಸಿಡ್ನಿಯ ಪಶ್ಚಿಮ ಭಾಗದಲ್ಲಿರುವ ಪಾರ್ಕೊಂದರಲ್ಲಿ ಕೊಲೆಯಾದರು. ಪ್ರಕರಣದ ತನಿಖೆ ಆರಂಭಿಸಿದ ಪೊಲೀಸರಿಗೆ ಒಂದು ಸುಳಿವೂ ಸಿಗಲಿಲ್ಲ. ಪ್ರಕರಣ ಭೇದಿಸಲಾಗದೇ ಇದ್ದುದಕ್ಕೆ ಈಗ ಸಾರ್ವಜನಿಕರ ನೆರವು ಕೋರಲಾಗಿದೆ.

ಯುಎಲ್‌ಎಫ್‌ಎಂನ 8 ಕೇಡರ್‌ಗಳ ಬಂಧನ

ಇಂಫಾಲ: ನಿಷೇಧಿತ ಸಂಘಟನೆ 'ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಮಣಿಪುರ' (ಯುಎಲ್‌ಎಫ್‌ಎಂ) 8 ಸದಸ್ಯರನ್ನು ತೌಬಲ್ ಜಿಲ್ಲೆಯಲ್ಲಿ ಬಂಧಿಸಿದ ಮಣಿಪುರ ಪೊಲೀಸರು, ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಸಹ ವಶಪಡಿಸಿಕೊಂಡಿದ್ದಾರೆ. ತೌಬಲ್ ಜಿಲ್ಲೆಯಲ್ಲಿ ಜನರಿಗೆ ಬೆದರಿಕೆ ಹಾಕಿದ ಮತ್ತು ಭೂಮಿ ಗುರುತಿಸುವ ಪ್ರಕ್ರಿಯೆ ತಡೆದ ಯುಎಲ್‌ಎಫ್‌ಎಂ ಸದಸ್ಯರನ್ನು ಬಂಧಿಸಲಾಗಿದೆ. 3 ಎಕೆ 47 ರೈಫಲ್, 2 ಎಕೆ 56 ರೈಫಲ್, 1 ಎಂ-16 ರೈಫಲ್, ಒಂದು 9 ಎಂಎಂ ಪಿಸ್ತೂಲ್, ಎಕೆ 47 ಬಂದೂಕಿನ 147 ಗುಂಡುಗಳು, ಎಂ-16 ಬಂದೂಕಿನ 15 ಗುಂಡು, 9 ಎಂಎಂ ಮದ್ದುಗುಂಡು 25, ಮೊಬೈಲ್ ಹ್ಯಾಂಡ್‌ಸೆಟ್‌ಗಳು ಮತ್ತು ಎಸ್‌ಯುವಿ ವಾಹನ ವಶಕ್ಕೆ ಪಡೆಯಲಾಗಿದೆ.

ತಡೆಗೋಡೆಗೆ ಬಸ್ ಡಿಕ್ಕಿಯಾಗಿ 10 ಸಾವು

ಸಿಕಾರ್: ರಾಜಸ್ಥಾನದ ಸಿಕಾರ್ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಅತಿವೇಗವಾಗಿ ಚಲಿಸುತ್ತಿದ್ದ ಖಾಸಗಿ ಸಂಸ್ಥೆಯ ಬಸ್ ಫ್ಲೈಓವರ್ ತಡೆಗೋಡೆಗೆ ಡಿಕ್ಕಿ ಹೊಡೆದಿದ್ದರಿಂದ 19 ಪ್ರಯಾಣಿಕರು ಸಾವಿಗೀಡಾಗಿದ್ದಾರೆ, 36 ಪ್ರಯಾಣಿಕರು ಗಾಯಗೊಂಡಿದ್ದಾರೆ. ಸಲಾಸರ್‌ನಿಂದ ಲಕ್ಷ್ಮಣಗಢಕ್ಕೆ ತೆರಳುತ್ತಿದ್ದ ಖಾಸಗಿ ಬಸ್ ತಿರುವು ತೆಗೆದುಕೊಳ್ಳುವಾಗ ಫ್ಲೈಓವರ್‌ನ ತಡೆಗೋಡೆಗೆ ರಭಸವಾಗಿ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ 10 ಜನರು ಸಾವನ್ನಪ್ಪಿದ್ದಾರೆ ಮತ್ತು 36 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಲಕ್ಷ್ಮಣಗಢ ಮತ್ತು ಸಿಕಾರ್ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ.

{ ಅಮಿತ್ ಶಾ } ಕೇಂದ್ರ ಗೃಹ ಸಚಿವ

ಸ್ವಾತಂತ್ರ್ಯ ನಂತರ ಛಿದ್ರವಾಗಲಿದ್ದ ದೇಶವನ್ನು ಒಗ್ಗೂಡಿಸಿದ, ಉಕ್ಕಿನ ಮನುಷ್ಯ ಎಂದೇ ಹೆಸರಾಗಿದ್ದ ಸರದಾರ್ ವಲ್ಲಭ ಭಾಯಿ ಪಟೇಲ್ ಅವರಿಗೆ ಪರಮೋಚ್ಚ ಪ್ರಶಸ್ತಿ 'ಭಾರತ ರತ್ನ' ದೊರಕದೇ ಇರಲು ಕೆಲವರ ಪಿತೂರಿಯೇ ಕಾರಣ. ಸ್ವತಂತ್ರ ಭಾರತವನ್ನು ಆರಂಭದಿಂದಲೇ ಬಲಿಷ್ಠವಾಗಿಸಲು ಶ್ರಮಿಸಿದ ಪಟೇಲರ ಕೊಡುಗೆಗಳನ್ನು ಜನರ ಮನದಿಂದ ಅಳಿಸಿ ಹಾಕುವ ಕುತಂತ್ರವೂ ನಡೆಯಿತು.



ಪಟಾಕಿ ಸಂಗ್ರಹ ಸ್ಫೋಟ | 10 ಜನ ಗಂಭೀರ; ಮಂಗಳೂರು, ಕಾಸರಗೋಡಲ್ಲಿ ಚಿಕಿತ್ಸೆ

ನೀಲೇಶ್ವರ ದೇಗುಲದಲ್ಲಿ ಪಟಾಕಿ ಅವಘಡ; 154 ಭಕ್ತರಿಗೆ ಗಾಯ

ಕಾಸರಗೋಡು: ಕೇರಳ- ಕರ್ನಾಟಕ ಗಡಿಭಾಗದ ಕಾಸರಗೋಡು ಸಮೀಪದ ನೀಲೇಶ್ವರಂನ ದೇವಸ್ಥಾನದಲ್ಲಿ ಉತ್ಸವ ವೇಳೆ ಪಟಾಕಿ ಸಂಗ್ರಹಕ್ಕೇ ಕಿಡಿ ತಾಗಿದ್ದರಿಂದ ಸರಣಿ ಸ್ಫೋಟವಾಗಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 154 ಮಂದಿ ಗಾಯಗೊಂಡಿದ್ದಾರೆ. ಶೇ.80ಕ್ಕೂ ಅಧಿಕ ಪ್ರಮಾಣದಲ್ಲಿ ಸುಟ್ಟ ಗಾಯಗಳಾಗಿರುವ 10 ಜನರ ಸ್ಥಿತಿ ಗಂಭೀರವಾಗಿದೆ.

ಅವನೀಲೇಶ್ವರಂನ ಅಂಜೂಟ್ಟಂಬಳಂ ವೀರರ್ ಕಾವು ತೆಯ್ಯಂಕಟ್ಟೆ ಮಹೋತ್ಸವ ವೇಳೆ ಪಟಾಕಿ ಸಂಗ್ರಹಕ್ಕೆ ಆಕಸ್ಮಿಕವಾಗಿ ಬೆಂಕಿ ತಾಗಿದ್ದರಿಂದ ಭಾರೀ ಪ್ರಮಾಣದಲ್ಲಿ ಸರಣಿ ಸ್ಫೋಟ ಸಂಭವಿಸಿದೆ. ಮೂವಳಂಕುಳಿ ಚಾಮುಂಡಿ ತೆಯ್ಯಂನ ಕುಳಿಚು ತೊಟ್ಟಂ ಆಚರಣೆ ವೇಳೆ ಸೋಮವಾರ ಮಧ್ಯರಾತ್ರಿ ಅವಘಡ ಸಂಭವಿಸಿದೆ.

ಗಾಯಾಳುಗಳನ್ನು ಕಾಞಂಗಾಡ್ ಜಿಲ್ಲಾಸ್ಪತ್ರೆ, ನೀಲೇಶ್ವರದ ಖಾಸಗಿ ಆಸ್ಪತ್ರೆಗಳು, ಗಂಭೀರವಾಗಿರುವ ಮೂವರನ್ನು ಪರಿಯಾರಂ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲವರಿಗೆ ಮಂಗಳೂರಿನ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ಕಾಸರಗೋಡು ಜಿಲ್ಲಾಧಿಕಾರಿ ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ವೀರರ್‌ಕಾವು ದೇವಸ್ಥಾನದ ಬಳಿ ಇದ್ದ ಪಟಾಕಿ ಸಂಗ್ರಹಾಗಾರಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿದ್ದೇ ಅವಘಡಕ್ಕೆ ಕಾರಣ. ಮುನ್ನೆಚ್ಚರಿಕೆಯಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಪಟಾಕಿ ಸಂಗ್ರಹಿಸಲು ಅನುಮತಿ ತೆಗೆದುಕೊಂಡಿಲ್ಲ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ನಿಯಮಗಳ ಉಲ್ಲಂಘನೆ: ಪೊಲೀಸ್ ತನಿಖೆ

ಅಪಘಾತಕ್ಕೆ ಕಾರಣವನ್ನು ಪತ್ತೆಹಚ್ಚಲಾಗುತ್ತಿದೆ. ಸ್ಥಳದಿಂದ ಮಾದರಿಗಳನ್ನು ಸಂಗ್ರಹಿಸಿಕೊಂಡು ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಪಟಾಕಿ ಸಂಗ್ರಹಣಾ ಕೇಂದ್ರ ಮತ್ತು ಪಟಾಕಿ ಸಿಡಿಸುವ ಸ್ಥಳ ಎರಡೂ ಹತ್ತಿರದಲ್ಲೇ ಇವೆ. ಇವೆರಡರ ನಡುವೆ ಕನಿಷ್ಠ 100 ಮೀಟರ್ ಅಂತರ ಕಾಯ್ದುಕೊಳ್ಳ ಬೇಕಿತ್ತು. ಆದರೆ, ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದಿರುವ ಪೊಲೀಸರು, ಪ್ರಕರಣ ದಾಖಲಿಸಿ ಕೊಂಡು ದೇವಸ್ಥಾನದ ಅಧಿಕಾರಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ತೆಲಂಗಾಣ; ಪಟಾಕಿ ಅಂಗಡಿ ಭಸ್ಮ

ಹೈದರಾಬಾದ್: ತೆಲಂಗಾಣ ರಾಜಧಾನಿ ಹೈದರಾಬಾದ್ ನಗರದ ರಾಮ್ ಕೋಟೆಯಲ್ಲಿ ಭಾನುವಾರ ರಾತ್ರಿ ದಿಢೀರ್ ಉಂಟಾದ ಬೆಂಕಿ ಅವಘಡದಲ್ಲಿ ಪಟಾಕಿ ಅಂಗಡಿಯೊಂದು ಸರಣಿ ಸ್ಫೋಟಗಳಿಗೆ ಕಾರಣವಾಗಿ ಪೂರ್ಣ

ಭಸ್ಮವಾಗಿದೆ. ದೀಪಾವಳಿ ಹಬ್ಬದ ಮಾರಾಟಕ್ಕೆಂದು ಅಂಗಡಿಯಲ್ಲಿ ಶೇಖರಿಸಿ ಟ್ಟಿದ್ದ ಲಕ್ಷಾಂತರ ರು. ಪಟಾಕಿ ಸಿಡಿದು ಚೂರಾಗಿವೆ. ಅಂಗಡಿಯಿದ್ದ ಜಾಗದಲ್ಲೀಗ ಬೂದಿಯಿದೆ. ಪಟಾಕಿ ಸಿಡಿಯಲು ಆರಂಭಿಸುತ್ತಿದ್ದಂತೇ ಅಂಗ ಡಿಯೊಳಗಿದ್ದ ಸಿಬ್ಬಂದಿ, ಖರೀ ದಿಗೆ ನಿಂತಿದ್ದ ಗ್ರಾಹಕರು ಓಡಿ ಹೋಗಿದ್ದಾರೆ. ಕೆಲವರಿಗೆ ಸುಟ್ಟಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾ ಗಿದೆ. 4 ಅಗ್ನಿಶಾಮಕ ವಾಹನಗಳು ಧಾವಿಸಿ ಬೆಂಕಿ ನಂದಿಸಲು ಮುಂದಾ ಗುವಷ್ಟರಲ್ಲೇ ಅಂಗಡಿ ಭಸ್ಮವಾಗಿತ್ತು. 'ಪಟಾಕಿ ಮಾರಾಟಕ್ಕೆ ಅಂಗಡಿ ಮಾಲೀಕ ಪರವಾನಗಿ ಪಡೆದಿರಲಿಲ್ಲ. ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವು ದು' ಎಂದು ಪೊಲೀಸರು ತಿಳಿಸಿದ್ದಾರೆ. ಸರಣಿಯೋಪಾದಿ ಪಟಾಕಿ ಸಿಡಿಯುತ್ತಿ ರುವ, ಧಗಧಗನೆ ಹೊತ್ತಿ ಉರಿಯುತ್ತಿರುವ ವಿಡಿಯೊ ವೈರಲ್ ಆಗಿದೆ.

70 ವರ್ಷದವರಿಗೆ 5 ಲಕ್ಷ ರು.ವರೆಗೆ ಉಚಿತ ಚಿಕಿತ್ಸೆ | ದೆಹಲಿ, ಪ.ಬಂಗಾಳದವರಿಗೆ ಸಿಗದ ಪ್ರಯೋಜನ

ಹಿರಿಯರಿಗೆ ಆಯುಷ್ಮಾಗೆ ರಕ್ಷೆ

ದೆಹಲಿ: ಕೇಂದ್ರ ಸರಕಾರದ ಪ್ರಮುಖ ಆರೋಗ್ಯ ವಿಮಾ ಯೋಜನೆ 'ಆಯುಷ್ಮಾನ್ ಭಾರತ್'ನಡಿ ಉಚಿತ ಚಿಕಿತ್ಸೆಯ ಪ್ರಯೋಜನ ಇನ್ನು ಮುಂದೆ 70 ವರ್ಷವಾದ ಹಾಗೂ ಅದಕ್ಕೂ ಮೇಲ್ಪಟ್ಟವರೆಲ್ಲರಿಗೂ ದೊರೆಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.



70 ವರ್ಷಗಳಾದವರಿಗೆ 'ಆಯುಷ್ಮಾನ್ ವಯೊ ವಂದನಾ' ಕಾರ್ಡ್ ನೀಡಲಾಗುವುದು. ಅವರು ದೇಶದ ಯಾವುದೇ ಆಸ್ಪತ್ರೆಯಲ್ಲಾದರೂ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಮೋದಿ ಹೇಳಿದರು.

ಮಂಗಳವಾರ ದೆಹಲಿಯಲ್ಲಿ ನಡೆದ 'ಆಯುರ್ವೇದ 9ನೇ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ಆದರೆ, ದೆಹಲಿ ಮತ್ತು ಬಂಗಾಳದ ಹಿರಿಯರು ಆಯುಷ್ಮಾನ್ ಭಾರತ್ ಯೋಜನೆಯ ಈ ಪ್ರಯೋಜನ ಪಡೆಯಲು ಸಾಧ್ಯವಾಗದು. ದೆಹಲಿ, ಬಂಗಾಳದ ವೃದ್ಧ ಕ್ಷಮೆ ಯಾಚಿಸುವೆ. ದೆಹಲಿ, ಪ.ಬಂಗಾಳ ಸರಕಾರಗಳು ಈ ಯೋಜನೆಗೆ ಸೇರ್ಪಡೆಯಾಗದ ಹಿನ್ನೆಲೆಯಲ್ಲಿ ಆ ರಾಜ್ಯಗಳ ಜನರಿಗೆ ಕೇಂದ್ರ ಸರಕಾರದ ಈ ಯೋಜನೆಯ ಪ್ರಯೋಜನ ಸಿಗುವುದಿಲ್ಲ. ಅದಕ್ಕಾಗಿ ರಾಜ್ಯದ ಜನರ ಕ್ಷಮೆ ಯಾಚಿಸುವೆ ಎಂದಿದ್ದಾರೆ. ರಾಜಕೀಯ ಹಿತಾಸಕ್ತಿಗಳು ನಿಮ್ಮ ರಾಜ್ಯಗಳಲ್ಲಿ (ದೆಹಲಿ, ಪ.ಬಂಗಾಳ) ಯೋಜನೆ ಅನುಷ್ಠಾನಕ್ಕೆ ಅಡ್ಡಿಪಡಿಸಿರುವುದು ವಿಷಾದನೀಯ ಎಂದರು.

ದೆಹಲಿಯ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ, ಕರ್ನಾಟಕದ ಬೆಂಗಳೂರಿನ ಐಐಎಸ್‌ಸಿಯಲ್ಲಿ ಮಧುಮೇಹ ಮತ್ತು ಮೆಟಾಬಾಲಿಕ್ ಡಿಸಾರ್ಡರ್‌ಗೆ ಆಯುರ್ವೇದ ಚಿಕಿತ್ಸೆ ಸೌಲಭ್ಯ, ಛತ್ತೀಸ್‌ಗಢದಲ್ಲಿ ವಿಶೇಷ ರೀತಿಯ ಅತ್ಯಾಧುನಿಕ ಆಯುರ್ವೇದ ಆಸ್ಪತ್ರೆ ಸ್ಥಾಪನೆ ಸೇರಿದಂತೆ ಒಟ್ಟು 12,850 ಕೋಟಿ ರು.ಗಳ ವಿವಿಧ ಮೂಲ ಸೌಕರ್ಯ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು.

3 ಕ್ಯಾನ್ಸರ್ ಔಷಧಗಳ ಬೆಲೆ ತಗ್ಗಿಸಲು ಸೂಚನೆ

ದೆಹಲಿ: ಕ್ಯಾನ್ಸರ್ ಚಿಕಿತ್ಸೆಗೆ ಅತ್ಯಗತ್ಯವಾಗಿರುವ ಮೂರು ಔಷಧಗಳ ಮಾರಾಟ ದರವನ್ನು ತಗ್ಗಿಸಿ, ಸಂತ್ರಸ್ತ ಕುಟುಂಬಗಳಿಗೆ ಅನುಕೂಲ ಮಾಡಿಕೊಡುವಂತೆ ದೇಶದ ಔಷಧ ತಯಾರಿಕಾ ಕಂಪನಿಗಳಿಗೆ ಕೇಂದ್ರ ಸರಕಾರ ಸೂಚನೆ ನೀಡಿದೆ.

ಟ್ರಾಸ್ಟುಝುಮ್ಯಾಬ್, ಓಸಿಮೆರಿನಿಬ್ ಮತ್ತು ಡ್ಯುರ್ವಲ್ಯುಮ್ಯಾಬ್ ಔಷಧಗಳು ಬಹಳ ದುಬಾರಿಯಾಗಿದ್ದು, ಕ್ಯಾನ್ಸರ್ ಚಿಕಿತ್ಸೆಗೆ ಒಳಗಾದವರಿಗೆ ಹೊರೆಯಾಗುತ್ತಿವೆ. ಹಾಗಾಗಿ ದೇಶದಲ್ಲಿನ ಔಷಧ ತಯಾರಿಕಾ ಕಂಪನಿಗಳು ಅವುಗಳ ಮಾರಾಟದ ದರವನ್ನು ಆದಷ್ಟು ತಗ್ಗಿಸಬೇಕು ಎಂದು 'ನ್ಯಾಷನಲ್ ಫಾರ್ಮಾಸ್ಯುಟಿಕಲ್ ಪ್ರೈಸಿಂಗ್ ಅಥಾರಿಟಿ'(ಎನ್‌ಪಿಪಿಎ) ಕಂಪನಿಗಳಿಗೆ ನೆನಪಿನೋಲೆ ರವಾನಿಸಿದೆ. ಕೇಂದ್ರ ಸರಕಾರ ಈ ಬಾರಿಯ ಬಜೆಟ್‌ನಲ್ಲಿ ಈ ಮೂರೂ ಕ್ಯಾನ್ಸರ್ ರೋಗ ನಿಗ್ರಹ ಔಷಧಗಳ ಮೇಲಿನ ಕಸ್ಟಮ್ಸ್ ಡ್ಯುಟಿ ರದ್ದು ಮಾಡಿದೆ, ಅಲ್ಲದೇ ಜಿಎಸ್‌ಟಿ ಪ್ರಮಾಣವನ್ನೂ ಕಡಿತ ಮಾಡಿದೆ. ಕೇಂದ್ರ ಸರಕಾರದ ಈ ಕ್ರಮದ ಪ್ರಯೋಜನ ರೋಗಿಗಳಿಗೆ ತಲುಪಬೇಕಿದೆ. ಹಾಗಾಗಿ, ಈ ಮೂರೂ ಔಷಧಗಳನ್ನು ತಯಾರಿಸುವ ಕಂಪನಿಗಳು ಬೆಲೆ ತಗ್ಗಿಸಬೇಕಿದೆ ಎಂದು ಎನ್‌ಪಿಪಿಎ ನಿರ್ದೇಶನ ನೀಡಿದೆ.

ಭಾರತ ಮೂಲದ 52 ಲಕ್ಷ ಜನ ವಾಸ- 39 ಲಕ್ಷ ಮತದಾರರು

ಟ್ರಂಪ್‌ಗೆ ಎನ್ನಾರೈ ಒಲವು; ಕಮಲಾಗೆ ಶಾಕ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರ ಚುನಾವಣೆ ದಿನ ಸಮೀಪಿಸುತ್ತಿದ್ದಂತೆಯೇ ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿ, ಭಾರತ ಮೂಲದ ಕಮಲಾ ಹ್ಯಾರಿಸ್ ಪರವಾಗಿದ್ದ ಅನಿವಾಸಿ ಭಾರತೀಯರು ಮಾರ್ಗ ಬದಲಿಸುವ ಸಾಧ್ಯತೆ ಹೆಚ್ಚಿದೆ. ಇದು ಹ್ಯಾರಿಸ್ ಮತ್ತು ಬೆಂಬಲಿಗರ ಕಳವಳಕ್ಕೆ ಕಾರಣವಾಗಿದೆ.

ಮೊದಲಿನಿಂದಲೂ ಅನಿವಾಸಿ ಭಾರತೀಯರು(ಎನ್ನಾರೈ) ಹೆಚ್ಚಿನ ಸಂಖ್ಯೆಯಲ್ಲಿ ಡೆಮಾಕ್ರಟಿಕ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಆದರೆ ಈ ಬಾರಿ ಎನ್ನಾರೈಗಳ ಒಲವು ರಿಪಬ್ಲಿಕನ್ ಪಕ್ಷದ ಕಡೆಗೆ ವಾಲಿದೆ ಎಂಬ ಮಾತುಗಳು ಕೇಳಿ

ಬಂದಿವೆ. ಅಮೆರಿಕ ಮತದಾರರಾಗಿರುವ ಭಾರತೀಯರನ್ನು 'ಕಾರ್ನೆಗಿ ಎಂಡೋಮೆಂಟ್ ಫಾರ್ ಇಂಟರ್‌ನ್ಯಾಷನಲ್ ಪೀಸ್' ಸಂಸ್ಥೆ ನಡೆಸಿದ ಆನ್‌ಲೈನ್ ಸಮೀಕ್ಷೆಯಲ್ಲಿ ಈ ಅಂಶ ತಿಳಿದುಬಂದಿದೆ. 2020ರ ಅಧ್ಯಕ್ಷೀಯ ಚುನಾವಣೆಯಲ್ಲಿ ಎರಡೂ ಪಕ್ಷಗಳಿಗೆ ಎನ್ನಾರೈಗಳು ಚಲಾಯಿಸಿದ್ದ ಮತಗಳ ಪ್ರಮಾಣವನ್ನು ಲೆಕ್ಕ ಹಾಕಿದಾಗ ಈ ಬಾರಿ ಕಮಲಾ ಹ್ಯಾರಿಸ್ ಪರ ಒಲವು ಸ್ವಲ್ಪ ಇಳಿಕೆಯಾಗಿದೆ. ಎನ್ನಾರೈಗಳ ಹೆಚ್ಚು ಮತಗಳು ಟ್ರಂಪ್ ಪರ ಬೀಳಬಹುದು ಎಂದು ಸಮೀಕ್ಷೆ ತಿಳಿಸಿದೆ. ಅಮೆರಿಕದಲ್ಲಿ ಭಾರತ ಮೂಲದ 52 ಲಕ್ಷ ಜನ ವಾಸವಾಗಿದ್ದು, 39 ಲಕ್ಷ ಜನರು 18 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ. ನ.5ರಂದು ಮತ ಚಲಾಯಿಸುವುದಾಗಿ ಶೇ.96ರಷ್ಟು ಅನಿವಾಸಿ ಭಾರತೀಯರು ತಿಳಿಸಿದ್ದಾರೆ.

ಹೆಜ್ಬೊಲ್ಲಾ ಸಂಘಟನೆ ಹೊಸ ನಾಯಕ ನೈಮ್

ಬೈರೂತ್: ಹಸನ್ ನಸ್ರಲ್ಲಾ ಹತ್ಯೆಯಾದ ಬಳಿಕ ನಾಯಕನಿಲ್ಲದೆ ದಿಕ್ಕುಗೆಟ್ಟಿದ್ದ ಹೆಜ್ಬೊಲ್ಲಾ ಉಗ್ರ ಸಂಘಟನೆಗೆ ಹೊಸ ನಾಯಕನಾಗಿ ನೈಮ್ ಖಾಸ್ಸೆಮ್ ನೇಮಕವಾಗಿದೆ.



ನಸ್ರಲ್ಲಾ ಮರಣದ ನಂತರವೂ ಹಿಜ್ಬುಲ್ಲಾ ಇಸ್ರೇಲ್ ಸೇನಾಪಡೆಗಳ ವಿರುದ್ಧ ಹೋರಾಟ ಮುಂದುವರಿಸಿದೆ. ನಸ್ರಲ್ಲಾ ಉತ್ತರಾಧಿಕಾರಿ ಯಾಗಿ ಹಶೆಮ್ ಸಫಿದ್ದೀನ್ ಅಧಿಕಾರ ಸ್ವೀಕರಿಸುತ್ತಾರೆಂದು ಮೊದಲೇ ನಿರೀಕ್ಷಿಸಲಾಗಿತ್ತು. ಆದರೆ, ಅ.23ರಂದು ಇಸ್ರೇಲ್ ರಕ್ಷಣಾ ಪಡೆಗಳು 3 ವಾರ ಹಿಂದೆ ನಡೆಸಿದ ದಾಳಿಯಲ್ಲಿ ಹಶೆಮ್ ಹತರಾದರು. ಖಾಸ್ಸೆಮ್, ಹಿಂದಿನ ಮುಖಂಡ ನಸ್ರಲ್ಲಾಗೆ ದೀರ್ಘಕಾಲದ ಉಪನಾಯಕರಾಗಿದ್ದವರು. ಕಳೆದ ತಿಂಗಳು ನಸ್ರಲ್ಲಾ ಹತರಾಗಿದ್ದರಿಂದ ಗುಂಪಿನ ತಾತ್ಕಾಲಿಕ ನಾಯಕರಾಗಿ ಸೇವೆ ಸಲ್ಲಿಸುತ್ತಿದ್ದರು. ಈಗ ಅಧಿಕೃತವಾಗಿಯೇ ನಾಯಕನಾಗಿ ಅಧಿಕಾರ ಪಡೆದಿದ್ದಾರೆ. ಗಾಜಾದಲ್ಲಿ ವರ್ಷವಿಡೀ ನಡೆದ ಯುದ್ಧದಲ್ಲಿ ಹತರಾದ ಪ್ಯಾಲೆಸ್ತೀನ್ ಜನರ ಸಂಖ್ಯೆ 43 ಸಾವಿರಕ್ಕೆ ಮುಟ್ಟಿದೆ. ಮೃತರಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆ ಮಹಿಳೆಯರು ಮತ್ತು ಮಕ್ಕಳಾಗಿದ್ದಾರೆ ಎಂದು ಪ್ಯಾಲೆಸ್ತೀನ್ ಆರೋಗ್ಯ ಸಚಿವಾಲಯ ತಿಳಿಸಿದೆ.

100 ಉಗ್ರರ ಸೆರೆ: ಇಸ್ರೇಲ್

ಈವರೆಗೂ ವೈಮಾನಿಕ ದಾಳಿ, ರಾಕೆಟ್ ಮತ್ತು ಕ್ಷಿಪಣಿ ಬಳಸಿ ಯೇ ಯುದ್ಧ ನಡೆಸಿದ್ದ ಇಸ್ರೇಲ್ ಸೇನಾಪಡೆ, ಇತ್ತೀಚೆಗೆ ಕಾಲ್ದಳ ಬಳಸಿ ದಾಳಿ, ಉಗ್ರರಿಗಾಗಿ ಶೋಧ ನಡೆಸಲಾರಂಭಿಸಿವೆ. ಉತ್ತರ ಗಾಜಾದಲ್ಲಿ ನಡೆದ ಕಾರ್ಯಾಚರಣೆ ಯಲ್ಲಿ ಈ ವಾರಾಂತ್ಯ ಆಸ್ಪತ್ರೆ ಮೇಲೆ ದಾಳಿ ಮಾಡಿದಾಗ 100 ಹಮಾಸ್ ಉಗ್ರರು ಸೆರೆ ಸಿಕ್ಕಿದ್ದಾರೆ. ಇದು ಇಸ್ರೇಲ್ ಪಡೆಗೆ ಸಿಕ್ಕ ಮಹತ್ವದ ಗೆಲುವು ಎನ್ನಲಾಗಿದೆ. ಶುಕ್ರವಾರ ಬೀಟ್ ಲಾಹಿಯಾದ ಕಮಾಲ್ ಅಡ್ವಾನ್ಸ್ ಆಸ್ಪತ್ರೆ ಮೇಲೆ ದಾಳಿ ನಡೆಸಿ 100 ಹಮಾಸ್ ಉಗ್ರರನ್ನು ಬಂಧಿಸಿರುವುದಾಗಿ ಇಸ್ರೇಲ್ ಸೇನೆ ಅಧಿಕೃತ ಪ್ರಕಟಣೆ ನೀಡಿದೆ.

ಕೆನಡಾ ಕಾರು ಅಪಘಾತ; ಗುಜರಾತಿನ ನಾಲ್ವರ ಸಾವು

ಟೊರಾಂಟೊ: ಕೆನಡಾದ ಒಂಟಾರಿಯೊ ಪ್ರಾಂತ್ಯದಲ್ಲಿ 'ಟೆಸ್ಲಾ' ಕಂಪನಿಯ ವಿದ್ಯುಚ್ಚಾಲಿತ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹೊತ್ತಿ ಉರಿದು ಭಸ್ಮವಾಗಿದೆ. ಅಪಘಾತದ ತೀವ್ರತೆಗೆ ಕಾರಿನಲ್ಲಿದ್ದ ನಾಲ್ವರು

ಭಾರತೀಯರು ಸಜೀವ ದಹನವಾಗಿದ್ದಾರೆ. 25 ವರ್ಷದ ಯುವತಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಟೊರೊಂಟೊ ಡೌನ್‌ಟೌನ್‌ನ ಲೇಕ್ ಶೋರ್ ಬೌಲೆವಾರ್ಡ್ ಈಸ್ಟ್ ಮತ್ತು ಚೆರಿರ್ ಸ್ಟ್ರೀಟ್ ಪ್ರದೇಶದಲ್ಲಿ ಅಪಘಾತವಾಗಿದ್ದು, ಗುಜರಾತ್ ಮೂಲದ ನಾಲ್ವರು ಸಾವಿಗೀಡಾಗಿದ್ದಾರೆ. ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಶಂಕಿಸಿರುವುದಾಗಿ ಟೊರಾಂಟೊ ಪೊಲೀಸ್ ಇನ್‌ಸ್ಪೆಕ್ಟರ್ ಫಿಲಿಪ್ ಸಿಂಕ್ಲೇರ್ ಹೇಳಿದ್ದಾರೆ. 25ರಿಂದ 32 ವರ್ಷ ವಯೋಮಾನದ ಐವರು ಟೆಸ್ಲಾ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಬಳಿಕ ಕಾಂಕ್ರೀಟ್ ಪಿಲ್ಲರ್‌ಗೆ ಡಿಕ್ಕಿ ಹೊಡೆದು ನಂತರ ಗಾರ್ಡ್ ರೇಲಿಂಗ್‌ಗೆ ಗುದ್ದಿದೆ. ಪರಿಣಾಮ ಬೆಂಕಿ ಹೊತ್ತಿಕೊಂಡು ಉರಿದು ಭಸ್ಮವಾಗಿದೆ. ಗುಜರಾತ್ ರಾಜ್ಯದ ಗೋಧ್ರಾ ನಿವಾಸಿ ಕೇತಾಬಾ ಗೋಹಿಲ್ (29), ಸಹೋದರ ನೀಲ್ರಾಜ್ ಗೋಹಿಲ್ (25) ಮತ್ತು ಆನಂದ್ ಜಿಲ್ಲೆಯ ಬೋರ್ಸಾದ್ ನಿವಾಸಿ ಜೈರಾಜ್ ಸಿಂಗ್ ಸಿಸೋಡಿಯಾ ಎಂದು ಗುರುತಿಸಲಾಗಿದೆ.

ಪ್ರತ್ಯಕ್ಷ-ಪರೋಕ್ಷ ಪಟಾಕಿ ಉದ್ಯಮವನ್ನೇ ಅವಲಂಬಿಸಿದ 8ಲಕ್ಷ ಜನ: ಬಿಜೆಪಿ ನಾಯಕ ಅಣ್ಣಾಮಲೈ

1 ದಿನಕ್ಕೆ ಮಾಲಿನ್ಯ ಹೆಚ್ಚಲ್ಲ, ಹಬ್ಬಕ್ಕೆ ಪಟಾಕಿ ಸಿಡಿಸಿ

ಚೆನ್ನೈ: ಇಡೀ ದೇಶ ದೀಪಾವಳಿ ಹಬ್ಬಕ್ಕೆ ಸಿದ್ಧತೆ ನಡೆಸುತ್ತಿದೆ. ಪರಿಸರ ರಕ್ಷಣೆಗೆ ಟೊಂಕ ಕಟ್ಟಿದವರು 'ಪಟಾಕಿ ನಿಷೇಧ' ಅಭಿಯಾನ

ನಡೆಸಿದ್ದಾರೆ. ಆದರೆ, ಬಿಜೆಪಿ ನಾಯಕ ಕೆ. ಅಣ್ಣಾಮಲೈ ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಕ್ರಿಯಿಸಿದ್ದಾರೆ. ದೀಪಾವಳಿ ಹಬ್ಬವನ್ನು ಪಟಾಕಿ ಖರೀದಿಸಿ ಸಿಡಿಸುವ ಮೂಲಕ ಸಂಭ್ರಮದಿಂದಲೇ ಆಚರಿಸುವಂತೆ ಕರೆ ನೀಡಿದ್ದಾರೆ.

ಭಾರತ ವಾತಾವರಣಕ್ಕೆ ಇಂಗಾಲ ಹೊರಸೂಸುವುದರಲ್ಲಿ ವಿಶ್ವದಲ್ಲೇ 125ನೇ ಸ್ಥಾನದಲ್ಲಿದೆ. ದೀಪಾವಳಿ ಹಬ್ಬಕ್ಕೆ ಒಂದು ದಿನ ಪಟಾಕಿ ಸಿಡಿಸುವುದರಿಂದ ವಾತಾವರಣ ಮೇಲೆ ಭಾರೀ ಎನ್ನುವಂತಹ ಪರಿಣಾಮವೇನೂ ಆಗುವುದಿಲ್ಲ. ಹಾಗಾಗಿ, ದೀಪಾವಳಿ ಹಬ್ಬವನ್ನು ಪಟಾಕಿ ಸಿಡಿಸಿ ಸಂಭ್ರಮದಿಂದಲೇ ಆಚರಿಸಿ ಎಂದು ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ, ಬಿಜೆಪಿ ತಮಿಳುನಾಡು ಘಟಕದ ನಾಯಕ ಕೆ.ಅಣ್ಣಾಮಲೈ ಕರೆ ನೀಡಿದ್ದಾರೆ. ಆ ಮೂಲಕ, ಪಟಾಕಿ ಸಿಡಿಸುವ ವಿಚಾರದಲ್ಲಿ ಗೊಂದಲದಲ್ಲಿದ್ದವರಿಗೆ ಸ್ಪಷ್ಟ ಚಿತ್ರಣ ದೊರಕಿಸಿಕೊಟ್ಟಿದ್ದಾರೆ.

ದೀಪಾವಳಿ ಹಬ್ಬಕ್ಕಾಗಿ ಪಕ್ಷದ ಕಾರ್ಯಕರ್ತರು ಮತ್ತು ತಮಿಳುನಾಡು ಜನರನ್ನುದ್ದೇಶಿಸಿ ಆಡಿಯೋ-ವಿಡಿಯೊ ಸಂದೇಶ ನೀಡಿರುವ ಅಣ್ಣಾಮಲೈ ಅವರು, ಪಟಾಕಿ ಉದ್ಯಮದಲ್ಲಿ ತೊಡಗಿರುವ ರಾಜ್ಯದ ಬಡ ಕಾರ್ಮಿಕರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ದೀಪಾವಳಿಯಂದು ಹೆಚ್ಚಿನ ಪ್ರಮಾಣದಲ್ಲಿ ಪಟಾಕಿಗಳನ್ನು ಖರೀದಿಸಿ, ಸಿಡಿಸಿ ಸಂಭ್ರಮಿಸಿ ಎಂದೂ ಮನವಿ ಮಾಡಿದ್ದಾರೆ.

ಎಕ್ಸ್' ಖಾತೆಯಲ್ಲಿ ವಿಡಿಯೊ ಸಂದೇಶ ಹಂಚಿಕೊಂಡಿರುವ ಅಣ್ಣಾಮಲೈ, ಪಟಾಕಿ ಸಿಡಿಸಬೇಕಾದ ಅಗತ್ಯವನ್ನೂ ವಿವರಿಸಿದ್ದಾರೆ. '1 ದಿನ ಪಟಾಕಿ ಸಿಡಿಸುವುದನ್ನೇ ದೊಡ್ಡ ವಿಷಯವಾಗಿ ಚರ್ಚಿಸುತ್ತಿದ್ದೇವೆ. 8 ಲಕ್ಷ ಜನ ನೇರ ಹಾಗೂ ಪರೋಕ್ಷವಾಗಿ ಪಟಾಕಿ ತಯಾರಿಕಾ ಉದ್ಯಮವನ್ನೇ ಅವಲಂಬಿಸಿದ್ದಾರೆ. ಜನ ಪಟಾಕಿ ಖರೀದಿಸಿ ಸಿಡಿಸದೇ ಇದ್ದರೆ, ಈ 8 ಲಕ್ಷ ಜನರ ಆದಾಯವನ್ನೇ ಆಧರಿಸಿದ ಲಕ್ಷಾಂತರ ಕುಟುಂಬಗಳ ಕಥೆ ಏನುಗುವುದೋ ಯೋಚಿಸಿ? ಅವರು ನಮ್ಮ ಸಂತೋಷಕ್ಕಾಗಿ ಸಾಕಷ್ಟು ಸವಾಲುಗಳ ನಡುವೆ ಪಟಾಕಿಗಳನ್ನು ತಯಾರಿಸುತ್ತಾರೆ. ಆ ಕುಟುಂಬಗಳ ಸಂತೋಷಕ್ಕಾಗಿ ನಾವು ಪಟಾಕಿ ಖರೀದಿಸಿ ಸಿಡಿಸಬೇಕಲ್ಲವೇ?' ಎಂದು ಪ್ರಶ್ನಿಸಿದ್ದಾರೆ.

ಈ ಮೊದಲು ದೇಶದಲ್ಲಿ ವಾರ್ಷಿಕ 6 ಸಾವಿರ ಕೋಟಿ ರು. ಪಟಾಕಿ ವಹಿವಾಟು ನಡೆಯುತ್ತಿತ್ತು. ಆದರೆ, ಈಗ ಪರಿಸರ ಕಾಳಜಿಯ ಹೆಸರಿನಲ್ಲಿ ಆ ಪ್ರಮಾಣ ಗಣನೀಯವಾಗಿ ತಗ್ಗಿದೆ ಎಂಬ ಅಂಕಿ ಅಂಶಗಳತ್ತಲೂ ಗಮನ ಸೆಳೆದಿದ್ದಾರೆ. ಪಟಾಕಿ ಸಿಡಿಸಿ ಸಂಭ್ರಮಿಸುವುದು ಶತಮಾನಗಳಿಂದಲೂ ಭಾರತೀಯರ ಸಂಸ್ಕೃತಿ-ಸಂಪ್ರಾಯವಾಗಿದೆ. ಅದನ್ನೇಕೆ ಬಿಡಬೇಕು? ಎಂದೂ ಪ್ರಶ್ನಿಸಿದ್ದಾರೆ.

ಇಂಗಾಲ; ಭಾರತದ್ದು 125ನೇ ಸ್ಥಾನ

ಅಮೆರಿಕದ ತಲಾವಾರು ಇಂಗಾಲ ಹೊರಸೂಸುವಿಕೆ 13.83 ಟನ್‌ಗಳಷ್ಟಿದೆ. ಚೀನಾದಲ್ಲಿ 9.24 ಟನ್‌ಗಳಷ್ಟಿದೆ. ಆದರೆ, ಭಾರತದಲ್ಲಿನ ವಾರ್ಷಿಕ ತಲಾವಾರು ಇಂಗಾಲದ ಹೊರಸೂಸುವಿಕೆ ಪ್ರಮಾಣ ಕೇವಲ 2.07 ಟನ್‌ಗಳಷ್ಟಿದೆ. ವಾತಾವ ರಣಕ್ಕೆ ಇಂಗಾಲ ಹೊರಸೂಸುವಿಕೆಯಲ್ಲಿ ಭಾರತ 125ನೇ ಸ್ಥಾನದಲ್ಲಿದ್ದರೆ, ಅಮೆರಿಕ 16 ಮತ್ತು ಚೀನಾ 25ನೇ ಸ್ಥಾನದಲ್ಲಿ ಇವೆ. ಹಾಗಾಗಿ, ದೀಪಾವಳಿ ಹಬ್ಬದ ಒಂದು ದಿನ ಪಟಾಕಿ ಸಿಡಿಸಿ ಸಂಭ್ರಮಿಸು ವುದರಿಂದ ಭಾರತದಲ್ಲಿ ಪರಿಸರ ಮಾಲಿ ನ್ಯ ಎಂಬುದು ವಿಪರೀತ ಪ್ರಮಾಣ ದಲ್ಲೇನೂ ಅಪಾಯ ತರುವುದಿಲ್ಲ. ಆರಾಮವಾಗಿ ಪಟಾಕಿ ಸಿಡಿಸಿ ಎಂದು ಮಾಜಿ ಐಪಿಎಸ್ ಅಧಿಕಾರಿ ಧೈರ್ಯ ತುಂಬಿದ್ದಾರೆ.

ಹುಸಿಬಾಂಬ್ ಸಂದೇಶ ನಾಗಪುರ ವ್ಯಕ್ತಿಗೆ ಶೋಧ

ನಾಗಪುರ: ಮಹಾರಾಷ್ಟ್ರ ರಾಜ್ಯದ ನಾಗಪುರ ಸಮೀಪದ ಗೊಂಡಿಯಾ ನಿವಾಸಿ 35 ವರ್ಷದ ಜಗದೀಶ್ ಉಕೆ ಎಂಬಾ ತನೇ ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ

ರವಾನಿಸುತ್ತಿದ್ದವನು ಎಂಬುದನ್ನು ನಾಗಪುರ ವಿಶೇಷ ಘಟಕದ ಪೊಲೀಸರು ಪತ್ತೆ ಹಚ್ಚಿದ್ದು, ಆತನ ಬಂಧನಕ್ಕಾಗಿ ಶೋಧ ನಡೆಸಿದ್ದಾರೆ. ಭಯೋತ್ಪಾದನೆ ಕುರಿತು ಪುಸ್ತಕ ಬರೆದ ಕಾರಣಕ್ಕೆ ಆರೋಪಿ 2021ರಲ್ಲಿಯೂ ಬಂಧಿತನಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಇ-ಮೇಲ್ ಮೂಲಕ ವಿಮಾನಗಳಲ್ಲಿ ಬಾಂಬ್ ಇರಿಸಿರುವುದಾಗಿ ಹುಸಿ ಬೆದರಿಕೆ ಸಂದೇಶ ಕಳುಹಿಸುತ್ತಿದ್ದ. ಪೊಲೀಸರು ಬೆನ್ನಟ್ಟಿ ಬರುತ್ತಿರುವ ಮಾಹಿತಿ ಸಿಗುತ್ತಲೇ ಆರೋಪಿ ಪರಾರಿಯಾ ಗಿದ್ದಾನೆ. ಆತನನ್ನು ಡಿಸಿಪಿ ಶ್ವೇತಾ ಖೇಡ್ಕರ್ ನೇತೃತ್ವದ ವಿಶೇಷ ತಂಡ ಶೀಘ್ರವೇ ಬಂಧಿಸಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಪ್ರಧಾನ ಮಂತ್ರಿಗಳ ಕಚೇರಿ (ಪಿಎಂಒ), ರೈಲ್ವೆ ಸಚಿವರು, ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂದೆ ಮತ್ತು ವಿಮಾನಯಾನ ಕಚೇರಿಗಳು, ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ) ಮತ್ತು ರೈಲ್ವೆ ರಕ್ಷಣಾ ಪಡೆ (ಆರ್‌ಎಫ್‌ಒ) ಸೇರಿದಂತೆ ವಿವಿಧ ಸರಕಾರಿ ಸಂಸ್ಥೆಗಳಿಗೆ ಉಯ್ಕೆ ಇಮೇಲ್ ಮೂಲಕ ಬೆದರಿಕೆ ಸಂದೇಶ ಕಳುಹಿಸಿದ್ದ.

ನಟ ಸಲ್ಮಾನ್‌ಗೆ ಕೊಲೆ ಬೆದರಿಕೆ ಆರೋಪಿ ಸೆರೆ

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪಿ, 20 ವರ್ಷದ ಯುವಕನನ್ನು ಮುಂಬೈ ಪೊಲೀಸರು ನೋಯ್ಡಾದಲ್ಲಿ ಮಂಗಳವಾರ

ಬಂಧಿಸಿದ್ದಾರೆ. ಇದೇ ಯುವಕ ಇತ್ತೀಚೆಗೆ ಕೊಲೆಯಾದ ಎನ್‌ಸಿಪಿ(ಅಜಿತ್ ಬಣ) ನಾಯಕ, ಮಾಜಿ ಸಚಿವ ಬಾಬಾ ಸಿದ್ದಿಕಿ ಅವರ ಮಗ ಝೀಷನ್ ಸಿದ್ದಿಕಿಗೂ ಕೊಲೆ ಬೆದರಿಕೆ ಹಾಕಿದ್ದ ಎಂದು ದೂರಲಾಗಿದೆ.

ಬಾಂದ್ರಾ ಪೂರ್ವ ಕ್ಷೇತ್ರದ ಎನ್‌ಸಿಪಿ(ಅಜಿತ್ ಬಣ) ಶಾಸಕ ಜೀಶನ್ ಸಿದ್ದಿಕ್ ಕಚೇರಿಗೆ ಯುವಕ ಕರೆ ಮಾಡಿ ಜೀವ ಬೆದರಿಕೆ ಹಾಕಿದ್ದ. ಈ ಬಗ್ಗೆ ಮುಂಬೈ ಬಾಂದ್ರಾ ಪೊಲೀಸರಿಗೆ ದೂರು ನೀಡಲಾಗಿತ್ತು. ಪೊಲೀಸರು ಆರೋಪಿ ಯುವಕನ ಪತ್ತೆಗೆ ಶೋಧ ಆರಂಭಿಸಿದ್ದರು. ನೋಯ್ಡಾ ನಿವಾಸಿಯಾಗಿದ್ದ ಮೊಹಮ್ಮದ್ ತಯ್ಯಬ್ ಅಲಿಯಾಸ್ ಗುರ್ಫಾನ್(20) ಮಂಗಳವಾರ ಬಂಧಿತನಾದ. ಪ್ರಾಥಮಿಕ ವಿಚಾರಣೆ ವೇಳೆ ಆರೋಪಿ ನಟ ಸಲ್ಮಾನ್ ಖಾನ್ ಹಾಗೂ ಝೀಶಾನ್ ಸಿದ್ದಿಕಿ ಇಬ್ಬರಿಗೂ ಬೆದರಿಕೆ ಹಾಕಿರುವುದಾಗಿ ಒಪ್ಪಿದ್ದಾನೆ ಎನ್ನಲಾಗಿದೆ.

ಸೇನಾಪಡೆ ಹೀರೋ ಫ್ಯಾಂಟಮ್ ಇನ್ನಿಲ್ಲ

ಅಖ್ನೂರ್: ಭಾರತೀಯ ಸೇನೆಯಲ್ಲಿ ಎಲ್ಲರಿಂದಲೂ 'ಸೂಪರ್ ಹೀರೋ' ಎಂದೇ ಕರೆಸಿಕೊಳ್ಳುತ್ತಿದ್ದ ಶ್ವಾನ, 4 ವರ್ಷಗಳ 'ಫ್ಯಾಂಟಮ್' ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಹುತಾತ್ಮನಾಗಿದೆ.

ಅಖ್ನೂರ್ ಸೆಕ್ಟಾರ್‌ನಲ್ಲಿ ಉಗ್ರರ ಧಮನ ವೇಳೆ ಗುಂಡಿಗೆ ಬಲಿ

ಜಮ್ಮು ಜಿಲ್ಲೆಯ ಅಖ್ನೂರ್ ಸೆಕ್ಟಾರ್‌ನಲ್ಲಿ ಸೋಮವಾರ ಬೆಳಗ್ಗೆ ಸೇನೆಯ ವಾಹನದ ಮೇಲೆ ಗುಂಡಿನ ದಾಳಿ ನಡೆಸಿ ಬಳಿಕ ಅರಣ್ಯದಲ್ಲಿ ಅಡಗಿದ್ದ ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಸೈನಿಕರ ಜತೆ ಭಾಗಿಯಾಗಿದ್ದ ಸೈನಿಕರ ನೆಚ್ಚಿನ ಶ್ವಾನ 'ಫ್ಯಾಂಟಮ್', ಉಗ್ರರ ಗುಂಡಿಗೆ ಬಲಿಯಾಗಿದೆ. ಇದೇ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆ ಯೋಧರು ಮೂವರು ಉಗ್ರರನ್ನೂ ಸಂಹರಿಸಿದ್ದಾರೆ.

'ಭದ್ರತಾ ಪಡೆಗಳು ಉಗ್ರರನ್ನು ಪತ್ತೆ ಮಾಡಿ ಅವರನ್ನು ಸುತ್ತುವರಿಯ ತೊಡಗಿದಾಗ ಉಗ್ರರು ಗುಂಡಿನ ದಾಳಿ ಎಸಗಿದರು. ಈ ವೇಳೆ ಫ್ಯಾಂಟಮ್‌ಗೆ ಗುಂಡು ತಗುಲಿತು. ಧೈರ್ಯಶಾಲಿ ಸೇನಾ ಶ್ವಾನ ಫ್ಯಾಂಟಮ್ ನೈಜ ಹೀರೋ. ಫ್ಯಾಂಟಮ್ ಬಲಿದಾನಕ್ಕೆ ನಮ್ಮ ಸೆಲ್ಯೂಟ್. ಫ್ಯಾಂಟಮ್ ಧೈರ್ಯ, ವಿಧೇಯತೆ ಮತ್ತು ಬದ್ಧತೆಯನ್ನು ಯಾವತ್ತೂ ಮರೆಯಲ್ಲ' ಎಂದು ಸೇನಾ ವಿಭಾಗ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

ಡಿಸಿಎಂ ಫಡ್ನವಿಸ್ ಆಪ್ತ ಸಹಾಯಕನಿಗೆ ಟಿಕೆಟ್

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಕಣದಿಂದ ವಿಶೇಷ ಸುದ್ದಿಗಳು ಹೊರಬೀಳುತ್ತಿವೆ. ಬಿಜೆಪಿ 25 ಅಭ್ಯರ್ಥಿಗಳ 3ನೇ ಪಟ್ಟಿ ಪ್ರಕಟಿಸಿದ್ದು, ಅಚ್ಚರಿ ಎಂಬಂತೆ

ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರ ಆಪ್ತ ಸಹಾಯಕನಿಗೂ ಟಿಕೆಟ್ ನೀಡಲಾಗಿದೆ. ಹಲವಾರು ವರ್ಷಗಳಿಂದ ಫಡ್ನವೀಸ್ ಅವರ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಸುಮಿತ್ ವಾಂಖೆಡೆ ಅವರಿಗೂ ಬಿಜೆಪಿ ಟಿಕೆಟ್ ನೀಡಲಾಗಿದೆ. ಅರವಿ ವಿಧಾನಸಭಾ ಕ್ಷೇತ್ರದಿಂದ ಸುಮಿತ್ ಸ್ಪರ್ಧಿಸಲಿದ್ದಾರೆ.

ಇತ್ತೀಚೆಗಷ್ಟೇ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಇಬ್ಬರಿಗೂ ಟಿಕೆಟ್ ನೀಡಲಾಗಿದೆ. ಇದರೊಂದಿಗೆ ಬಿಜೆಪಿ ಒಟ್ಟು 146 ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತಾಗಿದೆ. 2021ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಜಿತೇಶ್ ಅಂತಪುರಕರ್ ಅವರಿಗೆ ದೆಗ್ಲೂರ್ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಹಿರಿಯ ನಾಯಕ ಶಿವರಾಜ್ ಪಾಟೀಲ್ ಅವರ ಸೊಸೆ ಅರ್ಚನಾ ಪಾಟೀಲ್ ಚಕುರ್‌ಕರ ಅವರನ್ನು ಲಾತೂರ್ ನಗರ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಔಷಧಿ ಸಿಂಪಡಿಸಲು ಹೋಗಿದ್ದ ರೈತ ಸಾವು

ಸಾಸ್ವೆಹಳ್ಳಿ: ಸಮೀಪದ ಬಳ್ಳಾಪುರ ಗ್ರಾಮದ ರೈತ ನರಸಿಂಹಪ್ಪ ಕೆ.ಆರ್. (30) ಭತ್ತದ ಗದ್ದೆಗೆ ಔಷಧಿ ಸಿಂಪರಣೆಗೆ ಶನಿವಾರ ತೆರಳಿದ್ದರು. ಔಷಧಿ

ದೇಹದೊಳಗೆ ಸೇರಿ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಶನಿವಾರ ಶಿವಮೊಗ್ಗ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಔಷಧಿ ಸಿಂಪರಣೆ ವೇಳೆ ಮುಂಜಾಗ್ರತಾ ಕ್ರಮ ವಹಿಸದ ಕಾರಣ ಔಷಧಿಯು ದೇಹದೊಳಗೆ ಹೋಗಿ ಮೃತರಾಗಿದ್ದಾರೆ ಎಂದು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಮೃತರ ಪತ್ನಿ ಶೋಭಾ ದೂರು ದಾಖಲಿಸಿದ್ದಾರೆ.

ದಕ್ಷಿಣ ವಿಭಾಗದ ಕಬಡ್ಡಿ ಪಂದ್ಯಾವಳಿಗೆ ಆಯ್ಕೆ

ಹೊಸದುರ್ಗ: ತಮಿಳುನಾಡಿನ ಚೆನ್ನೈ ನಲ್ಲಿ ಇದೇ ಅ.30ರಂದು ನಡೆಯಲಿರುವ ದಕ್ಷಿಣ ವಿಭಾಗದ ವಿಶ್ವವಿದ್ಯಾನಿಲಯದ ಕಬಡ್ಡಿ ಪಂದ್ಯಾವಳಿಗೆ ಹೊಸದುರ್ಗ ಪಟ್ಟಣದ ಜಂಗಮನಗರ ಅಲೆಮಾರಿ ಬುಡ್ಗ ಜನಾಂಗದ ವಿದ್ಯಾರ್ಥಿ ತಿಮ್ಮೋತಿ ಮಲ್ಲಯ್ಯ ಮೋತಿ ಹಾಗೂ ಭೋವಿ ಜನಾಂಗದ ಚಿದಾನಂದ್ ಆಯ್ಕೆಯಾಗಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ಹೊಸದುರ್ಗದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದುತ್ತಿದ್ದಾರೆ. ಇತ್ತೀಚೆಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಕಬ್ಬಡಿ ಟೂರ್ನಿಗೆ ಭಾಗವಹಿಸಿ, ಉತ್ತಮ ಪ್ರದರ್ಶನ ನೀಡಿದ್ದರಿಂದ ವಿಶ್ವವಿದ್ಯಾನಿಲಯವು ಈ ಇಬ್ಬರೂ ವಿದ್ಯಾರ್ಥಿಗಳನ್ನು ದಕ್ಷಿಣ ವಿಭಾಗದ ವಿಶ್ವವಿದ್ಯಾನಿಲಯದ ತಂಡಕ್ಕೆ ಆಯ್ಕೆ ಮಾಡಿದೆ. ಇಬ್ಬರೂ ಉತ್ತಮವಾಗಿ ಪ್ರದರ್ಶಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ತಾಲೂಕಿನ ಘನತೆ ಹೆಚ್ಚಿಸಲಿ ಎಂದು ಅಲೆಮಾರಿ ಬುಡ್ಗ ಜನಾಂಗ ಹಾಗೂ ಭೋವಿ ಸಮಾಜದವರು ಶುಭ ಹಾರೈಸಿದ್ದಾರೆ.

ಕುಷ್ಠರೋಗ ಪತ್ತೆ: ಜಾಥಾ ಇಂದು

ಚಿತ್ರದುರ್ಗ: ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನದ ಜಾಥಾ ಕಾರ್ಯಕ್ರಮವನ್ನು ಇದೇ ಅ.30ರಂದು ಬೆಳಿಗ್ಗೆ 10ಕ್ಕೆ ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಾಥಾ ಕಾರ್ಯಕ್ರಮವು ಜಿಲ್ಲಾ ಆಸ್ಪತ್ರೆ ಆವರಣದಿಂದ ಹೊರಟು ಡೆಂಟಲ್ ಕಾಲೇಜಿನವರೆಗೆ ಹೋಗಿ ಮದಕರಿ ವೃತ್ತದಲ್ಲಿ ಕೊನೆಗೊಳ್ಳುವುದು ಎಂದು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು ತಿಳಿಸಿದ್ದಾರೆ.

ಭ್ರಷ್ಟಾಚಾರ ಕುರಿತು ಜಾಗೃತಿ

ಚಿತ್ರದುರ್ಗ: ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಇದೇ ಇಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ "ಜಿಲ್ಲಾಮಟ್ಟದ ಭ್ರಷ್ಟಾಚಾರದ ವಿರುದ್ಧದ ಜಾಗೃತಿ ಅರಿವು ಸಪ್ತಾಹ-2024 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿ.ಪಂ ಸಿಇಒ ಎಸ್.ಜೆ. ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಭಾಗವಹಿಸುವರು. ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎನ್.ವಾಸುದೇವರಾಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕುಮಟ್ಟದ ಅಧಿಕಾರಿಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮಳೆ ಸಂತ್ರಸ್ತರಿಗೆ ಶಾಶ್ವತ ಪರಿಹಾರ ಕಲ್ಪಿಸಿ

ಜಗಳೂರು: ಮಳೆ ಸಂತ್ರಸ್ತರಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಮಾಜಿ ಶಾಸಕ ರಾಮಚಂದ್ರಪ್ಪ ಕಾಂಗ್ರೆಸ್ ಸರಕಾರಕ್ಕೆ ಒತ್ತಾಯಿಸಿದರು. ತಾಲೂಕಿನ ಉದ್ದಗಟ್ಟ ಹಿರೇಮಲ್ಲನಹೊಳೆ ಗ್ರಾಮದ ನೆರೆ ಸಂತ್ರಸ್ತರ ಭೇಟಿ ಮಾಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿ ಪತ್ರಕರ್ತರೊಂದಿಗೆ ಮಾತನಾಡಿದರು. ಮನೆ ಬೆಳೆ ಹಾನಿಯಾಗಿದ್ದು ತಗ್ಗು ಪ್ರದೇಶದ ಜನವಸತಿಗಳಲ್ಲಿ ನೀರು ನುಗಿದ್ದು, ಉದ್ದಗಟ್ಟ ಗ್ರಾಮದಲ್ಲಿ 25 ಮನೆಗಳಿಗೆ ನೀರು ನುಗಿದ್ದು, ಸಂತ್ರಸ್ತರಿಗೆ ತಾಲೂಕು ಆಡಳಿತ ಜಿಲ್ಲಾಡಳಿತ ಇವರಿಗೆ ಶಾಶ್ವತ ಪರಿಹಾರ ವ್ಯವಸ್ಥೆಯನ್ನು ಮಾಡಬೇಕು ಎಂದು ಒತ್ತಾಯಿಸಿದರು.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

{ಬಿ.ಶ್ರೀರಾಮುಲು } ಮಾಜಿ ಸಚಿವ

ಸಂಸದ ತುಕಾರಾಂ ಅವರು ವಾಲ್ಮೀಕಿ ನಿಗಮದ ಹಣದಿಂದ ಲೋಕಸಭಾ ಚುನಾವಣೆಯಲ್ಲಿ ಕಾನೂನು ಬಾಹಿರವಾಗಿ ಆಯ್ಕೆಯಾಗಿದ್ದು, ಈ ಉಪ ಚುನಾವಣೆಯಲ್ಲಿ ಸರಕಾರದ ಹಣ ಬಲ, ತೋಳ್ಬಲ ನಡೆಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನ ಗೆಲ್ಲಬೇಕಾದರೆ ಕಾಂಗ್ರೆಸ್ ಸೋಲಬೇಕು.

ಜಗಳೂರು ನೆರೆ ಹಾವಳಿಗೆ ಬಾಲಕ ಬಲಿ

ಜಗಳೂರು: ತಾಲೂಕಿನ ವ್ಯಾಪ್ತಿಯಲ್ಲಿ ಕಳೆದ ಒಂದು ತಿಂಗಳ ಹಿಂದೆ ಬಿಡದೆ ಸುರಿದ ಮಳೆಗೆ ನೆರೆ ಹಾವಳಿ ಉಂಟಾಗಿದ್ದು, ಹಿರೇಮಲ್ಲನಹೊಳೆ ಗ್ರಾಮದಲ್ಲಿ ಮಗು ಒಂದು ನೀರಿನಲ್ಲಿಮಳುಗಿ ಬಲಿಯಾಗಿದೆ.

ಹಿರೇಮಲ್ಲನಹೊಳೆ ಗ್ರಾಮದ ಗಗನ್ ಎಂಬ ಒಂದು ವರ್ಷದ ಹಸುಳೆ ಸಾವನ್ನಪ್ಪಿರುವ ದುರ್ದೈವಿ. ತಂದೆ ಸುನೀಲ್ ತಾಯಿ ರೂಪಿಕಾ ಇಬ್ಬರು ಕೆರೆ ಕೋಡಿ ಸಮೀಪದಲ್ಲಿ ಹಲವು ಕುಟುಂಬಗಳ ಜೊತೆ ವಾಸವಿದ್ದರು ತಮ್ಮ ಮನೆ ಅಂಗಳದಲ್ಲಿ ತಿಂಗಳಿಂದ ನೀರು ಹರಿಯುತ್ತಿತ್ತು, ತಾಯಿ ಮನೆ ಕೆಲಸದಲ್ಲಿ ತೊಡಗಿದ್ದಾಗ ಅಂಗಳದಲ್ಲಿ ಆಟವಾಡುತ್ತ ಹೋಗಿ ಮನೆಯ ಹಿಂದೆ ಹರಿಯುತ್ತಿರುವ ನೀರಿನಲ್ಲಿ ಮುಳುಗಿ ಸಾವನ್ನಪಿದೆ.

ಮನೆಯಿಂದ ಕಾಣೆಯಾದ ಮಗುವನ್ನು ಹುಡುಕಿದಾಗ ಆಗಲೇ ಮಗು ಜೀವನ ಮರಣದ ಜತೆ ಹೋರಾಟ ನೆಡೆಸುತಿತ್ತು ಕೂಡಲೆ ಗ್ರಾಮಸ್ಥರ ಸಹಕಾರದಿಂದ ಜಗಳೂರು ತಾಲೂಕು ಸಾರ್ವಜನಿಕರ ಆಸ್ಪತ್ರೆಗೆ ಕೆರೆತಂದಾಗ ವೈದ್ಯರು ಪರೀಕ್ಷಿಸಿದ್ದಾಗ ಮಗು ಮೃತಪಟ್ಟಿದೆ ಎಂದು

ದೃಢವಾಗಿದೆ. ಆಸ್ಪತ್ರೆಯಲ್ಲಿಮಗುವಿನ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು ಕರುಣಾ ಜನಕ ಸನ್ನಿವೇಶವನ್ನು ಗಮನಸಿದ ಜನರು ಮೊಮ್ಮೊಲ್ಲ ಮರುಗಿ ಕಣ್ಣಿನಲ್ಲಿನೀರು ತಂದರು.

ತಾಲೂಕು ಆಡಳಿತ ವೈಫಲ್ಯ: ನೆರೆ ಹಾವಳಿಯಿಂದ ಸಂತ್ರಸ್ತರಾಗಿದ್ದ ಹಿರೇಮಲ್ಲನಹೊಳೆ ಗ್ರಾಮದ ಕೆರೆ ಅಂಚಿನಲ್ಲಿ ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಬೇಕಾಗಿರುವುದು ತಾಲೂಕು ಆಡಳಿತದ ಮುಖ್ಯ ಜವಾಬ್ದಾರಿಯಾಗಿತ್ತಲ್ಲದೆ ರಕ್ಷಣೆಗೆ ತಾಲೂಕು ಆಡಳಿತದಿಂದ ಸಿಬ್ಬಂದಿಯನ್ನು ನೇಮಿಸಬೇಕಿತ್ತು ಏನನ್ನು ಮಾಡದೆ ಬೇಜವಾಬ್ದಾರಿಯೇ ತೋರಿದ್ದು, ತಾಲೂಕು ಆಡಳಿತ ನಿರ್ಲಕ್ಷ್ಯತನದಿಂದ ಮಗುವೊಂದು ಬಲಿಯಾಗಿದೆ ಎಂದು ದಲಿತ ಸಂಘದ ಮುಖಂಡರು ಆರೋಪಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಇದೆ ಗ್ರಾಮದಲ್ಲಿ ನೆರೆ ಹಾವಳಿ ಪ್ರದೇಶಕ್ಕೆ ಬೆಂಗಳೂರಿನಿಂದ ಧೀಡಿರನೇ ದೌಡಯಿಸಿ ಹಿಂದು ಸಂತ್ರಸ್ಥರ ಅಳಲು ಹಾಲಿಸಿ ಇವರನ್ನು ಸ್ಥಳಾಂತರ ಮಾಡುವಂತೆ ತಹಶೀಲ್ದಾರ್ ಗೆ ಸೂಚನೆ ನೀಡಿದ್ದರು ಸೂಚನೆಗೆ ಕಿಮ್ಮತ್ತು ನೀಡಿಲ್ಲ ಎಂದು ಗ್ರಾಮಸ್ಥರಿಂದ ಆಕ್ರೋಷವ್ಯಕ್ತವಾಗಿದೆ.

ಸರಕಾರದಿಂದ ಕೋಟಿಗಟ್ಟಲೆ ಹಣ ನೆರೆ ಪ್ರದೇಶಕ್ಕೆಂದು ಮೀಸಲಿಟ್ಟಿದೆ ಎಂದು ತರಾಟೆಗೆ ತಗೆದುಕೊಂಡರು ಇದರ ಬೆನ್ನಲೆ ದಲಿತ ಸಂಘರ್ಷ ಸಮಿತಿಯ ಹಲವು ಮುಖಂಡರು ಸರಕಾರದ ಹಣದಲ್ಲಿ ನೀನು ಗಂಜಿ ಕೇಂದ್ರ ನಿರ್ವಹಣೆ ಮಾಡುತ್ತಿದ್ದು ನೀರಿನಲ್ಲಿ ಮನೆ ಮುಳುಗಡೆಯಾದ ಜನರನ್ನು ಕಾಳಜಿ ಕೇಂದ್ರದಿಂದ ಏಕೆ ಮನೆಗೆ , ಕಳುಹಿಸಿದ್ದೀರಿ ಎಂದು ತಹಶೀಲ್ದಾರ್ ಮೇಲೆ ಮುಗಿಬಿದ್ದರು ನಂತರ ಶಾಸಕರು ಮಧ್ಯೆ ಪ್ರವೇಶಿಸಿ ಸಮಾಧಾನಿಸಿ ತಹಸೀಲ್ದಾರ್ ರವರೆ ನೀವೊಬ್ಬ ಸಾರ್ವಜನಿಕ ಅಧಿಕಾರಿ ನಿಮ್ಮಪ್ಪನ ಮನೆಯಿಂದ ನೀನು ಹಣ ಕೊಡುವುದಿಲ್ಲ ಕಾಳಜಿ ಕೇಂದ್ರದವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಅಲ್ಲದೆ ಬಿಸಿಎಂ ಇಲಾಖೆಯ ವಸತಿ ನಿಲಯಕ್ಕೆ ಸಂತ್ರಸ್ಥರನ್ನು ಸ್ಥಳಾಂತರಿಸಿ, ನೆರೆ ಪ್ರದೇಶಕ್ಕೆ ತಡೆಗೋಡೆ ನಿರ್ಮಿಸಿ ಜನರು ಯಾರು ಹೋಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ತರಾಟೆ: ಜಗಳೂರು ತಾಲೂಕು ನೆರೆಪೀಡಿತ ಪ್ರದೇಶವಾಗಿದ್ದರು ಪಿಡಿಒಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಕೆಲಸ ಮಾಡಲು ಸೂಚನೆ ನೀಡಿದರೆ ವಿಷ ಸೇವಿಸಿ ಅಧಿಕಾರಿಗಳ ಮೇಲೆ ಹೆಸರು ಬರೆದಿಟ್ಟು ಸಾಯಿತ್ತೀನಿ ಎಂದು ಹೇಳುತ್ತಾರೆ ಎಂಬ ಮಾಹಿತಿಗಳು ಕೇಳು ಬರುತ್ತವೆ. ನೀವು ಕಾನೂನು ಹೇಳುವುದು ಬಿಟ್ಟು ಜಗಳೂರು ತಾಲೂಕಿಗೆ ನಾಳೆ ಖುದ್ದು ಭೇಟಿ ನೀಡಿ ಗೋಮಾಳ ಪ್ರದೇಶಗಳಲ್ಲಿ ನೆರೆ ಸಂತ್ರಸ್ತರಿಗೆ ತಲಾ ಒಂದು ಕುಟುಂಬಕ್ಕೆ ತಾತ್ಕಾಲಿಕ ಶೇಡ್ ನಿರ್ಮಾಣ ಮಾಡಬೇಕು ಎಂದರಲ್ಲದೆ ರಾಜ್ಯದಲ್ಲಿ ಹೆಚ್ಚು ಮಳೆಯಾಗಿದ್ದು ಈ ಪ್ರದೇಶದಲ್ಲಿ ಜಲಪಾತ್ರೆಗಳ ತುಂಬಾ ಸಂಗ್ರಹವಾಗಿದ್ದು ಅಧಿಕಾರಿಗಳು ರಜೆ ದಿನಗಳೆಂದು ನೆಪ ಹೇಳದೆ ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದರು.

ಸ್ಥಳಕ್ಕೆ ಶಾಸಕ ದೇವೇಂದ್ರಪ್ಪ ಭೇಟಿ

ತಹಸೀಲ್ದಾರ್ ಗೆ ತರಾಟೆ ತಾಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಬಲಿಯಾದ ಗಗನ್ ತಂದೆ ತಾಯಿ ಸೇರಿದ್ದಂತೆ ಕುಟುಂಬಕ್ಕೆ ಸಾಂತ್ವನ ನೀಡಿ ಮಾತನಾಡಿ, ನಿಮ್ಮಗಾಗಿಯೇ ಗಂಜಿ ಕೇಂದ್ರ ತೆರಯಲಾಗಿದೆ ಆದರೆ ಗಂಜಿ ಕೇಂದ್ರದಿಂದ ಏಕೆ ನೀವು ಕೆರೆ ಕೋಡಿಗೆ ತೆರಳಿದ್ದೀರಿ ಎಂದು ಪ್ರಶ್ನಿಸಿದಾಗ ತಹಸೀಲ್ದಾರ್ ಹಿರೇಮಲ್ಲನಹೊಳೆ ಗ್ರಾಮದ 15 ಕುಟುಂಬವನ್ನು ಗಂಜಿಕೇಂದ್ರದ ವಿಭಾಗಿಸಿ ವಾಪಸ್ಸು ಕಳುಹಿಸಿದ್ದಾರೆ ಎಂದು ಶಾಸಕರ ಗಮನಕ್ಕೆ ತಂದರು ನಂತರ ತಹಸೀಲ್ದಾರ್ ಸೈಯದ್ ಕಲೀಂ ಉಲ್ಲಾ ಅವರಿಗೆ ಶಾಸಕರು ತರಾಟೆಗೆ ತಗೆದುಕೊಂಡು ನೀವು ಏಕೆ ಬೇರ್ಪಡಿಸಿದ್ದೀರಿ ಸರಕಾರಕ್ಕೆ ಮೂವತ್ತು ಕುಟುಂಬ ಸಾಕುವಷ್ಟು ನಿರ್ಗತಿಕವಾಗಿಲ್ಲ

ಮೂಢನಂಬಿಕೆಯಿಂದ ಹೊರ ಬರಲು ಸಲಹೆ

ಹಿರಿಯೂರು: ದೈಹಿಕ ಮತ್ತು ಮಾನಸಿಕ ಆರೋಗ್ಯ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಆರೋಗ್ಯ ಇಲಾಖೆಯ ಸುಜಾತಾ ಸುವರ್ಣ ಹೇಳಿದರು.

ನಗರದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ,ಅಭಿಯೋಜನಾ ಇಲಾಖೆ, ಆರೋಗ್ಯ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಹಿರಿಯ ನಾಗರಿಕರ ದಿನಾಚರಣೆ, ಮಾನಸಿಕ ಆರೋಗ್ಯ ದಿನಾಚರಣೆ ಮತ್ತು ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಿಡಿಪಿಒ ರಾಘವೇಂದ್ರ ಮಾತನಾಡಿ ಮೂಡ ನಂಬಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚಿದ್ದು ಅರೋಗ್ಯದ ದೃಷ್ಟಿಯಿಂದ ಹೊರ ಬರುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರಾಮಚಂದ್ರಪ್ಪ, ಸಿವಿಲ್ ನ್ಯಾಯಾಧೀಶರಾದ ಶಿಲ್ಪ ತಿಮ್ಮಾಪುರ,ಅಪರ ಸಿವಿಲ್ ನ್ಯಾಯಾದೀಶರಾದ ಶ್ರೀಧರ್, ವಕೀಲರಾದ ಬೀನಾ ರಾಣಿ ಚಿತ್ರಲಿಂಗಪ್ಪ,ವೆಂಕಟೇಶ್,ಹಿರಿಯ ನಾಗರಿಕರು ಮಹಿಳೆಯರು ಸೇರಿದಂತೆ ಇತರರಿದ್ದರು.

ಆರೋಗ್ಯ ದಿನಾಚರಣೆ ಮತ್ತು ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನುಗಣ್ಯರು ಉದ್ಘಾಟಿಸಿದರು.

ಮಹಿಳೆಯರು, ಹಿರಿಯ ನಾಗರಿಕರು ಆರೋಗ್ಯವಂತರಾಗಿರಲು ನಿಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಕಾಪಾಡಬೇಕು ಜತೆಗೆ ಸಾಂಕ್ರಾಮಿಕ ರೋಗಿಗಳಿಂದ ದೂರ ನೀಡಿ.
- ಡಾ.ವೆಂಕಟೇಶ್, ಟಿಎಚ್‌ಒ

ತುಂಬಿದ ಕೆರೆ ದೇವತೆಗಳ ಮೆರವಣಿಗೆ

ಚಳ್ಳಕೆರೆ: ನಗರದ ಇತಿಹಾಸ ಪ್ರಸಿದ್ಧ ಪುರಾತನ ಕೆರೆಗಳಲ್ಲಿ ಒಂದಾದ ಕರೆಕಲ್ ಕೆರೆ ವರುಣನ ಕೃಪೆಯಿಂದ ಮೈದುಂಬಿ ಹರಿದು ಕೋಡಿ ಬಿದ್ದ ಹಿನ್ನೆಲೆಯಲ್ಲಿ ತಾಲೂಕಿನ ಆರಾಧ್ಯ ದೈವಗಳಾದ ಚಳ್ಳಕೆರಮ್ಮ ಹಾಗೂ ಉಡುಸಲಮ್ಮ ದೇವತೆಗಳನ್ನು ಉರುಮೆ ಸದ್ದಿನೊಂದಿಗೆ ಕೆರೆಗೆ ಕರೆ ತಂದು ಚಳ್ಳಕೆರಮ್ಮ ದೇವಸ್ಥಾನ ಆಡಳಿತ ಮಂಡಳಿ ಹಾಗೂ ಭಕ್ತಾದಿಗಳು ಗಂಗಾ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಚಳ್ಳಕೆರಮ್ಮ ದೇವಸ್ಥಾನದ ಆಡಳಿತ ಮಂಡಳಿಯ ಧರ್ಮದರ್ಶಿ ಗೌಡ್ರು ರಾಮಣ್ಣ ಕರೆಕಲ್ ಕೆರೆ ತಾಲೂಕಿನಲ್ಲಿ ಪ್ರಸಿದ್ಧ ಕೆರೆಯಾಗಿದ್ದು ಈ ಕೆರೆಯು ಸುಮಾರು 56 ವರ್ಷಗಳ ಹಿಂದೆ ತುಂಬಿತ್ತು ಈಗ ತಾಲೂಕಿನಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಕರೆಕಲ್ ಕೆರೆಯು ತುಂಬಿ ಕೋಡಿ ಬಿದ್ದಿದ್ದು ತಾಲೂಕಿನ ಸಾರ್ವಜನಿಕರಿಗೆ ಹಾಗೂ ಭಕ್ತರಿಗೆ ತುಂಬಾ ಸಂತೋಷದಾಯಕ ವಿಷಯವಾಗಿದ್ದು ಈ ಹಿನ್ನೆಲೆಯಲ್ಲಿ ಇಂದು ಕರೆಕಲ್ ಕೆರೆಗೆ ದೇವತೆಗಳನ್ನು ಕರೆತಂದು ಗಂಗಾ ಪೂಜೆ ನೆರವೇರಿಸಲಾಗಿದೆ ಮುಂದಿನ ದಿನಗಳಲ್ಲಿ ತಾಲೂಕಿಗೆ ಉತ್ತಮ ಮಳೆ ಬೆಳೆಯಾಗಿ ಸಮೃದ್ಧಿಯಾಗಲಿ ಎಂಬ ಕಾರಣಕ್ಕೆ ಪೂಜೆ ಸಲ್ಲಿಸಲಾಗಿದೆ ಎಂದು ಇದೇ ವೇಳೆ ತಿಳಿಸಿದರು.

ಸೂಜಿ ಮಲ್ಲೇಶ್ವರ ನಗರದ ನಿವಾಸಿ ಜಯಣ್ಣ ಮಾತನಾಡಿ

ಕರೆಕಲ್ ಕೆರೆಯು ಕೋಡಿ ಬಿದ್ದಿರುವುದರಿಂದ ಜನ ಜನವಾರುಗಳಿಗೆ ಕುಡಿಯುವ ನೀರಿನ ಅಭಾವ ಮರೆಯಾಗಿದ್ದು ಈ ಕೆರೆ ಕೋಡಿ ಬಿದ್ದು ಸುಮಾರು ಐದು ದಶಕಗಳೇ ಕಳೆದಿದ್ದರಿಂದ ಸಾರ್ವಜನಿಕರಿಗೆ ಇನ್ನಿಲ್ಲದ ಸಂತಸ ಉಂಟಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಳ್ಳಕೆರಮ್ಮದೇವಸ್ಥಾನ ಆಡಳಿತ ಮಂಡಳಿಯ ಸದಸ್ಯರು ಪುರೋಹಿತರು ತಳವಾರ ಸಮುದಾಯದ ಮುಖಂಡರು ಆಯಗಾರರು ನಗರಸಭೆಯ ಹಾಲಿ ಹಾಗೂ ಮಾಜಿ ಸದಸ್ಯರುಗಳು ಸೇರಿದಂತೆ ಭಕ್ತ ವೃಂದ ಹಾಗೂ ಸಾರ್ವಜನಿಕರು ಪೂಜಾ ಕೈಂಕರ್ಯಗಳಿಗೆ ಸಾಕ್ಷಿಯಾದರು.

ದಲಿತರ ಮೇಲೆ ದೌರ್ಜನ್ಯ ನಿಂತಿಲ್ಲ



ಜಾತಿನಿಂಧನೆ ಮಾಡುವ ಮೂಲಕ ದಲಿತರಿಗೆ ಅಪಮಾನ ಮಾಡಿದ್ದಾರೆ ಎಂದು ತಹಸೀಲ್ದಾರ್ ಕಚೇರಿಗೆ ದಲಿತ ನಾಯಕರು ಮನವಿ ಸಲ್ಲಿಸಿದ್ದಾರೆ.

ಚಳ್ಳಕೆರೆ: ಸ್ವಾತಂತ್ರ್ಯ ಬಂದು ಹಲವು ವರ್ಷಗಳೇ ಕಳೆದರು ದಲಿತರ ಮೇಲಿನ ದೌರ್ಜನ್ಯಗಳು ಮಾತ್ರ ಇನ್ನೂ ನಿಂತಿಲ್ಲ ಎಂಬುದಕ್ಕೆ ಈ ಗ್ರಾಮದ ಸ್ಥಿತಿ ಕಂಡರೆ ತಿಳಿಯುತ್ತದೆ.

ಗ್ರಾಮದಲ್ಲಿ ಕೆಳಜಾತಿ, ಮೇಲ್ಜಾತಿ ಎಂಬ ತಾರತಮ್ಯ ಮಾಡುವ ಮೂಲಕ ಕ್ಷೌರಿಕ ನಾಗರಾಜ್ ಎಂಬುವರು ದಲಿತರಿಗೆ ನಾನು ಕಟ್ಟಿಂಗ್ ಕ್ಷೌರ ಮಾಡುವುದಿಲ್ಲ ಎಂದು ಜಾತಿನಿಂಧನೆ ಮಾಡುವ ಮೂಲಕ ದಲಿತರಿಗೆ ಅಪಮಾನ ಮಾಡಿದ್ದಾರೆ ಎಂದು ತಹಸೀಲ್ದಾರ್ ಕಚೇರಿಗೆ ದಲಿತ ನಾಯಕರು ಮನವಿ ಸಲ್ಲಿಸಿದ್ದಾರೆ.

ಚಳ್ಳಕೆರೆ ತಾಲೂಕಿನ ಕಾಲುವೆಹಳ್ಳಿ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ಕ್ಷೌರದ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ಇರುವಂತಹ ನಾಗರಾಜ್ ಎಂಬುವರು ಕೇವಲ ಮೇಲ್ಜಾತಿಯವರಿಗೆ ಮಾತ್ರ ಕ್ಷೌರ ಕಟಿಂಗ್ ಮಾಡುವ ಮೂಲಕ ಕೆಲ ಜಾತಿಯ ದಲಿತ ಜನಾಂಗದವರನ್ನು ಜಾತಿನಿಂಧನ ಮಾಡುವ ಮೂಲಕ ಅಪಮಾನ ಮಾಡಿದ್ದಾರೆ ಎಂದು ದಲಿತ ಸಮುದಾಯದ ಹಲವು ಮುಖಂಡರು ಗ್ರಾಮದ ಯುವಕರು ತಹಸೀಲ್ದಾರ್ ಕಚೇರಿಗೆ ಆಗಮಿಸಿ, ತಹಶಿಲ್ದಾರ್ ರೆಹನ್ ಪಾಷಗೆ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಇನ್ನು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ದಲಿತರ ಮೇಲಿನ ದೌರ್ಜನ್ಯಗಳು ನಿಲ್ಲುತ್ತಿಲ್ಲ ಆದ್ದರಿಂದ ಈ ಕೂಡಲೇ ದಲಿತರಿಗೆ ನ್ಯಾಯಯುತವಾದ ಹಕ್ಕುಗಳನ್ನು ಸರಕಾರದ ಅಧೀನ ಅಧಿಕಾರಿಗಳು ಕೊಡಿಸಬೇಕು ಎಂದು ದಲಿತ ಮುಖಂಡರು ಒತ್ತಾಯಿಸಿದ್ದಾರೆ.

ಇದಕ್ಕೆ ಸ್ಪಂಧಿಸಿದ ತಹಸೀಲ್ದಾರ್ ರೇಹಾನ್ ಪಾಷ ಅ. 30ರಂದು ಕಾಲುವೆಹಳ್ಳಿ ಗ್ರಾಮಕ್ಕೆ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಇನ್ನೂ ತಹಸೀಲ್ದಾರ್‌ಗೆ ಮನವಿ ಕೊಟ್ಟಿದ್ದಿಯಾ ಅಂತ ಕಾಲುವೆಹಳ್ಳಿ ಗ್ರಾಮದ ಸವರ್ಣೀಯರು ದಲಿತ ಯುವಕರಿಗೆ ಬೆದರಿಕೆ ಕರೆಗಳನ್ನು ಮಾಡುವುದರ ಮೂಲಕ ತಮ್ಮ ಹಕ್ಕುಗಳನ್ನು ಕಸಿದುಕೊಳ್ಳುವಂತಹ ಹಾಗೂ ಗ್ರಾಮದಲ್ಲಿ ಭಯದ ವಾತಾವರಣ ಉಂಟು ಮಾಡುವಂತಹ ಗ್ರಾಮದ ಸವರ್ಣೀಯರು ದಲಿತ ಯುವಕರೊಂದಿಗೆ ದೂರವಾಣಿ ಸಂಪರ್ಕದ ಮೂಲಕ ಬೆದರಿಕೆ ಕರೆಗಳನ್ನು ಮಾಡಿರುವಂತಹ ಸಂದೇಶಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ.

ಇದೇ ಸಂಧರ್ಭದಲ್ಲಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಟಿ.ವಿಜಯ್ ಕುಮಾರ್, ಹೊನ್ನೂರಸ್ವಾಮಿ, ಡಿಟಿ.ಭೂತಲಿಂಗಪ್ಪ, ದ್ಯಾವರನಹಳ್ಳಿ ತಿಪ್ಪೇಸ್ವಾಮಿ, ಸುರೇಶ್, ಡಿ.ದಯಾನಂದ, ಇತರ ಹಲವು ಮುಖಂಡರು ಪಾಲ್ಗೊಂಡಿದ್ದರು.

ಯಕ್ಕನಹಳ್ಳಿಯಲ್ಲಿ ಬಿಜೆಪಿಯಿಂದ ಸದಸ್ಯತ್ವ ಅಭಿಯಾನ

ಹೊನ್ನಾಳಿ: ದಾವಣಗೆರೆ ಜಿಲ್ಲಾ ಬಿಜೆಪಿ ಪಕ್ಷವು ಮೊಬೈಲ್ ನೊಂದಣಿಯ ಮೂಲಕ ಹಮ್ಮಿಕೊಂಡಿರುವ ಸದಸ್ಯತ್ವದ ಅಭಿಯಾನವು ಅಕ್ಟೋಬರ್ 30ರ ನಿಗದಿತ ದಿನದ ಒಳಗಾಗಿ 1 ಲಕ್ಷದ 20 ಸಾವಿರ ಗುರಿ ತಲುಪಲಿದೆ ಎಂದು ಜಿಲ್ಲಾ ಲೋಕಸಭಾ ಪರಾಜಿತ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ಹೊನ್ನಾಳಿ ತಾಲೂಕು ಯಕ್ಕನಹಳ್ಳಿ ಗ್ರಾಮದಲ್ಲಿ ಬಿಜೆಪಿ ಪಕ್ಷದ ಹೊನ್ನಾಳ್ಳಿ ತಾಲೂಕು ಮಂಡಲದ ಮಾಜಿ ಅಧ್ಯಕ್ಷ ಅರಕೆರೆ ಎಬಿ ಹನುಮಂತಪ್ಪ ಇವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಸದಸ್ಯತ್ವ ಅಭಿಯಾನದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಇಂದು ನ್ಯಾಮತಿ ತಾಲೂಕು ಹಾಗೂ ಹೊನ್ನಾಳಿ ತಾಲೂಕಿನ ಕುಂಬಳೂರು, ನೆಲಹೊನ್ನೆ ಗ್ರಾಮದ ನಂತರ ಯಕ್ಕನಹಳ್ಳಿ ಗ್ರಾಮದಲ್ಲಿ ಸದಸ್ಯತ್ವಕ್ಕೆ ಮುಂದಾಗಿರುವುದಾಗಿ ತಿಳಿಸಿದರು.

ಅಕ್ಟೋಬರ್ 30ಕ್ಕೆ ದಾವಣಗೆರೆ ಉತ್ತರ 75 ಸಾವಿರ, ದಕ್ಷಿಣ 60 ಚನ್ನಗಿರಿ 75, ಹರಿಹರ 70 ಹೊನ್ನಾಳಿ 60, ಮಾಯಕೊಂಡ 60 ಸಾವಿರ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 4,60,000 ನೋಂದಣಿಯ ಸದಸ್ಯತ್ವದ ಸಾಧನೆ ಗುರಿ ನೀಡಲಾಗಿದ್ದಿತು.

ಅಕ್ಟೋಬರ್ 24ರಲ್ಲಿ ಸದಸ್ಯತ್ವ ಮಾಡಿದ ಮಾಹಿತಿಯ ಪ್ರಕಾರ ದಾವಣಗೆರೆ ದಕ್ಷಿಣ 21 ಸಾವಿರ, ಉತ್ತರ 8, ಮಾಯಕೊಂಡ 7, ಚನ್ನಗಿರಿ 18, ಹೊನ್ನಾಳಿ 21, ಹರಿಹರ 4, ಜಗಳೂರು 9 ಸಾವಿರ ಸೇರಿದಂತೆ 91,000 ಸದಸ್ಯತ್ವದ ಗುರಿಯನ್ನು ತಲುಪಲು ಪಕ್ಷದ ಎಲ್ಲ ಕಾರ್ಯಕರ್ತರ ಸಹಕಾರದಿಂದ ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಅರಕೆರೆ ಎಬಿ ಹನುಮಂತಪ್ಪ, ಶಾಂತರಾಜ ಪಾಟೀಲ್, ಕೆವಿ ಚೆನ್ನಪ್ಪ,ದಾವಣಗೆರೆ ಜಯಕ್ಕ, ನೆಲಹೊನ್ನೆ ದೇವರಾಜ್, ಯಕ್ಕನಹಳ್ಳಿ ಜಗದೀಶ್ ದೇವಣ್ಣ, ಗ್ರಾಮದ ಮುಖಂಡರಾದ ಆನಂದಪ್ಪ, ಹಾಲೇಶಪ್ಪ, ಷಣ್ಮುಖಪ್ಪ, ಸಿದ್ದಣ್ಣ ಇನ್ನಿತರರಿದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನದ ಕಾರ್ಯಕ್ರದಲ್ಲಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮಾತನಾಡಿದರು.

ದೀಪ ಸಂಜೀವಿನಿ ಕಾರ್ಯಕ್ರಮಕ್ಕೆ ಚಾಲನೆ

ಚಿತ್ರದುರ್ಗ: ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಒನಕೆ ಓಬವ್ವ ವೃತ್ತದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ''ದೀಪ ಸಂಜೀವಿನಿ'' ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಜೆ.ಸೋಮಶೇಖರ್ ಅವರು ಚಾಲನೆ ನೀಡಿದರು.

ದೀಪ ಸಂಜೀವಿನಿ ಕಾರ್ಯಕ್ರಮದಲ್ಲಿ ಜಿಲ್ಲೆಯ ಆರು ತಾಲ್ಲೂಕುಗಳಿಂದ ಬಂದಂತಹ ಸ್ವ ಸಹಾಯ ಗುಂಪಿನ ಮಹಿಳೆಯರು ತಮ್ಮ ಸ್ವಂತ ಪರಿಶ್ರಮ ಹಾಗೂ ಕರ ಕುಶಲತೆಯಿಂದ ತಯಾರಿಸಿದ ದೀಪಗಳು, ಮಣ್ಣಿನ ಹಣತೆ, ಕೊಬ್ಬರಿ ಎಣ್ಣೆ, ತಿಂಡಿ-ತಿನಿಸುಗಳು, ಕೈಕಸೂತಿ ಬಟ್ಟೆ, ಬ್ಯಾಗ್, ಗೊಂಬೆ ಹಾಗೂ ವಿವಿಧ ಬಗೆಯ ಉಪ್ಪಿನಕಾಯಿ ಮತ್ತು ರೊಟ್ಟಿಯ ಖಾದ್ಯಗಳು ಸೇರಿದಂತೆ ಸ್ವದೇಶಿ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಾಯಿತು. ವಿಶೇಷವಾಗಿ ಹಲವು ರೀತಿಯಲ್ಲಿ ವಿನ್ಯಾಸ ಮಾಡಲಾಗಿದ್ದ ದೀಪಗಳು ನೋಡುಗರನ್ನು ಆಕರ್ಷಿಸಿದವು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಗಾಯತ್ರಿ ಸೇರಿದಂತೆ ಮತ್ತಿತರರು ಇದ್ದರು.

ರಾಜಕೀಯ ಅಸ್ತಿತ್ವಕ್ಕೆ ಹೋರಾಡೋಣ

ದಾವಣಗೆರೆ: ಇಂದು ರಾಜಕೀಯ ಅಸ್ತಿತ್ವ ಪಡೆಯುವುದು ಅಷ್ಟು ಸುಲಭವಿಲ್ಲ. ನಾವೆಲ್ಲರೂ ಒಟ್ಟಾಗಿ ಹೋರಾಡೋಣ. ಸ್ವಾಭಿಮಾನದ ಕೆಚ್ಚೆದೆಯ ಹಕ್ಕು ಪಡೆಯೋಣ. ಶೈಕ್ಷಣಿಕ ಕ್ರಾಂತಿ ಆದರೆ ಇದು ಸಾಧ್ಯವಾಗುತ್ತದೆ ಎಂದು ದೇಶದ ಪ್ರತಿಷ್ಠಿತ ಇನ್ಸ್ಟಿಟ್ಯೂಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ. ಬಿ. ವಿನಯ್ ಕುಮಾರ್ ಅವರು ಪ್ರತಿಪಾದಿಸಿದರು.

ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನಲ್ಲಿ ಕುರುಬ ನೌಕರರ ಸಂಘದ ವತಿಯಿಂದ ಏರ್ಪಡಿಸಿದ್ದ ಕುರುಬ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಬ್ಬರೂ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಶೈಕ್ಷಣಿಕ ರಂಗದಲ್ಲಿ ಕ್ರಾಂತಿ ಆಗಬೇಕಿದ್ದು, ಶೈಕ್ಷಣಿಕ ಕ್ರಾಂತಿಯಾದಲ್ಲಿ ಮಾತ್ರ ನಮ್ಮ ಮನೆ, ಪರಿಸರ, ಕೇರಿ, ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯ, ದೇಶ ಬದಲಾವಣೆ ಆಗುತ್ತದೆ. ಹೆಣ್ಣು ಮಕ್ಕಳು ಯಾವುದೋ ಕಾರಣಕ್ಕೆ ಶಿಕ್ಷಣದಿಂದ ವಂಚಿತರಾಗಬಾರದು. ಪ್ರತಿಯೊಬ್ಬರೂ ವಿದ್ಯಾವಂತರಾದಾಗ ನಮ್ಮಲ್ಲಿ ಶೈಕ್ಷಣಿಕ, ರಾಜಕೀಯ, ಆರ್ಥಿಕ ಜಾಗೃತಿ ಮೂಡಲು ಸಾಧ್ಯ ಎಂದು ತಿಳಿಸಿದರು.

ಬಡವರು, ಆರ್ಥಿಕವಾಗಿ ಹಿಂದುಳಿವದರು, ಸಮಾಜದ ಕಟ್ಟಕಡೆಯ ಸಮುದಾಯದವರಿಗೂ ತರಬೇತಿ ಕೊಡಿಸಿ ಉನ್ನತ ಉದ್ಯೋಗ ಪಡೆಯುವಂತಾಗಲು ಸಹಕರಿಸಬೇಕು. ತೊಟ್ಟಿಲು ತೂಗುವ ಕೈ ಇಡೀ ದೇಶವನ್ನೇ ತೂಗುವಂಥ ಶಕ್ತಿ ಇದೆ. ಹೆಣ್ಣು ಇವತ್ತು ಯಾವುದೇ ಕ್ಷೇತ್ರದಲ್ಲಿ ಕಡಿಮೆ ಇಲ್ಲ. ಪುರುಷರಿಗೆ ಸಮಾನವಾಗಿ ಎಲ್ಲಾ ರಂಗಗಳಲ್ಲಿಯೂ ಸರಿಸಾಟಿಯಾಗಿ ನಿಲ್ಲಬಲ್ಲಳು ಎಂದು ಹೇಳಿದರು.

ಕೋಟ್ಯಂತರ ರು. ಮೌಲ್ಯದ ಚಿನ್ನ ಕಳವು

ದಾವಣಗೆರೆ: ನ್ಯಾಮತಿ ಪಟ್ಟಣದ ಎಸ್ ಬಿ ಐ ಬ್ಯಾಂಕ್ ನ ಕಿಟಕಿ ಸರಳು ಮುರಿದು ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ ಘಟನೆ ನಡೆದಿದ್ದು, ನಗದು ಕಳ್ಳತನ ಮಾಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಬ್ಯಾಂಕ್‌ನ ಕಿಟಕಿ ಸರಳುಗಳನ್ನು ಮುರಿದು ಲಾಕರ್ ನಲ್ಲಿದ್ದ ಚಿನ್ನಾಭರಣಗಳನ್ನು ಖದೀಮರು ಕದ್ದೊಯ್ದಿದ್ದು, ಸ್ಥಳೀಯರಲ್ಲಿ ಭಯ ಹುಟ್ಟಿಸಿದೆ. ನ್ಯಾಮತಿ ಪಟ್ಟಣದ ನೆಹರು ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಕಳೆದ ಎರಡು ದಿನಗಳ ಹಿಂದೆ ಕಳ್ಳರು ಈ ಕೃತ್ಯ ಎಸಗಿರುವ ಬಗ್ಗೆ ನ್ಯಾಮತಿ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಶನಿವಾರ ಹಾಗೂ ಭಾನುವಾರ ಎರಡು ದಿನ ಬ್ಯಾಂಕ್ ರಜೆ ಇದ್ದ ಕಾರಣ ಶುಕ್ರವಾರ ರಾತ್ರಿ ಕಳ್ಳರು ಈ ಕೃತ್ಯ ಎಸಗಿರಬಹುದು ಎಂದು ಶಂಕಿಸಲಾಗಿದೆ. ಕಿಟಕಿಯ ಸರಳುಗಳನ್ನು ಮುರಿದು ಬ್ಯಾಂಕ್‌ಗೆ ನುಗ್ಗಿರುವ ಕಳ್ಳರು ಲಾಕರ್ ಒಡೆದು ಅದರಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ಹಣ ದೋಚಿದ್ದಾರೆ ಎಂದು ಹೇಳಲಾಗಿದೆ ಇಷ್ಟೇ ಅಲ್ಲದೇ ಸಿಸಿಟಿವಿ ಕ್ಯಾಮೆರಾದ ಡಿವಿಆರ್ ಸಮೇತ ಪರಾರಿಯಾಗಿರುವ ಕಳ್ಳರು ಬ್ಯಾಂಕ್‌ನ ಒಳಗಡೆ ಕಾರದಪುಡಿ ಚೆಲ್ಲಿ ಹೋಗಿದ್ದಾರೆ.ಎರಡು ಕಿಲೋಮೀಟರ್ ದೂರದವರೆಗೆ ಹೋದ ಶ್ವಾನ ಆ ಬಳಿಕ ನಿಂತಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳ್ಳತನ ಆಗಿರಬಹುದು ಎಂದು ಅಂದಾಜಿಸಲಾಗಿದ್ದು, ಬ್ಯಾಂಕ್‌ನವರ ಅಧಿಕೃತ ಮಾಹಿತಿಯ ನಂತರ ನಿಖರ ಮಾಹಿತಿ ತಿಳಿಯಲಿದೆ.

ಜ್ಯೋತಿ ಹೊತ್ತ ಕನ್ನಡ ರಥಯಾತ್ರೆಗೆ ಸ್ವಾಗತ

ಹೊಳಲ್ಕೆರೆ: ಮಂಡ್ಯದಲ್ಲಿ ಡಿಸೆಂಬರ್ 20 ರಿಂದ 22 ವರೆಗೆ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ರಾಜ್ಯದ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆ, ಮಂಗಳವಾರ ತಾಲೂಕಿಗೆ ಆಗಮಿಸಿತು.

ದುಮ್ಮಿ ಗ್ರಾಮದ ಹತ್ತಿರ ತಾಲೂಕು ಆಢಳಿತ ಕನ್ನಡ ಸಂಸ್ಕೃತಿ ಇಲಾಖೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪಧಾದಿಕಾರಿಗಳು ಭುವನೇಶ್ವರಿ ತಾಯಿಗೆ ಪುಷ್ಪ ನಮನ ಸಲ್ಲಿಸಿ ಅನೇಕ ಕಲಾತಂಡಗಳು ವಾದ್ಯಗಳನ್ನು ಭಾರಿಸುತ್ತಾ ರಥವನ್ನು ಬರಮಾಡಿಕೊಂಡರು.

ದುಮ್ಮಿ ಗ್ರಾಮ, ಅರೆಹಳ್ಳಿ, ಮೂಲಕ ಹೊಳಲ್ಕೆರೆ ಪಟ್ಟಣ ಪ್ರವೇಶಿಸಿದ ಮೆರವಣಿಗೆಯಲ್ಲಿ ವಿವಿಧ ಶಾಲೆಗಳ ಮಕ್ಕಳು ಹೆಜ್ಜೆ ಹಾಕಿದರು. ಪಟ್ಟಣದ ಎಂ ಎಂ ಶಾಲೆ ವಾಗ್ದೇವಿ ಶಾಲೆ, ಸೇರಿದಂತೆ ಅನೇಕ ಶಾಲೆಯ ಮಕ್ಕಳು ಡೊಳ್ಳು ಇನ್ನು ಇತರೆ ವಾದ್ಯಗಳನ್ನು ಭಾರಿಸುತ್ತಾ ಮೆರವಣಿಗೆಗೆ ವಿಶೇಷ ಮೆರಗು ನೀಡಿದರು.

ಮೆರವಣಿಗೆಯ ಉದ್ದಕ್ಕೂ ತಾಲೂಕಿನ ಕನ್ನಡ ಪರ ಸಂಘಟನೆಯ ಕಾರ್ಯಕರ್ತರು ಜಯ ಘೋಷ ವಾದ್ಯಗಳೊಂದಿಗೆ ಮೆರಗು ನೀಡಿದರು. ಪಟ್ಟಣದಿಂದ ಮುಂದೆ ಸಾಗಿ ಶಿವಗಂಗ, ಚಿತ್ರಹಳ್ಳಿಯಲ್ಲಿಯೂ ಕನ್ನಡ ಜ್ಯೋತಿ ಹೊತ್ತ ರಥದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಕನ್ನಡ ಸಾಹಿತ್ಯ ಪರೀಷತ್ ಜಿಲ್ಲಾಧ್ಯಕ್ಷ ಕೆ. ಎಂ. ಶಿವಸ್ವಾಮಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಶಿವಮೂರ್ತಿ, ತಹಶಿಲ್ದಾರ್ ಬಿ ಬಿ ಫಾತೀಮಾ, ಪುರಸಭೆ ಮೂಖ್ಯಾಧಿಕಾರಿಗಳಾದ ರೇಣುಕಾ ದೇಸಾಯಿ, ಇ ಓ ವಿಶ್ವನಾಥ್, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಪ್ರಧೀಪ್, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಬಿ. ಚನ್ನಬಸಪ್ಪ, ಸೇರಿದಂತೆ ತಾಲೂಕಿನ ವಿವಿಧ ಕನ್ನಡ ಪರ ಸಂಘಟನೆಗಳ ಕಾರ್ಯಕರ್ಯರು, ಜನಪ್ರತಿನಿಧಿಗಳು, ಶಾಲಾ ಶಿಕ್ಷಕರುಗಳು, ಶಾಲಾ ವಿದ್ಯಾರ್ಥಿಗಳು, ಆರಕ್ಷಕ ಇಲಾಖೆಯವರು ಸೇರಿದಂತೆ ತಾಲೂಕಿನ ಅನೇಕ ಸಾರ್ವಜನಿಕರು ಮೆರವಣಿಗೆಯಲ್ಲಿ ಇದ್ದರು.

ಮಂಡ್ಯದಲ್ಲಿ ಡಿಸೆಂಬರ್ 20 ರಿಂದ 22 ವರೆಗೆ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ರಾಜ್ಯದ ಕನ್ನಡ ಜ್ಯೋತಿ ಹೊತ್ತ ಕನ್ನಡ ರಥಯಾತ್ರೆ ಮಂಗಳವಾರ ತಾಲೂಕಿಗೆ ಆಗಮಿಸಿತು.

ನೌಕರರ ಸಂಘಕ್ಕೆ ನಿರ್ದೇಶಕರ ಆಯ್ಕೆ

ಹೊಸದುರ್ಗ: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಹೊಸದುರ್ಗ ತಾಲೂಕು ಶಾಖೆಗೆ ನೂತನ ನಿರ್ದೇಶಕರ 34 ಸ್ಥಾನಗಳ ಆಯ್ಕೆಗೆ ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾದವರ ವಿವರ ಇಂತಿದೆ. ಪಶುವೈದ್ಯ ಇಲಾಖೆಯಿಂದ ಡಾ.ಶಿವಪ್ಪ, ಪುಟ್ಟಸ್ವಾಮಿ, ಕಂದಾಯ ಇಲಾಖೆಯಿಂದ ಪಿ. ಅಭಿಲಾಷ, ಎಲ್.ಉಮೇಶ, ಪಂಚಾಯತ್ ರಾಜ್ ಇಲಾಖೆಯಿಂದ ವಿ.ಚೇತನಕುಮಾರ್, ಪ್ರಾಥಮಿಕ ಶಾಲೆ ವಿಭಾಗದಿಂದ ಎಂ.ಎಲ್.ಅನಂತಮೂರ್ತಿ, ಟಿ.ತಿಪ್ಪಯ್ಯ, ಜಿ.ಬಸವರಾಜ್, ಎಸ್.ಮಲ್ಲೇಶಪ್ಪ, ಪ್ರೌಢಶಾಲೆ ವಿಭಾಗದಿಂದ ಎಂ.ಆರ್.ಶಾಂತಪ್ಪ, ಎನ್.ಟಿ.ದಿವಾಕರ್, ಪದವಿಪೂರ್ವ ಕಾಲೇಜು ವಿಭಾಗದಿಂದ ಪಿ.ನಾಗರಾಜ್, ಬಿಸಿಎಂ ಇಲಾಖೆಯಿಂದ ಪವನಕುಮಾರ್, ಆರೋಗ್ಯ ಇಲಾಖೆಯಿಂದ ಎಂ.ಸಿದ್ದರಾಮಪ್ಪ, ಬಿ.ಡಿ.ರಾಮಯ್ಯ, ಎ.ವಿ.ಆನಂದ್, ನ್ಯಾಯಾಂಗ ಇಲಾಖೆಯಿಂದ ಶಾಮಸುಂದರ್ ಚುನಾವಣೆಯ ಮೂಲಕ ಆಯ್ಕೆಯಾಗಿದ್ದಾರೆ. ಭೂದಾಖಲೆಗಳ ಇಲಾಖೆ, ಭೂಮಾಪಕರಾದ ಪಿ. ಮೋಹನಕುಮಾರ್, ರಾಜ್, ಎಂ.ಜಿ.ಪ್ರವೀಣಕುಮಾರ್, ಪಂಚಾಯತಿ ಅಭಿವೃದ್ಧಿ ಇಲಾಖೆಯಿಂದ ಮಧುರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆರ್.ಶಾಂತಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಿ.ನವೀನಕುಮಾರ್, ಇಲಾಖೆ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚಿತ್ತ ವಿಹಾರ

ತಾಳ್ಮೆ ಇರಲಿ ಬದುಕಿನಲಿ

ಪ್ರಸ್ತುತ ಕಾಲಘಟ್ಟದ ಬದುಕಿನಲ್ಲಿ ಎಲ್ಲದಕ್ಕೂ ಅವಸರ. ನಮ್ಮ ಬೇಕಿಲ್ಲದ ಪ್ರಯತ್ನಗಳಿಂದಾಗಿ ಸಮಯವೇ ಸಾಕಾಗುತ್ತಿಲ್ಲ ಎಂಬ ಕೊರಗು ಕಾಡುತ್ತಲೇ ಇರುತ್ತದೆ. ಸಂಗತವೆನಿಸದ ಇಂತಹ ಬದುಕಿನ ಶೈಲಿಯಿಂದಾಗಿ ನಮಗೆ ತೀರ ಅಗತ್ಯವಾದ ತಾಳ್ಮೆ ನಮ್ಮಿಂದ ದೂರ ಸರಿಯುತ್ತಿದೆ. ಎಲ್ಲದಕ್ಕೂ ಅವಸರ. ಇಂತಹದೊಂದು ಅವಸರದ ನಮ್ಮ ಸ್ವಭಾವದಿಂದಾಗಿ ನಾವು ನಮ್ಮ ಬದುಕಿನಲ್ಲಿ ಘಟಿಸುವ ನೂರೆಂಟು ಸಂಗತಿಗಳಿಗೆ ಪ್ರತಿಕ್ರಿಯಿಸುವುದು ಕೂಡ ಒತ್ತಡದಲ್ಲಿಯೇ. ಮನೆಯ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ನೋಡಿಕೊಳ್ಳಲು ತಾನು ಸಾಕಿದ್ದ ಮುಂಗುಸಿಗೆ ಮಗುವನ್ನು ನೋಡಿಕೊಳ್ಳಲು ಹೇಳಿ ನೀರು ತರಲು ಮಹಿಳೆಯ ಹೊರಗೆ ಹೋಗುತ್ತಾಳೆ. ನೀರು ತುಂಬಿಕೊಂಡು ಮನೆಗೆ ಮರಳಿದ ಮಹಿಳೆ ಬಾಗಿಲ ಬಳಿ ಇದ್ದ ಮುಂಗುಸಿಯ ಬಾಯಿ ರಕ್ತಸಿಕ್ತವಾಗಿದ್ದನ್ನು ಗಮನಿಸುತ್ತಾಳೆ. ತನ್ನ ಮಗುವನ್ನು ಮುಂಗುಸಿಯೇ ಕೊಂದಿದೆ ಎಂದು ಅವರಸರದಲ್ಲಿಯೇ ತಿರ್ಮಾನಿಸುತ್ತಾಳೆ. ಹಿಂದು ಮುಂದು ನೋಡದೆ ಸಿಟ್ಟಿನಿಂದ ಅಲ್ಲಿಯೇ ಇದ್ದ ಕೋಲನ್ನು ತೆಗೆದುಕೊಂಡು ಮುಂಗುಸಿಯನ್ನು ಹೊಡೆದು ಸಾಯಿಸುತ್ತಾಳೆ. ಆತುರಾತುರವಾಗಿ ಮನೆಯ ಒಳಗೆ ಹೋದ ಅವಳಿಗೆ ಕಂಡ ಚಿತ್ರಣವೇ ಬೇರೆ. ಮಗು ತೊಟ್ಟಿಲಲ್ಲಿ ನಗುತ್ತ ಆಡುತ್ತಲಿತ್ತು. ತೊಟ್ಟಿಲಿನ ಪಕ್ಕದಲ್ಲಿಯೆ ಹಾವೊಂದು ಸತ್ತು ಬಿದ್ದಿತ್ತು. ಹಾವಿನೊಡನೆ ಹೋರಾಟ ಮಾಡಿ ಮಗುವನ್ನು ಉಳಿಸಿದ ಮುಂಗುಸಿಯ ಪ್ರಯತ್ನ ಗಮನಕ್ಕೆ ಬರುತ್ತದೆ. ಮಹಿಳೆಗೆ ತಾನು ಅವಸರದಲ್ಲಿ ತಗೆದುಕೊಂಡ ತೀರ್ಮಾನದಿಂದ ಘಟಿಸಿದ ಅವಘಡಕ್ಕೆ ಮರಗುತ್ತಾಳೆಯಾದರೂ ಮಗುವನ್ನು ರಕ್ಷಿಸಿದ ಮುಂಗುಸಿ ಪ್ರಾಣ ತೆತ್ತಾಗಿರುತ್ತದೆ. ತಾಳಿದವನು ಬಾಳಿಯಾನುಎನ್ನುವ ಜನಪದರ ಅನುಭವದ ನುಡಿ. ಬದುಕಿನಲ್ಲಿ ನಾವು ಎದುರುಗೊಳ್ಳುವ ಎಲ್ಲ ಸಂಗತಿಗಳನ್ನು ತಾಳ್ಮೆಯಿಂದ ಅವಲೋಕಿಸಬೇಕು. ವಿಶ್ಲೇಷಿಸಬೇಕು. ವಿಶ್ಲಷೇಣೆ ತುಲನೆಯ ನೆಲೆಯಿಂದ ಮೌಲ್ಯಮಾಪನ ಮಾಡಬೇಕು. ವಿನಯಪೂರ್ವಕವಾಗಿರಬೇಕು. ತಾಳ್ಮೆಯಿಂದ ಮುಂದಡಿಯಿಡಬೇಕು. ಇಂತಹ ನಮ್ಮ ನಡೆ ಅನಗತ್ಯ ತವಕ ತಲ್ಲಣಗಳಿಂದ ದೂರಕ್ಕೆ ಸರಿಸಿ ಬದುಕಿನ ಸಂತಸದತ್ತ ಕೈ ಹಿಡಿದು ಕೊಂಡೊಯ್ಯುತ್ತದೆ.

• ಮಹಾದೇವ ಬಸರಕೋಡ

ಯುವ ಕಾವ್ಯ

ಸಮತೋಲನ

ಗಂಡು ಹೆಣ್ಣು ಇಬ್ಬರೂ
ಸಾಗಬೇಕು ಸಮವಾಗಿ
ಆದ ಮೇಲೆ ಮದುವೆ
ಎರಡು ಹಳಿಯ ಮೇಲೆ
ಓಡುವ ಹಾಗೆ ರೈಲ್ವೆ

• ಮಹಾಂತೇಶ ಮಾಗನೂರ

ಬೆಳಕಿನ ಕವಿತೆಗಳು

ಬದುಕನ್ನೇ
ಸುಡಬಹುದು ಇಡೀ
ಬೆಳಕಾಗಬೇಕಿದ್ದ
ಒಂದು ಸಣ್ಣ ಕಿಡಿ
ಬತ್ತಿಯಿಡುವ ಮುನ್ನ
ಮಾತು ನೆನಪಿನಲ್ಲಿಡಿ !!
ನೂರು ದೀಪದ ಬೆಳಕ ಕಂಡೆ
ಪ್ರಿಯೆ ನಿನ್ನ ಕಣ್ಣ ನೋಟದಲ್ಲಿ

ಹಚ್ಚಬೇಕಿಲ್ಲ ಈಗ ಹೆಚ್ಚು ಹಣತೆ
ನಿತ್ಯ ದೀಪಾವಳಿ ನನಗೆ ನೀನಿದ್ದಲ್ಲಿ !
ತಾನು ಹೊತ್ತಿ ಉರಿದು
ಬೆಳಕನಿತ್ತರೂ ಊರಿಗೆಲ್ಲ
ದಾರಿ ತೋರುವರಿಲ್ಲ ದೀಪಕ್ಕೆ
ಕಾಲಬುಡದಲ್ಲೇ ಕತ್ತಲು
ಯಾವ ಪಾಪಕ್ಕೆ.?
ಗೆಳತಿ ನೀ ಬಂದೆ ಬಾಳಲ್ಲಿ
ಮೂಡಿತ್ತು ಹೊಸ ಮಿಂಚು
ಬೆಳಕಾಗುವಷ್ಟರಲ್ಲಿ ಬರಸಿಡಿಲು
ಬದುಕು ಸುಟ್ಟು ಕರಕಲು
ತಿಳಿಯಲಿಲ್ಲ ನಿನ್ನ ಸಂಚು..

• ಸತೀಶ್ ಕುಲಾಲ್ ನೆತ್ರಕೆರೆ, ದುಬೈ

ಆರೋಗ್ಯಕ್ಕೆ ಬಾಳೆಹಣ್ಣು

- ಬಾಳೆಹಣ್ಣಿನ ಸೇವನೆ ಒತ್ತಡ ನಿವಾರಕ.
- ಆಹಾರ ಸೇವನೆಯ ಏರುಪೇರು ಅಂದರೆ ಹೊಟ್ಟೆ ನೋವು, ಹೊಟ್ಟೆಯ ಹುಣ್ಣು, ಅಜೀರ್ಣ, ವಾಂತಿ ಇಂತಹ ತೊಂದರೆಗೆ ಪರಿಹಾರ ಬಾಳೆಹಣ್ಣು.
- ಮಹಿಳೆಯರು ಋತುಸ್ರಾವ, ಗರ್ಭಧಾರಣೆ ಇತರೆ ಹಲವಾರು ದೈಹಿಕ ಶ್ರಮ ಮತ್ತು ನೋವುಗಳಿಗೆ ಔಷಧಿಯಂತೆ ಕಾರ್ಯನಿರ್ವಹಿಸುತ್ತದೆ.
- ಇದರಲ್ಲಿನ ಎಲೆಕ್ಟ್ರೋಲೈಟ್ಸ್ ಅಜೀರ್ಣ ಸಮಸ್ಯೆ ಹೋಗಲಾಡಿಸಿ ಮಲಬದ್ಧತೆ ನಿವಾರಿಸುತ್ತವೆ.
- ಜ್ಞಾಪಕ ಶಕ್ತಿ ಹೆಚ್ಚಿಸಿ ಮರೆಗುಳಿ ತಡೆಯಲು ಬಾಳೆಹಣ್ಣು ಸಹಾಯಕ.
- ಬಿ-6 ವಿಟಮಿನ್ ಮತ್ತು ಮೆಗ್ನೀಷಿಯಂ ಸ್ನಾಯುಗಳನ್ನು ಸಡಿಲಗೊಳಿಸುವ ಮೂಲಕ ನಿದ್ರೆಗೆ ಸಹಾಯಕ.
- ಕ್ಯಾರೋಟಿನೈಡ್, ವಿಟಮಿನ್ ಎ ಮುಂತಾದ ಪೋಷಕಾಂಶಗಳು ಕಣ್ಣಿನ ದೃಷ್ಟಿ ವೃದ್ಧಿಸಿ ಕುರುಡುತನ ತಪ್ಪಿಸುತ್ತದೆ.
- ಇದರಲ್ಲಿನ ಮೆಗ್ನೀಷಿಯಂ ಅಂಶವು ಮೈಗ್ರೇನ್ ತಲೆನೋವನ್ನು ಕಡಿಮೆಗೊಳಿಸುತ್ತದೆ.

• ಡಾ.ಸುಧಾಕರ ಜೆ.ಲಕ್ಕವಳ್ಳಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

Sapna Since 1967

ಕನ್ನಡ ರಾಜ್ಯೋತ್ಸವ ಆಚರಣೆಯ ಸಮಾರಂಭಕ್ಕೆ ಬರುವವರಿಗೆ ಉಚಿತ ಕನ್ನಡ ಪುಸ್ತಕ ನೀಡುವ ಮೂಲಕ, ಅವರಲ್ಲಿ ಓದುವ ಅಭಿರುಚಿ ಬೆಳೆಸುವ ಅಪರೂಪದ ಪ್ರಯತ್ನವನ್ನು ಬೆಂಗಳೂರಿನ ಸಪ್ನ ಬುಕ್‌ಹೌಸ್ ಮಾಡುತ್ತಿದೆ.



ಉಚಿತ ಪುಸ್ತಕ ಯೋಜನೆ!

ವಿಶಿಷ್ಟ ರೀತಿಯಲ್ಲಿ ರಾಜ್ಯೋತ್ಸವ ಆಚರಣೆ

ನಮ್ಮ ಜನರಲ್ಲಿ ಕನ್ನಡ ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಬೆಳೆಸಲು ನಾವೇನು ಮಾಡಬಹುದು? ಕಡಿಮೆಯಾಗುತ್ತಿರುವ ಪುಸ್ತಕ ಸಂಸ್ಕೃತಿಯನ್ನು ಮತ್ತೆ ಪುನರುಜ್ಜೀವನಗೊಳಿಸಲು ಯಾವ ಹೆಜ್ಜೆ ಇಡಬಹುದು? ಇದನ್ನು ಯೋಚಿಸಿದ ಬೆಂಗಳೂರಿನ ಸಪ್ನ ಬುಕ್ ಹೌಸ್ ಈಗ ಒಂದು ಹೊಸ ಅಭಿಯಾನವನ್ನೇ ನಡೆಸಲು ಸನ್ನದ್ಧವಾಗಿದೆ.

ಅದೇ, ಉಚಿತ ಪುಸ್ತಕ ಯೋಜನೆ! ಕನ್ನಡ ರಾಜ್ಯೋತ್ಸವದಂದು ಸಪ್ನ ಬುಕ್ ಹೌಸ್ ಆವರಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಸಿದ್ಧತೆ ನಡೆದಿದೆ; ಈ ಸಮಾರಂಭದಲ್ಲಿ ಹಲವು ಗಣ್ಯರು ಭಾಗವಹಿಸುತ್ತಾರೆ ಮತ್ತು ಇತರ ಕಾರ್ಯಕ್ರಮಗಳೂ ಇವೆ. ಈ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಉಚಿತವಾಗಿ ಪುಸ್ತಕವನ್ನು ನೀಡುವ ಅಭಿಯಾನವನ್ನು ಸಪ್ನ ಬುಕ್ ಹೌಸ್ ಪ್ರಕಟಿಸಿದೆ!

ಹೌದು! ಕನ್ನಡ ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವವರಿಗೆ ಉಚಿತ ಕನ್ನಡ ಪುಸ್ತಕ! ಇದು ನಿಜಕ್ಕೂ ಆಕರ್ಷಕ ಮತ್ತು ಅಭಿನಂದನಾರ್ಹ. ಪುಸ್ತಕ ಓದುವ ಅಭಿರುಚಿ ಬೆಳೆಯಲು ಮನೆಯಲ್ಲಿ ಪುಸ್ತಕಗಳಿರಬೇಕು; ಓದುವ ಅಭಿರುಚಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ, ಪುಸ್ತಕದ ಅಂಗಡಿಗಳೇ ಓದುಗರಿಗೆ ಉಚಿತವಾಗಿ ಪುಸ್ತಕ ನೀಡಿದರೆ ಹೇಗಿತ್ತದೆ ಎಂಬ ಯೋಚನೆಯಿಂದ ಆರಂಭಿಸಿರುವ 'ಉಚಿತ ಪುಸ್ತಕ ಯೋಜನೆ'ಯು ಇಂದು ಎಲ್ಲೆಡೆ ಸುದ್ದಿ ಮಾಡುತ್ತಿದೆ. ನಾಡಿನ ಪ್ರಖ್ಯಾತ ಪ್ರಕಾಶನ ಸಂಸ್ಥೆಯಾಗಿರುವ, ಪ್ರತಿ ವರ್ಷ ನೂರಕ್ಕೂ ಅಧಿಕ ಕನ್ನಡ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಸಪ್ನ ಬುಕ್ ಹೌಸ್, ಈ ವರ್ಷದ ಕನ್ನಡ ರಾಜ್ಯೋತ್ಸವದ ದಿನ, ಅಂದರೆ ನವೆಂಬರ್ 1 ರಂದು, ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವವರಿಗೆ ಒಂದೊಂದು ಉಚಿತ ಪುಸ್ತಕವನ್ನು ನೀಡುವುದಾಗಿ ಘೋಷಿಸಿದ್ದು, ಆ ಮೂಲಕ ಅಪಾರ ಕನ್ನಡಾಭಿಮಾನವನ್ನೂ ತೋರಿದೆ. 'ಇಂತಹದೊಂದು ಅಪರೂಪದ ಅಭಿಯಾನದ ಮೂಲಕ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಸ್ಫೂರ್ತಿ ಹೇಗೆ ಬಂತು?' ಎಂದು ಕೇಳಿದಾಗ, ಸಪ್ನ ಬುಕ್ ಹೌಸ್‌ನ ಕನ್ನಡ ವಿಭಾಗದ ಮುಖ್ಯಸ್ಥರಾದ ಆರ್.ದೊಡ್ಡೇಗೌಡ ಅವರು ಅರ್ಥಪೂರ್ಣ ಉತ್ತರ ನೀಡಿದರು. 'ಕನ್ನಡಿಗರನ್ನು ಹೆಚ್ಚು ಹೆಚ್ಚು ತಲುಪಬೇಕು ಎಂಬ ಅಭಿಲಾಷೆಯಿಂದ, ಉಚಿತ ಪುಸ್ತಕ ಯೋಜನೆಯ ಮೂಲಕ ಅವರನ್ನು ಗೌರವಿಸುವ ಅಭಿಯಾನದ ಮೂಲ ರೂವಾರಿ ನಿತಿನ್ ಷಾ ಅವರು. ಸಪ್ನ ಬುಕ್ ಹೌಸ್‌ನ ಮುಖ್ಯಸ್ಥರಾದ ನಿತಿನ್ ಷಾ ಅವರಿಗೆ ಕನ್ನಡ, ಕನ್ನಡಿಗರು ಮತ್ತು ಕನ್ನಡ ಪುಸ್ತಕಗಳು ಎಂದರೆ ಅಪಾರ ಅಭಿಮಾನ; ಪ್ರತಿ ವರ್ಷ ನೂರಕ್ಕೂ ಹೆಚ್ಚು ಕನ್ನಡ ಪುಸ್ತಕ ಪ್ರಕಟಿಸುವ ಸಾಹಸಕ್ಕೆ ಅವರ ಬೆಂಬಲವಿದೆ. ರಾಜ್ಯೋತ್ಸವದಂದು ಉಚಿತ ಪುಸ್ತಕ ನೀಡುವ ವಿಚಾರವನ್ನು ನಾನು ಪ್ರಸ್ತಾಪಿಸಿದಾಗ, ಅದಕ್ಕೆ ಸೈ ಎಂದು, ಸೂಕ್ತ ವ್ಯವಸ್ಥೆ ಮಾಡಿದ ನಿತಿನ್ ಷಾ ಅವರ ಬೆಂಬಲ ಅಪಾರ' ಎಂದರು ಆರ್. ದೊಡ್ಡೇಗೌಡ.

ನಗೆ ಹೊನಲು ಕಾರ್ಯಕ್ರಮ

ಇದೇ ಸಂದರ್ಭದಲ್ಲಿ ಕನ್ನಡದ ಖ್ಯಾತ ಹಾಸ್ಯ ಸಾಹಿತಿಗಳಾದ ಎಂ.ಎಸ್.ನರಸಿಂಹ ಮೂರ್ತಿ ಮತ್ತು ವೈ.ವಿ.ಗುಂಡೂರಾವ್ ಅವರಿಂದ ಹರಟೆ ಕಾರ್ಯಕ್ರಮ, ಕೃತ್ತಿಕಾ ಶ್ರೀನಿವಾಸ್ ಅವರಿಂದ ಕನ್ನಡ ಗೀತೆಗಳ ಗಾಯನವಿದೆ. ಜನಪದ ಗಾಯಕ ಡಾ. ಅಪ್ಪಗೆರೆ ತಿಮ್ಮರಾಜು ಅವರು ಜನಪದ ಗೀತೆಗಳನ್ನೂ ಹಾಡಿ, ಕನ್ನಡ ರಾಜ್ಯೋತ್ಸವಕ್ಕೆ ಕಳೆಕಟ್ಟಲಿದ್ದಾರೆ.

ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಲವು ಸಾಹಿತಿಗಳು, ಚಿಂತಕರು ಭಾಗವಹಿಸಲಿದ್ದಾರೆ. ಡಾ. ಹಂಪನಾ, ಡಾ. ದೊಡ್ಡರಂಗೇಗೌಡ, ಪ್ರೊ. ಮಲ್ಲೇಪುರಂ ವೆಂಕಟೇಶ, ವಿಶ್ವೇಶ್ವರ ಭಟ್, ಡಾ. ಟಿ.ಆರ್. ಅನಂತರಾಮು, ಬಿ.ಆರ್.ಲಕ್ಷ್ಮಣರಾವ್, ರಾನಂ. ಚಂದ್ರಶೇಖರ, ಡಾ. ಡಿ.ವಿ.ಗುರುಪ್ರಸಾದ್, ಜೋಗಿ, ಎಸ್.ಕೆ. ಉಮೇಶ್, ಡಾ. ಹಿ.ಚಿ.ಬೋರಲಿಂಗಯ್ಯ, ಡಾ. ಎಚ್. ಎಲ್. ಪುಷ್ಪ, ಡಾ. ವಸುಂಧರಾ ಭೂಪತಿ, ಡಾ. ಪದ್ಮಿನಿ ನಾಗರಾಜ್ ಸೇರಿದಂತೆ ಹಲವು ಗಣ್ಯರು ಈ ರಾಜ್ಯೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಸಪ್ನ ಬುಕ್ ಹೌಸ್‌ಗೆ ಈಗ 57 ವರ್ಷ ತುಂಬಿದೆ. ಕನ್ನಡ ಪುಸ್ತಕಗಳ ಪ್ರಕಟಣೆಗೆ ಮೊದಲಿನಿಂದಲೂ ಆಸಕ್ತಿ, ಪ್ರೋತ್ಸಾಹ ನೀಡುತ್ತಾ ಬಂದಿರುವ ಸಪ್ನ ಬುಕ್ ಹೌಸ್, ಕನ್ನಡದ ಖ್ಯಾತ ಸಾಹಿತಿಗಳ ಪುಸ್ತಕಗಳನ್ನು ಹೊರತಂದಿದೆ. ಅದರಲ್ಲೂ ಮುಖ್ಯವಾಗಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತರ ಎಲ್ಲಾ ಪ್ರಮುಖ ಕಾದಂಬರಿಗಳನ್ನು ಹೊರತಂದು, ಸುಲಭ ಬೆಲೆಯಲ್ಲಿ ಓದುಗರಿಗೆ ನೀಡಿರುವುದು ವಿಶೇಷ. ಇಂದಿಗೂ ಶಿವರಾಮ ಕಾರಂತರ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿ 'ಮೂಕಜ್ಜಿಯ ಕನಸುಗಳು' ಜನಮೆಚ್ಚುಗೆ ಗಳಿಸಿದೆ ಮತ್ತು ನಿರಂತರವಾಗಿ ಕನ್ನಡದ ಓದುಗರು ಆ ಕಾದಂಬರಿಯನ್ನು ಖರೀದಿಸುತ್ತಿದ್ದಾರೆ ಎಂದು ಸಪ್ನ ಪುಸ್ತಕ ಮಳಿಗೆಯ ಆರ್. ದೊಡ್ಡೇಗೌಡ ಅವರು ಹೇಳಿದರು. ಸದಭಿರುಚಿಯ ಸಾಹಿತ್ಯವನ್ನು ಕನ್ನಡಿಗರಿಗೆ ನೀಡಲು ಸಪ್ನ ಬುಕ್ ಹೌಸ್ ಸದಾ ಮುಂದು.

ಉದ್ಘಾಟನೆ ಸುಧಾಮೂರ್ತಿ

ಬೆಂಗಳೂರಿನ ಗಾಂಧಿನಗರದ ಸಪ್ನ ಬುಕ್ ಹೌಸ್ ಆವರಣದಲ್ಲಿ ನವೆಂಬರ್ 1ರಂದು ಏರ್ಪಡಿಸಲಾಗಿದ್ದು, ಆ ಸಮಾರಂಭಕ್ಕೆ ನಾಡಿನ ಪ್ರಮುಖ ಸಾಹಿತಿಗಳನ್ನು, ಕಲಾವಿದರನ್ನು ಆಹ್ವಾನಿಸಲಾಗಿದೆ. ಈ ಬಾರಿಯ ಕನ್ನಡ ರಾಜ್ಯೋತ್ಸವವನ್ನು ನವೆಂಬರ್ 1ರಂದು ಶುಕ್ರವಾರದಂದು, ಸಪ್ನ ಪುಸ್ತಕ ಮಳಿಗೆಯಲ್ಲಿ ಉದ್ಘಾಟಿಸಲಿರುವವರು, ರಾಜ್ಯ ಸಭಾ ಸದಸ್ಯೆ ಮತ್ತು ಲೇಖಕಿ. ಡಾ. ಸುಧಾಮೂರ್ತಿಯವರು. ಇದೇ ಸಮಯದಲ್ಲಿ ಚಿತ್ರ ನಟಿ ಕುಮಾರಿ ಅಂಕಿತಾ ಅಮರ್ ಅವರು ಕನ್ನಡ ಜ್ಯೋತಿಯನ್ನು ಬೆಳಗಲಿದ್ದಾರೆ. ಹಿರಿಯ ಕವಿ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು ಕನ್ನಡ ಪುಸ್ತಕಗಳ ಉಚಿತ ವಿತರಣೆ ಮಾಡಲಿದ್ದಾರೆ. ಲಿಟಲ್ ಫ್ಲವರ್ ಪ್ರೌಢಶಾಲೆ, ಶ್ರೀರಾಮಪುರ, ಬೆಂಗಳೂರು ಉತ್ತರ ವಲಯ -2ರ ಶಾಲಾ ಮಕ್ಕಳಿಂದ ಡೊಳ್ಳು ಕುಣಿತ ಮತ್ತು ವಾದ್ಯ ವೃಂದದವರಿಂದ ಗೌರವ ಅಭಿನಂದನೆ ಇರುತ್ತದೆ.

ಭೂದೇವಿಯ ದೀಪಗಳ ಹಬ್ಬ

• ವಿದ್ಯಾಶಂಕರ ಶರ್ಮ

ವಿಷ್ಣುವಿನ ಎಂಟನೇ ಅವತಾರವಾದ ಶ್ರೀ ಕೃಷ್ಣನು ಹಲವು ಅಸುರರನ್ನು ಸಂಹರಿಸಿದ್ದಾನೆ; ಅಂತಹವರಲ್ಲಿ ನರಕಾಸುರನೂ ಒಬ್ಬನು. ಒಮ್ಮೆ ಇಂದ್ರನು ಶ್ರೀ ಕೃಷ್ಣನ ಬಳಿಗೆ ಬಂದು, ನರಕಾಸುರ ಎಂಬಾತ ಬಹಳ ಪೀಡೆ ಕೊಡುತ್ತಿರುವುದನ್ನು ಹೇಳಿಕೊಳ್ಳುತ್ತಾನೆ. ಅವನ ದೂರಿನ ಪಟ್ಟಿ ತುಂಬ ಉದ್ದವಾಗಿರುತ್ತದೆ. ನರಕಾಸುರನು ಅನೇಕ ರಾಜರ ಹೆಣ್ಣು ಮಕ್ಕಳನ್ನು ಅಪಹರಿಸಿ ತನ್ನ ಅಂತಃಪುರದಲ್ಲಿ ಇಟ್ಟುಕೊಂಡಿದ್ದಾನೆ. ವರುಣನ ಮಳೆ ಬರುವ ಛತ್ರಿಯನ್ನು ಅಪಹರಿಸಿದ್ದಾನೆ. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ತಾಯಿ ಅದಿತಿಯ ದಿವ್ಯ ಕುಂಡಲಗಳನ್ನು ಅಪಹರಿಸಿದ್ದಾನೆ. ಈಗ ತನ್ನ ಐರಾವತ ಗಜವೂ ಬೇಕೆಂದು ಆಸೆ ಪಟ್ಟಿದ್ದಾನೆ. ಹೀಗೆ ಇಂದ್ರನು ಹೇಳಿದಾಗ, ಶ್ರೀ ಕೃಷ್ಣನು ಇಂದ್ರನನ್ನು ಸಂತೈಸಿ ತಾನು ನರಕಾಸುರನನ್ನು ಸಂಹರಿಸುತ್ತೇನೆ ಎಂದು ಭರವಸೆ ನೀಡುತ್ತಾನೆ.

ಮುಂದೆ ಶ್ರೀ ಕೃಷ್ಣನು ನರಕಾಸುರನ ಪಟ್ಟಣವಾದ ಪ್ರಾಗ್‌ಜ್ಯೋತಿಷಪುರವಕ್ಕೆ ಪಯಣ ಬೆಳೆಸಿದನು. ಆ ನಗರಕ್ಕೆ ಮುರ ಎಂಭಾತನು ರಕ್ಷಣೆ ಕೊಡುತ್ತಿದ್ದನು. ಶ್ರೀ ಕೃಷ್ಣನು ಸುದರ್ಶನ ಚಕ್ರದಿಂದ ಅವನನ್ನು ಸಂಹರಿಸಿದನು. ಮುರನ ಏಳು ಸಾವಿರ ಮಕ್ಕಳು ಸಹ ಸುದರ್ಶನ ಚಕ್ರದ ಬೆಂಕಿಯಲ್ಲಿ ಬೆಂದು ಹೋದರು. ನಂತರ ನರಕಾಸುರ ಮತ್ತು ಶ್ರೀ ಕೃಷ್ಣನ ನಡುವೆ ಭೀಕರ ಕಾಳಗ ನೆಡೆದು, ನರಕಾಸುರನು ಶ್ರೀ ಕೃಷ್ಣನ ಚಕ್ರಾಯುಧದಿಂದ ಹತನಾಗುತ್ತಾನೆ. ಆಗ ಭೂದೇವಿಯು ಅದಿತಿಯ ಎರಡು ದಿವ್ಯ ಕುಂಡಲಗಳನ್ನು ತಂದು ಶ್ರೀ ಕೃಷ್ಣನನ್ನು ಸ್ತುತಿಸುತ್ತಾಳೆ. ವರಹಾವತಾರದಲ್ಲಿ ನೀನು ನನ್ನನ್ನು ಎತ್ತಿದಾಗ, ನಿನ್ನ ಸ್ಪರ್ಶದಿಂದ ನರಕಾಸುರನು ಜನಿಸಿದನು. ಈಗ ನೀನೇ ಅವನನ್ನು ಕಿತ್ತುಕೊಂಡೆ. ನೀನೇ ಜಗದ ಒಡೆಯ, ಜಗಕ್ಕೆ ನಿನ್ನಲ್ಲಿ ಜನ್ಮ, ನಿನ್ನಲ್ಲಿಯೇ ಲಯ.' ಭೂದೇವಿಯು ಈ ದಿವ್ಯ ಕುಂಡಲಗಳ ಪ್ರಭೆಯಿಂದ ಜಗವನ್ನು ಬೆಳಗಿದ್ದರಿಂದ ದೀಪಗಳ ಹಬ್ಬವನ್ನು ದೀಪಾವಳಿ ಎಂದು ಆಚರಿಸುವ ಪದ್ಧತಿ ಬಂತು. ನಮ್ಮೊಳಗಿನ ಅಜ್ಞಾನವನ್ನು ದೀಪಗಳ ಬೆಳಕಿನಿಂದ ದೂರವಾಗಿಸುವ ದೀಪಾವಳಿಯ ಮೊದಲನೆಯ ದಿನ ನರಕ ಚತುರ್ದಶಿ ಎಂದು ಆಚರಿಸುತ್ತಾರೆ. ಅಂದು ಬೆಳಗಿನ ಜಾವ ಅಭ್ಯಂಜನ ಸ್ನಾನ ಮಾಡಿ, ಶ್ರೀ ಕೃಷ್ಣನ ಧ್ಯಾನ ಮಾಡುವುದು ಶ್ರೇಯಸ್ಕರ ಎಂದು ಹೇಳಲಾಗಿದೆ. ನರಕ ಚತುರ್ದಶಿ, ದೀಪಾವಳಿಯ ಕುರಿತು ಹಲವು ಕಥೆಗಳಿದ್ದು, ಅವುಗಳಲ್ಲಿ ಒಂದು ಕಥೆಯಾದ ಮೇಲಿನ ಕಥೆಯು, ಪುರಾತನ ಕಾಲದಲ್ಲಿ ನಡೆದಿರಬಹುದಾದ ವಿದ್ಯಮಾನಗಳನ್ನು ಸೂಚಿಸುತ್ತದೆ ಮತ್ತು ಹಬ್ಬದ ಆಚರಣೆಯು ಆರಂಭಗೊಂಡ ಹಿನ್ನೆಲೆಯನ್ನೂ ನೀಡುತ್ತದೆ.

ಹಂಡೆ ಸಿಂಗಾರಕ್ಕೆ ಸಿಂಡ್ಲೆಬಳ್ಳಿ

• ಸುರೇಂದ್ರ ಪೈ

ನಾಳೆ ಬೆಳಗಾದರೆ ದೀಪಾವಳಿ, ಎಣ್ಣೆ ಸ್ನಾನ. ದೀಪಾವಳಿ ಎಣ್ಣೆ ಸ್ನಾನ ಮಾಡುವ ಹಂಡೆಗೆ ಕಟ್ಟುವ ಸಿಂಡ್ಲೆಕಾಯಿಯೂ ಮುಖ್ಯ. ಇಂದು ಸಂಜೆ ನೀರು ತುಂಬುತ್ತಾರೆ. ದೀಪಾವಳಿ ಹಬ್ಬ ಪ್ರಾರಂಭವಾಗುವುದೇ ಸ್ನಾನದ ಹಂಡೆಗೆ ನೀರು ತುಂಬಿಸುವುದರಿಂದ. ಹಂಡೆಗೆ ನೀರನ್ನು ತುಂಬಿಸುವ ಮೊದಲು ಹಂಡೆಯನ್ನು ಶುಚಿಗೊಳಿಸಿ ಅದನ್ನು 'ಸಿಂಡ್ಲೆಕಾಯಿ ಬಳ್ಳಿ' ಹಾಗೂ ಹೂವಿನ ಹಾರದಿಂದ ಸಿಂಗರಿಸುತ್ತಾರೆ. ಅದರೊಂದಿಗೆ ನೀರು ತುಂಬುವ ಕೊಡ ಹಾಗೂ ಕಲಶಕ್ಕೂ ಸಿಂಡ್ಲೆಕಾಯಿ ಬಳ್ಳಿಯನ್ನು ಕಟ್ಟಿ ಸಿಂಗರಿಸಿ ಪೂಜಿಸುವುದನ್ನು ಮಲೆನಾಡಿನ ಜಿಲ್ಲೆಗಳಲ್ಲಿ ಕಾಣುತ್ತೇವೆ. ಇಂದಿನ ಬಹುತೇಕರು ಸಿಂಡ್ಲೆಕಾಯಿ ಎಂಬ ಹೆಸರನ್ನೇ ಕೇಳಿರಲಿಕ್ಕಿಲ್ಲ ಅನಿಸುತ್ತದೆ. ಇದನ್ನು ಹಿಂಡ್ಲಕಾಯಿ, ಹಿಂಡ್ಲಚ್ಚಿಕಾಯಿ ಎಂತಲೂ ಕೆಲವೆಡೆ ಕರೆಯುವುದುಂಟು. ಇದು ನೋಡಲು ಸೌತೆಕಾಯಿ ಬಳ್ಳಿಯ ಹಾಗೆ ಕಾಣುತ್ತದೆ. ಇದರ ಬಳ್ಳಿಯಲ್ಲಿ ಬಿಡುವ ಕಾಯಿ, ನೋಡಲು ಎಳೆ ಸೌತೆಕಾಯಿಯನ್ನು ಹೋಲುತ್ತದೆ; ಆದರೆ ಗಾತ್ರದಲ್ಲಿ ಲಿಂಬೆ ಹಣ್ಣಿನ ಗಾತ್ರವಿದ್ದು ರುಚಿಯಲ್ಲಿ ಕಹಿ. ಹುಲ್ಲು ಬೆಳೆಯುವ ಅಂಚಿನಲ್ಲಿ, ಬೆಟ್ಟದ ತಪ್ಪಲಿನಲ್ಲಿ ಸಾಮಾನ್ಯವಾಗಿ ಬೆಳೆಯುತ್ತವೆ. ದೀಪಾವಳಿಯ ಸಮಯದಲ್ಲಿ ವಿಶೇಷವಾಗಿ ದೊರಕುವ ಈ ಸಿಂಡ್ಲೆಕಾಯಿಯ ಬಳ್ಳಿಯು ಪ್ರಕೃತಿಯ ಕೊಡುಗೆ. ದೀಪಾವಳಿಗೂ ನರಕಾಸುರನ ವಧೆಗೂ ನಂಟಿರುವುದು ತಿಳಿದ ಸಂಗತಿ. ನರಕಾಸುರನಿಗೆ ಬ್ರಹ್ಮನಿಂದ 'ಆತನ ತಾಯಿಯ ಹೊರತಾಗಿ ಬೇರೆ ಯಾರೂ ಕೊಲ್ಲಲು ಅಸಾಧ್ಯ' ಎಂಬ ವರದಾನವಿರುತ್ತದೆ. ಅದಕ್ಕಾಗಿ ಇತನ ಉಪಟಳ ಹೆಚ್ಚಾದಾಗ ಭೂ ದೇವಿಯು ಸತ್ಯಭಾಮೆಯ ಅವತಾರದಲ್ಲಿ ಜನಿಸಿ ನರಕನ್ನು ಚಕ್ರಾಯುಧದಿಂದ ಸರಿಯಾಗಿ ಎರಡು ಭಾಗವನ್ನಾಗಿ ತುಂಡರಿಸಿ ಹರಣ ಮಾಡುತ್ತಾಳೆ. ನರಕಾಸುರನನ್ನು ಭಾಗ ಮಾಡಿ ದಂತೆಯೇ, ಶಿಂಡ್ಲೆ ಕಾಯಿಯನ್ನು ವಿಭಾಗಿಸಿ, ಅದರೊಳಗೆ (ಆತ್ಮ) ಜ್ಯೋತಿಯನ್ನು ಹಚ್ಚುವುದು ದೀಪಾವಳಿಯ ವಾಡಿಕೆ. ಶಿಂಡ್ಲೆ ಕಾಯಿಯಲ್ಲಿ ಔಷಧೀಯ ಅಂಶವೂ ಇದೆ. ಮಲೆನಾಡಿನ ಜನರು ಇಂದಿಗೂ ಇದನ್ನು ಔಷಧವಾಗಿ ಬಳಸುವುದನ್ನು ನೋಡಬಹುದು. ಇಂದು ಪಟ್ಟಣಗಳಲ್ಲಿ ವಾಸಿಸುವವರು ಸಿಂಡ್ಲೆ ಕಾಯಿ ಬಳ್ಳಿಯನ್ನು ಮರೆತಿದ್ದಾರೆ. ಗೀಸರ್ ಬಂದ ನಂತರ, ಹಂಡೆಯೂ ಮಾಯವಾಗಿದೆ. ಹಬ್ಬಕ್ಕೆಂದು ಹಳ್ಳಿಯ ಮನೆಗೆ ಹೋದಾಗ ಹಂಡೆಗೆ ಸಿಂಗರಿಸಿದ ಸಿಂಡ್ಲೆಕಾಯಿ ನೋಡಿದಾಗ ಅದೇನೋ ಸಂತಸ!

ಬೆಳಕಿನ ಹಬ್ಬಕ್ಕೆ ಪಟಾಕಿ ಏಕೆ?

• ಮಮತಾ ಶೃಂಗೇರಿ

ದೀಪಾವಳಿ ಹಬ್ಬ ಎಂದರೆ ಬೆಳಕಿನ ಹಬ್ಬ ಎಂದೇ ಪ್ರಸಿದ್ಧ. ಎಲ್ಲೆಲ್ಲೂ ದೀಪಗಳ ಸಾಲು ಕಣ್ಮನಸನ್ನು ಸೆಳೆಯುತ್ತದೆ. ಆದರೆ ಕಾಲ ಬದಲಾದಂತೆ ಹಬ್ಬಗಳಲ್ಲಿ ಸಂಪ್ರದಾಯಕ್ಕಿಂತ ಹೆಚ್ಚಾಗಿ, ಕೆಲವೊಂದು ಆಚರಣೆ, ಆಡಂಬರ, ಅಬ್ಬರಗಳೆ ಹೆಚ್ಚಾಗಿ ಮೇಳೈಸುತ್ತದೆ. ಅದಕ್ಕೆ ಉದಾಹರಣೆ ಎಂದರೆ ದೀಪಾವಳಿಯು ಈಗ ಪಟಾಕಿ ಹಬ್ಬ ಎಂಬಂತಾಗಿದೆ. ಸದ್ದು, ಮಾಲಿನ್ಯ ಹೊರಡಿಸುವ ಪಟಾಕಿ ಖರೀದಿಗಾಗಿ ಮಧ್ಯಮ ವರ್ಗದವರು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ದೀಪಗಳಿಗಿಂತ ಪಟಾಕಿಯ ಬೆಳಕು ಹಾಗೂ ಶಬ್ದವೇ ಹೆಚ್ಚಾಗಿ ಕೇಳಿ, ಕಂಡು ಬರುತ್ತದೆ. ಇದರ ಅಬ್ಬರ ಹಾವಳಿಯನ್ನು ಹೇಳಲು ಸುಲಭ ಸಾಧ್ಯವಲ್ಲ.ಪಟಾಕಿ ಸಿಡಿಸುವುದರಿಂದ ಪಟಾಕಿ ಸಿಡಿಸುವವರ ಮನಸ್ಸಿಗೆ ಸಮಾಧಾನ ಖುಷಿ ಸಿಕ್ಕಿದರೆ, ಸುಂದರವಾದ ಪಟಾಕಿಯ ಚಿತ್ತಾರದ ನೋಟಗಳು ಮನ ಸೆಳೆಯುತ್ತದೆ. ಬೆಳಕಿನ ಬದಲು ಪಟಾಕಿಗಳನ್ನು ಸಿಡಿಸಿದರೆ, ಇದರಿಂದ ಸಾಧಕಕ್ಕಿಂತ ಬಾಧಕವೇ ಜಾಸ್ತಿ. ಬೆಂಗಳೂರಿನಂತಹ ನಗರದಲ್ಲಿ, ಪಟಾಕಿಯಿಂದಾಗಿ ಹಲವು ಮಕ್ಕಳ ಕಣ್ಣುಗಳ ಆರೋಗ್ಯಕ್ಕೆ ಹಾನಿಯುಂಟಾಗಿರುತ್ತಿರುವುದು ವರದಿ ಯಾಗುತ್ತಿದೆ.

ಕೆಲವೊಮ್ಮೆ ಮಕ್ಕಳು ಹಿರಿಯರ ಮಾತನ್ನು ಕೇಳದೆಯೂ, ಪಟಾಕಿಯನ್ನು ಹಚ್ಚುವ ಸಂಭ್ರಮದಲ್ಲಿ ತೊಡಗಿ ಅನಾಹುತಗಳಿಗೆ ಕಾರಣರಾಗುತ್ತಾರೆ. ಹಾಗೆಯೇ ದೊಡ್ಡವರು ಕೂಡ ಪಟಾಕಿ ಅನಾಹುತದಿಂದ ತಮ್ಮ ಬದುಕನ್ನು ಕತ್ತಲೆಯಲ್ಲಿ ಮುಳುಗಿಸಿಕೊಂಡಿದ್ದರ ಉದಾಹರಣೆ, ದೀಪಾವಳಿಯ ಆಸುಪಾಸಿನಲ್ಲಿ ಕೇಳುತ್ತಲೇ ಇರುತ್ತೇವೆ. ಪಟಾಕಿಯಿಂದ ಕಣ್ಣಿಗೆ ಹಾನಿ ಮಾಡಿಕೊಂಡವರಿಗೆಂದೇ ಪ್ರತ್ಯೇಕ ವಾರ್ಡ್ ತೆರೆಯುವಂತಹ ಅನಿವಾರ್ಯತೆ ಉಂಟಾಗಿದೆ. ಪಟಾಕಿಯ ಆಸೆಗೆ ಬದುಕು ಕತ್ತಲಾಗಬಾರದು. ಇವೆಲ್ಲವೂ ಪಟಾಕಿ ಹಾವಳಿಯ ಒಂದು ಮುಖವಾದರೆ, ಇನ್ನೊಂದು ಮುಖ ಪರಿಸರ ಮಾಲಿನ್ಯದ್ದು, ಪಟಾಕಿ ಸಿಡಿಸುವುದರಿಂದ ಅನೇಕ ವಿಷಾನಿಲಗಳು ವಾತಾವರಣಕ್ಕೆ ಬಿಡುಗಡೆಯಾಗಿ ವಾತಾವರಣ ಕಲುಷಿತಗೊಳ್ಳುತ್ತದೆ. ಇದು ಅನೇಕ ರೋಗಕ್ಕೆ ಕಾರಣವಾಗುತ್ತದೆ. ಹಾಗೆಯೇ ಅದರ ಕರ್ಣ ಕಠೋರ ಶಬ್ದದಿಂದ, ಪ್ರಾಣಿ, ಪಕ್ಷಿಗಳು, ಮನುಷ್ಯರು ಕೂಡ ತೊಂದರೆಗೆ ಒಳಗಾಗುತ್ತಾರೆ. ಚಿಕ್ಕ ಮಕ್ಕಳು, ಕಾಯಿಲೆಗೆ ಒಳಗಾದವರಿಗೆ ಆ ಶಬ್ದದಿಂದ ಹೆಚ್ಚಿನ ತೊಂದರೆ ಉಂಟಾಗಬಹುದು. ಹಾಗೆಯೇ ಪಟಾಕಿಗಳಿಂದ ಬೆಂಕಿ ಅವಘಡಗಳು ಸಂಭವಿಸಬಹುದು ಹಾಗೆಂದು ಹಬ್ಬದಲ್ಲಿ ಪಟಾಕಿಯ ಸಂಭ್ರಮ ಬಿಡಲಾಗುವುದಿಲ್ಲ. ಬೆಳಕಿನ ಹಬ್ಬವನ್ನು ಆಚರಿಸುವಾಗ ಆದಷ್ಟು ಪರಿಸರ ಸ್ನೇಹಿ ದೀಪಗಳನ್ನು ಬೆಳಗಿ, ಕತ್ತಲೆಯನ್ನು ಓಡಿಸೋಣ. ಪರಿಸರ ಸ್ನೇಹಿ ಪಟಾಕಿಗಳನ್ನು ಆದಷ್ಟು ಕಡಿಮೆ ಪ್ರಮಾಣದಲ್ಲಿ ಬಳಸೋಣ. ಆದಷ್ಟು ಮುಂಜಾಗ್ರತೆ ವಹಿಸೋಣ, ಅಲ್ಲವೇ!

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ತ್ರಯೋದಶಿ ತಿಥಿ, ಹಸ್ತ ನಕ್ಷತ್ರ, ವೈಧೃತಿ ಯೋಗ, ವಣಿಜ ಕರಣ, ಹೇಮಂತ ಋತು, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ನಿಯಮಿತವಾಗಿ ತುಪ್ಪ ಸೇವಿಸುವುದರಿಂದ ತಲೆನೋವು, ದೃಷ್ಟಿಯ ಸಮಸ್ಯೆಗಳು ಕಾಡುವುದಿಲ್ಲ. 1 ಲೋಟ ಬೆಚ್ಚಗಿನ ಹಾಲಿಗೆ ಅರ್ಧ ಚಮಚ ತುಪ್ಪ ಮತ್ತು ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ಆಯಾಸದಂಥ ಸಮಸ್ಯೆಗಳು ದೂರವಾಗುತ್ತವೆ. ರೋಗ ನಿರೋಧಕ ಶಕ್ತಿಯೂ ಹೆಚ್ಚುತ್ತದೆ.

ಸೌಂದರ್ಯ ಸೂತ್ರ

ಪೇರಲ ಎಲೆಗಳನ್ನು ತೊಳೆದು ಒಣಗಿಸಿ ಪುಡಿಮಾಡಿಟ್ಟುಕೊಳ್ಳಿ. ಇದಕ್ಕೆ ನೀರು ಸೇರಿಸಿ ಮಿಶ್ರಣ ತಯಾರಿಸಿ, ನೆತ್ತಿ ಮತ್ತು ಕೂದಲಿಗೆ ಈ ಪೇಸ್ಟ್ ಹಚ್ಚಿ, ಸ್ವಲ್ಪ ಹೊತ್ತು ಮಸಾಜ್ ಮಾಡಿ. 30-40 ನಿಮಿಷಗಳ ಕಾಲ ಬಿಟ್ಟು ತಲೆ ತೊಳೆಯಿರಿ. ವಾರಕ್ಕೆ ಎರಡು ಬಾರಿ ಈ ರೀತಿ ಮಾಡಿದರೆ ಕೂದಲು ಕಪ್ಪಾಗುವುದಲ್ಲದೆ, ಬೆಳವಣಿಗೆಯೂ ವೇಗವಾಗುತ್ತದೆ.

ದಿನ ಭವಿಷ್ಯ

ಮೇಷ: ಕೆಟ್ಟ ಸಂದರ್ಭಗಳಲ್ಲಿ ನಿಮ್ಮ ಆತ್ಮವಿಶ್ವಾಸ ಮತ್ತು ನೈತಿಕತೆಯನ್ನು ಸಮತೋಲನದಲ್ಲಿಡಿ. ಈ ಸಮಯ ವ್ಯಾಪಾರಕ್ಕೆ ಅನುಕೂಲಕರವಾಗಿದೆ.

ವೃಷಭ: ಸೃಜನಾತ್ಮಕ ಕೆಲಸಗಳಲ್ಲಿ ಸಮಯ ಕಳೆಯುವಿರಿ. ಮನೆಯ ನಿರ್ವಹಣೆ ಮತ್ತು ಸರಿಯಾದ ಕ್ರಮವನ್ನು ನಿರ್ವಹಿಸುವಲ್ಲಿ ಆಸಕ್ತಿ ಹೊಂದಿರುತ್ತೀರಿ.

ಮಿಥುನ: ಯುವಕರು ತಮ್ಮ ವೃತ್ತಿಜೀವನದ ಬಗ್ಗೆ ಹೆಚ್ಚು ಜಾಗೃತರಾಗಿ, ಯಶಸ್ಸು ಸಾಧಿಸುವಿರಿ. ಸಂವಹನ ಮಾಡುವಾಗ ಸರಿಯಾದ ಪದ ಬಳಸಿ.

ಕಟಕ: ಈ ಸಮಯದಲ್ಲಿ ನೀವು ಹೆಚ್ಚು ಕಾರ್ಯನಿರತರಾಗುವಿರಿ. ಸರಿಯಾದ ಫಲಿತಾಂಶಗಳನ್ನು ಪಡೆಯುವ ಮೂಲಕ ಮನಸ್ಸಿಗೆ ಸಂತೋಷವಾಗುತ್ತದೆ.

ಸಿಂಹ: ಗ್ರಹಗಳ ಸ್ಥಾನಗಳು ನಿಮಗೆ ಕೆಲವು ಉತ್ತಮ ಅವಕಾಶಗಳನ್ನು ಸೃಷ್ಟಿಸುತ್ತಿವೆ. ಸಾಲ ನೀಡಿದ ಹಣ ಮರುಪಡೆಯಬಹುದು.

ಕನ್ಯಾ: ಸಣ್ಣದೊಂದು ನಕಾರಾತ್ಮಕ ಚಟುವಟಿಕೆಯು ನಿಮ್ಮ ಯಶಸ್ಸಿನ ಬಗ್ಗೆ ಜನರು ಅಸೂಯೆ ಪಡುವಂತೆ ಮಾಡುತ್ತದೆ ಎಂಬುದನ್ನು ನೆನಪಿನಲ್ಲಿಡಿ.

ತುಲಾ: ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ನಿಮ್ಮ ಕೆಲಸಕ್ಕೆ ನಿಮ್ಮನ್ನು ಅರ್ಪಿಸಿಕೊಳ್ಳಿ. ಕೋಪ, ಆತುರ ಮುಂತಾದ ದುರ್ಗುಣಗಳು ಆವರಿಸಲು ಬಿಡಬೇಡಿ.

ವೃಶ್ಚಿಕ: ಕೆಲಸದ ಸ್ಥಳದಲ್ಲಿ ಉದ್ಯೋಗಿಯೊಂದಿಗೆ ಬಿರುಕು ಉಂಟಾಗಬಹುದು. ಸಂಗಾತಿಯ ಜತೆ ವಾದ ವಿವಾದ ಬೇಡ.

ಧನು: ಯಾವುದಾದರೂ ಕ್ಷೇತ್ರದಲ್ಲಿ ಹೂಡಿಕೆ ಮಾಡಿದರೆ ಲಾಭದಾಯಕವಾಗಿರುತ್ತದೆ. ಪ್ರೇಮಿಗಳು ಮನೆಯಲ್ಲಿ ವಿವಾಹದ ಬಗ್ಗೆ ಪ್ರಸ್ತಾಪಿಸಬಹುದು.

ಮಕರ: ನಕಾರಾತ್ಮಕ ವಿಚಾರ ನಿಮ್ಮ ಮೇಲೆ ಪ್ರಾಬಲ್ಯ ಸಾಧಿಸಲು ಬಿಡಬೇಡಿ. ವ್ಯಾಪಾರಸ್ಥರು ಇಂದು ಕೆಲವು ಸಮಸ್ಯೆಗಳನ್ನು ಎದುರಿಸಬಹುದು.

ಕುಂಭ: ವೈವಾಹಿಕ ಜೀವನದಲ್ಲಿದ್ದ ಸಂಶಯ ಗೊಂದಲ ಪರಿಹಾರ. ಸಾಮಾಜಿಕ ಚಟುವಟಿಕೆಗಳಿಂದ ಗೌರವ ಹೆಚ್ಚಾಗಲಿದೆ.

ಮೀನ: ಸಂಗಾತಿಯ ಜತೆ ವಾದ ವಿವಾದ ಬೇಡ. ಉದ್ಯೋಗಿಗಳಿಗೆ ಕೆಲಸದ ಒತ್ತಡ. ನಿಂತುಹೋದ ಕಾರ್ಯ ಗಳು ಮರುಚಾಲನೆ ಪಡೆದುಕೊಳ್ಳುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1960: ಭೌತ ಶಾಸ್ತ್ರಜ್ಞ ಹೋಮಿ ಜಹಾಂಗಿರ್ ಬಾಬಾ ಅವರು ಹುಟ್ಟಿದರು.
- ವಿಶ್ವ ಮಿತವ್ಯಯ ದಿನ
- 1956: ಭಾರತದ ಮೊದಲ ಫೈವ್ ಸ್ಟಾರ್ ಹೋಟೆಲ್ ಅಶೋಕ ಪ್ರಾರಂಭವಾಯಿತು.
- 1960: ವಿಶ್ವದ ಮೊದಲನೆ ಬಾರಿ ಯಶಸ್ವಿ ಕಿಡ್ನಿ ಕಸಿ ಮಾಡಲಾಯಿತು.

ಚಿತ್ರಸ್ಫೂರ್ತಿ

ಪಕ್ಷಿ ಬಂಧನದಲ್ಲಿಲ್ಲ!
ಚಿತ್ರ: ಸುಧಾಕರ್ ದೇವರಾಜ್

ತಂದೆ-ತಾಯಿಗಳಿಗೆ ಏನು ಮುಖ್ಯ?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಆಗರ್ಭ ಶ್ರೀಮಂತ ತಂದೆ, ಮಗನ ಮೇಲೆ ಕೇಸೊಂದು ಹಾಕಿ ತನಗೆ ತನ್ನ ಮಗನಿಂದ ಮಾಶಾಸನ ಬೇಕೆಂದು ಕೋರ್ಟ್‌ನ್ನು ಕೇಳಿಕೊಂಡ.

ನ್ಯಾಯಧೀಶರು: ತಾವೇ ಇಷ್ಟೊಂದು ಶ್ರೀಮಂತರಿದ್ದೀರಿ, ಮತ್ತೇಕೆ ಬೇಕು ಎಂದರು.

ತಂದೆ: ಇಲ್ಲ ಸ್ವಾಮಿ, ನನಗೆ ನನ್ನ ಮಗನ ಕಡೆಯಿಂದ, ಪ್ರತಿತಿಂಗಳು, ಸ್ವಲ್ಪವಾದರೂ, ಬೇಕೇಬೇಕು ಎಂದ.

ಹಠಕ್ಕೆ ಬಿದ್ದ ತಂದೆಗೆ ನ್ಯಾಯ ಕೊಡಬೇಕೆಂದು, ಆ ಮಗನನ್ನು, ಕೋರ್ಟಿಗೆ ಬರಲು ಹೇಳಿದ ಜಡ್ಜ್ ಆಸೆ ಕೇಸನ್ನು ಮುಂದಕ್ಕೆ ಹಾಕಿದರು.

ಕೋರ್ಟ್ ನಿರ್ಧರಿಸಿದ ದಿನ ಮಗ ಬಂದು ಕಟಕಟೆಯಲ್ಲಿ ನಿಂತುಕೊಂಡ.

ನ್ಯಾಯಾದೀಶರು: ನಿಮ್ಮ ತಂದೆ ನಿಮ್ಮಿಂದ ಪ್ರತಿತಿಂಗಳು ಮಾಶಾಸನ ಕೇಳುತ್ತಿದ್ದಾರೆ ಕೊಡಬೇಕಾಗುತ್ತೆ ಅಂದರು.

ಮಗ; ಸ್ವಾಮಿ, ಅವರಲ್ಲಿಯೇ ಧನ ಕನಕ, ಆಸ್ತಿ, ಹೇರಳವಾಗಿದೆ.

ನ್ಯಾಯಾಧೀಶರು: ಮತ್ತೇಕೆ ಕೇಳುತ್ತಿದ್ದಾರೆ ಅಂತಾ ನಿನಗೇನಾದರೂ ಗೊತ್ತಾ? ಎಂದರು.

ಮಗ: ಇಲ್ಲ, ಸ್ವಾಮಿ.

ನ್ಯಾಯಾದೀಶರು: ಯಜಮಾನರೇ, ನೀವೇಕೆ ಹಠಹಿಡಿದಿದ್ದೀರಿ?

ತಂದೆ: ಸ್ವಾಮಿ, ಇದು ಹಠವಲ್ಲ, ನನ್ನ ಹಕ್ಕು.

ನ್ಯಾಯಾದೀಶರು: ಹೌದೌದು, ಹೇಳಿ ಎಷ್ಟು ನಿರೀಕ್ಷಿಸುತ್ತೀರಿ?

ತಂದೆ: ಪ್ರತಿ ತಿಂಗಳ ಎರಡನೇ ತಾರೀಕಿಗೊಮ್ಮೆ ಅವನೇ ಬಂದು ನೂರು ರುಪಾಯಿ ಕೊಡಬೇಕು!

ಕೋರ್ಟಿನಲ್ಲಿದ್ದ ವಕೀಲರೆಲ್ಲಾ, ಗೊಳ್ಳೆಂದು ನಕ್ಕರು.

ನ್ಯಾಯಾಧೀಶರು: ಸೈಲೆನ್ಸ್.... ಸೈಲೆನ್ಸ್......!

ಮಗ: ಸರಿ ಸ್ವಾಮಿ, ಕೊಡುತ್ತೇನೆ.

ನ್ಯಾಯಾಧೀಶರು: ಕೊಡುತ್ತೇನೆಂದು ಒಪ್ಪಿಕೊಂಡಿದ್ದಾನೆ. ಮತ್ತೇನೂ, ತಕರಾರು ಇಲ್ಲವಾ...?

ತಂದೆ: ಇಲ್ಲ ಸ್ವಾಮಿ, ಮತ್ತೇನಿಲ್ಲ, ಅಷ್ಟು ಕೊಟ್ಟರೆ ಸಾಕು.

ನ್ಯಾಯಾದೀಶರು ತೀರ್ಪು ಬರೆದು ಓದಿ ಮುಗಿಸಿದರು, ಕೋರ್ಟ್ ಕಲಾಪದ ಮುಕ್ತಾಯವನ್ನೂ ಮಾಡಿ, ತಮ್ಮ ಚೇಂಬರ್ ಒಳಗೆ ಹೋಗಿ, ಆ ಶ್ರೀಮಂತ ತಂದೆಯನ್ನು ಕರೆತರಲು ಹೇಳಿದರು. ಅವರು ಬಂದರು.

ನ್ಯಾಯಾದೀಶರು: ಅಲ್ಲ, ನೀವೇಕೆ ಕೇವಲ ನೂರು ರುಪಾಯಿಯನ್ನೇ ಪ್ರತಿ ತಿಂಗಳು ಕೊಡಬೇಕೆಂದು ಕೇಳಿದ್ರಿ?

ತಂದೆ: ಸ್ವಾಮಿ ನನಗೆ ಅವನ ದುಡ್ಡಿನ ಅವಶ್ಯಕತೆಯೇ ಇಲ್ಲ ನನಗೆ ಅವನೊಬ್ಬನೇ ಮಗ ಚೆನ್ನಾಗಿ ಓದಿದ್ದಾನೆ ದೂರದ ನಗರದಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾನೆ, ನನ್ನನ್ನು ನೋಡಲು ಅವನು ಬರುವುದೇ ಇಲ್ಲ. ಆದರೆ, ನನಗೆ ಅವನನ್ನು ತಿಂಗಳಿಗೊಮ್ಮೆಯಾದರೂ ನೋಡಬೇಕೆಂಬ ಆಸೆ. ಆ ಕಾರಣಕ್ಕಾಗಿ ಕೋರ್ಟ್ ಆದೇಶದಂತೆ ಅವ ನೂರು ರುಪಾಯಿ ಕೊಡಲಿಕ್ಕಾದರೂ ತಪ್ಪದೇ ಬರಬೇಕಲ್ಲ. ಅವಾಗಲಾದರೂ, ಅವನನ್ನು ಕಣ್ಣು ತುಂಬಾ ನೋಡಬಹುದೆಂದು ಕೋರ್ಟ್ ಮೂಲಕ ತಾಕೀತು ಮಾಡಿಸಿದೆ ಅಷ್ಟೇ.

ಅಂದೇ ಕೋರ್ಟಿಗೆ ಮೂರು ದಿನ ರಜೆ ಹಾಕಿದ ಜಡ್ಜ್, ತಂದೆಗೆ ಫೋನ್ ಮಾಡಿ, ನಾನು ಊರಿಗೆ ಬರುತ್ತಿದ್ದೇನೆ, ಏನಾದರೂ ತರುವುದಿದೆಯಾ? ಎಂದರು. ಅತ್ತಲಿಂದ, ಸಣ್ಣಗಿನ ಧ್ವನಿಯಲ್ಲಿ ಕೇಳಿಸಿದ್ದು, ನೀನು ಬಾರಪ್ಪ ಸಾಕು ಬೇರೇನೂ ಬೇಕಿಲ್ಲ. ಎಷ್ಟೋ ದಿನ ಆಯ್ತು ನಿನ್ನ ನೋಡದೇ .

ಈ ಮೇಲಿನ ಸನ್ನಿವೇಶ ನಮ್ಮೆಲ್ಲರಿಗೂ ಕೂಡ ದೊಡ್ಡ ಪಾಠ. ಉದ್ಯೋಗಕ್ಕಾಗಿ ಊರು ಬಿಟ್ಟು ಬಂದಿರುತ್ತೇವೆ, ಮದುವೆಯಾಗಿ ಬೇರೆ ಊರುಗಳಲ್ಲಿ ನೆಲೆಸಿರುತ್ತೇವೆ. ತಂದೆ ತಾಯಿಗಳನ್ನ ಆಗಾಗ ಕುಶಲೋಪರಿಯಲ್ಲಿ ಮಾತನಾಡಿಸಿದರೆ ಸಾಕು ಎಂದುಕೊಳ್ಳುತ್ತೇವೆ. ಆದರೆ ಅವರಿಗೆ ನಿರಂತರವಾಗಿ ನಮ್ಮ ಚಿಂತೆ ಇದ್ದೇ ಇರುತ್ತದೆ. ನಮ್ಮ ಒಂದು ಕರೆ ಅವರ ದಿನವನ್ನು ಚೆಂದವಾಗಿಸುತ್ತದೆ. ಆಗಾಗ ಅವರಿಗಾಗಿ ಸಮಯವನ್ನು ಮೀಸಲಾಗಿಟ್ಟು ಹೋಗಿ ಅವರ ಜೊತೆ ಇದ್ದು ಬಂದಾಗ ಅವರಿಗೆ ಸಿಗುವ ಸಮಾಧಾನಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ನಾವ್ಯಾರೂ ಶಾಶ್ವತವಲ್ಲ.

ದಿನ ದಿನಕ್ಕೆ ಎಲ್ಲವೂ ಬದಲಾಗುತ್ತಿರುತ್ತದೆ. ಕೈ ತಪ್ಪಿ ಹೋದ ಸಮಯಕ್ಕೆ ನಂತರ ಪಶ್ಚಾತ್ತಾಪ ಪಡುವ ಬದಲು, ಇಂದಿನಿಂದಲೇ ತಂದೆ ತಾಯಿಗಳಿಗಾಗಿ ಅವರ ಕಾಳಜಿಗಾಗಿ ಸಮಯ ಮೀಸಲಿಡೋಣ.

ದುಡಿಮೆ, ನಮ್ಮ ಜಂಜಾಟಗಳು ಸದಾ ಇದ್ದದ್ದೆ. ಎಲ್ಲದರ ನಡುವೆ ನಾವು ನಮಗಾಗಿ, ನಮ್ಮ ತಂದೆ ತಾಯಿಗಳಿಗಾಗಿ ಬದುಕದೆ ಹೋದರೆ ಎಲ್ಲ ಇದ್ದೂ ಏನೂ ಇಲ್ಲದಂತೆ!

ಒಂದೊಳ್ಳೆ ಮಾತು

ಪದಬಂಧ



ಎಡದಿಂದ ಬಲಕ್ಕೆ:

1. ಸ್ವಾದವನ್ನು ತಿಳಿಸುವ ನಾಲಗೆ (3)
3. ಸಹಿಸಲು ಅಸಾಧ್ಯವಾದ ಎಂದರ್ಥ (3)
5. ಎರಡಕ್ಷರದ ಸೊಕ್ಕು (2)
6. ನಾಜೂಕಾದ ಅಥವಾ ಸೂಕ್ಷ್ಮವಾದ ಕೆಲಸ (3)
7. ಮಾಡುವ ಕೆಲಸಕ್ಕಾದ ಅಡ್ಡಿ (2)
8. ತೀವ್ರವಾದ ಆಸೆ (3)
10. ಅಜ್ಞಾನವೂ ಆಗಬಲ್ಲ ಕತ್ತಲೆ (3)
13. ಕುದುರೆಯ ಮುಖ (5)
14. ಮರ ಕತ್ತರಿಸಲು ಬಳಸುವ ಕೊಡಲಿ (3)
16. ಮನದ ಮಧ್ಯೆ ಸಿಲುಕಿದೆ ಸಾವು (3)
18. ಮತ್ತೊಂದು ಕನಕ (2)
19. ಜನರು ಒಪ್ಪಿಸಿದ ಕಾಣಿಕೆ (3)
20. ರಾಕ್ಷಸರ ಶಿಲ್ಪಿ (2)
21. ಕಾವ್ಯವನ್ನು ರಾಗಬದ್ಧವಾಗಿ ಹಾಡುವುದು (3)
22. ಬಿರುಸಾದ ಎಂದರ್ಥ (3)

ಮೇಲಿನಿಂದಕೆಳಕ್ಕೆ:

1. ತಲೆಕೆಳಗಾಗಿದೆ ಚಪ್ಪರ (3)
2. ಕುಲದೊಂದಿಗೆ ಬಂದಿರುವ ಪಾಂಡವರಲ್ಲೊಬ್ಬ (3)
3. ಕೆಟ್ಟ ಕೆಲಸ ಅಥವಾ ಪಾಪ (3)
4. ಹೋಮದ ಕೊನೆಯಲ್ಲಿ ಅಗ್ನಿಗೆ ಕೊಡುವ ಆಹುತಿ (3)
9. ಸಾಹಿತಿ ಅಥವಾ ಲೇಖಕನಿಗೆ ಮತ್ತೊಂದು ಹೆಸರು (5)
11. ದೊಡ್ಡದಾದ ಪಟ್ಟಣಕ್ಕೆ ಮತ್ತೊಂದು ಹೆಸರು (5)
12. ವೇಗ ಅಥವಾ ರಭಸ (3)
14. ಉರಗ ಅಥವಾ ಸರ್ಪದ ಮತ್ತೊಂದು ಹೆಸರು (3)
15. ನಾಯಿಗೊಂದು ಚಂದದ ಹೆಸರು (3)
16. ಕರುಣೆಗೆ ಮತ್ತೊಂದು ಹೆಸರು (3)
17. ತಲೆಕೆಳಗಾಗಿ ಕಾಣುವ ವಲ್ಲಭ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ರಸನ 3. ದುಸ್ಸಹ 5. ಮದ 6. ಕುಸುರಿ 7. ವಿಘ್ನ 8. ಹಂಬಲ 10. ತಮಸ್ಸು 13. ಹಯವದನ 14. ಪರಶು 16. ಮರಣ 18. ಚಿನ್ನ 19. ನಜರು 20. ಮಯ 21. ಗಮಕ 22. ಕಠೋರ

ಮೇಲಿನಿಂದ ಕೆಳಕ್ಕೆ: 1. ರದಹಂ 2. ನಕುಲ 3. ದುರಿತ 4. ಹವಿಸ್ಸು 9. ಬರಹಗಾರ 11. ಮಹಾನಗರ 12. ಜವನ 14. ಪನ್ನಗ 15. ಶುನಕ 16. ಮರುಕ 17. ಮರಣ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಸಾಗರದ ಆಳ ಅರಿತವರಾರು?



ಸಾಗರದ ಆಳವನ್ನು ತಿಳಿದವರಾರು ಅನ್ನೋ ಮಾತು ಕೇಳೇ ಇರುತ್ತೇವೆ. ಬ್ರಿಟಿಷ್ ನೌಕಾಪಡೆಯ ಹಡಗು, 1872ರಲ್ಲಿ ಸಾಗರದ ಆಳವನ್ನು ಲೆಕ್ಕಾಚಾರ ಮಾಡಿ, ಅಂತಿಮವಾಗಿ ಸಮುದ್ರವು ಸರಾಸರಿ 2.3 ಮೈಲಿಗಳಷ್ಟು ಆಳವಾಗಿದೆ ಎಂಬ ತೀರ್ಮಾನಕ್ಕೆ ಬಂದಿತು. ಸಮುದ್ರದ ಕೆಲವು ಭಾಗಗಳು ಹೆಚ್ಚು ಆಳವಿಲ್ಲದ್ದಾಗಿದ್ದು, ಕೆಲವೊಂದಿಷ್ಟು ತುಂಬಾ ಆಳವಾಗಿದೆ. ಇದರಡಿಯಲ್ಲಿರುವ ಕಂದಕಗಳು ಹಾಗೂ ತಲೆಕೆಳಗಾದ ಪರ್ವತಗಳಿಂದಾಗಿ ಏರುತಗ್ಗು ನಿರ್ಮಾಣವಾಗಿದೆ. ವಿಜ್ಞಾನಿಗಳು ಮರಿಯಾನಾ ಎನ್ನುವ ಕಂದಕವನ್ನು ಕಂಡುಹಿಡಿದಿದ್ದು, ಇದು ಸಮುದ್ರದ ಆಳವಾದ ಗುಳಿಯಾಗಿದೆ. ಇದರ ಆಳ 35,768 ರಿಂದ 36,037 ಅಡಿ ಅಂದರೆ, 7 ಮೈಲುಗಳು.

ಪುಸ್ತಕ ಲೋಕ

ದಿಟದ ದೀಪಟಿಗೆ



ಇದು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಆತ್ಮಕಥನ. ಪ್ರೊ. ಮಲ್ಲೇಪುರಂ ಹುಟ್ಟಿನಿಂದ ಶ್ರೀಮಂತರಲ್ಲ. ಸಿದ್ಧಗಂಗಾ ಮಠದಲ್ಲಿ ಓದಿ, ಮನೆಯವರ ಬೆಂಬಲವಿಲ್ಲದೆ ತಮ್ಮ ಬದುಕನ್ನು ತಾವೇ ರೂಪಿಸಿಕೊಂಡವರು. ಸ್ನೇಹಿತರು ಅವರಿಗೆ ಬೆಂಬಲವಾಗಿ ನಿಂತರು. ಮೂಲತಃ ಮಲ್ಲೇಪುರಂ ಅಸಾಮಾನ್ಯ ಪ್ರತಿಭಾವಂತರು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಅವರು ಗಳಿಸಿದ ಪಾಂಡಿತ್ಯ ಅವರ ಸಮಾಜದವರನ್ನೇ ಅಚ್ಚರಿಗೊಳಿಸಿತು. ಶಾಲಾ ಮಾಸ್ತರರಿಂದ ಕುಲಪತಿಯಾಗುವವರೆಗೆ ಹುದ್ದೆಗಳೇ ಅವರನ್ನು ಬೆಂಬತ್ತಿ ಬಂದವು. ಅಜಾತಶತ್ರುವಾಗಿ ಸದಾ ಮುಗುಳ್ನಗುತ್ತಾ ಯಾರೊಂದಿಗೂ ವಿರಸ ಕಟ್ಟಿಕೊಳ್ಳದೆ ಎಲ್ಲರೊಂದಿಗೂ ಅನ್ಯೋನ್ಯತೆ ಸಾಧಿಸಿರುವುದೇ ಮಲ್ಲೇಪುರಂ ಅವರ ಹೆಗ್ಗಳಿಕೆ ಎಂದಿದ್ದಾರೆ. ಸಾಮಾನ್ಯವಾಗಿ ಆತ್ಮಕಥನಗಳು ತಮ್ಮನ್ನು ತಾವೇ ವೈಭವೀಕರಿಸಿಕೊಳ್ಳುತ್ತಾ, ತಾವು ಮಾಡಿದ್ದೆಲ್ಲಾ ಸರಿ ಎಂಬ ಭಾವನೆಯನ್ನು ಉಂಟುಮಾಡುತ್ತವೆ. ಆದರೆ ಮಲ್ಲೇಪುರಂ ಕಥನ ಖುಲ್ಲಂ ಖುಲ್ಲಾ. ಸಾಂಸಾರಿಕ ವಿಷಯವೇ ಇರಲಿ, ವೃತ್ತಿ ಕಥಾನಕವೇ ಇರಲಿ, ಎಲ್ಲವನ್ನೂ ಓದುಗರ ಮುಂದೆ ತೆರೆದಿರಿಸಿದ್ದಾರೆ. ತಮಗೆ ನೆರವಾದವರನ್ನು ತುಂಬು ಹೃದಯದಿಂದ ಸ್ಮರಿಸುತ್ತಾರೆ. ಇರಿಸು ಮುರಿಸು ಮಾಡಿದವರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತಾರೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಕೆಳಗಿನ ಯಾವ ರೋಗವನ್ನು 'ಯೆರ್ಸಿನಿಯಾ ಪೆಸ್ಟಿಸ್' ಎಂದು ಕರೆಯಲಾಗುತ್ತದೆ?

- ಎ. ಪ್ಲೇಗ್.
- ಬಿ. ಕಾಲರಾ.
- ಸಿ. ಕುಷ್ಠರೋಗ.
- ಡಿ. ಚಿಕೂನ್ ಗುನ್ಯ.

ಉತ್ತರ: ಎ. ಪ್ಲೇಗ್.

ಮಾಹಿತಿ

ಪ್ಲೇಗ್ ಎಂಬುದು ಯೆರ್ಸಿನಿಯಾ ಪೆಸ್ಟಿಸ್ ಬ್ಯಾಕ್ಟೀರಿಯಾದಿಂದ ಉಂಟಾಗುವ ಸಾಂಕ್ರಾಮಿಕ ಕಾಯಿಲೆಯಾಗಿದೆ. ಇದು ಸಾಮಾನ್ಯವಾಗಿ ಸಣ್ಣ ಸಸ್ತನಿಗಳು ಮತ್ತು ಅವುಗಳ ಚಿಗಟಗಳಲ್ಲಿ ಕಂಡುಬರುತ್ತದೆ. ಈ ರೋಗವು ಪ್ರಾಣಿಗಳ ನಡುವೆ ಅವುಗಳ ಚಿಗಟಗಳ ಮೂಲಕ ಹರಡುತ್ತದೆ. ಇದು ಝೂನೋಟಿಕ್ ಬ್ಯಾಕ್ಟೀರಿಯಂ ಆಗಿರುವುದರಿಂದ, ಇದು ಪ್ರಾಣಿಗಳಿಂದ ಮನುಷ್ಯರಿಗೂ ಹರಡುತ್ತದೆ.

ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ಬೀಡು; ನಮ್ಮ ಕರುನಾಡು!

● ಡಾ.ಕಾರ್ತಿಕ ಜೆ.ಎಸ್

ಹಲವಾರು ಭಾಷಾ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಒಂದುಗೂಡಿ 'ವಿಶಾಲ ಕರ್ನಾಟಕ' ವಾದ ವಿಶಿಷ್ಟ ದಿನ ನವೆಂಬರ್-1.

ಈ ನಾಡಿಗಾಗಿ, ನುಡಿಗಾಗಿ, ಇದರ ಔನ್ನತ್ಯಕ್ಕಾಗಿ ದುಡಿದು ಮಡಿದವರನ್ನು ಕೃತಜ್ಞತೆಯಿಂದ ಸ್ಮರಿಸುವ ದಿನ. ಇಂದಿಗೂ ಕರುನಾಡಿಗಾಗಿ ದುಡಿಯುತ್ತಿರುವ ಮಹಾನ್ ವ್ಯಕ್ತಿಗಳನ್ನು ಕರೆದು ಗೌರವಿಸಿ, ಸತ್ಕರಿಸಿ, ಸನ್ಮಾನಿಸುವ ಪವಿತ್ರವಾದ ದಿನ, ಈ ದಿನ.

ನಮ್ಮ ಕನ್ನಡನಾಡು ಒಂದು ತಪೋಭೂಮಿ. ಇದಕ್ಕೆ ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಭವ್ಯ ಇತಿಹಾಸವಿದೆ. ಅಪಾರವಾದ ಪ್ರಕೃತಿ ಸಂಪತ್ತಿನಿಂದ ಕೂಡಿದ ಭವ್ಯ ನಾಡು, ಈ ಕರುನಾಡು. ಇದು ಚೆನ್ನದ ನಾಡು, ಶ್ರೀಗಂಧದ ಬೀಡಾಗಿದೆ. ಪ್ರಪಂಚದಲ್ಲೇ ಕಾಫಿ ಬೆಳೆಗೆ ಪ್ರಸಿದ್ಧವಾದ ನಾಡು ಕರ್ನಾಟಕ. ಕನ್ನಡ ನಾಡು ಕಲೆ,ಸಂಸ್ಕೃತಿ, ಸಾಹಿತ್ಯಗಳ ತವರಾಗಿ ಮೆರೆದಿದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ಸೋಮನಾಥಪುರ ಮೊದಲಾದ ಪ್ರಸಿದ್ಧ ಶಿಲ್ಪ ಕಲಾಕೇಂದ್ರಗಳು ನಾಡಿನ ಶ್ರೀಮಂತ ಸಂಸ್ಕೃತಿಯ ಪ್ರತೀಕವಾಗಿ ನಿಂತಿವೆ. ಕನ್ನಡ ಸಾಹಿತ್ಯ ಶ್ರೀಮಂತ, ವೈವಿಧ್ಯಪೂರ್ಣವಾಗಿದ್ದು 1200 ವರ್ಷಗಳ ಇತಿಹಾಸ ಹೊಂದಿದೆ.

ಕನ್ನಡನಾಡು ಶತ ಶತಮಾನಗಳಿಂದ ಸಾಧು-ಸಂತರ, ಸಮಾಜ ಸುಧಾರಕರ ನೆಲೆವೀಡು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭುಗಳಂತಹ ಶಿವಶರಣರು ತಮ್ಮ ವಚನ ಚಳವಳಿಯ ಮೂಲಕ, ಪುರಂದರದಾಸ, ಕನಕದಾಸರು ತಮ್ಮ ದಾಸ ಸಾಹಿತ್ಯ ಹಾಗೂ ಶಿಶುನಾಳ ಶರೀಫರು ತಮ್ಮ ತತ್ವ ಪದಗಳ ಮೂಲಕ ಜಗತ್ತಿಗೆ ದಾರಿ ದೀಪವಾದರು. ಪಂಪ, ರನ್ನ, ಪೊನ್ನ, ಗದುಗಿನ ನಾರಣಪ್ಪ (ಕುಮಾರವ್ಯಾಸ), ಹರಿಹರ, ರಾಘವಾಂಕ, ಸರ್ವಜ್ಞ, ಮುದ್ದಣ, ರತ್ನಾಕರ ವರ್ಣಿ, ಲಕ್ಷ್ಮೀಶ ಮತ್ತಿತರ ಕವಿಪುಂಗವರು ಕನ್ನಡ ಭಾಷೆ ಸಮೃದ್ಧವಾಗಲು ಭದ್ರ ಅಡಿಪಾಯ ಹಾಕಿಕೊಟ್ಟರು.

ಕನ್ನಡ ಭಾರತದ ಪ್ರಾಚೀನ ಭಾಷೆಗಳಲ್ಲೊಂದಾಗಿದ್ದು, ದ್ರಾವಿಢ ಭಾಷಾ ವರ್ಗಕ್ಕೆ ಸೇರಿದೆ. 'ಹಲ್ಮಿಡಿ ಶಾಸನ', ಇಷ್ಟರವರೆಗೆ ದೊರತಿರುವ ಕನ್ನಡ ಶಾಸನಗಳಲ್ಲೇ ಪ್ರಥಮವಾದುದು. ಈ ಶಾಸನ ಕ್ರಿ.ಶ 450 ರಲ್ಲಿ ಹಾಸನ ಜಿಲ್ಲೆಯ ಹಲ್ಮಿಡಿ ಗ್ರಾಮದಲ್ಲಿ ದೊರಕಿತು. ಕ್ರಿ.ಶ 850 ರಲ್ಲಿ ರಾಷ್ಟ್ರಕೂಟ ರಾಜ ನೃಪತುಂಗನ ಆಸ್ಥಾನಕವಿಯಾಗಿದ್ದ ಶ್ರೀವಿಜಯ ತನ್ನ 'ಕವಿರಾಜಮಾರ್ಗ' ಎಂಬ ಗ್ರಂಥದಲ್ಲಿ 'ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್' ಎಂದಿದ್ದಾನೆ. ಈ ವಾಕ್ಯ ಪ್ರಾಚೀನ ಕರ್ನಾಟಕದ ಭೌಗೋಳಿಕ ವಿಸ್ತಾರದ ಅಗಾಧತೆಯನ್ನು ಸೂಚಿಸುತ್ತದೆ. ಕ್ರಿ.ಶ 10 ನೇ ಶತಮಾನದಲ್ಲಿ ಆದಿಕವಿ ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನವನದೊಳ್ ಬನವಾಸಿ ದೇಶದೊಳ್' ಎಂದು ಹಂಬಲಿಸುತ್ತಾ ಕರುನಾಡಿನ ಮೇಲಿನ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ. ಅದೇ ಕಾಲ ಘಟ್ಟದಲ್ಲಿ ರಚಿತವಾದ ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' ಕನ್ನಡದ ಪ್ರಥಮ ಗದ್ಯಕೃತಿಯೆಂದೇ ಹೆಸರಾಗಿದೆ. ಅನೇಕ ಕನ್ನಡ ಕವಿಗಳು ಕನ್ನಡ ನೆಲ, ಜಲ, ಸಾಹಿತ್ಯ, ಪ್ರಕೃತಿ ಸಂಪತ್ತು, ಇತಿಹಾಸ, ತಾಯಿನುಡಿಯ ಬಗ್ಗೆ ಹಾಗೂ ಕನ್ನಡ ಏಕೀಕರಣದ ಬಗ್ಗೆ ಕವನಗಳನ್ನು ಬರೆದಿದ್ದಾರೆ.

ಕನ್ನಡ ಏಕೀಕರಣದ ಬಗ್ಗೆ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ।

ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ॥

ಉದಯವಾಗಲಿ...... ಎಂದು ಹುಯಿಲುಗೋಳ ನಾರಾಯಣರಾಯರು ಬರೆದು, ಹಾಡಿದ್ದಾರೆ.

ರಾಷ್ಟ್ರಕವಿ ಕುವೆಂಪು ವಿರಚಿತ, 'ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯಶಿವ'...

'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು'...

'ಕನ್ನಡಕ್ಕಾಗಿ ಕೈ ಎತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ, ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ!' ಮೊದಲಾದ ಹಾಡುಗಳು ಜನರ ಬಾಯಲ್ಲಿ ಇಂದಿಗೂ ನಲಿದಾಡುತ್ತಿದೆ.

ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ
ಕನ್ನಡವೆ ಎನ್ನುಸಿರು ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ ಕನ್ನಡವೆ ಮನೆ ಮಾನ್ಯ
ಕನ್ನಡವೆ ಯೆನಗಾಯ್ತು ಕಣ್ಣು ಕಿವಿ ಬಾಯಿ

ಹೀಗೆಂದು ಕನ್ನಡಾಂಬೆಯ ಹಿರಿಮೆಯನ್ನು ಬಣ್ಣಿಸಿದವರು, ಬಹುಭಾಷಾ ಕೋವಿದರಾದ ಬೆನೆಗಲ್ ರಾಮರಾವ್. ವರಕವಿ ಬೇಂದ್ರೆ ಅವರು 'ಒಂದೇ ಒಂದೇ ಒಂದೇ ಕರ್ನಾಟಕ ಒಂದೇ/ ಹಿಂದೆ, ಮುಂದೆ, ಎಂದೇ ಕರ್ನಾಟಕ ಒಂದೇ/ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ' ಎನ್ನುತ್ತಾ ಕರ್ನಾಟಕದ ರೂಪುಗೊಳ್ಳುವಿಕೆಯ ಉದ್ದೇಶವನ್ನು ವಿವರಿಸುತ್ತಾರೆ.

ಮಂಜೇಶ್ವರ ಗೋವಿಂದ ಪೈ ಅವರು 'ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ, ಹರಸು ತಾಯೆ, ಸುತರ ಕಾಯೆ ನಮ್ಮ ಜನ್ಮದಾತೆಯೆ' ಎಂದು ಕನ್ನಡಾಂಬೆಯನ್ನು ಸ್ತುತಿಸಿದ್ದಾರೆ.

'ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು'- ಭಾಷಾಪ್ರೇಮವನ್ನು ಬಡಿದೆಬ್ಬಿಸುವ ಈ ಗೀತೆ ಬೆಟಗೇರಿ ಕೃಷ್ಣಶರ್ಮರದ್ದು.

ಡಿ. ಎಸ್. ಕರ್ಕಿಯವರು ಬರೆದ 'ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ...' ಪದ್ಯ ಕನ್ನಡಾಭಿಮಾನವನ್ನು ಉದ್ದೀಪನಗೊಳಿಸುತ್ತದೆ.

ವಿ. ಕೃ. ಗೋಕಾಕ್ ಅವರು 'ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ಬೀಡು, ನಮ್ಮ ಕನ್ನಡನಾಡು' ಎನ್ನುತ್ತಾ ಕರುನಾಡಿನ ಹಿರಿಮೆಯನ್ನು ವರ್ಣಿಸುತ್ತಾರೆ.

ಹೀಗೆ, ಕನ್ನಡ ಭಾಷೆಯ ಮೇಲೆ ತಮಗಿರುವ ಅಭಿಮಾನವನ್ನು ವ್ಯಕ್ತಪಡಿಸಿದ ಕವಿಗಳೆಲ್ಲರೂ ಪ್ರಾತಃ ಸ್ಮರಣೀಯರು. ಕನ್ನಡವೆಂದರೆ ಕನ್ನಡಾಭಿಮಾನಿಗಳಿಗೆ ನಾಡು, ನುಡಿ ಸಂಸ್ಕೃತಿಗಳ ಪ್ರತೀಕ. ಆದರೆ ಇತ್ತೀಚೆಗೆ, ರಾಜ್ಯೋತ್ಸವ ಸಮಾರಂಭಗಳಲ್ಲಿ ಕಂಡು ಬರುವ ಆಡಂಬರ, ಅದ್ದೂರಿತನಗಳ ನಡುವೆ 'ಕನ್ನಡತನ' ಮರೆಯಾಗುತ್ತಿರುವುದು ವಿಷಾದನೀಯ. ಪ್ರತಿಯೊಬ್ಬ ಕನ್ನಡಿಗನೂ ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ಕನ್ನಡಿಗನಾಗಿರುವ ಪ್ರತಿಜ್ಞೆ ಮಾಡಬೇಕು. 'ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಕುವೆಂಪುವಾಣಿಯನ್ನು ಕನ್ನಡಿಗರೆಲ್ಲರೂ ನೆನಪಿಟ್ಟುಕೊಳ್ಳಬೇಕು. ಕನ್ನಡ ನಾಡು- ನುಡಿ ಹಾಗೂ ಸಂಸ್ಕೃತಿಗಳ ಬಗ್ಗೆ ಹೆಚ್ಚಿನ ಅಭಿಮಾನ ತಾಳುವ ಸಂಕಲ್ಪ ಮಾಡಬೇಕು. ಕನ್ನಡ ಜನರ ಅಭ್ಯುದಯ ಮುಖ್ಯವಾಗಿ ಕನ್ನಡದಿಂದಲೇ ಆಗಬೇಕು. ಹೀಗಾದಾಗ ಮಾತ್ರ ರಾಜ್ಯೋತ್ಸವಕ್ಕೆ ಮಹತ್ವ ಬರುತ್ತದೆ.

ಶಿಥಿಲವಾಗುತ್ತಿರುವ ಕನ್ನಡದ ಬೇರುಗಳನ್ನು ಭದ್ರಪಡಿಸುವ ಕಾರ್ಯಕ್ಕೆ ಈ ನವೆಂಬರ್ ತಿಂಗಳು ಬುನಾದಿ ಆಗಲಿ ಎಂದು ಆಶಿಸೋಣ.

ಸಮಾಚಾರ ಸಣ್ಣದಲ್ಲ

ಬಿಡಿಎಫ್‌ಎ ಲೀಗ್: ಸೌತ್ ಯುನೈಟೆಡ್‌ಗೆ ಗೆಲುವು

ಬೆಂಗಳೂರು: ಮೊಹಮ್ಮದ್ ಅಲ್ತಾಬ್ ಹುಸೇನ್ ಅವರ ಆಟದ ಬಲದಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 2-0 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಮಣಿಸಿತು. ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಲ್ತಾಬ್ ಅವರು 6ನೇ ಮತ್ತು 47ನೇ ನಿಮಿಷದಲ್ಲಿ ಗೋಲು ಗಳಿಸಿ ಗೆಲುವಿನ ರೂವಾರಿಯಾದರು. ದಿನದ ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 2-1ರಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸೋಲಿಸಿತು. ರೂಟ್ಸ್ ಪರ ಮುಹಮ್ಮದ್ ಉನ್ನೈಸ್ ಎಂ. (51ನೇ ನಿಮಿಷ) ಮತ್ತು ಗಾಡ್ವಿನ್ ಜಾನ್ಸನ್ (68ನೇ) ಅವರು ಗೋಲು ಗಳಿಸಿದರು. ನಂದಕುಮಾರ್ ಡಿ. (21ನೇ) ಅವರು ಪರಿಕ್ರಮ ಪರ ಏಕೈಕ ಗೋಲು ತಂದಿತ್ತರು.

ರಾಣಿ ರಾಂಪಾಲ್‌ಗೆ ಮೋದಿ ಶ್ಲಾಘನೆ

ದೆಹಲಿ: ಅಂತಾರಾಷ್ಟ್ರೀಯ ಆಟಗಳಿಗೆ ಈಚೆಗೆ ನಿವೃತ್ತಿ ಘೋಷಿಸಿದ ಭಾರತ ಮಹಿಳಾ ಹಾಕಿ ತಂಡದ ಮಾಜಿ ನಾಯಕಿ ರಾಣಿ ರಾಂಪಾಲ್ ಅವರ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. 29 ವರ್ಷ ವಯಸ್ಸಿನ ರಾಣಿ ಅವರು 16 ವರ್ಷಗಳ ಹಾಕಿ ವೃತ್ತಿಜೀವನಕ್ಕೆ ಗುರುವಾರ ವಿದಾಯ ಹೇಳಿದರು. ಅವರ ನೇತೃತ್ವದಲ್ಲಿ ಭಾರತ ತಂಡವು 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿತ್ತು.

ನ್ಯೂಜಿಲೆಂಡ್ ವಿರುದ್ಧದ ಸರಣಿ ತನ್ನದಾಗಿಸಿಕೊಂಡ ವನಿತೆಯರು

ಭಾರತಕ್ಕೆ 6 ವಿಕೆಟ್‌ಗಳ ಜಯ

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಭಾರತ ಬಗ್ಗು ಬಡಿದೆ.

1-1ರಲ್ಲಿ ನಡೆಯುತ್ತಿದ್ದ ಈ ಸರಣಿಯೂ ಭಾರತಕ್ಕೆ ಗೆಲಗಲು ಬಹಳ ಮಹತ್ವದ್ದಾಗಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಕಿವೀಸರು, 10 ಓವರ್‌ಗಳಲ್ಲಿ 231ರನ್‌ಗಳನ್ನು ಸಿಡಿಸಿದ್ದರು. 232 ರನ್‌ಗಳನ್ನು ಬೆನ್ನಟ್ಟಿದ ಭಾರತೀಯ ವನಿತೆಯರು 6 ವಿಕೆಟ್‌ಗಳ ಸುಲಭ ಗೆಲುವನ್ನು ತನ್ನದಾಗಿಸಿಕೊಂಡರು.

ಈ ಮೂಲಕ 2024ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಸೋಲಿಗೆ ಭಾರತ ತಂಡದ ವನಿತೆಯರು ಸೇಡು ತೀರಿಸಿಕೊಂಡಿದ್ದಾರೆ.

ಇತ್ತೀಚೆಗೆ ನ್ಯೂಜಿಲೆಂಡ್ ತಂಡ ಟಿ20 ವಿಶ್ವಕಪ್ ಚಾಂಪಿಯನ್ ಆಗಿತ್ತು. ಇದೀಗ ಭಾರತ ವಿರುದ್ಧ ಏಕದಿನ ಸರಣಿಯನ್ನು ಕಳೆದುಕೊಂಡಿರುವುದು ನ್ಯೂಜಿಲೆಂಡ್ ತಂಡಕ್ಕೆ ಭಾರೀ ಹಿನ್ನಡೆಯಾಗಿದೆ. ಈ ಪಂದ್ಯದಲ್ಲಿ ಭಾರತದ ಪರ ಸ್ಮೃತಿ ಮಂಧಾನ ಅಮೋಘ ಶತಕ ಸಿಡಿಸಿ ಮಿಂಚಿದ್ದಾರೆ.

ಅತಿವೇಗವಾಗಿ ಔಟ್ ಆದ ಶಫಾಲಿ ವರ್ಮಾ, ನಂತರ ಯಸ್ತಿಕಾ ಭಾಟಿಯಾ ಜತೆ ಭರ್ಜರಿ 76 ರನ್‌ಗಳ ಪಾರ್ಟನ್‌ಶಿಪ್ ಆಡಿದ ಸ್ಮೃತಿ, ಭಾಟಿಯಾ ಅವರು 35 ರನ್‌ಗಳಿಗೆ ಔಟ್ ಆದಾಗ, ನಂತರ ಬಂದಿದ್ದು ಹರ್ಮನ್ ಪ್ರೀತ್ ಕೌರ್ ಜತೆ 117 ರನ್‌ಗಳ ಭರ್ಜರಿ ಜತೆಯಾಟ ಆಡಿ, ಸರಿಯಾಗಿ 100ರನ್‌ಗಳಿಗೆ ಕ್ರೀಸ್‌ನಿಂದ ಕಾಲ್ಕಿತ್ತರು. ಇದೇ ಪಂದ್ಯದಲ್ಲಿ ತಂಡದ ಮತ್ತೊಬ್ಬ ಆಟಗಾರ್ತಿ ಹರ್ಮನ್‌ಪ್ರೀತ್ ಕೌರ್ ಅವರು ಔಟಾಗದೇ 59 ರನ್‌ಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಭಾರತದ ಒರ ಮಿಂಚಿದ ಎಡಗೈ ಆಟಗಾರ್ತಿ ಸ್ಮೃತಿ ಮಂಧಾನ, 122 ಬಾಲ್‌ಗಳಲ್ಲಿ 10 ಫೋರ್ ಹೊಡೆಯುವುದರ ಮೂಲಕ ಭರ್ಜರಿ ಶತಕ ಸಿಡಿಸಿದ್ದಾರೆ.

ಭಾರತದ ಪರ ದೀಪ್ತಿ ಶರ್ಮಾ 3 ವಿಕೆಟ್‌ಗಳನ್ನು ಪಡೆದರೆ, ಪ್ರಿಯಾ ಶರ್ಮಾ ಅವರು 2 ವಿಕೆಟ್‌ಗಳನ್ನು ಪಡೆದು ಕೊಂಡಿದ್ದಾರೆ. ಅದಲ್ಲದೇ ರೇಣುಕಾ ಸಿಂಗ್, ಸೈಮಾ ಠಾಕೂರ್ ಈರ್ವರು ತಲಾ ಒಂದೊಂದು ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ.

ಉಭಯ ತಂಡಗಳ ನಡುವೆ ಮೂರು ಪಂದ್ಯ ಏಕದಿನ ಸರಣಿ ನಡೆದಿತ್ತು. ಮೊದಲ ಪಂದ್ಯವನ್ನು ಭಾರತ ಗೆದ್ದರೆ, ಎರಡನೇ ಪಂದ್ಯದಲ್ಲಿ ಕಿವೀಸ್ ಪಡೆ ಪ್ರಾಬಲ್ಯ ಸಾಧಿಸಿತ್ತು. ಹೀಗಾಗಿ ಮೂರನೇ ಏಕದಿನ ಪಂದ್ಯದ ಗೆಲುವಿನ ಮೇಲೆ ಎಲ್ಲರ ಚಿತ್ತ ನೆಟ್ಟಿತ್ತು. ಚಾಂಪಿಯನ್ ನ್ಯೂಜಿಲೆಂಡ್ ತಂಡಕ್ಕೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ ಭಾರತ ತಂಡ ತಿರುಗೇಟು ಕೊಟ್ಟಿದೆ.

ಸ್ಕೋರು ಪಟ್ಟಿ

ಭಾರತ: ಸ್ಮೃತಿ ಮಂಧಾನ 100, ಶಫಾಲಿ ವರ್ಮಾ 12, ಯಸ್ತಿಕಾ ಭಾಟಿಯಾ: 35, ಹರ್ಮನ್‌ಪ್ರೀತ್ ಕೌರ್59, ಜಮೈಯಾ ರೋಡ್ರಿಗೀಸ್ 22

ನ್ಯೂಜಿಲೆಂಡ್: ಬ್ರೂಕ್ ಹಾಲಿಡೇ 86, ಜೋರ್ಜಿಯಾ ಪ್ಲಿಮ್ಮರ್ 39, ಲೀ ತಹುಹು 24, ಇಸಾಬೆಲ ಗೇಜ್ 25, ಹನ್ನಾ ರೋವ್ 11

ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ ತಂಡದಲ್ಲಿದ್ದ ವಿಕೆಟ್‌ಕೀಪರ್ ಮ್ಯಾಥ್ಯೂ ವೇಡ್

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮ್ಯಾಥ್ಯೂ ವೇಡ್ ವಿದಾಯ

ಮೆಲ್ಬರ್ನ್: 2021ರ ಟಿ20 ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ ತಂಡದಲ್ಲಿದ್ದ ಮ್ಯಾಥ್ಯೂ ವೇಡ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮಂಗಳವಾರ ವಿದಾಯ ಹೇಳಿದ್ದಾರೆ. 36 ವರ್ಷ ವಯಸ್ಸಿನ ಅವರು ಕೋಚಿಂಗ್‌ನತ್ತ ಮುಖ ಮಾಡಿದ್ದಾರೆ.

ವಿಕೆಟ್‌ಕೀಪರ್, ಬ್ಯಾಟರ್ ಆಗಿರುವ ವೇಡ್, ಮುಂಬರುವ ಪಾಕಿಸ್ತಾನ ವಿರುದ್ಧದ ಟಿ20 ಮತ್ತು ಏಕದಿನ ಸರಣಿಗಾಗಿ ಆಸ್ಟ್ರೇಲಿಯಾದ ಮುಖ್ಯ ಕೋಚ್ ಆ್ಯಂಡ್ರೆ ಬೊರೊವೆಕ್ ಅವರಿಗೆ ಸಾಥ್ ನೀಡಲಿದ್ದು, ಕೋಚಿಂಗ್ ತಂಡವನ್ನು ಸೇರಿಕೊಳ್ಳಲಿದ್ದಾರೆ.

13 ವರ್ಷಗಳ ಕ್ರಿಕೆಟ್ ವೃತ್ತಿಜೀವನದಲ್ಲಿ ವೇಡ್ ಅವರು 36 ಟೆಸ್ಟ್, 97 ಏಕದಿನ ಮತ್ತು 92 ಟಿ20 ಪಂದ್ಯಗಳನ್ನು ಆಸ್ಟ್ರೇಲಿಯಾ ತಂಡಕ್ಕೆ ಆಡಿದ್ದಾರೆ. 2021ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು, 2024ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

ದೇಶೀಯ ಕ್ರಿಕೆಟ್‌ನಲ್ಲಿ ಮುಂದುವರಿಯಲು ನಿರ್ಧರಿಸಿರುವ ಅವರು ಟ್ಯಾಸ್ಮೆನಿಯಾ ತಂಡಕ್ಕೆ ಆಡಲಿದ್ದಾರೆ. ಜೊತೆಗೆ ಬಿಗ್ ಬ್ಯಾಷ್ ಲೀಗ್‌ನಲ್ಲಿ ಹೋಬಾರ್ಟ್ ಹರಿಕೇನ್ಸ್ ತಂಡಕ್ಕೂ ಕನಿಷ್ಠ ಮುಂದಿನ ಎರಡು ಋತುಗಳಲ್ಲಿ ಆಡುವರು.

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮ್ಯಾಥ್ಯೂ ಸಾಧನೆ

- ಪದಾರ್ಪಣೆ 2011
- ಆಡಿದ ಟೆಸ್ಟ್ 36
- ಏಕದಿನ 97
- ಟಿ 20 92
- ಅತೀಹೆಚ್ಚು ರನ್ 117
- ಟಿ20ಯಲ್ಲಿನ ರನ್ 1202
- ಏಕದಿನ ಪಂದ್ಯದ ರನ್‌ಗಳು 1867

ಬಿಹಾರದ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಪಡೆದ ಅಗರವಾಲ್ ಬಳಗ

ರಣಜಿ ಟ್ರೋಫಿ: ಕರ್ನಾಟಕಕ್ಕೆ ಗೆಲುವಿನ ಸಿಹಿ

ಪಟ್ನಾ: ಭಾರತ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಮಧ್ಯಮವೇಗಿ ವೈಶಾಖ ವಿಜಯಕುಮಾರ್ ಮತ್ತು ಅನುಭವಿ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ಸಿ ಗುಂಪಿನ ಮೊದಲೆರಡೂ ಪಂದ್ಯಗಳು ಮಳೆಗೆ ಕೊಚ್ಚಿಹೋಗಿದ್ದವು. ಆದರೆ ಮೂರನೇ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು 8 ವಿಕೆಟ್‌ಗಳಿಂದ ಬಿಹಾರ ವಿರುದ್ಧ ಜಯಿಸಿತು. 6 ಅಂಕಗಳನ್ನು ತನ್ನದಾಗಿಸಿಕೊಂಡಿತು. ವೈಶಾಖ (44ಕ್ಕೆ3) ಮತ್ತು ಶ್ರೇಯಸ್ (70ಕ್ಕೆ4) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಬಿಹಾರ ತಂಡವು ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಬಹಳಷ್ಟು ಪ್ರಯತ್ನಿಸಿತು. ತಂಡದ ಬಲಗೈ ಬ್ಯಾಟರ್ ಶಕೀಬುಲ್ ಗಣಿ (130; 194ಎ, 4★15, 6★4) ಸುಂದರ ಶತಕ ಕೂಡ ದಾಖಲಿಸಿದರು. ಆದರೂ ಕರ್ನಾಟಕ ತಂಡದ ಬೌಲರ್‌ಗಳು ಬಿಹಾರ ತಂಡವನ್ನು ಎರಡನೇ ಇನಿಂಗ್ಸ್‌ನಲ್ಲಿ 212 ರನ್‌ಗಳಿಗೆ ಕಟ್ಟಿಹಾಕಿತು. ಅದರಿಂದಾಗಿ ಲಭಿಸಿದ 69 ರನ್‌ಗಳ ಗುರಿಯನ್ನು 10.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ತಲುಪಿತು. ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (ಔಟಾಗದೆ 28) ಮತ್ತು ಅಭಿನವ್ ಮನೋಹರ್ (ಔಟಾಗದೆ 17) ತಂಡವನ್ನು ಗೆಲುವಿನ ದಡ ಸೇರಿಸಿದರು.

ಬಿಹಾರ ತಂಡವು ಮೊದಲ ಇನಿಂಗ್ಸ್‌ನಲ್ಲಿ 143 ರನ್ ಗಳಿಸಿತ್ತು. ಆದರೆ ಎರಡನೇ ದಿನದಾಟವು ಮಳೆಯಿಂದಾಗಿ ನಡೆದಿರಲಿಲ್ಲ. ಮೂರನೇ ದಿನ ಮತ್ತು ನಾಲ್ಕನೇ ದಿನದ ಬೆಳಿಗ್ಗೆ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ ಮಯಂಕ್ ಅಗರವಾಲ್ ಶತಕ ಮತ್ತು ಮನೀಷ್ ಪಾಂಡೆ ಅರ್ಧಶತಕದ ಬಲದಿಂದ 51 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 287 ರನ್ ಗಳಿಸಿತು. 144 ರನ್‌ಗಳ ಮುನ್ನಡೆ ಸಾಧಿಸಿತು.

ಕರ್ನಾಟಕದ ಬೌಲರ್‌ಗಳು ಮೊದಲಿಗೆ ಇನಿಂಗ್ಸ್ ಜಯಕ್ಕಾಗಿ ಪ್ರಯತ್ನ ನಡೆಸಿದರು. ಈ ನಿಟ್ಟಿನಲ್ಲಿ ವೇಗದ ಜೋಡಿ ವಿ. ಕೌಶಿಕ್ ಮತ್ತು ವೈಶಾಖ ಅವರು ಉತ್ತಮ ಆರಂಭ ನೀಡಿದರು. ಬಿಹಾರ ತಂಡವು 6 ರನ್‌ಗಳಿಗೆ 2 ವಿಕೆಟ್ ಕಳೆದುಕೊಳ್ಳಲು ಕಾರಣರಾದರು.

ಆದರೆ ಈ ಸಂದರ್ಭದಲ್ಲಿ ಗಣಿ ಮತ್ತು ಬಾಬುಲ್ ಕುಮಾರ್ (44; 111ಎ) ಬೌಲರ್‌ಗಳನ್ನು ಕಾಡಿದರು. 3ನೇ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿದರು. ಇದರಿಂದಾಗಿ ಕರ್ನಾಟಕಕ್ಕೆ ಇನಿಂಗ್ಸ್ ಜಯಸಾಧಿಸುವ ಗುರಿ ಕೈತಪ್ಪಿತು. ಆದರೂ ಗೆಲುವಿನ ಆಸೆ ಬಿಡಲಿಲ್ಲ. 40ನೇ ಓವರ್‌ನಲ್ಲಿ ಬಾಬುಲ್ ಕುಮಾರ್ ವಿಕೆಟ್ ಗಳಿಸಿದ ಶ್ರೇಯಸ್ ಜೊತೆಯಾಟವನ್ನು ಮುರಿದರು. ಇಲ್ಲಿಂದ ಮುಂದೆ ಯಾವ ಬ್ಯಾಟರ್ ಕೂಡ ಕ್ರೀಸ್‌ನಲ್ಲಿ ಕಾಲೂರದಂತೆ ಬೌಲರ್‌ಗಳು ದಾಳಿ ನಡೆಸಿದರು.

ಈ ನಡುವೆಯೂ ಶತಕ ಗಳಿಸಿದ ಶಕೀಬುಲ್ ಕೊನೆಯವರಾಗಿ ಔಟಾದರು. ವಿದ್ಯಾಧರ್ ಪಾಟೀಲ ಅವರು ಶಕೀಬುಲ್ ಅವರನ್ನು ಎಲ್ಬಿಡಬ್ಲ್ಯು ಬಲೆಗೆ ಕೆಡವಿದರು.

ಸ್ಪೇನ್, ಮ್ಯಾಂಚೆಸ್ಟರ್ ಸಿಟಿಯ ಫುಟ್‌ಬಾಲ್ ತಾರೆ

ರೋಡ್ರಿಗೆ ಬ್ಯಾಲನ್ ಡಿ'ಓರ್ ಪ್ರಶಸ್ತಿ

ಪ್ಯಾರಿಸ್: ಸ್ಪೇನ್‌ನ ಸ್ಟಾರ್ ಆಟಗಾರ, ಮ್ಯಾಂಚೆಸ್ಟರ್ ಸಿಟಿ ಮಿಡ್ ಫೀಲ್ಡರ್ ರೋಡ್ರಿ ಅವರು ಫ್ರಾನ್ಸ್ ಫುಟ್ಬಾಲ್ ನಿಯತ ಕಾಲಿಕೆ ನೀಡುವ ಪ್ರತಿಷ್ಠಿತ ಬ್ಯಾಲನ್ ಡಿ'ಓರ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಈ ಪ್ರಶಸ್ತಿ ಬಾರ್ಸಿಲೋನಾ ಮತ್ತು ಸ್ಪೇನ್ ತಾರೆ ಐತಾನಾ ಬೊನ್ಮತಿ ಪಾಲಾಯಿತು. ಇದು ಅವರಿಗೆ ಲಭಿಸಿದ 2ನೇ ಬ್ಯಾಲನ್ ಡಿ'ಓರ್ ಪ್ರಶಸ್ತಿ.

28 ವರ್ಷ ವಯಸ್ಸಿನ ರೋಡ್ರಿ ಅವರು ಪ್ರಶಸ್ತಿ ರೇಸ್‌ನಲ್ಲಿ ರಿಯಲ್ ಮ್ಯಾಡ್ರಿಡ್ ಆಟಗಾರರಾದ ವಿನಿಶಿಯಸ್ ಜ್ಯೂನಿಯರ್, ಜ್ಯೂಡ್ ಬೆಲ್ಲಿಂಗ್ ಹ್ಯಾಮ್ ಅವರನ್ನು ಹಿಂದಿಕ್ಕಿದರು. ಕಳೆದ ಸೀಸನ್‌ನಲ್ಲಿ ಸತತ ನಾಲ್ಕನೇ ಬಾರಿಗೆ ಮ್ಯಾಂಚೆಸ್ಟರ್ ಸಿಟಿ ತಂಡ ಪ್ರಿಮಿಯರ್ ಲೀಗ್ ಪ್ರಶಸ್ತಿ ಗೆಲ್ಲುವಲ್ಲಿ ರೋಡ್ರಿ ಅದ್ಭುತ ಕೊಡುಗೆ ನೀಡಿದ್ದರು.

1990 ರಲ್ಲಿ ಸ್ಪೇನ್‌ನ ಲೋಥರ್ ಮ್ಯಾಥೌಸ್ ನಂತರ ಬ್ಯಾಲನ್ ಡಿ'ಓರ್ ಗೆದ್ದ ಮೊದಲ ಮಿಡ್ ಫೀಲ್ಡರ್ ರೋಡ್ರಿ. ಇದಕ್ಕೂ ಮುನ್ನ ಆಲ್ಫ್ರೆಡೋ ಡಿ ಸ್ಟೆಫಾನೊ (1957 ಮತ್ತು 1959) ಹಾಗು ಲೂಯಿಸ್ ಸೌರೆಜ್ (1960) ಬ್ಯಾಲನ್ ಡಿ'ಓರ್ ಪ್ರಶಸ್ತಿನ್ನು ಗೆದ್ದಿದ್ದರು.

ಈ ಬಾರಿ ಫುಟ್ಬಾಲ್ ದಿಗ್ಗಜರಾದ ಲಿಯೋನೆಲ್ ಮೆಸ್ಸಿ ಅಥವಾ ಕ್ರಿಸ್ಟಿಯಾನೋ ರೊನಾಲ್ಡೊ ಅವರನ್ನು ನಾಮನಿರ್ದೇಶನ ಪಟ್ಟಿಯಿಂದ ಹೊರಗಿಡಲಾಗಿತ್ತು.

2008 ರಿಂದ ಇದು ಮೂರನೇ ಬಾರಿಗೆ ಲಿಯೋನೆಲ್ ಮೆಸ್ಸಿ ಅಥವಾ ಕ್ರಿಸ್ಟಿಯಾನೊ ರೊನಾಲ್ಡೊ ಹೊರತುಪಡಿಸಿ ಬೇರೆ ಆಟಗಾರ ಪ್ರಶಸ್ತಿಯನ್ನು ಗೆದ್ದಿರುವುದು.

ಅಲ್ಲದೆ, 2003 ರ ನಂತರ ಮೊದಲ ಬಾರಿಗೆ ಇಬ್ಬರು ಸ್ಟಾರ್ ಆಟಗಾರರು ಪ್ರಶಸ್ತಿಗೆ ನಾಮನಿರ್ದೇಶನ ಗೊಂಡವರ ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ.

ವಿಟಾಕೀಸ್

ಪುನೀತ್ ಪುಣ್ಯಸ್ಮರಣೆ

ಅಪ್ಪು ನೆನೆದ ಅಭಿಮಾನಿಗಳು

ಕರ್ನಾಟಕ ರತ್ನ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನೆಲ್ಲ ಅಗಲಿ ಮೂರು ವರ್ಷಗಳೇ ಕಳೆದಿವೆ, ಆದರೂ ಅಪ್ಪು ಇಲ್ಲ ಎನ್ನುವ ನೋವು ಇನ್ನೂ ಮನದಲ್ಲಿ ಮಾಸಿಲ್ಲ. ಅಪ್ಪು ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಇಂದು ಪುನೀತ್ ರಾಜ್‌ಕುಮಾರ್ ಅವರ ಮೂರನೇ ವರ್ಷದ ಪುಣ್ಯ ಸ್ಮರಣೆ. ಹಾಗಾಗಿ ಅಪ್ಪು ಸಮಾಧಿಯನ್ನು ವಿವಿಧ ರಿತಿಯ ಹೂವುಗಳಿಂದ ಅಲಂಕರಿಸಲಾಗುತ್ತು.

ಅಭಿಮಾನಿಗಳು ಅನ್ನದಾನ, ರಕ್ತದಾನ ಶಿಬಿರವನ್ನು ಹಮ್ಮಿಕೊಂಡಿದ್ದರು.

ಸೇವಾ ಮನೋಭಾವ ಇರಲಿ

ಅಪ್ಪು ಪುಣ್ಯ ಸ್ಮರಣೆಯ ಹಿನ್ನೆಲೆಯಲ್ಲಿ ರಾಘವೇಂದ್ರ ರಾಜ್‌ಕುಮಾರ್ ಅಭಿಮಾನಿಗಳಲ್ಲಿ ವಿಶೇಷ ಮನವಿ ಮಾಡಿದ್ದಾರೆ. ಅಪ್ಪುವನ್ನು ನೆನಯದೇ ದಿನವಿಲ್ಲ. ದಿನಗಳು ಬೇಗ-ಬೇಗ ಹೋಗುತ್ತಲೇ ಇವೆ, ಆದರೆ ನಾವು ಮಾತ್ರ ಪ್ರತಿದಿನವೂ ಪ್ರೀತಿಯ ಪುನೀತ್‌ನನ್ನು ನೆನಪಿಸಿಕೊಳ್ಳುತ್ತಲೇ ಇದ್ದೀವಿ. ಅಪ್ಪು ಮೇಲೆ ಜನಗಳ ಪ್ರೀತಿ-ವಿಶ್ವಾಸ ಹೆಚ್ಚುತ್ತಿದೆ. ಪ್ರತಿ ವರ್ಷ ಎಲ್ಲರೂ ಸಮಾಧಿಗೆ ಬಂದು ಪೂಜೆ ಸಲ್ಲಿಸುತ್ತಿದ್ದಾರೆ. ಅಪ್ಪು ಮಾಡಿದ ಸೇವೆಗಳನ್ನು ನೀವು ಮಾಡಿ, ಅವರ ಸೇವಾ ಮನೋಭಾವ ನೀವು ಅಳವಡಿಸಿಕೊಳ್ಳಿ. ನಿಮ್ಮ ಕೈಲಾದ ಮಟ್ಟಿಗೆ ಸೇವೆ ಮಾಡಿ. ಅದೇ ಅಪ್ಪುಗೆ ನಾವು ತೋರಿಸುವ ಗೌರವ. ಅಪ್ಪು ನಮಗೆಲ್ಲ ಸ್ಫೂರ್ತಿ ಅದೇ ಕಾರಣಕ್ಕೆ ಅವರ ಹುಟ್ಟುಹಬ್ಬವನ್ನು ಸ್ಫೂರ್ತಿಯ ದಿನ ಎಂದು ಆಚರಣೆ ಮಾಡಲಾಗುತ್ತಿದೆ ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದರು. ರಾಜ್ಯದ ಮೂಲೆ ಮೂಲೆಗಳಿಂದ ಅಪ್ಪು ಅಭಿಮಾನಿಗಳು ಆಗಮಿಸಿದ್ದಾರೆ, ಅವರ ಪ್ರೀತಿಯ ಬಗ್ಗೆ ಮಾತನಾಡಲು ನನ್ನ ಬಳಿ ಪದಗಳಿಲ್ಲ. ಅವರ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ, ರಾಜ್ಯದಾದ್ಯಂತ ಹಲವೆಡೆ ಅಪ್ಪು ಅಭಿಮಾನಿಗಳು ರಕ್ತದಾನ ಶಿಬಿರ, ಅನ್ನದಾನ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದಾರೆ. ಅವರನ್ನು ನಾನು ದೇವರುಗಳೆಂದೇ ಕರೆಯುತ್ತೇನೆ. ದೇವರು ಮಾತ್ರ ಹೀಗೆ ಸೇವೆ ಮಾಡಲು ಸಾಧ್ಯ. ಆ ಅಭಿಮಾನಿಳ ಮೂಲಕವೇ ಅಪ್ಪು ಬದುಕುತ್ತಿದ್ದಾನೆ. ಅಪ್ಪು ಈಗ ನಮ್ಮ ಮನೆಯವನಲ್ಲ ಅವನು ಎಲ್ಲರ ಕುಟುಂಬದವನು ಎಂದು ರಾಘವೇಂದ್ರ, ರಾಜ್‌ಕುಮಾರ್ ಹೇಳಿದ್ದಾರೆ.

ದೊಡ್ಮನೆ ಕುಟುಂಬದವರು ಅಪ್ಪು ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಸಮಾಧಿಯ ಬಳಿ ಅಪ್ಪುಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಇರಿಸಿ ಪೂಜೆ ನೆರವೇರಿಸಿದರು. ಅಶ್ವಿನಿ ಪುನೀತ್ ರಾಜ್ ಕುಮಾರ್, ಪುತ್ರಿ ವಂದನಾ, ರಾಘವೇಂದ್ರ ರಾಜ್‌ಕುಮಾರ್, ಮಂಗಳಾ ರಾಘವೇಂದ್ರ ರಾಜ್‌ಕುಮಾರ್, ವಿನಯ್ ರಾಜ್‌ಕುಮಾರ್, ಯುವರಾಜ್‌ಕುಮಾರ್ ಹೀಗೆ ಹಲವು ಕುಟುಂಬ ಸದಸ್ಯರು ಪಾಲ್ಗೊಂಡು ಪೂಜೆ ಸಲ್ಲಿಸಿ ಅಪ್ಪು ನೆನದರು. ಅಪ್ಪು ಸಮಾಧಿ ದರ್ಶನಕ್ಕಾಗಿ ರಾಜ್ಯದ ಮೂಲೆ ಮೂಲೆಗಳಿಂದ ಲಕ್ಷಾಂತರ ಅಭಿಮಾನಿಗಳು ಆಗಮಿಸಿ, ಅಪ್ಪು ನೆನೆದು ಕಂಬನಿ ಮಿಡಿದರು. ಅಪ್ಪು ಪುಣ್ಯ ಸ್ಮರಣೆ ಹಿನ್ನೆಲೆ

ಇತ್ತ ನಟ ಜಗ್ಗೇಶ್ ಅಪ್ಪು ನೆನೆದು ಭಾವುಕವಾದ ಪೋಸ್ಟನ್ನ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ನೀ ಮಗುವಾಗಿದ್ದಾಗ ಅಪ್ಪನ ಮಡಿಲಲ್ಲಿ ಕಂಡಿದ್ದೆ, ಅಪ್ಪನ ಭುಜದವರೆಗೆ ಬೆಳೆದಾಗ ಅಪ್ಪನ ಪಕ್ಕದಲ್ಲಿ ಕಂಡಿದ್ದೆ, ಮದುವೆಯಾದಾಗ ಮಡದಿಯ ಪಕ್ಕದಲ್ಲಿ ಕಂಡಿದ್ದೆ, ನಟನಾಗಿ ಬೆಳೆದಾಗ ಅಭಿಮಾನಿಗಳ ಹೃದಯದಲ್ಲಿ ಕಂಡಿದ್ದೆ, ಗೆಳೆಯನಾದಾಗ ನಿನ್ನ ನಗುವನ್ನು ಕಂಡಿದ್ದೆ, ಮರೆಯಾದ ಮೇಲೆ ನಿನ್ನಂತೆ ಯಾರನ್ನೂ ಕಂಡಿಲ್ಲ, ಯಾವಾಗಲೂ ನಿನ್ನ ಪ್ರೀತಿಸುತ್ತೇನೆ ಎಂದು ಜಗ್ಗೇಶ್, ಅಪ್ಪು ಅವರನ್ನು ಸ್ಮರಿಸಿದ್ದಾರೆ.

ಯು 235ನಲ್ಲಿ ರೋಚಕ ಕಥೆ

ಹಿರಿಯ ನಟ ದೇವರಾಜ್ ಇಂದಿಗೂ ಬೇಡಿಕೆಯ ನಟರಾಗಿದ್ದಾರೆ. ಕನ್ನಡ ಮಾತ್ರವಲ್ಲ ಪರಭಾಷೆಯ ಸಿನಿಮಾಗಳಲ್ಲಿಯೂ ಅಭಿನಯಿಸುತ್ತಿದ್ದಾರೆ. ಈಗ ಹೊಸಬರೇ ಸೇರಿ ನಿರ್ಮಿಸಿ ನಿರ್ದೇಶಿಸಿರುವ ಯು 235 ಚಿತ್ರದಲ್ಲಿ ದೇವರಾಜ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು ಭರವಸೆ ಮೂಡಿಸಿದೆ. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾ ಇದಾಗಿದ್ದು, ಹಳ್ಳಿಯಲ್ಲಿ ನಡೆಯುವ ನಿಗೂಢ ಘಟನೆಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಕೃಷ್ಣ ಚಚಿರಾಗ್ ಕಥೆ ಚಿತ್ರಕಥೆ ಬರೆದಿರುವ ಈ ಚಿತ್ರವನ್ನು ಸಿ.ಎನ್. ಚನ್ನೇಗೌಡ ನಿರ್ದೇಶನ ಮಾಡಿದ್ದಾರೆ.

ವಿವೇಕ್ ನಾಯಕನಾಗಿ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿ ದ್ದಾರೆ, ಹಿಮಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಪೂಜಾ ದುರ್ಗಣ್ಣ, ದಿನೇಶ್ ಮಂಗಳೂರು, ರಾಜೇಶ್ ನಟರಂಗ, ಹನುಮಂತೇ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಇದು ನನ್ನ ಮೊದಲ ನಿರ್ದೇಶನದ ಚಿತ್ರ, ನಾಯಕಿ ಯುರೇನಿಂ ಪತ್ತೆಗಾಗಿ ಸಂಶೋಧನೆ ಮಾಡುವಾಗ ಸಂಕಷ್ಟಕ್ಕೆ ಸಿಲುಕುತ್ತಾಳೆ, ಅದರಿಂದ ಆಕೆ ಹೇಗೆ ಹೊರಗೆ ಬರುತ್ತಾಳೆ, ಹಳ್ಳಿಯಲ್ಲಿ ನಡೆಯುತ್ತಿರುವ ನಿಗೂಢತೆಗೆ ಕಾರಣ ಏನು ಎಂಬುದನ್ನು ಇಲ್ಲಿ ರೋಚಕವಾಗಿ ಕಟ್ಟಿಕೊಟ್ಟಿದ್ದೇವೆ. ಅದರ ಜತೆಗೆ ಕೋರ್ಟ್ ರೂಮ್ ಸನ್ನಿವೇಶಗಳು ಜನರ ಗಮನ ಸೆಳೆಯಲಿವೆ. ದೇವರಾಜ್ ಸರ್ ಚಿತ್ರದಲ್ಲಿ ಬಹು ಮುಖ್ಯವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ನಿರ್ದೇಶಕ ಚನ್ನೇಗೌಡ ಹೇಳಿದರು.

ಗೀತಾ ಕ್ರಿಯೇಷನ್ಸ್ ಲಾಂಛನದಲ್ಲಿ ಗೀತಾ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನಾನು ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೆ. ಆದರೂ ಸಿನಿಮಾದ ಬಗ್ಗೆ ಅಪಾರ ಆಸಕ್ತಿಯಿತ್ತು.

ಒಂದು ಒಳ್ಳೆಯ ಸಿನಿಮಾ ನಿರ್ಮಾಣ ಮಾಡಬೇಕು ಎಂಬ ಕನಸು ಬಹುದಿನಗಳಿಂದಲೂ ಇತ್ತು, ಈ ಚಿತ್ರದ ಮೂಲಕ ಅದು ನನಸಾಗಿದೆ ಎಂದು ನಿರ್ಮಾಪಕಿ ಗೀತಾ ತಿಳಿಸಿದರು. ಮಂಜುನಾಥ್ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ.

ಸದ್ದು ಮಾಡುತ್ತಿದ್ದಾನೆ ತಾರಕೇಶ್ವರ

ಭಕ್ತಿ ಪ್ರಧಾನ ಕಥೆಯ ತಾರಕೇಶ್ವರ ಚಿತ್ರ ತೆರೆಗೆ ಸಿದ್ಧವಾಗಿದೆ, ಸದ್ಯ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸದ್ದು ಮಾಡುತ್ತಿದೆ. ವೇದಾಂತ ಆಚಾರ್ಯ ಮಂಜುನಾಥ ಭಾರತಿ ಸ್ವಾಮಿಜಿ ಹಾಗೂ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ತಾರಕೇಶ್ವರ ಪೌರಾಣಿಕ ಕಥೆಯ ಸಿನಿಮಾವಾಗಿದ್ದು ತಾಂತ್ರಿಕ ಸ್ಪರ್ಶದಿಂದ ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಪುರುಷೋತ್ತಮ್ ಓಂಕಾರ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರವನ್ನು ಗಣೇಶ್‌ರಾವ್ ಕೇಸರ್‌ಕರ್ ನಿರ್ಮಿಸಿದ್ದಾರೆ, ಜತೆಗೆ ತಾರಕೇಶ್ವರನಾಗಿಯೂ ನಟಿಸಿದ್ದಾರೆ. ಶಿವಪುರಾಣದ ಕಥೆಯಲ್ಲಿ ಬರುವ ತಾರಕಾಸುರ ತನ್ನ ತಂದೆಯನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪ್ಪಸ್ಸು ಮಾಡಿ ತನಗೆ ಸಾವು ಬಾರದೆಂದು ಬ್ರಹ್ಮನಿಂದ ವರ ಪಡೆದುಕೊಳ್ಳುತ್ತಾನೆ. ಮುಂದೆ ಅವನ ಹೋರಾಟ ಹೇಗಿರುತ್ತದೆ ಎಂಬುದನ್ನು ಕುತೂಹಲ ಭರಿತವಾಗಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ಗಣೇಶ್ ರಾವ್ ಪುತ್ರ ಪ್ರಜ್ವಲ್ ಕೇಸರ್ ಕರ್ ಇಂದ್ರನಾಗಿ ಕಾಣಿಸಿಕೊಂಡಿದ್ದಾರೆ. ರಾಜನ ಮಗಳು, ಶಿವ ಭಕ್ತೆ, ಪಾರ್ವತಿಯಾಗಿ ರೂಪಾಲಿ ಅಭಿನಯಿಸಿದ್ದಾರೆ. ತಾರಕೇಶ್ವರನನ್ನು ಸಂಹಾರ ಮಾಡುವ ಬಾಲ ಸುಬ್ರಹ್ಮಣ್ಯನಾಗಿ ಬಾಲ ನಟಿ ಋತುಸ್ಪರ್ಶ ಬಣ್ಣಹಚ್ಚಿದ್ದಾರೆ. ಇವರೊಂದಿಗೆ ಸುಮಿತಾ ಪ್ರವೀಣ್, ಅನ್ನಪೂರ್ಣಾ, ವಿಕ್ರಂಸೂರಿ-ನಮಿತಾ ರಾವ್, ಶಂಕರಭಟ್, ಶ್ರೀವಿಷ್ಣು, ಜಿಮ್ ಶಿವು, ಎನ್.ಟಿ.ರಾಮಸ್ವಾಮಿ, ಗುರುರಾಜ್, ಹೆಜ್ಜಾಜಿ ಮಹಾದೇವ, ಬಸವರಾಜ ದೇಸಾಯಿ, ವೀರೇಂದ್ರ ಬೆಳ್ಳಿಚುಕ್ಕಿ, ಮಧು ಕಾರ್ತಿಕ್, ಗೀತಾ, ರಾಜೇಶ್ವರಿ ಪಾಂಡೆ, ರಕ್ಷಾಗೌಡ, ರಂಜಿತಾ ಮುಂತಾದವರು ತಾರಾಗಣದಲ್ಲಿದ್ದಾರೆ. ರಾಜ್‌ಭಾಸ್ಕರ್ ಸಂಗೀತ ನಿರ್ದೇಶನ, ಮುತ್ತುರಾಜ್ ಛಾಯಾಗ್ರಹಣ, ಅನಿಲ್ ಕುಮಾರ್ ಸಂಕಲನ, ಕಪಿಲ್ ನಿರ್ದೇಶನ, ಈ ಚಿತ್ರಕ್ಕಿದೆ. ಬೆಂಗಳೂರು, ಶ್ರೀರಂಗ ಪಟ್ಟಣ, ಮೈಸೂರು ಸುತ್ತ ಮುತ್ತ ಚಿತ್ರೀಕರಣ ನಡೆಸ ಲಾಗಿದೆ.

ನಮ್ಮ ಚಿತ್ರಕ್ಕೆ ಸೆನ್ಸಾರ್ ಮಂಡಳಿಯವರು ಪ್ರಶಂಸೆ ವ್ಯಕ್ತಪಡಿಸಿ ಯಾವುದೇ ದೃಶ್ಯಕ್ಕೆ ಆಕ್ಷೇಪ ವ್ಯಕ್ತಪಡಿಸದೆ ಯು ಪ್ರಮಾಣ ಪತ್ರ ನೀಡಿದ್ದಾರೆ. ಪೌರಾಣಿಕ ಚಿತ್ರ ಮಾಡುವ ಕನಸಿತ್ತು, ಅದು ಈಗ ಈಡೇರಿದೆ. ಪೌರಾಣಿಕ ಸಿನಿಮಾ ನಿರ್ಮಿಸಿ ತೆರೆಗೆ ತರುವುದು ಸುಲಭದ ಮಾತಲ್ಲ, ಇಡೀ ಚಿತ್ರತಂಡದ ಶ್ರಮದಿಂದ ಒಳ್ಳೆಯ ಸಿನಿಮಾ ಸಿದ್ಧವಾಗಿದೆ. ನಾನು ಈ ಚಿತ್ರದಲ್ಲಿ ತಾರಕೇಶ್ವರ, ಶಿವ, ಮಹಾರಾಜ ಮತ್ತು ಅಂದನ ಪಾತ್ರ ಹೀಗೆ ನಾಲ್ಕು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದೇನೆ.

-ಗಣೇಶ್‌ರಾವ್ ಕೇಸರ್‌ಕರ್ ನಟ, ನಿರ್ಮಾಪಕ

ವಿಶ್ವವಾಣಿ ದೀಪಾವಳಿ ವಿಶೇಷಾಂಕ 2024

ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಮುಖಪುಟವನ್ನು ಹೊತ್ತ ವಿಶ್ವವಾಣಿ ದೀಪಾವಳಿ ವಿಶೇಷಾಂಕ 2024, ಅನನ್ಯವಾಗಿ ಮೂಡಿಬಂದಿದೆ. ಬೇರೆ ಪತ್ರಿಕೆಗಳ ವಿಶೇಷಾಂಕಗಳು ಸಿನಿಮಾ ಕ್ಷೇತ್ರದ ತಾರೆಯರ ಮುಖಪುಟವನ್ನು ಹೊಂದಿದ್ದರೆ, ವಿಶ್ವವಾಣಿ ದೀಪಾವಳಿ ವಿಶೇಷಾಂಕದ ಮುಖಪುಟವು ಅಧ್ಯಾತ್ಮ ಚಿಂತನೆಯನ್ನು ಒಳಗೊಂಡಿದೆ. ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರ ಸಮಾಜಮುಖಿ ಕಾರ್ಯಕ್ರಮಗಳ ವಿವರವನ್ನು ನೀಡುವ ವಿಶೇಷ ಲೇಖನವು ಈ ಸಂಚಿಕೆಯ ಹೈಲೈಟ್. ಆರ್ಟ್ ಪೇಪರ್ ನಲ್ಲಿ ಮುದ್ರಣಗೊಂಡಿರುವ ಈ ಸಂಚಿಕೆಯ ಎಲ್ಲಾ ಪುಟಗಳು ವರ್ಣಮಯವಾಗಿರುವುದು ಓದುವವರಿಗೆ ಇಷ್ಟವಾಗುತ್ತವೆ ಎಂಬ ನಂಬಿಕೆ ನಮ್ಮದು. **ಎಲ್ಲರಿಗೂ ದೀಪಾವಳಿಯ ಶುಭಾಶಯಗಳು.**

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷ ಸಂಚಿಕೆ ಅನಾವರಣದ ಕ್ಷಣಗಳು.

ವಿಶ್ವವಾಣಿ ಹೊರತಂದಿರುವ ಸಂಗ್ರಹ ಯೋಗ್ಯ ಸಂಚಿಕೆ ವಿಶೇಷಾಂಕ ಮಾರುಕಟ್ಟೆಯಲ್ಲಿ ಲಭ್ಯ

ದೀಪಾವಳಿ ವಿಶೇಷಾಂಕ ಸಿಎಂ ಅನಾವರಣ

ಬೆಂಗಳೂರು: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ವಿಶೇಷಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು.

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕೃಷ್ಣದಲ್ಲಿ ಸಿದ್ದರಾಮಯ್ಯ ಅವರು ವಿಶ್ವವಾಣಿ ದೀಪಾವಳಿ ವಿಶೇಷಾಂಕವನ್ನು ಮಂಗಳವಾರ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು, 'ವಿಶ್ವವಾಣಿ ದೀಪಾವಳಿ ವಿಶೇಷಾಂಕವನ್ನು ಅತ್ಯಂತ ಸಂತೋಷ ದಿಂದ ಬಿಡುಗಡೆ ಮಾಡಿದ್ದೇನೆ. ವಿಶ್ವೇಶ್ವರ ಭಟ್ ಅವರು ಈ ವಿಶೇಷಾಂಕಕ್ಕಾಗಿ ಉತ್ತಮ ಲೇಖನಗಳನ್ನೇ ಬರೆಸಿರುತ್ತಾರೆ. ಜನರಿಗೆ ಉಪಯುಕ್ತವಾದ ಲೇಖನಗಳೇ ಈ ವಿಶೇಷಾಂಕದಲ್ಲಿರಲಿದೆ' ಎಂದು ಅಭಿಪ್ರಾಯಪಟ್ಟರು.

ಬೋವಿ ಮಠದ ಪೀಠಾಧಿಪತಿ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರು ಮಾತನಾಡಿ, ''ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ'' ಎಂಬ ಬಸವಣ್ಣನವರ ವಚನದಂತೆ ವಿಶ್ವೇಶ್ವರ ಭಟ್ಟರು ಪ್ರತಿ ಮನೆಯಲ್ಲಿ ಜ್ಞಾನದ ಜ್ಯೋತಿ ಬೆಳಗಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು. ವಿಶ್ವವಾಣಿಯ ಪ್ರಯತ್ನವೇ ವಿಶ್ವವನ್ನು ಜ್ಞಾನದ ಕಡೆ ತೆಗೆದುಕೊಂಡು ಹೋಗುವುದಾಗಿದೆ ಎಂದರು. ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಮಾತನಾಡಿ, ವಿಶೇಷಾಂಕಗಳ ಮುಖಪುಟಕ್ಕೆ ಸಾಮಾನ್ಯವಾಗಿ ಸಿನಿಮಾ ತಾರೆಯರ, ಸೆಲೆಬ್ರಿಟಿಗಳ ಫೋಟೊಗಳನ್ನು ಬಳಸುತ್ತಾರೆ. ಆದರೆ ನಾವು ಈ ಸಂಪ್ರದಾಯ ಮುರಿದು ಸ್ವಾಮೀಜಿಗಳ ಫೋಟೊಗಳನ್ನು ಬಳಸುತ್ತಿದ್ದೇವೆ ಎಂದರು. ವಿಶ್ವವಾಣಿ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ ಉಪಸ್ಥಿತರಿದ್ದರು.

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷ ಸಂಚಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಬಿಡುಗಡೆಗೊಳಿಸಿದರು. ಈ ವೇಳೆ ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಬೋವಿಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ವಿಶ್ವವಾಣಿ ಕಾರ್ಯನಿರ್ವಹಣಾಧಿಕಾರಿ ಚಿದಾನಂದ ಕಡಲಾಸ್ಕರ ಇದ್ದರು.

ವಿಶ್ವವಾಣಿ ದಿನಪತ್ರಿಕೆ ಹೊರತಂದಿರುವ ದೀಪಾವಳಿ ವಿಶೇಷಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಓದುತ್ತಿರುವುದು.

ವಿಶೇಷಾಂಕದಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಕುರಿತ ಲೇಖನ ಸಂಗ್ರಹ

ಅನ್ನ, ಅಕ್ಷರ, ಆರ್ಥಿಕ ಸದೃಢತೆಯ ಹರಿಕಾರ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರ ವಿಶೇಷ ಲೇಖನವನ್ನು ಈ ವಿಶೇಷ ಸಂಚಿಕೆ ಹೊಂದಿದೆ. ಡಾ ಸಿ ಜಿ ರಾಘವೇಂದ್ರ ವೈಲಾಯ, ಬಿ ಸತ್ಯನಾರಾಯಣ ಅರಸ, ರಾ ನಂ ಚಂದ್ರಶೇಖರ, ಗೌರಿ ಚಂದ್ರಕೇಸರಿ ಮತ್ತಿತರರ ಉಪಯುಕ್ತ ಬರಹಗಳಿವೆ. ಸಂಧ್ಯಾ ಹೆಗಡೆ, ಗೀತಾ ಕುಂದಾಪುರ, ಟಿ.ಎಸ್. ಶ್ರವಣಕುಮಾರಿ, ಡಾ. ಆರ್.ಜಿ ಹೆಗಡೆ, ಬಿ ಕೆ ಮೀನಾಕ್ಷಿ, ದಿನೇಶ ಉಪ್ಪೂರ, ಮಡೋಡಿ ಅವರ ಮನೋಜ್ಞ ಸಣ್ಣ ಕತೆಗಳಿವೆ. ಬೆಂ ಶ್ರೀ ರವೀಂದ್ರ, ಚಂದ್ರಶೇಖರ ಹೆಗಡೆ, ಡಾ ಗೋವಿಂದ ಹೆಗಡೆಯವರ ಮನ ಮುಟ್ಟುವ ಕವನಗಳಿವೆ. ಮಹಾಂತೇಶ ಮಾಗ ನೂರ ಮತ್ತು ಡಾ. ವಿಶ್ವನಾಥ ನೇರಳಕಟ್ಟೆಯವರ ಚುರುಕಾದ ಚುಟುಕುಗಳು ಈ ಸಂಚಿಕೆಯ ಮೆರುಗು ಹೆಚ್ಚಿಸಿವೆ. ನಾನೇಕೆ ರೀಲ್ಸ್ ಮಾಡುತ್ತೇನೆ ಎಂಬ ವಿಷಯ ಕುರಿತ ಓದುಗರ ಬರಹಗಳು ಕುತೂಹಲಕರ ಮೂಡಿಸುತ್ತವೆ. ಪರಿಸರ ಲೋಕದ ಕೀಟ ಕುರಿತು ಶಶಿಧರ ಹಾಲಾಡಿ ಅವರ ವಿಸ್ಮಯಕಾರಿ ಮಾಹಿತಿ ಇದೆ. ಜತೆಗೆ, ಸಿನಿಮಾ ಲೋಕದ ಮನರಂಜನೆಯೂ ಇದೆ.

ಸಂಚಿಕೆಯ ಹೂರಣ..

ಪ್ರತಿವರ್ಷವೂ ಧಾರ್ಮಿಕ ನಾಯಕರೊಬ್ಬರ ಸಾಧನೆಯನ್ನು ಕಟ್ಟಿಕೊಡುವ ವಿಶ್ವವಾಣಿ ದೀಪಾವಳಿ ವಿಶೇಷಾಂಕ ಸಂಚಿಕೆಯಲ್ಲಿ ಈ ಬಾರಿ ಬೋವಿಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರ ಬಗ್ಗೆ ವಿಶೇಷ ಲೇಖನಗಳಿವೆ. ತ್ರಿವಿಧ ದಾಸೋಹದ ರೂವಾರಿಯಾಗಿ, ಬೋವಿ ಜನಾಂಗದ ಮಾರ್ಗದರ್ಶಕರಾಗಿ ಸ್ವಾಮೀಜಿ ಕೈಗೊಂಡ ಕ್ರಮಗಳನ್ನು ವಿಸ್ತಾರವಾಗಿ ಪರಿಚಯಿಸಲಾಗಿದೆ. ಇದಲ್ಲದೆ, ನಾಡಿನ ಹೆಸರಾಂತ ಮತ್ತು ಉದಯೋನ್ಮುಖ ಲೇಖಕರು ಬರೆದ ಆರು ಲೇಖನಗಳು ಈ ಸಂಚಿಕೆಯನ್ನು ಶ್ರೀಮಂತ ಗೊಳಿಸಿವೆ. ಕನ್ನಡದ ಪ್ರಸಿದ್ಧ ಕಥೆಗಾರರು ಬರೆದ ಏಳು ಸಣ್ಣ ಕಥೆಗಳು ಮತ್ತು 10 ಕಿರು ಕಥೆಗಳು ಓದುಗರ ಪಾಲಿಗೆ ರಸದೌತಣ ಎನಿಸಿವೆ. ಸಿನಿಮಾ ಪುಟಗಳು, ಕವನಗಳು, ಚುಟುಕಗಳು ಈ ಸಂಚಿಕೆಯನ್ನು ಇನ್ನಷ್ಟು ಅಂದಗಾಣಿಸಿವೆ.